

# ಹೇತುವಾದ ಪ್ರಶ್ನೆಗಳು ಸತ್ಯವಾದ ಉತ್ತರಗಳು


ಗ್ರಂಥಕರ್ತ : **ತ್ರಿಮತ ಏಕೈಕ ಗುರುವು**

ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (89) ದಶ ಅಷ್ಟಾಧಿಕ ಗ್ರಂಥಕರ್ತ

ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**

---





ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ಜೂನ್–2017

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ರಚನೆಗಳು

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65 ಯಾವುದು ನಿಜವಾದ ಜ್ಞಾನ?
66. ಪ್ರತಿಮೆ X ವಿಗ್ರಹ - ದೈವ X ದೆವ್ವ.
67. ಮರಣದ ನಂತರ ಜೀವನ.
68. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
69. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
70. ಮಧ್ಯಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
71. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
72. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
73. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
74. ಒಂದು ಮಾತು ಮೂರು ಗ್ರಂಥಗಳು.
75. ಲು ಎಂದರೇ ಏನು? (ತೆಲುಗು)
76. ಆದಿತ್ಯ.
77. ಗಿಡ ಮೊದಲಾ! ಬೀಜ ಮೊದಲಾ?
78. ಒಬ್ಬನೇ ಇಬ್ಬರು.
79. ಸಾಯಿಬಾಬಾ ದೇವರಾ! ಅಲ್ಲವಾ!
80. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
81. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
82. ವಿಶ್ವ ವಿದ್ಯಾಲಯ
83. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
84. ಒರೆಗಲ್ಲು (ಗೀಟುರಾಯಿ)
85. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
86. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
87. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
88. ನಿನಗೆ ನನ್ನ ಲೇಖ
89. ಹಿಂದೂ ಮತದಲ್ಲಿಯೇ ಕುಲವಿವಕ್ಷ
90. ದೇವರ ಮುದ್ರೆ
91. ಯೋಹಾನ ಸುವಾರ್ತೆ
92. ಧರ್ಮಚಕ್ರ
93. ಪ್ರಾಥಮಿಕ ಜ್ಞಾನ
94. ರಾಜಕೀಯ ರಾಜಕೀಯ
95. ಉಗ್ರವಾದ ಸತ್ಯಕ್ಕೋಸ್ಕರವೇ
96. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
97. ಮಾನವತ್ವ
98. ದ್ಯಾನ - ಪ್ರಾರ್ಥನೆ - ನಮಾಜ್



# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಟಿ–ಸೃಷ್ಟಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
    ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
    ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
    ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
    ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
    ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
    ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
    ದೇಹಂ ಮೋಹಂ.

## ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ–
    ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
    ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
    ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
    ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
    ಮಹೇಂದ್ರಜಾಲ,
    ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
    (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
    ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
     ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

---

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್, ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ), ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ), ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ, ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ (ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್ ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ), ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

**ತ್ರೈತ ಸಿದ್ಧಾಂತ ಭಗವದ್ಗೀತೆ**

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ಮೊದಲು ಪ್ರಶ್ನೆ ಇದ್ದರೆ ನಂತರ ಉತ್ತರ ಇರುತ್ತದೆ. ಮೊದಲು ಪ್ರಶ್ನೆ ನಂತರ ಉತ್ತರ ಇರುವುದು ನ್ಯಾಯ ಎನ್ನುತ್ತೇವೆ. ಮೊದಲು ಉತ್ತರ ನಂತರ ಪ್ರಶ್ನೆ ಇರಬಾರದು. ಹಾಗೆ ಇರುವುದು ಅನ್ಯಾಯವೆಂದೂ, ಸರಿಯಾದ ಪದ್ಧತಿ ಅಲ್ಲವೆಂದು ಹೇಳಬಹುದು. ರಾಮಾಯಣ ಎಲ್ಲಾ ಕೇಳಿದ ನಂತರ ರಾಮನಿಗೆ ಸೀತೆ ಏನಾಗುತ್ತಾಳೆ? ಎಂದು ಕೇಳಿದರೇ ಮೊದಲು ಉತ್ತರ ಹಿಂದೆ ಪ್ರಶ್ನೆ ಎನ್ನುವಂತಿರುತ್ತದೆ. ಅದು ಅನ್ಯಾಯವಾದ ಪ್ರಶ್ನೆ ಎಂದು ಹೇಳಬಹುದು. ಹಾಗೆಂದು ರಾಮಾಯಣ ಹೇಳದ ಮುನ್ನವೇ ರಾಮನಿಗೆ ಸೀತೆ ಏನಾಗುತ್ತಾಳೆಂದು ಕೇಳುವುದು ಸಹ ನ್ಯಾಯ ಬದ್ಧವಾದ ಪ್ರಶ್ನೆ ಅಲ್ಲ. ರಾಮಾಯಣವನ್ನು ಹೇಳಿದ ನಂತರ ಅದರಲ್ಲಿ ರಾಮನ ವಿಷಯವಾಗಲೀ, ಸೀತೆ ವಿಷಯವಾಗಲೀ ಇಲ್ಲದೆ ಹೋದರೇ ಆಗ ಸೀತೆಗೆ ಸಂಬಂಧಿಸಿಯಾಗಲಿ, ಇಲ್ಲವೆ ರಾಮನಿಗೆ ಸಂಬಂಧಿಸಿ ಯಾಗಲೀ ಪ್ರಶ್ನೆಯನ್ನು ಕೇಳಬಹುದು. ಆಗ ಅದು ನ್ಯಾಯಬದ್ಧವಾಗುತ್ತದೆ. ಹಾಗೇ ರಾಮಾಯಣವೆಲ್ಲವನ್ನೂ ಹೇಳಿದ ನಂತರ ರಾಮನನ್ನು ಕುರಿತಾಗಲೀ, ಇಲ್ಲವೆ ಸೀತೆಯನ್ನು ಕುರಿತಾಗಲೀ ಕೇಳಿದರೇ ಅಲ್ಲಿಯವರೆಗು ಕೇಳಿರುವುದು ಅವನಿಗೆ ಸ್ವಲ್ಪವಾದರೂ ಅರ್ಥವಾಗಲಿಲ್ಲವೆಂದು ಹೇಳಬಹುದು. ಆಗ ಅವನಿಗೆ ಗ್ರಹಿಸಿಕೊಳ್ಳುವ ಶಕ್ತಿ ಇಲ್ಲವೆಂದು ಸಹ ಹೇಳಬಹುದು. ಅಂತಹವನಿಗೆ ಒಂದು ಬಾರಿ ಹೇಳಿದರೂ, ಎರಡು ಬಾರಿ ಹೇಳಿದರೂ ಅಥವಾ ಮೂರು ಬಾರಿ ಹೇಳಿದರೂ ಅವನು ಗ್ರಹಿಸಿಕೊಳ್ಳಲಾರನು. ಆದ್ದರಿಂದ ವೃಥಾ ಪ್ರಯಾಸವೇ ಯಾಗುತ್ತದೆ. ಗ್ರಹಿಸಿಕೊಳ್ಳಲಾರದ್ದಕ್ಕೆ ಸರಿಯಾದ ಕಾರಣವಿರುವಾಗ, ಹೇಳಲ್ಪಟ್ಟ ವಿಷಯ ದ್ವಂದ್ವಾರ್ಥಗಳೊಂದಿಗೆ ಕೂಡಿಕೊಂಡಿರುವಾಗ, ಬೇರೆ ವಿಧವಾಗಿ ಗ್ರಹಿಸಿಕೊಳ್ಳುವ ಅವಕಾಶ ಇದೆ. ಆಗ ಕೇಳುವವನದ್ದೇ ಪೂರ್ತಿ ತಪ್ಪು ಅಲ್ಲ. ಸ್ವಲ್ಪ ಭಾಷೆಯದ್ದು, ಸ್ವಲ್ಪ ಹೇಳುವವನದ್ದು ಲೋಪವಿರಬಹುದು. ಹಾಗಿರುವಾಗ ಎದುರಿಗಿರುವವನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬಹುದು.

ಬರೆಯಲ್ಪಡುವ ಬರಹದಲ್ಲಿ ಕಲ್ಪಿತ ಪುರಾಣಗಳು ಇವೆ, ನಡೆದ ಚರಿತ್ರೆಗಳು ಇವೆ, ಆಧ್ಯಾತ್ಮಿಕ ರಹಸ್ಯಗಳು, ಸಬದ್ಧತೆಯಿಂದ (ಸತ್ಯದಿಂದ)

ಕೂಡಿಕೊಂಡ ಶಾಸ್ತ್ರಗಳು ಮುಂತಾದವು ಇವೆ. ನಾವು ಬರೆಯುವ ಆಧ್ಯಾತ್ಮಿಕ ರಹಸ್ಯಗಳಿಗೆ ಸಬದ್ಧತೆಯಿಂದ ಕೂಡಿದ ಶಾಸ್ತ್ರವನ್ನು ಪ್ರಮಾಣವಾಗಿ ತೋರಿಸುತ್ತಾ ಬರೆಯುತ್ತಿದ್ದೇವೆ. ಕೆಲವು ಕಡೆ ಅದೇ ಕೆಲಸವಾಗಿ ಮೊದಲು ತಪ್ಪು ಹೇಳಿ, ನಂತರ ನಿಜ ಹೇಳುವುದು ಸಕ್ರಮವಾದ ಪದ್ಧತಿಯಾಗಿರುತ್ತದೆ. ಅಂತಹ ಸಮಯ ಸಂದರ್ಭಗಳಲ್ಲಿ ಹಾಗೆಯೇ ಹೇಳಬೇಕಾಗಿರುತ್ತದೆ. ಆದರೇ ಅದು ಕೆಲವರಿಗೆ ತಪ್ಪಾಗಿ ಕಾಣಿಸುತ್ತದೆ. ಆಗ ಆ ತಪ್ಪನ್ನು ಕುರಿತು ಕೆಲವರು ಕೇಳಬಹುದು. ಕೆಲವರು ನೋಡುವವರಿಗೆ, ಹೇಳಿದವನಿಗೆ ಸರಿಯಾಗಿ ತಿಳಿದಿಲ್ಲವೆನ್ನುವಂತೆ ತಿಳಿದಿರುತ್ತಾರೆ. **“ಮೊದಲು ಅಸತ್ಯ ನಂತರ ಸತ್ಯ”** ಎನ್ನುವ ವರಸೆ ಕ್ರಮ ಅವರಿಗೆ ತಿಳಿದಿಲ್ಲ. ಆದ್ದರಿಂದ ಕೆಲವರು ಪ್ರಶ್ನಿಸುವುದು ಸಹಜ. ಹೇಳಿದವನದ್ದು ಸಕ್ರಮವೇ, ಪ್ರಶ್ನೆ ಕೇಳಿದವನದು ಸಕ್ರಮವೇ ಆಗುತ್ತದೆ. ಆದರೇ ಪ್ರಶ್ನಿಸಿದವನ ಪ್ರಶ್ನೆಗೆ ಎರಡನೆ ಬಾರಿ ಉತ್ತರ ಹೇಳಬೇಕಾಗಿರುವುದೇ ಅಲ್ಲದೆ, ಮೊದಲು ಅಸತ್ಯವನ್ನು ಹೇಳಬೇಕಾದ ಅಗತ್ಯವನ್ನೂ ಸಹ ವಿವರಿಸಿ ಹೇಳಬೇಕಾಗಿರುತ್ತದೆ.

ಚಿಕ್ಕ ಮಕ್ಕಳಿಗೆ ಕೆಲವು ವಿಷಯಗಳಲ್ಲಿ ಅಸತ್ಯವನ್ನೇ ಹೇಳಬೇಕು. ನಂತರ ಸ್ವಲ್ಪ ಕಾಲಕ್ಕೆ ಅವರು ವಯಸ್ಸಿನಲ್ಲಿ ದೊಡ್ಡವರಾದಾಗ ಸತ್ಯವನ್ನು ಹೇಳಬಹುದು. ಮೊದಲು ಅಸತ್ಯವನ್ನು ಏಕೆ ಹೇಳಬೇಕು? ಅಂದರೇ ಅವನ ಮೆದುಳು ಅಸತ್ಯವನ್ನು ಮಾತ್ರ ಗ್ರಹಿಸಿಕೊಳ್ಳುವುದಾಗಿ ಇರುತ್ತದೆ. ಆಗ ಸತ್ಯವನ್ನು ಗ್ರಹಸಿಕೊಳ್ಳುವುದಾಗಿ ಇರುವುದಿಲ್ಲ. ಚಿಕ್ಕ ಮಗು ಮನೆಬಿಟ್ಟು ಹೊರಗೆ ಹೋದರೇ ಬೀದಿಯಲ್ಲಿನ ಗಲಾಟೆಗೆ ಆತನು ಆಪತ್ತಿನಲ್ಲಿ ಬೀಳುತ್ತಾನೆ. ಹೊರಗೆ ಹೋಗಬೇಡ ಅಪಾಯ ನಡೆಯುತ್ತದೆಂದು ಹೇಳಿದರೆ, ಅಪಾಯವೆಂದರೆ ಏನೋ ತಿಳಿಯದ ಚಿಕ್ಕ ಮಗು ಹೇಳಿದ ಮಾತನ್ನು ಅರ್ಥಮಾಡಿಕೊಳ್ಳಲಾರನು. ಆದ್ದರಿಂದ ಆ ವಯಸ್ಸಿನಲ್ಲಿನ ಮಕ್ಕಳಿಗೆ “ಮನೆ ಹೊರಗೆ ಬಸ್ಸುಗಳ ಪ್ರಮಾದಗಳು ನಡೆಯಬಹುದು ಹೊರಗೆ ಹೋಗಬೇಡ” ಎಂದು ಹೇಳುವುದಕ್ಕಿಂತ “ಹೊರಗೆ ಗುಮ್ಮ ಬರುತ್ತಾನೆ. ಅವನು ಮನೆ ಹೊರಗೆ ಮಕ್ಕಳಿಗಾಗಿ ಕಾದುಕೊಂಡಿರುತ್ತಾನೆ. ಯಾರಾದರೂ ಮಕ್ಕಳು ಹೊರಗೆ ಹೋದರೆ ಅವರನ್ನು ಎತ್ತಿಕೊಂಡು

ಹೋಗುತ್ತಾನೆ" ಎಂದು ಅಸತ್ಯವನ್ನು ಕಥೆಯಂತೆ ಹೇಳಿದರೆ ಮಗು ಅಸತ್ಯ ಸಮಾಚಾರವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಹೊರಗೆ ಹೋಗಬೇಕೆಂದು ಅಂದುಕೊಳ್ಳುವುದಿಲ್ಲ. ಈ ವಿಧವಾಗಿ ಕೆಲವು ಸಂದರ್ಭಗಳಲ್ಲಿ ಮೊದಲು ಅಸತ್ಯವನ್ನು ಹೇಳಿ ನಂತರ ಸತ್ಯವನ್ನು ಹೇಳಬೇಕಾಗುತ್ತದೆ.

ಬಾಲ್ಯದಲ್ಲಿ ಪ್ರಾಥಮಿಕ ಪಾಠಶಾಲೆಗೆ ಹೋದಾಗ ಅಲ್ಲಿ ಅಕ್ಷರಾಭ್ಯಾಸ ಮಾಡುತ್ತಾರೆ. ಮೊದಲು ಕಲಿಯಬೇಕಾಗಿರುವ ಓದುವೊಂದರ ಅಕ್ಷರಗಳನ್ನು ಕಲಿಸುತ್ತಾರೆ. ಇಂಗ್ಲೀಷ್ ಮೀಡಿಯಂ ಸ್ಕೂಲಿಗೆ ಹೋಗಿದ್ದಾರೆಂದುಕೊಳ್ಳಿ, ಅಲ್ಲಿ ಅಕ್ಷರಾಭ್ಯಾಸ ಇಂಗ್ಲೀಷ್ ಅಕ್ಷರಗಳೊಂದಿಗೆ ಶುರು ಮಾಡುತ್ತಾರೆ. ಮೊದಲು ಎ, ಬಿ, ಸಿ, ಡಿ ಎನ್ನುವ ಅಕ್ಷರಗಳನ್ನು ಕಲಿಸುತ್ತಾರೆ. ಅಲ್ಲಿ ಅಕ್ಷರಗಳನ್ನು ಕಲಿತು, ಪುನಃ ಬರೆಯುವುದಾದರೆ ಕಲಿಸಿದ ವಿಧಾನದ ಪ್ರಕಾರ ಎ, ಬಿ, ಸಿ, ಡಿ ಗಳನ್ನು ಬರೆಯುತ್ತಾರೆ. ಬರೆದಾಗ ಎ ಪಕ್ಕದಲ್ಲಿ ಬಿ, ಬಿ ಪಕ್ಕದಲ್ಲಿ ಸಿ, ಸಿ ಪಕ್ಕದಲ್ಲಿ ಡಿ ಎಂದು ಬರೆಯಬೇಕು. ಹಾಗೆ ಕಲಿಸಿದಂತೆ ಬರೆಯದೆ ಎ ಪಕ್ಕದಲ್ಲಿ ಸಿ ಬರೆದು, ಸಿ ಪಕ್ಕದಲ್ಲಿ ಬಿ ಬರೆದು, ಬಿ ಪಕ್ಕದಲ್ಲಿ ಡಿ ಬರೆದರೆ ಪೂರ್ತಿ ತಪ್ಪಾಗುತ್ತದೆ. ಕಲಿಸಿದಂತೆ ವರಸೆ ಕ್ರಮದಲ್ಲಿ ಎ ಪಕ್ಕದಲ್ಲಿ ಬಿ ಬರೆಯಬೇಕಾಗಿರುತ್ತದೆ. ಹಾಗೆ ಬರೆಯದಿದ್ದರೆ ತಪ್ಪು ಮಾಡಿದಂತೆ ಲೆಕ್ಕಿಸಲ್ಪಡುತ್ತದೆ. ತಪ್ಪು ಬರೆಯದಂತೆ ಸಕ್ರಮವಾಗಿ ಬರೆಯಬೇಕೆಂದರೆ ಎ, ಬಿ, ಸಿ, ಡಿ ಎನ್ನುವ ವರಸೆ ಬರೆಯುವುದು ಸರಿಯಾದ ಪದ್ಧತಿ.

ಆಗ ಅದು ಸರಿಯಾದ ಪದ್ಧತಿ. ನಾಲ್ಕು ವರ್ಷಗಳು ಕಳೆದ ನಂತರ ಅದೇ ಪ್ರಾಥಮಿಕ ಪಾಠಶಾಲೆಯಲ್ಲಿಯೇ ಐದನೇ ತರಗತಿಯಲ್ಲಿ ಎ ಪಕ್ಕದಲ್ಲಿ ಬಿ ಬರೆದರೆ ತಪ್ಪಾಗುತ್ತದೆ. ಅಲ್ಲಿ ಬರೆಯಬೇಕಾದ ಪದದಲ್ಲಿ ಎ ಪಕ್ಕದಲ್ಲಿ ಬಿ ಅಲ್ಲದೆ ಯಾವುದಾದರೂ ಬರೆಯಬಹುದು. ಆಗ ಹಾಗೆ ಬರೆಯುವುದೇ ಸರಿಯಾದ ಪದ್ಧತಿಯಾಗುತ್ತದೆ. ಇಂಗ್ಲೀಷ್‌ನಲ್ಲಿ ಇರುವೆಯನ್ನು ಕುರಿತು ಬರೆಯಬೇಕಾಗಿ ಬಂದರೆ ಎ ಪಕ್ಕದಲ್ಲಿ ಎನ್, ಎನ್ ಪಕ್ಕದಲ್ಲಿ ಟಿ ಬರೆಯಬೇಕಾಗಿರುತ್ತದೆ. ನಾಲ್ಕು ವರ್ಷಗಳ ನಂತರ ಐದನೆ ತರಗತಿಯಲ್ಲಿ

ತಪ್ಪಾಗದಿದ್ದು ಒಂದನೇ ತರಗತಿಯಲ್ಲಿ ತಪ್ಪಾಗಿದೆ. ಅದೇ ಈಗ ಎ ಪಕ್ಕದಲ್ಲಿ ಬಿ ಬರೆದರೆ ತಪ್ಪಾಗುತ್ತದೆ. ಒಂದನೆ ತರಗತಿಯಲ್ಲಿ ನಿಜವಾದುದು ಐದನೆ ತರಗತಿಯಲ್ಲಿ ತಪ್ಪಾಗಿದೆ. ಆಗ ಹೇಳಿರುವುದು ತಪ್ಪಾದರೆ ಈಗ ನಿಜವಾಗಿದೆ. ಪೂರ್ತಿ ಬಾಲ್ಯದಲ್ಲಿ ಸತ್ಯವಾದುದು ನಂತರ ಯವ್ವನದಲ್ಲಿ ಅಸತ್ಯವಾಗುತ್ತಿದೆ. ವಾಸ್ತವವೇನೆಂದು ನೋಡಿದರೆ ಯವ್ವನದಲ್ಲಿ ಕೇಳಿರುವುದೇ ಸತ್ಯ, ಬಾಲ್ಯದಲ್ಲಿ ಕೇಳಿರುವ ಗುಮ್ಮನು ಅಸತ್ಯ. ಇದು ಬಾಲ್ಯಕ್ಕೂ ಯವ್ವನಕ್ಕೂ ಮಧ್ಯದಲ್ಲಿ ಬುದ್ಧಿ ಗ್ರಹಿಸಲಾರದ ಸ್ಥಿತಿಯಲ್ಲಿ ಸತ್ಯ ಅಸತ್ಯವಾಗಿ, ಅಸತ್ಯ ಸತ್ಯವಾಗಿ ಇರಬಹುದು. ಆದರೇ ಉಳಿದ ಕೆಲವು ವಿಷಯಗಳಲ್ಲಿ ಬಾಲ್ಯದಲ್ಲಿಯೂ, ಯವ್ವನದಲ್ಲಿಯೂ ಅಸತ್ಯವನ್ನು ಹೇಳಿದರೇ ಗ್ರಹಿಸಿಕೊಳ್ಳುವವನು ಸತ್ಯವನ್ನು ಗ್ರಹಿಸಿಕೊಳ್ಳುವನು. ಆಗ ಸತ್ಯಕ್ಕಾಗಿ ಅಸತ್ಯವನ್ನು ಹೇಳಬೇಕಾಗಿ ಬರುತ್ತಿದೆ. ಮನುಷ್ಯನ ಜೀವನದಲ್ಲಿ ಎಂದಾದರೂ ಕೆಲವು ವಿಷಯಗಳಲ್ಲಿ ಇರುವ ಸತ್ಯವನ್ನು ಗ್ರಹಿಸಿಕೊಳ್ಳುವು ದಕ್ಕಾಗಿ ಅಸತ್ಯವನ್ನು ಹೇಳುತ್ತಿದ್ದಾರೆ.

'ಒಬ್ಬ ಮನುಷ್ಯ ಬಹಳ ಗರ್ವದಿಂದ ಇರುತ್ತಾನೆ' ಎನ್ನುವ ಸತ್ಯವನ್ನು ಹೇಳುವುದಕ್ಕೆ 'ಆತನಿಗೆ ತಲೆ ಬಿರುಸು ಬಹಳ' ಎಂದು ಹೇಳುತ್ತಿರುವರು. ಅವನ ತಲೆ ಎಲ್ಲರ ತಲೆಯ ಹಾಗೆ ಇದ್ದರೂ 'ಆತನಿಗೆ ತಲೆ ಬಿರುಸು ತನವಿದೆ' ಎಂದು ಹೇಳುವುದರಿಂದ ಅವನಿಗೆ ಗರ್ವ ಇದೆಯೆಂದು ಅರ್ಥವಾಗುತ್ತಿದೆ. ಇರುವ ಸತ್ಯ ಗರ್ವ. ಇಲ್ಲದ ಅಸತ್ಯ ತಲೆ ಬಿರುಸುತನ. ಅಲ್ಲಿ ಹೇಳುವವನು ತಪ್ಪು ಹೇಳಿದ್ದಾನೆಂದು ಹೇಳುವುದಕ್ಕೆ ಅವಕಾಶವಿಲ್ಲ. ಹಾಗೆ ಅಸತ್ಯವಾದ ತಲೆಬಿರುಸುತನವನ್ನು ಹೇಳಿದರೆ ಸತ್ಯವಾದ ಗರ್ವ ಇರುವಂತೆ ತಿಳಿಯುತ್ತದೆ. ಹಾಗೆಯೇ ಸಕ್ರಮವಾಗಿ ಮಾತನಾಡದಂತೆ ಹೆಚ್ಚು ಕಡಿಮೆಗಳಾಗಿ ಮಾತನಾಡುವವನನ್ನು 'ಇವನ ತಲೆ ತಿರುಗುತ್ತಿದೆ' ಎಂದು ಹೇಳುತ್ತಿರುತ್ತಾರೆ. ಅವನ ತಲೆ ತಿರುಗುವುದು ಅಸತ್ಯ. ಅವನು ಸಕ್ರಮವಾಗಿ ಮಾತನಾಡಲಿಲ್ಲ ಎನ್ನುವುದು ಸತ್ಯ. ಆದರೇ ಸತ್ಯವನ್ನು ಹೇಳದೆ ಅಸತ್ಯವನ್ನು ಹೇಳಿದರೇ ಸತ್ಯವನ್ನು ಗ್ರಹಿಸಿಕೊಳ್ಳುತ್ತಾರೆ. ಇಲ್ಲಿ ಅಸತ್ಯವನ್ನು ಬಳಸಿದರೇನೆ ಮನುಷ್ಯ

ಬೇಗನೇ ಗ್ರಹಿಸಿಕೊಳ್ಳುತ್ತಾನೆ. ಹಾಗಲ್ಲದೆ ಸತ್ಯವನ್ನು ಹೇಳಬೇಕೆಂದರೇ ಬಹಳ ಸಮಯ ಹಿಡಿಯುತ್ತದೆ. ಈ ವಿಧವಾಗಿ ಬಹಳ ವಿಷಯಗಳಲ್ಲಿ ಸತ್ಯ ಬೇಗನೇ ಅರ್ಥವಾಗುವುದಕ್ಕಾಗಿ ಅಸತ್ಯವನ್ನು ಬಳಸುತ್ತಿರುತ್ತಾರೆ. ವೇಗವಾಗಿ ಕೆಲಸಗಳನ್ನು ಮಾಡುವವನನ್ನು 'ಮಾಳಿಗೆಗಳ ಮೇಲೆ ಓಡುವವನೆಂದು' ಹೇಳುತ್ತಿರುತ್ತಾರೆ. ಹಾಗೆಯೇ ಹೆಚ್ಚಾಗಿ ನಷ್ಟ ಹೋಗುವವನನ್ನು 'ಬೀಳುವ ಗೋಡೆ ಕೆಳಗೆ ಕುಳಿತಿರುತ್ತಾನೆ' ಎಂದು ಹೇಳುತ್ತಿರುತ್ತಾರೆ. ಈ ವಿಧವಾಗಿ ಹೇಳುತ್ತಿದ್ದರೂ ನೀನು ಅಸತ್ಯವನ್ನು ಹೇಳುತ್ತಿದ್ದೀಯೆಂದು ಹೇಳುವವನನ್ನು ಅನ್ನುವುದು ಬುದ್ಧಿ ಇಲ್ಲದ ಕೆಲಸವಾಗುತ್ತದೆ. ಕೆಲವನ್ನು ಎದುರಿಗಿರುವವನು ಅರ್ಥ ಮಾಡಿಕೊಳ್ಳಬೇಕಾಗಿರುತ್ತದೆ ಆದರೆ, ಹೇಳುವವನನ್ನು ತಪ್ಪು ಹಿಡಿಯುವುದಕ್ಕೆ ಅಲ್ಲ. ಹೀಗೆ ಸತ್ಯವನ್ನು ಇತರರು ತಿಳಿಯುವುದಕ್ಕೆ ಅಸತ್ಯವನ್ನು ಬಳಸುವ ಸಂದರ್ಭಗಳು ಅನೇಕ ಇವೆ. ಅವುಗಳನ್ನು ಪ್ರಸ್ತುತ ಹೊಸಬರು ಅರ್ಥ ಮಾಡಿಕೊಳ್ಳಬೇಕೇ ಹೊರತು ತಪ್ಪು ಹಿಡಿಯಬಾರದು. ಹೇಳುವುದಕ್ಕೂ (ತೋರಿಸುವುದಕ್ಕೂ) ಅದು ತಪ್ಪೇ ಆದರೂ, ಹೇಳುವ ವಿಧಾನ ಹಾಗೇ ಇರುತ್ತದೆ.

ನಾವು ಪ್ರಪಂಚ ವಿಷಯಗಳನ್ನು ಹೇಳದಂತೆ ಆಧ್ಯಾತ್ಮಿಕ ಜ್ಞಾನ ವಿಷಯಗಳನ್ನು ಹೇಳುತ್ತಿದ್ದೇವೆ. ಆಧ್ಯಾತ್ಮಿಕ ವಿಷಯಗಳು ಹೆಚ್ಚಾಗಿ ಅಗೋಚರ ವಿಷಯಗಳು ಇರುತ್ತವೆ. ಪ್ರಪಂಚದಲ್ಲಿ ಕಾಣಿಸುವ ವಿಷಯಗಳ ಹತ್ತಿರವೇ ಸತ್ಯವನ್ನು ಹೇಳದೆ ಅಸತ್ಯವನ್ನು ಹೇಳಿ ಸತ್ಯವನ್ನು ಅರ್ಥವಾಗುವಂತೆ ಮಾಡುತ್ತಿದ್ದಾರೆ. ಅಗೋಚರ ಆಧ್ಯಾತ್ಮಿಕ ವಿಷಯಗಳಲ್ಲಿ ಕೂಡಾ ಕೆಲವು ಕಡೆ ಮೊದಲು ಸತ್ಯ ಹೇಳಬಾರದು. ಕೃಷ್ಣನು ಭಗವದ್ಗೀತೆಯನ್ನು ಹೇಳಿದಾಗಾಗಲೀ, ಸೂರ್ಯನು (ಜಿಬ್ರಯೇಲ್) ಮುಹಮ್ಮದ್ ಪ್ರವಕ್ತರಿಗೆ ಜ್ಞಾನ ಹೇಳಿದಾಗಾಗಲೀ ಮೊದಲು ಹೇಳಬೇಕಾದ ಅಸಲಾದ ಜ್ಞಾನವನ್ನು ಹೇಳಲಿಲ್ಲ. ಭಗವದ್ಗೀತೆಯಲ್ಲೂ, ಬೈಬಲ್‌ನಲ್ಲೂ, ಖುರಾನ್ ಗ್ರಂಥದಲ್ಲೂ **ಮುಖ್ಯವಾದ ಸಾರಾಂಶ ಮೂರು ಆತ್ಮಗಳನ್ನು ಕುರಿತು ಹೇಳುವುದೇ**. ಮೂರು ಆತ್ಮಗಳ ವಿಷಯ ಮೊದಲು ಭಗವದ್ಗೀತೆಯನ್ನು ಹೇಳಿದಾಗ ಮೊದಲ ಅಧ್ಯಾಯದಲ್ಲೇ ಹೇಳದೆ ಭಗವದ್ಗೀತೆ

ಮೂರು ಭಾಗಗಳ ನಂತರ ಹೇಳುವುದಾಗಿದೆ. ಭಗವದ್ಗೀತೆ ಒಟ್ಟು 18 ಅಧ್ಯಾಯಗಳು ಇದೆ. ಭಗವಂತನು ಹೇಳಿದ ಬೋಧನೆ ಒಟ್ಟು 17 ಅಧ್ಯಾಯಗಳೇ ಇದೆ. ಮೂರು ಆತ್ಮಗಳ ವಿಭಜನೆ ಹೇಳಿರುವುದು 15ನೇ ಅಧ್ಯಾಯದಲ್ಲಿ ಇದೆ. ಮೂರು ಭಾಗಗಳು ಭಗವದ್ಗೀತೆಯಾದ ನಂತರ ನಾಲ್ಕನೆ ಭಾಗದಲ್ಲಿ ಮೂರು ಆತ್ಮಗಳ ವಿಷಯ ಹೇಳುವುದಾಗಿದೆ. ಅಲ್ಲಿಯವರೆಗು ಯಾವ ಆತ್ಮಕ್ಕೆ ಯಾವ ಜ್ಞಾನವನ್ನು ಅನ್ವಯಿಸುವಂತೆ ಮಾಡಿಕೊಳ್ಳಬೇಕೋ ಯಾರಿಗೂ ತಿಳಿಯದಂತೆ ಹೋಗಿದೆ. ಭಗವದ್ಗೀತೆಯಲ್ಲಿ ಅದೇ ಕೆಲಸವಾಗಿ ಭಗವಂತನು ಮೂರು ಆತ್ಮಗಳ ಜ್ಞಾನವನ್ನು ಮೊದಲು ಹೇಳಲಿಲ್ಲ. ಹಾಗೆಯೇ ಬೈಬಲ್ ಗ್ರಂಥದಲ್ಲಿ 66 ಪಾಠಗಳಲ್ಲಿ 40ನೇ ಪಾಠದಲ್ಲಿ ಮತ್ತಾಯ ಸುವಾರ್ತೆಯಲ್ಲಿ ಕೊನೆಯಲ್ಲಿ ಮೂರು ಆತ್ಮಗಳನ್ನು ಕುರಿತು ಹೇಳುವುದಾಗಿದೆ. ಅದೇ ವಿಧವಾಗಿ ಮೂರನೆ ಗ್ರಂಥವಾದ ಖುರಾನ್ ಗ್ರಂಥದಲ್ಲಿ 6236 ಆಯತ್‌ಗಳಲ್ಲಿ 4491 ನೇ ಆಯತ್‌ನಲ್ಲಿ ಮೂರು ಆತ್ಮಗಳ ವಿವರವನ್ನು ಹೇಳಿದ್ದಾನೆ. ಮೂರು ಗ್ರಂಥಗಳಲ್ಲಿ ಮುಖ್ಯವಾದ ಸಾರಾಂಶ ಮೂರು ಆತ್ಮಗಳ ವಿಷಯವೇ ಆದರೂ ಸುಮಾರು ಅರ್ಧ ಗ್ರಂಥ ದಾಟಿದ ನಂತರ ಗ್ರಂಥದ ಮೂರನೆ ಭಾಗದಲ್ಲಿ ಮುಖ್ಯವಾದ ಆತ್ಮಗಳ ವಿಷಯವನ್ನು ಹೇಳಿದ್ದಾರೆ. ಅಲ್ಲಿಯವರೆಗು ಹೇಳಲಿಲ್ಲ ಎಂದರೆ ಯಾವಾಗ ಹೇಳಿದರೆ ಗ್ರಹಿಸಿಕೊಳ್ಳುತ್ತೇವೋ ಆಗ ಹೇಳಿದಂತೆ, ಅಲ್ಲಿಯವರೆಗು ಹೇಳದಂತೆ ಅರ್ಥವಾಗುತ್ತಿದೆ. ಈ ವಿಧವಾಗಿ ದೈವ ಗ್ರಂಥಗಳಲ್ಲಿಯೇ ಮುಂದೆ ಹಿಂದೆ ಯೋಚಿಸಿ ಜ್ಞಾನವನ್ನು ಹೇಳಿದ್ದಾರೆ. ಆದ್ದರಿಂದ ನಾವೂ ಸಹ ಮುಂದೆ ಹಿಂದೆ ಯೋಚಿಸಿ ಯಾವಾಗ ಏನು ಹೇಳಿದರೆ ಚೆನ್ನಾಗಿರುತ್ತದೋ, ಯಾವಾಗ ಹೇಳಿದರೇ ಪ್ರಜೆಗಳು ಅರ್ಥಮಾಡಿಕೊಳ್ಳುತ್ತಾರೋ ಆಗಲೇ ಒಂದು ರಹಸ್ಯವನ್ನು ಹೊರಗೆ ಹೇಳುತ್ತಿದ್ದೇವೆ.

ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನ ಯೋಗದವರೆಗು ತಾನು ಯಾರಾಗಿರುವುದು ಕೃಷ್ಣನು ಅರ್ಜುನನಿಗೆ ಹೇಳಲಿಲ್ಲ. ಅವಶ್ಯಕತೆ ಬಂದಾಗ ವಿಶ್ವರೂಪ ಸಂದರ್ಶನಯೋಗದಲ್ಲಿ **“ನಾನು ದೇವರು”** ಎಂದು ಅರ್ಜುನನಿಗೆ

ತಿಳಿಸಿದ್ದಾನೆ. ಅಲ್ಲಿಯತನಕ ಮೊದಲು ಹೇಳಿದರೇ ಅರ್ಜುನನು ಅರ್ಥ ಮಾಡಿಕೊಳ್ಳಲಾರದೆ, ಅಪಾರ್ಥಮಾಡಿಕೊಳ್ಳುವ ಅವಕಾಶವಿದೆ. ಆದ್ದರಿಂದ ತಾನು ಯಾರಾಗಿರುವುದು ಸಮಯ ಬರುವವರೆಗು ಕೃಷ್ಣನು ಅರ್ಜುನನಿಗೆ ಹೇಳಲಿಲ್ಲ. ಈ ವಿಧವಾಗಿ ಇರುವ ಕಾರಣಗಳನ್ನು ಎದುರಿಗಿರುವವರು ಅರ್ಥ ಮಾಡಿಕೊಳ್ಳದೆ ಅವರ ಬುದ್ಧಿಗೆ ತೋಚಿರುವುದನ್ನು ಅವರು ಮಾತನಾಡುತ್ತಿರು ವರು. ಅವರು ಹಾಗೆ ಮಾತನಾಡಿದ್ದಾರೆಂದು ತಮ್ಮ ಮಾರ್ಗವನ್ನು ಯಾರೂ ಬದಲಾಯಿಸಿಕೊಳ್ಳಲಾರರು. ಕೃಷ್ಣನನ್ನು ಕೆಲವರು ನಿಂದಿಸುವುದು ಸಹ ನಡೆದಿದೆ. ಜಾರನು, ಚೋರನು ಎಂದು ಮಾತನಾಡಿದ ಸಂದರ್ಭಗಳು ಸಹ ಇವೆ. ಆಗ ಕೃಷ್ಣನು ಅವಸರಪಟ್ಟು ತಾನು ದೇವರೆಂದು, ಭಗವಂತನೆಂದು ಹೇಳಲಿಲ್ಲ ಅಲ್ಲವೆ!

ಒಬ್ಬ ಮನುಷ್ಯ ಒಂದು ಧ್ಯೇಯವನ್ನು ಹೊಂದಿರಬೇಕು. ಹೊರಗಿನ ಸಮಾಜದ ವಾತಾವರಣವನ್ನನುಸರಿಸಿಯಾಗಲಿ, ಹೊರಗಿನ ಸಮಾಜ ಅಭಿರುಚಿಗಳನ್ನನುಸರಿಸಿಯಾಗಲೀ ಮನುಷ್ಯನ ಧ್ಯೇಯ ಬದಲಾಗಬಾರದು. ನಾವು ಒಂದು ಧ್ಯೇಯದಿಂದ ಗ್ರಂಥವನ್ನು ಬರೆಯುತ್ತಿರುತ್ತೇವೆ. ಆಗ ಅದನ್ನು ಕೆಲವರು ಮೆಚ್ಚಿಕೊಳ್ಳುತ್ತಾರೆ. ಕೆಲವರು ಅಸಹ್ಯಪಟ್ಟುಕೊಳ್ಳುತ್ತಾರೆ. ಕೆಲವರು ದೊಡ್ಡದಾಗಿ ಹೇಳಿಕೊಂಡರೇ, ಕೆಲವರು ಕಡಿಮೆಯಾಗಿ ಹೇಳಿಕೊಳ್ಳುವುದು ನಡೆಯುತ್ತಿರುತ್ತದೆ. ಪ್ರಪಂಚದಲ್ಲಿ ಯಾರೂ ಎಲ್ಲರನ್ನೂ ಮೆಚ್ಚಿಸಲಾರನು. ಮನುಷ್ಯರ ಅಭಿರುಚಿ ಗಳನ್ನನುಸರಿಸಿ ನಾವು ಬರೆಯುವ ಗ್ರಂಥದಲ್ಲಿ ಅನೇಕ ವಿಧಗಳಾಗಿ ಕಾಣಿಸಿರ ಬಹುದು. ಒಂದು ಆಹಾರ ಪದಾರ್ಥವನ್ನು ಹತ್ತು ಮಂದಿಗೆ ಕೊಟ್ಟು ಅದನ್ನು ಹೇಗಿದೆಯೆಂದು ಅವರನ್ನು ಬಿಡಿಬಿಡಿಯಾಗಿ ಕೇಳಿ ನೋಡಿದರೆ ಒಂದೇ ಆಹಾರವನ್ನು ಎಲ್ಲರೂ ಎಲ್ಲ ವಿಧಗಳಾಗಿ ಹೇಳುತ್ತಾರೆ. ಒಂದೇ ಪದಾರ್ಥ ಒಂದೇ ರುಚಿ ಇರುತ್ತದೆ. ಆದರೇ ತಿಂದ ಹತ್ತುಜನ ಹತ್ತು ವಿಧಗಳಾಗಿ ಹೇಳುವುದಕ್ಕೆ ಕಾರಣ ಅವರ ನಾಲಿಗೆಗಳಲ್ಲಿ, ರುಚಿ ಗ್ರಾಹಿತ ಕಣಗಳ ವ್ಯತ್ಯಾಸ ಹೊರತು ಆಹಾರ ಪದಾರ್ಥದಲ್ಲಿ ವ್ಯತ್ಯಾಸ ಇಲ್ಲವೆಂದು

ತಿಳಿಯುತ್ತಿದೆ. ಹಾಗೆಯೇ ನಾವು ಬರೆದ ಒಂದು ಗ್ರಂಥವು ಸಮಾಜದಲ್ಲಿನ ಮನುಷ್ಯರ ಗ್ರಾಹಿತ ಶಕ್ತಿಯನ್ನನುಸರಿಸಿ ಅವರಿಗೆ ಅರ್ಥವಾಗಿರುತ್ತದೆ. ಹೇತುವಾದಿಗಳು ಅವರ ದೃಷ್ಠಿಯಿಂದ ನೋಡುತ್ತಿರು ವರು. ಮಿತವಾದಿಗಳು ಅವರ ಉದ್ದೇಶದ ಪ್ರಕಾರ ನೋಡುತ್ತಿರುವರು. ಅತಿವಾದಿಗಳು ಅವರ ಭಾವನೆಗೆ ತಕ್ಕಂತೆ ನೋಡುತ್ತಿರುವರು. ಎಲ್ಲರನ್ನೂ ಮೆಚ್ಚಿಸಬೇಕೆಂದರೆ ಯಾರಿಗೂ ಕೈಲಾಗದ ಕೆಲಸವಾಗುತ್ತದೆ. ನಾವು ಒಂದು ಸಮಾಚಾರವನ್ನು ಹೊರಗೆ ಬರಹ ರೂಪದಲ್ಲಿ ಕಳುಹಿಸಿದರೆ, ಸಾಧ್ಯವಾದಷ್ಟು ಕಡಿಮೆ ಜನರಿಗೆ ಅರ್ಥವಾಗದಿದ್ದರೂ ಫರವಾಗಿಲ್ಲವೆಂದು, ಹೆಚ್ಚಿನ ಜನರಿಗೆ ಅರ್ಥವಾಗುವ ಹಾಗೆ ಇರುವಂತೆ ಬರೆದಿರುತ್ತೇವೆ. ನಾವು ಹಾಗೆ ಬರೆದರೂ ಒಂದೊಂದು ಸಲ ಅದು ಹೆಚ್ಚಿನ ಜನರಿಗೆ ಅರ್ಥವಾಗದಂತೆ ಹೋಗಿ ಕಡಿಮೆ ಜನರಿಗೆ ಮಾತ್ರವೇ ಅರ್ಥ ವಾಗಿರುತ್ತದೆ. ಆಗ ಅದಕ್ಕೆ ನಾನು ಏನೂ ಮಾಡಲಾರೆ. ಇತರರನ್ನು ನೋಡಿ ನಾನು ಬದಲಾಗಬೇಕೆಂದುಕೊಂಡಿಲ್ಲ. ಏಕೆಂದರೆ! ನಮಗೆ ಇರುವ ಧ್ಯೇಯದ ಪ್ರಕಾರವೇ ನಡೆಯುವುದು ಒಳ್ಳೆಯದು. ಆದರೂ ಯಾರ ಸ್ವಭಾವ ಅವನಿಗಿರುತ್ತದೆ. ಅವನ ಸ್ವಭಾವವನ್ನು ಬಿಟ್ಟು ಇತರರ ಸ್ವಭಾವದೊಳಗೆ ಯಾರೂ ಹೋಗುವುದಿಲ್ಲ.

ಪ್ರತಿ ಮನುಷ್ಯನಿಗೂ ಒಂದು ಸ್ವಭಾವವಿರುತ್ತದೆ. ಒಂದೇ ಸ್ವಭಾವದಲ್ಲಿ ಕೆಲವರು ಮನುಷ್ಯರಾಗಲೀ, ಇಬ್ಬರು ಮನುಷ್ಯರಾಗಲೀ ಇರುವುದು ನಡೆಯುವುದಿಲ್ಲ. ಮನುಷ್ಯ ಮನುಷ್ಯನಿಗೂ ಸ್ವಭಾವ ಬೇರೆಬೇರೆಯಾಗಿರುತ್ತದೆ. ಪ್ರತಿ ಮನುಷ್ಯನಿಗೂ ಬೆರಳು ಮುದ್ರೆಗಳು ಹೇಗೆ ಬೇರೆಯಾಗಿರುತ್ತವೋ, ಪ್ರತಿ ಮನುಷ್ಯನಿಗೂ ವಾಸನೆ ಹೇಗೆ ಬೇರೆಯಾಗಿ ಇರುತ್ತದೋ, ಪ್ರತಿ ಮನುಷ್ಯನಿಗೂ ರೂಪ ರೇಖೆಗಳು ಹೇಗೆ ಬೇರೆಯಾಗಿರುತ್ತವೋ, ಹಾಗೆಯೇ ಒಬ್ಬ ಮನುಷ್ಯನ ಸ್ವಭಾವ ಬೇರೆಯಾಗಿರುತ್ತದೆ. ಒಂದೇ ಮನೆಯಲ್ಲಿ ಒಂದೇ ತಾಯಿ ಮಕ್ಕಳಿಗಾದರೂ ಒಬ್ಬರಿಗಿರುವ ಸ್ವಭಾವ ಮತ್ತೊಬ್ಬರಿಗೆ ಇರುವುದಿಲ್ಲ. **'ಸ್ವಭಾವ'** ಎಂದರೆ **'ಸ್ವಂತ ಭಾವನೆ'** ಎಂದು ಅರ್ಥ. ಇಲ್ಲಿ ಸ್ವಲ್ಪ ಆಳವಾಗಿ ಆಲೋಚಿಸಿ ತಿಳಿದುಕೊಳ್ಳಬೇಕಾದ ಅವಶ್ಯಕವಿದೆ. ಏಕೆಂದರೆ! ಶರೀರದಲ್ಲಿ ನಿವಾಸಿಸುವ ಜೀವಿಗೆ

ಒಬ್ಬ ದೇವರ ವಿಷಯದಲ್ಲಿ ಹೊರತು ಉಳಿದ ವಿಷಯಗಳಲ್ಲಿ ಎಲ್ಲಿಯೂ ಏನೂ ಇಲ್ಲ. ದೇವರ ವಿಷಯದಲ್ಲಿ ಮಾತ್ರ **'ಇಷ್ಟ'** ಎನ್ನುವುದು ಜೀವಿಗೆ ಇರುತ್ತದೆ. ಆದರೇ ಜೀವಿಯು ಅದನ್ನು ಉಪಯೋಗಿಸಿಕೊಳ್ಳಬಹುದು, ಇಲ್ಲವೆ ಉಪಯೋಗಿಸಿಕೊಳ್ಳದೆ ಹೋಗಬಹುದು. ದೇವರ ವಿಷಯದಲ್ಲಿ ಇಚ್ಛೆ ಹೊರತು, ಯಾವ ವಿಷಯದಲ್ಲೂ ಇಷ್ಟಾಯಿಷ್ಟವಾಗಲಿ, ಸ್ವಭಾವವಾಗಲೀ ಯಾವುದೂ ಇರುವುದಿಲ್ಲ. ಜೀವಿಯು ಎಂದರೆ ಯಾವುದೂ ಇಲ್ಲದವನು, ಯಾವ ಸ್ವತಂತ್ರತೆ ಇಲ್ಲದವನು ಎಂದು ಅರ್ಥ. ಶರೀರಕ್ಕೆ ಅಂಟಿಕೊಂಡಿರುವ ಧೂಳಿನಂತೆ ಜೀವಿಗೆ ಅಂಟಿಕೊಂಡ ಕರ್ಮಗಳಿರುತ್ತವೆ. ಜೀವಿಗೆ ಹೊರಗೆ ಅಂಟಿಕೊಂಡ ಕರ್ಮಗಳು, ಒಳಗೆ ದೇವರ ಮೇಲೆ ಇಚ್ಛೆ ಎರಡು ಮಾತ್ರ ಇರುತ್ತವೆ. ಒಳಗಿರುವ ಇಷ್ಟ ಮಾತ್ರ ಜನ್ಮ ಹಕ್ಕಾಗಿ ಜನ್ಮ ಜನ್ಮಕ್ಕೂ ಇರುತ್ತದೆ. ಹೊರಗೆ ಅಂಟಿಕೊಂಡಿರುವ ಕರ್ಮಗಳು ಒಂದು ಜನ್ಮದಲ್ಲಿ ಹೆಚ್ಚಾಗಿ ಇರಬಹುದು ಮತ್ತೊಂದು ಜನ್ಮದಲ್ಲಿ ಕಡಿಮೆಯೂ ಇರಬಹುದು. ಯಾವಾಗಾದರೂ ಇಲ್ಲದಂತೆಯೂ ಕೂಡಾ ಹೋಗಬಹುದು. ಆದ್ದರಿಂದ ಜೀವಿಗೆ ಎಂದಿಗೂ ಒಂದೇ ವಿಧವಾಗಿ ಇರುವುದು ಇಷ್ಟ ಒಂದೇಯೆಂದು ಹೇಳಬಹುದು.

**ಪ್ರಶ್ನೆ :– ಇಷ್ಟವನ್ನು ಹೊರತು ಕರ್ಮಗಳು ಸಹ ತಾತ್ಕಾಲಿಕವಾಗಿ ಹೆಚ್ಚು ಕಡಿಮೆಗಳಿರುತ್ತವೆ ಎಂದು ಹೇಳುತ್ತಿದ್ದಾರೆ. ಆದರೇ 'ಸ್ವಂತ ಭಾವನೆ' ಎನ್ನುವುದು ಜೀವಿಯದ್ದು ಅಲ್ಲವಾ! ಜೀವಿಗೆ ಸ್ವಂತ ಭಾವನೆ ಇಲ್ಲದಿರುವಾಗ ಸ್ವಭಾವ ಎಂದು ಏಕೆ ಕರೆದಿದ್ದೇವೆ?**

**ಉತ್ತರ :–** ಮನುಷ್ಯನಿಗೆ ಬೆರಳು ಮುದ್ರೆ ಪ್ರಪಂಚದಲ್ಲಿ ಒಬ್ಬನಿಗಿದ್ದಂತೆ ಇನ್ನೊಬ್ಬನಿಗೆ ಇರದೆ ಬೇರೆಯಾಗಿ ಇರುತ್ತದೆ. ಆದರೇ ಅದು ಅವನಿಗೆ ಒಬ್ಬನಿಗೇ ಇರುವ ಬೆರಳು ಮುದ್ರೆ ಆದರೂ ಅದು ಜೀವಿಯದ್ದು ಅಲ್ಲ. ಅದು ಆ ಜೀವಿಯ ಶರೀರದ್ದು. ಹಾಗೆಯೇ ವಾಸನೆಯಾಗಲೀ, ರೂಪ ರೇಖೆಗಳಾಗಲೀ ಜೀವಾತ್ಮವಲ್ಲದೆ ಜೀವಿಯ ಶರೀರದವು ಆಗಿವೆ. ಜೀವಿಯ ಶರೀರವೂ ಸಹ ಸ್ವಂತ ಶರೀರವೇ ಆದರೂ, ಅದು ಆ ಜನ್ಮಕ್ಕೆ ಮಾತ್ರವೇ. ಆದ್ದರಿಂದ ಜೀವಿಗೆ

ಒಂದು ಇಷ್ಟ ಹೊರತು ಯಾವುದೂ ಹಕ್ಕಾಗಿ ಇಲ್ಲ. ಮನುಷ್ಯನಿಗಿರುವ ರೂಪ, ವಾಸನೆ, ಬೆರಳು ಮುದ್ರೆ ಮೂರು ಜೀವಾತ್ಮನವು ಅಲ್ಲದೆ ಜೀವಾತ್ಮನಿಗಿರುವ ಶರೀರಕ್ಕಿರುವವು ಎಂದು ಹೇಳಬಹುದು. ಹಾಗೆಯೇ ಮನುಷ್ಯನಿಗಿರುವ ಸ್ವಭಾವ ಜೀವಿಗೆ ಇಲ್ಲವೆಂದೂ, ಜೀವಿಯ ಹಿಂದೆ ಇರುವ ಬುದ್ಧಿಗೆ ಇದೆಯೆಂದು ಹೇಳಬಹುದು. ಮನುಷ್ಯನಿಗಿರುವ **ರೂಪ, ವಾಸನೆ, ಮುದ್ರೆ, ಸ್ವಭಾವ** ಜೀವಾತ್ಮನವು ಅಲ್ಲವೆಂದು ತಿಳಿಯುತ್ತಿದೆ. ಈ ನಾಲ್ಕು ಪ್ರತಿ ಮನುಷ್ಯನಿಗೂ ಬೇರೆಯಾಗಿ ಇರುವಂತೆ **ಕರ್ಮ** ಕೂಡಾ ಒಂದು ಇದೆ. ಒಬ್ಬರಿಗಿರುವ ಕರ್ಮ ಮತ್ತೊಬ್ಬರಿಗೆ ಇರದೆ ಸ್ವಲ್ಪವಾದರೂ ವ್ಯತ್ಯಾಸದಿಂದ ಇರುತ್ತದೆ. ಈ ವಿಧವಾಗಿ ಪ್ರತಿ ಮನುಷ್ಯನಿಗೂ **ಕರ್ಮ, ರೂಪ, ಮುದ್ರೆ, ವಾಸನೆ, ಸ್ವಭಾವಗಳು** ಐದು ಬೇರೆಬೇರೆಯಾಗಿ ಇರುತ್ತವೆಂದು ತಿಳಿದುಹೋಗಿದೆ. ಮನುಷ್ಯ ಹುಟ್ಟುವಿಕೆ ಯಲ್ಲಿಯೇ ಈ ಐದು ನಿರ್ಣಯಿಸಲ್ಪಡುತ್ತವೆ. ಈ ಐದು ಹುಟ್ಟುವಿಕೆಯಿಂದ ಬಂದಿರುವವು, ಜೀವನಾಂತ್ಯದವರೆಗು ಇರುವವು. ಅವುಗಳನ್ನು ಯಾರೂ ಬದಲಾಯಿಸಲಾರರು. ಆದರೇ ಸ್ಥೂಲವಾಗಿರುವ ಮುದ್ರೆ, ರೂಪ, ವಾಸನೆಯನ್ನು ಬಿಟ್ಟು ಸೂಕ್ಷ್ಮವಾಗಿರುವ ಕರ್ಮವನ್ನು, ಸ್ವಭಾವವನ್ನು ಎರಡನ್ನೂ ಗುರುವು ಬದಲಾಯಿಸಬಲ್ಲನು. ದೇವರು ಮನುಷ್ಯನಾಗಿ ಎಂದರೆ ಭಗವಂತನಾಗಿ ಭೂಮಿಮೇಲೆಗೆ ಬಂದಾಗ ಆತನು ಒಬ್ಬನು ಗುರುವಾಗಿ ಇರುತ್ತಾನೆ. ಆಗ ಯಾರಿಗೂ ಗುರುತಿಸಲ್ಪಡದವನಾಗಿ ಇರುವ ಗುರುವು ತಾನು ಅಂದುಕೊಂಡರೇ ಯಾವ ಮನುಷ್ಯನ ಕರ್ಮವನ್ನಾದರೂ ಬದಲಾಯಿಸಬಲ್ಲನು. ಹಾಗೆಯೇ ಸ್ವಭಾವವನ್ನು ಬದಲಾಯಿಸಬಲ್ಲನು.

ಬೆರಳು ಮುದ್ರೆ, ಶರೀರ ವಾಸನೆ, ರೂಪವನ್ನು ಮೇಲಿರುವ ಮನುಷ್ಯರು ಬದಲಾಯಿಸಬಹುದು. ಕಾಣಿಸುವವು ಆದ್ದರಿಂದ ಕಾಣಿಸುವ ಮನುಷ್ಯರು ಬದಲಾಯಿಸಬಹುದು. ಕಾಣಿಸದ ಕರ್ಮವನ್ನು, ಬುದ್ಧಿ ಸ್ವಭಾವವನ್ನು ಮನುಷ್ಯರು ಬದಲಾಯಿಸಲಾರರು. ಆ ಎರಡನ್ನು ಮನುಷ್ಯನಲ್ಲದ ಗುರುವು ಬದಲಾಯಿಸ ಬಲ್ಲನು. ಗುರು ಎಂದರೆ ಭಗವಂತನು. ಕಾಣಿಸುವ ಮುದ್ರೆ, ವಾಸನೆ, ರೂಪವನ್ನು

ಕಾಣಿಸುವ ಮನುಷ್ಯ ಸುಲಭವಾಗಿ ಬದಲಾಯಿಸಬಲ್ಲನು. ಈ ದಿನ ಇರುವ ವೈದ್ಯ ವಿಧಾನಗಳಿಂದ ಆ ಕೆಲಸವನ್ನು ಮಾಡುತ್ತಿದ್ದಾರೆ. ಹೊರಗೆ ಮೂರು ಗುರುತುಗಳು ಬದಲಾದರೂ ಬದಲಾಗದಿದ್ದರೂ ಜೀವಿಗೆ **ಆಧ್ಯಾತ್ಮಿಕ** ಪ್ರಯೋಜನೆ ಏನೂ ಇಲ್ಲ. ಅದೇ ಒಳಗಿರುವ ಕರ್ಮ, ಸ್ವಭಾವ ಬದಲಾದರೇ ಜೀವಿಗೆ ಆಧ್ಯಾತ್ಮಿಕವಾಗಿ ಎಷ್ಟೋ ಒಳ್ಳೆಯದು ನಡೆಯುತ್ತದೆ. ಆಧ್ಯಾತ್ಮಿಕ ಲಾಭಕ್ಕೋಸ್ಕರ ಹೊರಗೆ ಗುರುವನ್ನು "ಕರ್ಮವನ್ನು, ಬುದ್ಧಿ ಸ್ವಭಾವವನ್ನು ಬದಲಾಯಿಸೆಂದು" ಪ್ರಾರ್ಥಿಸಬೇಕಾಗಿರುತ್ತದೆ. ಆದರೇ ಗುರುವು ಕಾಣಿಸುವುದಿಲ್ಲ (ಗುರುತಿಸಲ್ಪಡುವುದಿಲ್ಲ). ಆದ್ದರಿಂದ ಬಾಹ್ಯ ಗುರುವನ್ನು ಕೋರುವುದಕ್ಕೆ ಅವಕಾಶವಿಲ್ಲ. ಹಾಗಿರುವಾಗ ಶರೀರದ ಒಳಗಿರುವ ಆತ್ಮವನ್ನು ಬೇಡಿಕೊಳ್ಳಬೇಕಾಗಿರುತ್ತದೆ. ಆತ್ಮವನ್ನು ಬೇಡಿಕೊಳ್ಳುವುದರಿಂದ ಆತ್ಮ ಕರ್ಮಗಳನ್ನು ಇಲ್ಲದಂತೆ ಮಾಡಬಲ್ಲದು, ಹಾಗೆಯೇ ಬುದ್ಧಿ ಸ್ವಭಾವವನ್ನು ಸಹ ಬದಲಾಯಿಸಬಲ್ಲದು. ಆತ್ಮವನ್ನು ಬೇಡಿಕೊಂಡರೇ ಆತ್ಮ ಏನಾದರೂ ಮಾಡಬಲ್ಲದು. ಆದರೇ ಆತ್ಮವನ್ನು ಬೇಡಿಕೊಳ್ಳುವುದಕ್ಕೆ ಮೊದಲು ಆತ್ಮ ಜ್ಞಾನ (ಆಧ್ಯಾತ್ಮಿಕ ಜ್ಞಾನ) ಅಗತ್ಯ. ಆಧ್ಯಾತ್ಮಿಕ ಜ್ಞಾನವಿರುವಾಗ ಜೀವಿಯು ಬೇಡಿಕೊಂಡರೂ, ಬೇಡಿಕೊಳ್ಳದಿದ್ದರೂ ಕರ್ಮ, ಬುದ್ಧಿ ಸ್ವಭಾವವನ್ನು ಬದಲಾಯಿಸಬಲ್ಲದು. ಜೀವಿಯು ಕೇಳದಿದ್ದರೂ ಆತ್ಮ ತಾನೇ ಸ್ವತಃವಾಗಿ ಬದಲಾಯಿಸಬಲ್ಲದು.

ಮುಖ್ಯವಾಗಿ ಬುದ್ಧಿ ಸ್ವಭಾವ ಬದಲಾಗುತ್ತಿದ್ದಂತೆ ಮನುಷ್ಯ ಮಾತನಾಡುವ ವಿಧಾನವೂ ಸಹ ಬದಲಾಗುತ್ತದೆ. ಒಂದು ಪ್ರಶ್ನೆಯನ್ನು ಸ್ವಭಾವ ಬದಲಾಗದ ಮುನ್ನ ಕೇಳುವುದಕ್ಕೂ, ಬದಲಾದ ನಂತರ ಕೇಳುವುದಕ್ಕೂ ಎಷ್ಟೋ ವ್ಯತ್ಯಾಸವಿರುತ್ತದೆ. ಮೊದಲು ಗರ್ವದಿಂದ ಕೂಡಿಕೊಂಡ ಪ್ರಶ್ನೆ, ಬುದ್ಧಿ ಸ್ವಭಾವ ಬದಲಾದ ನಂತರ ವಿನಯದಿಂದ ಕೂಡಿಕೊಂಡ ಪ್ರಶ್ನೆಯಾಗಿ ಇರುತ್ತದೆ. **ವಿನಯ**ದಿಂದ ಕೇಳಿಸಿಕೊಳ್ಳುವ ಉತ್ತರ ಮನುಷ್ಯನಿಗೆ ಚೆನ್ನಾಗಿ ಅರ್ಥವಾಗಬಲ್ಲದು. ವಿನಯ ಇಲ್ಲದಿರುವಾಗ ಅರ್ಥವಾಗುವುದಕ್ಕೂ, ವಿನಯವಿರುವಾಗ ಅರ್ಥವಾಗುವುದಕ್ಕೂ ಎಷ್ಟೋ ವ್ಯತ್ಯಾಸವಿರುತ್ತದೆ. ನಾವು ಎಷ್ಟೋ ವಿಷಯಗಳನ್ನು

ಹೊರಗೆ ಹೇಳಿದ್ದೇವೆ. ಅವುಗಳಲ್ಲಿ ಬಹಳ ಜನರಿಗೆ ಚೆನ್ನಾಗಿ ಅರ್ಥವಾಗಿವೆ. ಕೆಲವರಿಗೆ ಅರ್ಥದೊಂದಿಗೆ ಸಂತೋಷ ಸಹ ಉಂಟಾಗಿದೆ. ಕೆಲವರಿಗೆ ವಿಷಯಗಳು ತಿಳಿದಂತೆಲ್ಲಾ ಕಣ್ಣಿಗೆ ಆನಂದ ಭಾಷ್ಪಗಳು ಬಂದಿವೆ. ಮತ್ತೆ ಕೆಲವರಿಗೆ ನಾವು ಹೇಳಿರುವುದು ಸ್ವಲ್ಪ ಅರ್ಥವಾದರೂ ಸ್ವಲ್ಪ ಸಂಶಯವಾಗಿ ಉಳಿದುಹೋಗಿದೆ. ಕೆಲವರಿಗೆ ಪೂರ್ತಿ ಅರ್ಥವಾಗಲಿಲ್ಲ. ಕೆಲವರಿಗೆ ಅರ್ಥವಾಗದೆ ಹೋಗುವುದಲ್ಲದೆ ನಮ್ಮ ಮೇಲೆ ಅಸೂಯೆ ಭಾವವಿದೆ. ಮತ್ತೆ ಕೆಲವರಿಗೆ ಅಸೂಯೆ ಬಂದ ನಂತರ ಅವರ ಸಂಶಯ ಪ್ರಶ್ನೆಯಾಗಿ ಬದಲಾಗಿ ಕೇಳಬೇಕೆನಿಸುತ್ತದೆ. ಕೆಲವರಿಗೆ ಕೇಳಬೇಕೆಂದು ಸಹ ಅನಿಸುವುದಿಲ್ಲ. ಅದರಲ್ಲಿ ಏನೂ ಇಲ್ಲದಿರುವಾಗ ಕೇಳುವುದೇ ವೃಥಾ ಎಂದು ಅಂದುಕೊಳ್ಳುತ್ತಾರೆ. ಅವರವರ ಬುದ್ಧಿ ಗ್ರಾಹಿತ ಶಕ್ತಿಯನ್ನನುಸರಿಸಿ, ಬುದ್ಧಿ ಸ್ವಭಾವವನ್ನನುಸರಿಸಿ ನಾವು ಹೇಳಿರುವುದನ್ನು ನೋಡಿ ಸಂತೋಷಪಡುವವರು ಕೆಲವರಿರುವಾಗ, ಕೆಲವರು ಅಸೂಯೆ ಪಡುವವರು ಸಹ ಇರುವುದು ಸಹಜವೇ. ಪ್ರಕೃತಿಯಲ್ಲಿರುವ ಪರಿಸ್ಥಿತಿಯೆಲ್ಲವೂ ಹಾಗೆಯೇ ಇರುತ್ತದೆ.

ಭೂಮಿ ಮೇಲೆ ಮನುಷ್ಯರೆಲ್ಲರಿಗೂ ಒಂದೇ ಸ್ವಭಾವ ಇರುವುದಿಲ್ಲವೆಂದು ತಿಳಿದ ನಾವು ಯಾವುದನ್ನೂ ದೊಡ್ಡದಾಗಿ ಲೆಕ್ಕಿಸಿಕೊಳ್ಳುವುದಿಲ್ಲ. ಎದುರಿಗಿರುವ ವ್ಯಕ್ತಿ ನನ್ನನ್ನು ಹೊಗಳಿದಾಗ ಸ್ವಲ್ಪ ಸಂತೋಷ, ಉತ್ಸಾಹ ಉಂಟಾದರೂ, ಇತರರು ಕಡಿಮೆಯಾಗಿ ಮಾತನಾಡಿದಾಗ ಸ್ವಲ್ಪ ನಿರುತ್ಸಾಹ ಉಂಟಾದರೂ ಅದನ್ನು ನಾವು ಲೆಕ್ಕಿಸುವುದಿಲ್ಲ. ಅವರ ಬುದ್ಧಿ ಸ್ವಭಾವ ಅಂಥಾದ್ದೆಂದುಕೊಳ್ಳುತ್ತೇವೆ. ಅವರು ಇನ್ನೂ ಚೆನ್ನಾಗಿ ತಿಳಿಯುವ ಸಲುವಾಗಿ ಅವರಿಗೆ ಅರ್ಥವಾಗುವಂತೆ ಹೇಳಬೇಕೆಂದು ನಾನು ಅಂದುಕೊಳ್ಳುತ್ತೇನೆ. ಬಹಳ ಜನ ಹೇತುವಾದಿಗಳು ಕೇಳಿದ ಪ್ರಶ್ನೆಗಳಿಗೆ ನಮ್ಮ ಗ್ರಂಥಗಳಲ್ಲಿ ಉತ್ತರಗಳಿದ್ದರೂ ಅವರ ಪ್ರಶ್ನೆಗಳಿಗೆ ಎರಡನೆ ಸಲ ಉತ್ತರಗಳು ಹೇಳಬೇಕೆಂದುಕೊಂಡಿದ್ದೇವೆ. ಇದಕ್ಕೂ ಮೊದಲು ಹೇಳಿದ ವಿಷಯವನ್ನೇ ಈಗ ಇನ್ನೂ ಚೆನ್ನಾಗಿ ಅರ್ಥವಾಗುವಂತೆ ಹೇಳಬೇಕೆಂದುಕೊಂಡಿದ್ದೇವೆ. ಆದ್ದರಿಂದ ಪ್ರಶ್ನೆಗಳು ಕೇಳಿದವರು, ಕೇಳದವರು ಜಾಗ್ರತೆಯಿಂದ ಓದಬೇಕೆಂದು ಕೋರುತ್ತಿದ್ದೇವೆ.

**2) ಪ್ರಶ್ನೆ :– ಈಗಿರುವ ಆಧ್ಯಾತ್ಮಿಕ ಸಿದ್ಧಾಂತಗಳು ದೇವರನ್ನು ತಿಳಿಸುತ್ತಿಲ್ಲವೆಂದಾ ನೀವು ಒಂದು ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ್ದೀರ?**

**ಉತ್ತರ :–** ಈಗಿರುವ ಸಿದ್ಧಾಂತಗಳು ದೈವತ್ವವನ್ನು ಸ್ವಲ್ಪಮಟ್ಟಿಗೆ ತಿಳಿಸಿವೆ. ಆದರೇ ಸಂಪೂರ್ಣವಾದ ದೇವರನ್ನು ತಿಳಿಸಲಾರದೆ ಹೋಗಿವೆ. ಉದಾಹರಣೆಗೆ ಹೇಳಿದರೇ ಖಗೋಳ ಪರಿಶೋಧಕರು ಎಷ್ಟೋ ಪರಿಶೋಧನೆಗ ಳನ್ನು ಮಾಡಿ ಒಬ್ಬೊಬ್ಬರು ಒಂದೊಂದು ಸಿದ್ಧಾಂತವನ್ನು ಹೇಳಿ ಚಂದ್ರನನ್ನು ಇದ್ದಾನೆಂದು ಹೇಳಿದ್ದಾರೆ. ಅವರ ಸಿದ್ಧಾಂತಗಳ ಫಲಿತಾಂಶದಿಂದ ಚಂದ್ರನು ಗ್ರಹವೆಂದು, ಸ್ವಯಂ ಪ್ರಕಾಶ ಇಲ್ಲವೆಂದು, ಸೂರ್ಯರಶ್ಮಿಯಿಂದ ಚಂದ್ರನು ಪ್ರಕಾಶಿಸುತ್ತಿದ್ದಾ ನೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ಶುಕ್ಲ ಪಕ್ಷ, ಕೃಷ್ಣ ಪಕ್ಷ, ಪೌರ್ಣಮಿ, ಅಮಾವಾಸ್ಯೆ ನಡೆಯುತ್ತಿವೆ. ಇವೆಲ್ಲವೂ ಶಾಸ್ತ್ರ ಪರಿಶೋಧನೆಯ ಫಲಿತಾಂಶಗಳೇ. ಆದರೇ ಚಂದ್ರನಲ್ಲಿ ನೀರು ಇರುವಂತೆ ಕಳೆದ ಪರಿಶೋಧನೆಗಳು ನಿರೂಪಿಸಲಾರದೆ ಹೋಗಿವೆ. 'ಚಂದ್ರನಲ್ಲಿ ನೀರಿವೆ' ಎಂದು ಹೇಳುವುದಕ್ಕೆ ಇನ್ನು ಸ್ವಲ್ಪ ಪರಿಶೋಧನೆ ಅವಶ್ಯಕವಾಗಿದೆ. ಕೊನೆಗೆ ಗತದಲ್ಲಿಗಿಂತ ಹೊಸದಾಗಿ ಮಾಡಿದ ಪರಿಶೋಧನೆ ಗಳಿಂದ ಈ ಮಧ್ಯೆ ಕಾಲದಲ್ಲಿ ಹತ್ತು ವರ್ಷಗಳ ಕೆಳಗೆ 'ಚಂದ್ರನಲ್ಲಿ ನೀರಿವೆ' ಎಂದು ತಿಳಿದಿದೆ. ಮೊದಲ ಪರಿಶೋಧನೆಗಳಿಂದ, ಮೊದಲ ಸಿದ್ಧಾಂತಗಳಿಂದ ತಿಳಿಯದ ಸತ್ಯ ನಂತರ ಪರಿಶೋಧನೆಗಳಿಂದ ತಿಳಿದ ಹಾಗೆ, ಹಾಗೆಯೇ ಗತದಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳಿಂದ ದೇವರು ಒಬ್ಬನೇ ಎಂದು ಒಬ್ಬರು, ಅಲ್ಲ ಪ್ರಕೃತಿಯಲ್ಲಿ ದೇವರು ದೊಡ್ಡವನೆಂದು ಮತ್ತೊಬ್ಬರು. ಪ್ರಕೃತಿ ದೇವರು ಅಲ್ಲದೆ ಜೀವಿಯು ಸಹ ಇದ್ದಾನೆಂದು ದೇವರು, ಜೀವಿಯು ಇದ್ದಾನೆಂದು ಕೊನೆಗೆ ದ್ವೈತ ಸಿದ್ಧಾಂತದ ಮೂಲಕ ಮಧ್ವಾಚಾರ್ಯರವರು ಹೇಳಿದ್ದಾರೆ. ನಮಗೆ ತಿಳಿದ ಆಧ್ಯಾತ್ಮಿಕ ಭಾವನೆಗಳನ್ನು ಅನುಸರಿಸಿ ಭಗವದ್ಗೀತೆಯಲ್ಲಿರುವ ಆಧಾರವನ್ನು ತೋರಿಸುತ್ತಾ ಅದಕ್ಕೆ ತ್ರೈತಸಿದ್ಧಾಂತವೆನ್ನುವ ಹೆಸರಿನಿಂದ 38 ವರ್ಷಗಳಿಂದ ಪ್ರಚಾರ ಮಾಡುತ್ತಿದ್ದೇವೆ. ಇದು ಪ್ರತ್ಯೇಕ

ಶಕವಾಗಿ **ತ್ರೈತ ಸಿದ್ಧಾಂತ** ಪ್ರಾರಂಭವಾಗಿದೆಯೆಂದು ಈ ಕಾಲಕ್ಕೆ **"ತ್ರೈತಶಕ"** ಎಂದು ಹೆಸರಿಟ್ಟಿದ್ದೇವೆ. ತ್ರೈತ ಸಿದ್ಧಾಂತದ ಮೂಲಕ ಪ್ರತ್ಯೇಕವಾಗಿ ಜೀವಿಗೂ, ದೇವರಿಗೂ ಮಧ್ಯದಲ್ಲಿ ಆತ್ಮ ಇದೆಯೆಂದು ತಿಳಿಸಿದ್ದೇವೆ. ಎಷ್ಟೋ ನಿರೂಪಣೆಗ ಳೊಂದಿಗೆ ಆತ್ಮ ಇದೆಯೆಂದು ಆತ್ಮ ಇರುವಿಕೆ, ಆತ್ಮಕ್ಕೆ ಕೆಲಸ ಹೇಗಿರುವುದು ತ್ರೈತ ಸಿದ್ಧಾಂತದ ಮೂಲಕ ತಿಳಿಸಲ್ಪಟ್ಟಿದೆ. ಈ ಸಿದ್ಧಾಂತವನ್ನು ಅನುಸರಿಸುವವರಿಗೆ ಆತ್ಮ ಹೇಗಿರುವುದು ತಿಳಿಯುವುದೇ ಅಲ್ಲದೆ, ಆತ್ಮ ಮೂರು ಆತ್ಮಗಳಲ್ಲಿ ಮುಖ್ಯವಾದುದಾಗಿ, ದೇವರೊಂದಿಗೆ ಸಮಾನವಾಗಿರುವುದೆಂದು ತಿಳಿಯಬಲ್ಲದು.

**3) ಪ್ರಶ್ನೆ :– ನೀವು ಪ್ರತಿಪಾದಿಸಿದ ಸಿದ್ಧಾಂತಕ್ಕಾಗಿ ಪ್ರಜೆಗಳಾ? ಪ್ರಜೆಗಳಿಗಾಗಿ ಸಿದ್ಧಾಂತವಾ?**

**ಉತ್ತರ :–** ಪ್ರಜೆಗಳಿಗೋಸ್ಕರ ಸಿದ್ಧಾಂತವಿರಬೇಕೇ ಹೊರತು, ಸಿದ್ಧಾಂತಕ್ಕೋಸ್ಕರ ಪ್ರಜೆಗಳಿರಬಾರದು. ಪ್ರಜೆಗಳಿಗೆ ಉಪಯೋಗಪಡುವುದು ಸಿದ್ಧಾಂತ. ಸಿದ್ಧಾಂತ ಎಂದರೆ ಕೊನೆಗೆ ತಿಳಿಯುವುದು, ಕೊನೆಗೆ ಹೊಂದುವುದು ಎಂದು ಅರ್ಥ. ಯಾವುದನ್ನು ಹೊಂದಬೇಕು? ಯಾವುದನ್ನು ತಿಳಿಯಬೇಕು? ಎನ್ನುವುದಕ್ಕೆ ನೀನು ಏನು ತಿಳಿಯಬೇಕೆಂದು ಪ್ರಯತ್ನಿಸುತ್ತಿದ್ದೀಯೋ, ಅಥವಾ ಏನು ಹೊಂದಬೇಕೆಂದು ಪ್ರಯತ್ನಿಸುತ್ತಿದ್ದೀಯೋ ಅದನ್ನು ಹೊಂದುವುದು ಅಥವಾ ಅದನ್ನು ತಿಳಿಯುವುದು ಎಂದು ಅರ್ಥ. ಸಿದ್ಧಿ+ಅಂತ=ಸಿದ್ಧಾಂತ. ಸಿದ್ಧಿ ಎಂದರೆ ಹೊಂದುವುದು ಅಥವಾ ತಿಳಿಯುವುದು. ಅಂತ ಎಂದರೆ ಕೊನೆಯಲ್ಲಿ (ಅಂತ್ಯ) ಎಂದು ಅರ್ಥ. ಒಂದು ವಿಷಯವನ್ನು ತಿಳಿಯಬೇಕೆಂದು ಒಬ್ಬ ಪರಿಶೋಧಕನು ಪರಿಶೋಧನೆ ಮಾಡುತ್ತಿರುವಾಗ ಕೊನೆಗೆ ಅದು ತಿಳಿಯುವ ಪದ್ಧತಿಯನ್ನು ಸಿದ್ಧಾಂತ ಎಂದು ಕರೆಯಬಹುದು. ಕೊನೆಗೆ ತಿಳಿದಿರುವುದು ಸತ್ಯವಾಗಿರುವುದರಿಂದ, ಸತ್ಯವಾಗಿ ತಿಳಿಯುವವರೆಗು ಪರಿಶೋಧನೆ ಮಾಡುವುದರಿಂದ ಇದಕ್ಕೆ ಶಾಸ್ತ್ರ ಪದ್ಧತಿಯ ಪ್ರಕಾರ ತಿಳಿದಿದೆಯೆಂದು ಹೇಳಬಹುದು. ಸತ್ಯ ತಿಳಿಯುವುದರಿಂದ ಪ್ರತಿ ಸಿದ್ಧಾಂತ ಶಾಸ್ತ್ರ ಬದ್ಧವಾಗಿ ಇರುತ್ತದೆ. ಶಾಸ್ತ್ರದಲ್ಲಿ ಸಿದ್ಧಾಂತ ಅಂತರ್ಭಾಗ ವಾಗಿ ಇರುತ್ತದೆ. ಪ್ರಪಂಚ ವಿಷಯಗಳಿಗೆ ಸಿದ್ಧಾಂತಗಳಿವೆ.

ಹಾಗೆಯೇ ದೈವ ವಿಷಯಗಳಿಗೂ ಸಿದ್ಧಾಂತಗಳು ಇವೆ. ತಿಳಿಯುವ ವಿಷಯಗಳನ್ನನುಸರಿಸಿ ಅವು ಪ್ರಪಂಚ ಸಂಬಂಧ ಐದು ಶಾಸ್ತ್ರಗಳಿಗೆ ಸಂಬಂಧಿಸಿದ ಸಿದ್ಧಾಂತಗಳು ಆಗಬಹುದು, ಅಥವಾ ತಿಳಿಯುವ ವಿಷಯ ದೈವಿಕವಾದುದಾದರೇ ಅದು ದೈವ ಸಂಬಂಧ ಶಾಸ್ತ್ರವಾದ ಬ್ರಹ್ಮವಿದ್ಯಾ ಶಾಸ್ತ್ರ ಸಂಬಂಧ ಸಿದ್ಧಾಂತವಾಗಬಹುದು. ನ್ಯೂಟನ್ ಸಿದ್ಧಾಂತ, ಡಾರ್ವಿನ್ ಸಿದ್ಧಾಂತ ಪ್ರಪಂಚ ಸಂಬಂಧವಾದವುಗಳೆಂದು ಹೇಳಬಹುದು. ಇನ್ನೂ ಬೇರ್ಪಡಿಸಿ ನೋಡಿದರೆ ನ್ಯೂಟನ್ ಸಿದ್ಧಾಂತ ಖಗೋಳ ಶಾಸ್ತ್ರ ಸಂಬಂದವಾದುದು. ತ್ರೈತ ಸಿದ್ಧಾಂತ ಬ್ರಹ್ಮವಿದ್ಯಾ ಶಾಸ್ತ್ರ ಸಂಬಂಧವಾದುದು. ಪ್ರಪಂಚ ಸಂಬಂಧ ಐದು ಶಾಸ್ತ್ರಗಳು, ದೈವ ಸಂಬಂಧ ಒಂದು ಶಾಸ್ತ್ರ ಒಟ್ಟು ಷಟ್ ಶಾಸ್ತ್ರಗಳು ಪ್ರಜೆಗಳಿಗೋಸ್ಕರ ಬಂದಿರುವವೇ. ಪ್ರಜೆಗಳನ್ನು ವಿಜ್ಞಾನವಂತರನ್ನಾಗಿ, ಜ್ಞಾನವಂತರನ್ನಾಗಿ ಮಾಡುವುದಕ್ಕೆ ಬಂದಿರುವವೇ. ಆದ್ದರಿಂದ 'ಸಿದ್ಧಾಂತಗಳು ಪ್ರಜೆಗಳಿಗೋಸ್ಕರವೇ' ಎಂದು ಹೇಳಬಹುದು.

**4) ಪ್ರಶ್ನೆ :– ದೇವರು ಎನ್ನುವುದು ಒಂದು ಅಭೂತಕಲ್ಪನೆ, ಇಲ್ಲದಿರುವುದನ್ನು ಇದೆಯೆಂದು ಭಾವಿಸುವಂತೆ ಮಾಡುವ ಸಮ್ಮೋಹನ ಕ್ರೀಡೆ. ಇದಕ್ಕೆ ನೀವೇ ನೆನ್ನುತ್ತೀರಾ? ದೇವರಿದ್ದಾನೆಂದು ತಿಳಿಸುವುದಕ್ಕೆ ನಿಮ್ಮ ಹತ್ತಿರ ಒರೆಕಲ್ಲಿನಂತಹ ಆಧಾರವೇನಾದರೂ ಇದೆಯಾ?**

**ಉತ್ತರ :–** ದೇವರ ಜ್ಞಾನ ಅರ್ಥವಾಗದಿರುವವರೆಲ್ಲರೂ, ದೇವರ ವಿಷಯವನ್ನು ಸ್ವಲ್ಪವೂ ಗ್ರಹಿಸಿಕೊಳ್ಳಲಾರದವರೆಲ್ಲರೂ, ತಮ್ಮ ಬಲಹೀನತೆಯನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಬಳಸುವ ಪದಗಳು, ಹೇಳುವ ಮಾತುಗಳು ಇವೇ. ದೇವರು ಸತ್ಯಬದ್ಧನು, ಶಾಸ್ತ್ರ ಬದ್ಧನು ಎಂದು ಹೇಳುತ್ತಿದ್ದರೂ ಅಭೂತಕಲ್ಪನೆ ಎನ್ನುವುದನ್ನು ನೋಡಿದರೇ "ತಾನು ಆಡಲಾರದೆ ಮದ್ದಲಿ ಹೊಡೆಯುವವನ ಮೇಲೆ ಕೋಪಗೊಳ್ಳುವುದು" ಎನ್ನುವುದು ಹೀಗೇ ಇರುತ್ತದೆ. ದೇವರ ವಿಷಯಗಳು ಯಾವುವು ಸತ್ಯವಾದುವೋ, ಯಾವುವು ಸತ್ಯವಾಗದಿರುವವೋ ತೀರ್ಮಾನಿಸಿ ಹೇಳುವುದಕ್ಕೆ ದೈವ ಗ್ರಂಥಗಳನ್ನು ದೇವರೇ ಒರೆಕಲ್ಲಾಗಿ ಕಳುಹಿಸುವುದಾಗಿದೆ.

ದೇವರು ಕಳುಹಿಸಿದ **ಪ್ರಥಮ ದೈವ ಗ್ರಂಥ (ಭಗವದ್ಗೀತೆ), ದ್ವಿತೀಯ ದೈವ ಗ್ರಂಥ (ಬೈಬಲ್), ಅಂತಿಮ ದೈವಗ್ರಂಥ (ಖುರ್‌ಆನ್)** ಈ ಮೂರು ಗ್ರಂಥಗಳು ಸತ್ಯಾಸತ್ಯಗಳನ್ನು ತೀರ್ಮಾನಿಸಿ ಹೇಳುವ ಶಾಸ್ತ್ರಬದ್ಧವಾದ ಒರೆಕಲ್ಲುಗಳಾಗಿ ಇವೆಯೆಂದು ಅಂತಿಮ ದೈವ ಗ್ರಂಥದಲ್ಲಿ ಸೂರಾ 2, ಆಯತ್ 53 ರರಲ್ಲಿ ಈ ರೀತಿ ಹೇಳಲಾಗಿದೆ ನೋಡಿರಿ. **(2–53) "ಜ್ಞಾಪಕ ಮಾಡಿಕೊಳ್ಳಿ! ನೀವು ಸನ್ಮಾರ್ಗರಾಗುತ್ತೀರೇನೋ ಎಂದು ನಾವು ಮೂಸಾಗೆ ಗ್ರಂಥವನ್ನು ಮತ್ತು ಸತ್ಯಾಸತ್ಯಗಳನ್ನು ಬೇರ್ಪಡಿಸಿ ತೋರಿಸುವ ಒರೆಕಲ್ಲನ್ನು ಪ್ರಸಾದಿಸಿದ್ದೇವೆ."**

ಶಾಸ್ತ್ರ ಎಂದರೆ ಸತ್ಯವೆಂದು ಅರ್ಥ. ಯಾವುದು ಸತ್ಯವೋ ಅದು ಶಾಸ್ತ್ರವಾಗುತ್ತದೆ. ಒಂದು ಸತ್ಯವಾದ ವಿಷಯ ಆರು ಶಾಸ್ತ್ರಗಳಲ್ಲಿ ಯಾವುದೋ ಒಂದು ಶಾಸ್ತ್ರಕ್ಕೆ ಸಂಬಂಧಿಸಿರುತ್ತದೆ. ದೇವರಿಗೆ ಸಂಬಂಧಿಸಿದ ಶಾಸ್ತ್ರ ಇದೆಯೆಂದರೆ ಅದರಲ್ಲಿ ಸತ್ಯವಿದೆಯೆಂದೇ ಅಲ್ಲವೆ ಅರ್ಥ. ಷಟ್ ಶಾಸ್ತ್ರಗಳಲ್ಲಿ ಐದು ಪ್ರಪಂಚ ಸಂಬಂಧ ಶಾಸ್ತ್ರಗಳಾದಾಗ, ಒಂದು ದೇವರ ಸಂಬಂಧವಾದ ಬ್ರಹ್ಮವಿದ್ಯಾ ಶಾಸ್ತ್ರವಿದೆ. ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಹೇಳಿದ ವಿಷಯಗಳು ಶಾಸ್ತ್ರವಾಗಿರುವುದರಿಂದ ಅವು ಸತ್ಯವಾಗಿರುವವಾಗಿ ಇರುತ್ತವೆ ಆದರೆ ಅಭೂತಕಲ್ಪನೆಯಾಗಿ ಇರುವುದಿಲ್ಲವೆಂದು ತಿಳಿಯಬೇಕು. ದೇವರು ಇದ್ದಾನೆ ಆದರೆ ತಿಳಿಯುವುದಿಲ್ಲ. ದೇವರು ಹುಡುಕಲ್ಪಡುವವನೇ ಹೊರತು ತಿಳಿಯುವವನಲ್ಲ. **"ದೇವಲ್ಪಡುವವನು ದೇವರು"** ಎಂದು ಹಿರಿಯರು ಹೇಳಿದ್ದಾರೆ. ತಿಳಿಯದ ದೇವರನ್ನು, ಕಾಣಿಸದ ದೇವರನ್ನು ನೋಡಿದ್ದೇವೆ ಎನ್ನುವವರು ಹೇಳುವುದು ಅಭೂತಕಲ್ಪನೆಯಾಗಿ ಇರಬಹುದಾಗಲೀ ದೇವರ ವಿಧಾನವಾಗಲೀ, ದೇವರ ಜ್ಞಾನವಾಗಲೀ ಅಭೂತಕಲ್ಪನೆಯಲ್ಲ, ಸತ್ಯವೆಂದು ಹೇಳಬಹುದು. ದೇವರು ನಾಮ, ರೂಪ, ಕ್ರಿಯೆಗಳು ಇಲ್ಲದವನೆಂದು ಶಾಸ್ತ್ರ ಹೇಳುತ್ತಿದೆ. ದೇವರಿಗೆ ಹೆಸರಾಗಲೀ, ರೂಪವಾಗಲೀ, ಕೆಲಸವಾಗಲೀ ಇಲ್ಲವೆಂದು ಹೇಳುತ್ತಿರುವಾಗ ಅದನ್ನು ದೇವರ ಜ್ಞಾನ ಎನ್ನುತ್ತಿದ್ದೇವೆ. ದೇವರ ಜ್ಞಾನ ತಿಳಿಯದೆ ಕೆಲವರು ಅನವಶ್ಯಕವಾಗಿ ದೇವರನ್ನು ಕುರಿತು ಅಭೂತಕಲ್ಪನೆಯೆಂದು ಹೇಳುವುದು ಪೂರ್ತಿ ತಪ್ಪಾಗುತ್ತದೆ.

ದೇವರಿದ್ದಾನೆಂದು ಹೇಳುವುದಕ್ಕೆ ನಮ್ಮ ಹತ್ತಿರ ಪೂರ್ತಿ ಸಮಾಚಾರವಿದ್ದರೂ ಆತನು ಯಾರಿಗೂ ತಿಳಿಯದಂತೆ ಸ್ಥಭ್ಧನಾಗಿದ್ದಾನೆ ಎಂದು ಹೇಳುತ್ತಿದ್ದೇವೆ. ಹಾಗಿರುವಾಗ ದೇವರು ತಿಳಿಯುವುದಿಲ್ಲ, ಯಾರೂ ಆತನನ್ನು ನೋಡಲಿಲ್ಲ ಎಂದು ಹೇಳುತ್ತಿದ್ದೇವೆ. ದೇವರು ತಿಳಿಯಲ್ಪಡುತ್ತಾನೆ ಎಂದು ಹೇಳಿದ್ದರೂ, ದೇವರು ಕಾಣಿಸುತ್ತಾನೆ ಎಂದು ಹೇಳಿದ್ದರೂ ಆ ಮಾತುಗಳು ಅಭೂತಕಲ್ಪನೆಯೇ ಆಗುತ್ತವೆ. ಬ್ರಹ್ಮವಿದ್ಯಾ ಶಾಸ್ತ್ರದ ಪ್ರಕಾರ ಮೂರು ದೈವ ಗ್ರಂಥಗಳು ದೇವರ ವಿಷಯದಲ್ಲಿ ದೇವರ ಮೇಲೆ ನೆಲೆಗೊಂಡ ಊಹಾಪೋಹಗಳನ್ನು ತೆಗೆದುಹಾಕುವುದಕ್ಕೆ ಇವೆ. ಸೃಷ್ಠಿ ತಯಾರಾದ ನಂತರ ದೇವರು ಏನೂ ಮಾಡದವನಾಗಿ, ಯಾರಿಗೂ ತಿಳಿಯದವನಾಗಿ ಉಳಿದುಹೋಗಿದ್ದಾನೆ. ಆತನ (ದೇವರ) ಹೆಸರು ಯಾರಿಗೂ ತಿಳಿದಿಲ್ಲ. ಆತನ ರೂಪ ಯಾರಿಗೂ ತಿಳಿದಿಲ್ಲ. ಹಾಗೇ ಆತನು ಯಾವ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಆತನು ಎಂದಿಗೂ ಅಭೂತನೇ ಅಂತಹವನನ್ನು ಪುನಃ ಕಲ್ಪನೆ ಮಾಡಬೇಕಾದ ಅವಶ್ಯವಿಲ್ಲ. ಅಭೂತನೆಂದರೆ ಜೀವ ಇಲ್ಲದವನು. ಜೀವವು ಕರ್ಮ ಇರುವ ಜೀವಿಗೆ ಇರುತ್ತದೆ. ಆತನು ದೇವರು ಆದ್ದರಿಂದ ಆತನು ಎಂದಿಗೂ ಅಭೂತನೇ. ದೈವ ಜ್ಞಾನ ತಿಳಿಯದವನೇ ಆತನನ್ನು ಅಭೂತನೆಂದು ಕಲ್ಪನೆ ಮಾಡಿ ಹೇಳುವನು. ತಿಳಿದವನು ಕಲ್ಪನೆ ಮಾಡಬೇಕಾದ ಅವಶ್ಯವಿಲ್ಲ. ದೇವರು ನಿತ್ಯನೂ, ಸತ್ಯನೂ ಭೂತವಲ್ಲದ ಅಭೂತನು.

ದೇವರೆನ್ನುವುದೇ ಇಲ್ಲದಿರುವುದನ್ನು ಇದೆಯೆಂದು ಭಾವಿಸುವಂತೆ ಮಾಡುವ ಸಮ್ಮೋಹನ ಕ್ರೀಡೆ ಎಂದು ಹೇಳುತ್ತಾರೆ ಇದಕ್ಕೆ ನೀವೇನನ್ನುತ್ತೀರಾ? ಎಂದು ಪ್ರಶ್ನಿಸಿದ್ದಾರೆ. ಇವೆಲ್ಲಾ ತಿಳಿಯದೆ ಮಾತನಾಡಿದ ಮಾತುಗಳೆ ಹೊರತು, ತಿಳಿದು ಮಾತನಾಡಿದ ಮಾತುಗಳು ಅಲ್ಲವೆಂದು ನಮಗೆ ಅರ್ಥವಾಗುತ್ತಿದೆ. ದೇವರು ಇಲ್ಲದವನಾಗಿಯೇ ಇದ್ದಾನೆಂದು ಯಾವ ವಿಷಯದಲ್ಲಾಗಲೀ ದೇವರನ್ನು ಜವಾಬ್ದಾರನನ್ನಾಗಿ ಮಾಡಿ ಹೇಳಬಾರದೆಂದು, ವಿಶ್ವದಲ್ಲಿ ಆತನ ಪಾತ್ರವೇ ಇಲ್ಲವೆಂದು, ದೇವರು ಸ್ಥಬ್ದನಾಗಿ ನಿಂತುಹೋಗಿರುವವನೆಂದು,

ಕೇವಲ ಅಕ್ಷಿಯಾಗಿ ಇದ್ದಾನೆ ಹೊರತು ಆತನು ಇಲ್ಲದವನೇಯೆಂದು, ಇಲ್ಲದವನನ್ನು ಇದ್ದಾನೆಂದು ಹೇಳುವುದು, ಇದ್ದಾನೆಂದು ಅಂದುಕೊಳ್ಳುವುದು ಅಜ್ಞಾನವೆಂದು, ಎಲ್ಲಾ ಕಡೆ ಇರುವವನು, ಎಲ್ಲಾ ಮಾಡುವವನು, ನಿಜವಾಗಿ ನಿನಗೂ ನನಗೂ ದೇವರಾಗಿ, ಅಧಿಪತಿಯಾಗಿ ಇರುವವನು ಆತ್ಮವೇಯೆಂದು, ದೇವರು ಅಲ್ಲವೆಂದು ನಾವು ಬಹಳ ಸಲ ಹೇಳಿದ್ದೇವೆ. ದೇವರನ್ನು ಗೌರವಾರ್ಥ ಕೆಲವು ಕಡೆ ಹೇಳುತ್ತಿದ್ದೇವೆ ಹೊರತು, ಯಾವ ವಿಷಯವೂ ದೇವರಿಗೆ ಸಂಬಂಧವಿಲ್ಲವೆಂದು, ದೇವರು ಎಲ್ಲಿಯೂ ಜೋಕ್ಯ ಮಾಡಿಕೊಂಡಿಲ್ಲವೆಂದು, ದೇವರ ಸ್ಥಾನದಲ್ಲಿ ಆತ್ಮವೇ ಎಲ್ಲಾ ಮಾಡುತ್ತಿದೆಯೆಂದು **"ವಿಶ್ವವಿದ್ಯಾಲಯ"** ಎನ್ನುವ ಗ್ರಂಥದಲ್ಲಿ ಬರೆದಿದ್ದೇವೆ. ಇಲ್ಲದವನನ್ನು ಇದ್ದಾನೆಂದು ಅಂದು ಕೊಳ್ಳುವುದೇ ಅಜ್ಞಾನವೆಂದು, ಇರುವುದು ಏನೋ, ಇಲ್ಲದಿರುವುದು ಏನೋ ತಿಳಿದುಕೊಂಡು ಹೇಳಿದರೇ ಚೆನ್ನಾಗಿರುತ್ತದೆ ಆದರೆ, ಏನೋ ಮಾತನಾಡಬೇ ಕೆಂದು ಅಂದುಕೊಳ್ಳುವುದು ಹೇತುವಾದ ಅಲ್ಲವೆಂದು ಅಜ್ಞಾನವಾದ ಎಂದು ಹೇಳಬಹುದು. ನಾವು ಹೇಳುವುದು ಸತ್ಯ ಎನ್ನುವುದಕ್ಕೆ ಒರೆಕಲ್ಲಾಗಿ **ಭಗವದ್ಗೀತೆ, ಬೈಬಲ್, ಖುರಾನ್** ಎನ್ನುವ ಮೂರು ಗ್ರಂಥಗಳು ಇವೆಯೆಂದು ಹೇಳುತ್ತಿದ್ದೇವೆ.

**5) ಪ್ರಶ್ನೆ :– ದೇವರಿದ್ದಾನೆಂದು ನಾವು ನಂಬುವುದಿಲ್ಲ. ಆದರೂ ನಮಗೆ ಯಾವ ಕಷ್ಟಗಳು ಇಲ್ಲ, ದೇವರಿದ್ದಾನೆನ್ನುವವರಿಗಿಂತ ನಾವೇ ಚೆನ್ನಾಗಿದ್ದೇವೆ. ದೇವರಿದ್ದಾನೆ ಎಂದು ನಿತ್ಯ ಪೂಜೆಗಳು ಮಾಡುವವರೇ ಎಲ್ಲಾ ವಿಧಗಳಲ್ಲಿ ಕಷ್ಟಪಡುತ್ತಿದ್ದಾರೆ. ನಾವು ದೇವರೆಂದರೆ ಭಯವಿಲ್ಲದವರಾಗಿ ಮುಗಿಯುವುದು ಸಹ ಮುಗಿಯುವುದಿಲ್ಲ. ಮತ್ತು ದೇವರು ನಮ್ಮನ್ನು ಏಕೆ ಶಿಕ್ಷಿಸಲಿಲ್ಲ, ಏಕೆ ಕಷ್ಟ ಕೊಡಲಿಲ್ಲ?**

**ಉತ್ತರ :–** ದೇವರಿಗು, ಪ್ರಪಂಚ ಕಷ್ಟಗಳಿಗು ಸಂಬಂಧವಿಲ್ಲ. ಪ್ರಪಂಚ ಕಷ್ಟಗಳು ಕರ್ಮವನ್ನನುಸರಿಸಿ ಬರುತ್ತವೆ ಹೊರತು, ಭಕ್ತಿಯನ್ನನುಸರಿಸಿ ಬರುವವಲ್ಲ, ಹೋಗುವವು ಅಲ್ಲ. ದೇವರ ಮೇಲೆ ಭಕ್ತಿ ಇಲ್ಲದವನಿಗೆ ಕಷ್ಟಗಳು ಬರುತ್ತವೆಂದು, ಭಕ್ತಿ ಇರುವವನಿಗೆ ಕಷ್ಟಗಳು ಬರುವುದಿಲ್ಲವೆಂದು ಯಾವ ಗ್ರಂಥದಲ್ಲೂ ಬರೆದಿಲ್ಲ. ದೇವರು, ದೇವರ ಜ್ಞಾನ ಮನುಷ್ಯ ಜನ್ಮಗಳು ಇಲ್ಲದಂತೆ ಮಾಡುವುದಕ್ಕೇ

ಹೊರತು, ಕಷ್ಟ ಸುಖಗಳ ಸಲುವಾಗಿ ಅಲ್ಲ. ಕಷ್ಟ ಸುಖಗಳು ಪಾಪ ಪುಣ್ಯ ಕರ್ಮಗಳನ್ನನುಸರಿಸಿ ಇರುತ್ತವೆ ಹೊರತು ಬೇರೆ ವಿಧಾನದಿಂದ ಬರುವುದಿಲ್ಲ, ಹೋಗುವುದಿಲ್ಲ. ಗತ ಜನ್ಮದಲ್ಲಿ ಪುಣ್ಯ ಮಾಡಿಕೊಂಡವರು ಈ ಜನ್ಮದಲ್ಲಿ ಸುಖಗಳು ಅನುಭವಿಸಬೇಕೆಂದು ತೀರ್ಪು ಕೊಡಲ್ಪಟ್ಟಿರುತ್ತದೆ. ಗತ ಜನ್ಮದಲ್ಲಿ ಪುಣ್ಯವನ್ನು ಮಾಡಿಕೊಂಡವರು ಈ ಜನ್ಮದಲ್ಲಿ ಎಷ್ಟು ಅಜ್ಞಾನಿಯಾದರೂ, ದೇವರನ್ನು ನಂಬದೇ ಹೋದರೂ, ಅವನು ಗತ ಪುಣ್ಯ ಫಲಿತದಿಂದ ಸುಖಗಳನ್ನೇ ಅನುಭವಿಸುತ್ತಿರುವನು. ಗತ ಜನ್ಮದಲ್ಲಿ ಪಾಪವನ್ನು ಮಾಡಿ ಕೊಂಡವನು ಈ ಜನ್ಮದಲ್ಲಿ ದೇವರನ್ನು ನಂಬಿದರೂ, ದೇವರನ್ನು ಆರಾಧಿಸಿದರೂ ಗತ ಜನ್ಮ ಪಾಪದಿಂದ ಕಷ್ಟಗಳನ್ನೇ ಅನುಭವಿಸುತ್ತಿರುವನು. ಇದೆಲ್ಲವೂ ಪ್ರಪಂಚದಲ್ಲಿ ನಡೆಯುವ ಸತ್ಯ. ಅಷ್ಟೇ ಹೊರತು ದೇವರನ್ನು ವಿಶ್ವಾಸಿಸದವನಿಗು, ದೇವರ ಶಿಕ್ಷೆಗೂ ಸಂಬಂಧವಿಲ್ಲ. ವಿಶ್ವಾಸ ದೈವ ಜ್ಞಾನವನ್ನನುಸರಿಸಿ ಬರುತ್ತದೆ. ಹುಟ್ಟಿದ ಪ್ರತಿ ಮನುಷ್ಯನಿಗೂ ದೇವರ ಮೇಲೆ ವಿಶ್ವಾಸ ಇರಬೇಕೆಂದು ದೇವರು ಸಹ ಎಲ್ಲೂ ಹೇಳಲಿಲ್ಲ. ದೇವರ ಮೇಲೆ ವಿಶ್ವಾಸ ನಮಗಿರುವ ಶ್ರದ್ಧೆಯನ್ನನುಸರಿಸಿ ಬರುತ್ತದೆ. ಶ್ರದ್ಧೆಯನ್ನನುಸರಿಸಿ ಭಕ್ತಿ ವಿಶ್ವಾಸಗಳು ಇರುತ್ತವೆ. ಕರ್ಮವನ್ನನುಸರಿಸಿ ಕಷ್ಟ ಸುಖಗಳಿರುತ್ತವೆ. ಭಕ್ತಿ ವಿಶ್ವಾಸಗಳಿಗು ಕಷ್ಟ ಸುಖಗಳಿಗು ಯಾವ ಮಾತ್ರ ಸಂಬಂಧವಿಲ್ಲ. ಆದ್ದರಿಂದ "ಭಕ್ತಿ ವಿಶ್ವಾಸ ಇಲ್ಲದವರನ್ನು ದೇವರು ಶಿಕ್ಷಿಸುತ್ತಾನೆ" ಎಂದು ಅಂದುಕೊಳ್ಳುವುದು ಪೂರ್ತಿ ತಪ್ಪು.

**6) ಪ್ರಶ್ನೆ :– ಮನುಷ್ಯ ಸಂಪಾದಿಸಿಕೊಂಡ ಕರ್ಮ ಪ್ರಕಾರವೇ ಈ ಜನ್ಮದಲ್ಲಿ ಎಲ್ಲ ಅವೇ ನಡೆಯುತ್ತವೆ ಎಂದು ಹೇಳುವ ಕರ್ಮಸಿದ್ಧಾಂತ ಜನರನ್ನು ಸೋಂಬೇರಿ ಗಳನ್ನಾಗಿ ಮಾಡುತ್ತಿದೆಯೆಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ನೇರವಾಗಿ ಉತ್ತರವನ್ನು ಹೇಳಿರಿ?**

**ಉತ್ತರ :–** ನೇರವಾಗಿ ಹೇಳಿದರೂ, ಅಡ್ಡ ದಿಡ್ಡಿಯಾಗಿ ಹೇಳಿದರೂ ಸೋಂಬೇರಿಗಳಾಗುವುದಕ್ಕಾಗಲೀ, ಚುರುಕುತನ ಇರುವವರಾಗುವುದಕ್ಕಾಗಲೀ ಕರ್ಮವೇ ಕಾರಣ. ಕರ್ಮವನ್ನು ಅಡ್ಡ ಇಟ್ಟುಕೊಂಡು ಯಾರೂ ಕೆಲಸಗಳನ್ನು

ಬಿಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಒಂದು ಕ್ಷಣವೂ ಸಹ ಸುಮ್ಮನಿರದೇ ಕರ್ಮದಿಂದಲೇ ಕದಲುತ್ತಾ, ಕೆಲಸ ಮಾಡುತ್ತಿರುವನೆಂದು ಕರ್ಮ ಕಾನೂನಿನಲ್ಲಿರು ವಾಗ ಮನುಷ್ಯ ಧನಿಕನಾಗಿ ಬದಲಾಗಬೇಕೆಂದರೂ, ಬಡವನಾಗಿ ಬದಲಾಗಬೇ ಕೆಂದರೂ, ಸೋಂಬೇರಿಯಾಗಿ ಬದಲಾಗಬೇಕೆಂದರೂ ಎಲ್ಲದಕ್ಕೂ ಕರ್ಮವೇ ಕಾರಣ ವಾಗಿರುವಾಗ ಸ್ವತಃವಾಗಿ ಯಾರೂ ಸೋಂಬೇರಿಯಾಗಿ ಬದಲಾಗುವು ದಿಲ್ಲ. ಕರ್ಮದಿಂದ ಸುಖ ದುಃಖಗಳು ಅವೇ ಬರುತ್ತವೆ ಬಿಡು ಎಂದು ಕೆಲಸಗಳು ಬಿಟ್ಟುಕೊಳ್ಳುವುದಕ್ಕೆ ಯಾವ ಜೀವಿಗೂ ಸ್ವಾತಂತ್ರ್ಯವಿಲ್ಲ. ಯಾರೂ ಸ್ವತಂತ್ರವಾಗಿ ಬದಲಾಗುವುದಕ್ಕೆ ಅವಕಾಶವಿಲ್ಲ. ಪ್ರತಿ ಕ್ಷಣ ಕರ್ಮವನ್ನನುಸರಿಸಿ ಅವನು ನಡೆಯುತ್ತಿರುವನೆಂದು ಭಗವದ್ಗೀತೆ ಕರ್ಮಯೋಗದಲ್ಲಿ 5ನೇ ಶ್ಲೋಕದಲ್ಲಿ ಈ ವಿಧವಾಗಿ ಹೇಳಿದ್ದಾರೆ ನೋಡಿರಿ.

**(2–5) ಶ್ಲೋ॥ ನಹಿಕಶ್ಚಿತ್ ಕ್ಷಣ ಮಪಿ ಜಾತು ತಿಷ್ಟತ್ಯ ಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮಸರ್ವಃ ಪ್ರಕೃತಿ ಜೈರ್ಗುಣೈಃ ॥**

**ವಿವರ :– "ಯಾವ ಕರ್ಮ ಅನುಭವಿಸದೇ ಯಾರೂ ಸಹ ಒಂದು ಕ್ಷಣವಾದರೂ ಸುಮ್ಮನಿರುವುದಕ್ಕೆ ಅವಕಾಶವಿಲ್ಲ. ಪ್ರಕೃತಿ ಗುಣಗಳಿಂದ ಕರ್ಮ ಬದ್ಧರಾಗಿ ಜನರು ಕರ್ಮಗಳ ವಶರಾಗಿ ಕಾರ್ಯಗಳನ್ನು ಮಾಡುತ್ತಿರುವರು."**

ಈ ವಿಧವಾಗಿ ಪ್ರತಿ ಮನುಷ್ಯ ಕರ್ಮ ಪ್ರಕಾರ ಕಾರ್ಯಗಳನ್ನು ಮಾಡುತ್ತಿರುವಾಗ ಪ್ರತ್ಯೇಕಿಸಿ ಯಾರೇಯಾಗಲಿ ತನ್ನ ಸ್ವತಃವಾಗಿ ಬದಲಾಗಿ ಹೋಗುವನೆಂದಾಗಲೀ, ಕೆಲಸಗಳನ್ನು ಮಾಡುವುದಿಲ್ಲವೆಂದಾಗಲೀ, ಮಾಡುತ್ತಾ ನೆಂದಾಗಲೀ ಹೇಳುವುದಕ್ಕೆ ಅವಕಾಶವಿಲ್ಲ. ಮನುಷ್ಯನನ್ನು ಕರ್ಮ ಎಷ್ಟೋ ಲೆಕ್ಕಾಚಾರವಾಗಿ ಕ್ಷಣ ಕ್ಷಣ ನಡೆಸುತ್ತಿರುವಾಗ, ಒಂದು ಕ್ಷಣವೂ ಸಹ ಕರ್ಮ ಲೆಕ್ಕಾಚಾರ ಇಲ್ಲದಂತೆ ನಡೆಯುವುದಕ್ಕೆ ಅವಕಾಶವಿಲ್ಲದಂತಿರುವಾಗ, ಮನುಷ್ಯ ಯಾವುದೋ ನೋಡಿ, ಯಾವುದೋ ಒಂದು ವಿಧವಾಗಿ ಬದಲಾಗುತ್ತಾನೆಂದು ಹೇಳುವುದಕ್ಕೆ ಅವಕಾಶವಿಲ್ಲ. ಮನುಷ್ಯ ತನ್ನ ಇಷ್ಟ ಬಂದಹಾಗೆ ಬದಲಾಗಬೇ

ಕೆಂದುಕೊಂಡರೂ, ಯಾವುದೂ ಅವನ ಇಷ್ಟ ಬಂದಹಾಗೆ ನಡೆಯುವುದಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಮೊದಲೇ ನೇಮಿಸಲ್ಪಟ್ಟಿರುವ ಕರ್ಮದ ಪ್ರಕಾರ ಎಲ್ಲಾ ನಡೆಯುತ್ತಿರುವಾಗ, ಮನುಷ್ಯ ಸ್ವತಃವಾಗಿ ಏನೂ ಮಾಡಲಾರನು. ತಾನು ಅಂದುಕೊಳ್ಳುವುದೊಂದು, ಕರ್ಮದ ಪ್ರಕಾರ ನಡೆಯುತ್ತಿರುವುದೊಂದು ಪ್ರತಿ ಮನುಷ್ಯನ ಜೀವನದಲ್ಲಿ ಇರುತ್ತದೆ. ಮನುಷ್ಯನ ಇಷ್ಟ ಬೇರೆ, ಮನುಷ್ಯನ ಕರ್ಮ ಬೇರೆ. ಮನುಷ್ಯನ ಇಷ್ಟದ ಪ್ರಕಾರ ಯಾವುದೂ ನಡೆಯುವುದಿಲ್ಲ. ಎಲ್ಲಾ ಕರ್ಮಗಳು ಲೆಕ್ಕಾಚಾರದ ಪ್ರಕಾರವೇ ನಡೆಯುತ್ತವೆ. ಆದ್ದರಿಂದ "ಕಾರ್ಯಂ ಕರ್ಮಾಧೀನಮ್" ಎಂದು ಹಿರಿಯರು ಹೇಳಿದ್ದಾರೆ.

**7) ಪ್ರಶ್ನೆ :– ನೀವು ಪ್ರತಿಪಾದಿಸಿದ ಸಿದ್ಧಾಂತವು ಸುಮಾರು ಎಷ್ಟು ಗ್ರಂಥಗಳಾಗಿ ಬರೆಯಬೇಕೆಂದುಕೊಂಡಿದ್ದೀರ? ಇದರಿಂದ ಯಾವ ವಿಧವಾಗಿ ನಿಮಗೆ ಲಾಭ ಕೈಗೂಡುತ್ತದೆ?**

**ಉತ್ತರ :–** ಇದು ಕೇಳಬೇಕಾದ ಪ್ರಶ್ನೆಯೇ ಅಲ್ಲ, ಆದರೂ ನಾನು ಹೇಳಬೇಕಾದ ಉತ್ತರವೇ! ಆದ್ದರಿಂದ ಹೇಳುತ್ತಿದ್ದೇನೆ. ಮನುಷ್ಯ ಮಾಡಬೇಕಾದ ಕೆಲಸವನ್ನು ಕುರಿತು ಅಂದಾಜು ಹಾಕಿಕೊಳ್ಳುವುದು ಸಹಜ. ತಾನು ಅಂದುಕೊಂಡಂತೆ ಮಾಡುತ್ತೇನೆನ್ನುವ ಅಜ್ಞಾನ ಅವರಲ್ಲಿ ಇರುವುದರಿಂದ ಅವರು ಮೊದಲೇ ಅದು ಮಾಡಬಲ್ಲೆನು, ಇದು ಮಾಡಬಲ್ಲೆನು ಎಂದು ಅಂದುಕೊಳ್ಳುವುದು ನಡೆಯುತ್ತಿದೆ. ಆದರೇ ನಮ್ಮ ವಿಷಯಕ್ಕೆ ಬಂದರೇ ನಾನು ಮೊದಲೇ ಅಂದುಕೊಳ್ಳುವುದರಿಂದ ನಡೆಯುತ್ತಿದೆಯೆಂಬ ನಂಬಿಕೆ ಮಾತ್ರ ಇಲ್ಲ. ಏಕೆಂದರೇ! ನಡೆಯುವ ಕೆಲಸಗಳೆಲ್ಲವೂ ಮನುಷ್ಯನ ಇಷ್ಟ ಅಯಿಷ್ಟಗಳ ಮೇಲೆ ಆಧಾರಪಟ್ಟಿಲ್ಲ. ಕಾರ್ಯಗಳೆಲ್ಲವೂ ಮನುಷ್ಯನೊಂದರ ಕರ್ಮದ ಮೇಲೆ ಆಧಾರಪಟ್ಟು ನಡೆಯುತ್ತಿವೆ. ನನ್ನ ಕರ್ಮದಲ್ಲಿ ಎಷ್ಟು ಗ್ರಂಥಗಳು ಬರೆಯಬೇಕೆಂದು ನಿರ್ಣಯವಾಗಿರುತ್ತದೋ ಅದರ ಪ್ರಕಾರ ಅಷ್ಟು ಗ್ರಂಥಗಳನ್ನು ಬರೆಯಬಲ್ಲೆನು. ಆದ್ದರಿಂದ ನನ್ನ ಕರ್ಮ ಹೇಗಿದೆಯೋ ನನಗೆ ತಿಳಿದಿಲ್ಲ, ಆದ್ದರಿಂದ ನಾನು ಎಷ್ಟು ಗ್ರಂಥಗಳು ಬರೆಯುತ್ತೀನೋ ಮೊದಲೇ ಹೇಳುವುದಕ್ಕೆ ಸಾಧ್ಯವಿಲ್ಲ.

ಕಾರ್ಯಗಳೆಲ್ಲವೂ ಕರ್ಮವನ್ನನುಸರಿಸಿ ಇರುತ್ತವೆ, ಆದ್ದರಿಂದ ಕರ್ಮವನ್ನು ತಿಳಿಯದ ನೀನು ಇಂತಹ ಕೆಲಸವನ್ನು ಇಂತಹ ವಿಧವಾಗಿ ಮಾಡುತ್ತೇನೆಂದು ಹೇಳಬೇಡ. ಒಂದು ವೇಳೆ ನೀನು ಇಂತಹ ಕೆಲಸವನ್ನು ಮಾಡುತ್ತೇನೆಂದು ಹೇಳಿದರೂ ಆ ಕೆಲಸವನ್ನು ಮಾಡಲಾರೆ, ಆ ಕೆಲಸ ನಡೆಯುವುದಿಲ್ಲ. ಆದ್ದರಿಂದ ಈ ವಿಷಯವಾಗಿ ಅಂತಿಮ ದೈವಗ್ರಂಥ ಖುರಾನ್‌ನಲ್ಲಿ ಸೂರಾ 18, ಆಯತ್ 23ರಲ್ಲಿ ಈ ವಿಧವಾಗಿ ಹೇಳಿದ್ದಾರೆ ನೋಡಿರಿ. **(18–23) "ಯಾವ ವಿಷಯದಲ್ಲೂ ಸಹ ನಾನು ಈ ಕೆಲಸವನ್ನು ನಾಳೆ ಮಾಡುತ್ತೇನೆಂದು ಹೇಳಬೇಡ, ನೀನು ಏನೂ ಮಾಡಲಾರೆ."** ಇದು ದೇವರು ಹೇಳಿದ ಜ್ಞಾನವಾದ್ದರಿಂದ ನಾಳೆ ಏನು ನಡೆಯುತ್ತದೋ, ಏನು ಮಾಡುತ್ತೇವೋ ಯಾರಿಗೂ ತಿಳಿದಿಲ್ಲ. ಕಾರ್ಯಗಳ ವಿಷಯವೇ ತಿಳಿಯದಿರುವಾಗ ಕಾರ್ಯಗಳಿಂದ ಲಾಭ ಉಂಟಾಗುತ್ತದೆಂದು ಏಕೆ ಅಂದುಕೊಳ್ಳಬೇಕು? ಒಂದು ವೇಳೆ ಕರ್ಮದ ಪ್ರಕಾರ ನಷ್ಟವೂ ಸಹ ಬರಬಹುದು. ಎಲ್ಲರೂ ಲಾಭ ಬರಬೇಕೆಂದು ಕೆಲಸಗಳು, ವ್ಯಾಪಾರಗಳು ಮಾಡುತ್ತಿರುವರು. ಆದರೇ ಅವರಿಗೆ ನಷ್ಟ ಬಂದು, ಇರುವುದು ಸಹ ಕಳೆದುಕೊಂಡವರು ಎಷ್ಟೋ ಜನರಿದ್ದಾರೆ. ಜ್ಞಾನ ತಿಳಿದ ಯಾವ ಮನುಷ್ಯ ಕೆಲಸಗಳನ್ನು ಕುರಿತಾಗಲೀ, ಕೆಲಸಗಳಿಂದ ಬರುವ ಲಾಭಗಳನ್ನು ಕುರಿತಾಗಲೀ ಮೊದಲೇ ಮಾತನಾಡುವುದಿಲ್ಲ. ಆದ್ದರಿಂದ ನನಗೆ ಬರುವ ಲಾಭವನ್ನು ಕುರಿತು ನಾನು ಏನೂ ಹೇಳಲಾರೆನು.

**8) ಪ್ರಶ್ನೆ :– "ಚೇಳು ಕುಟುಕಿದ ವ್ಯಕ್ತಿಗೆ ಅಲ್ಲದೆ, ಆ ವಿಷಯವನ್ನು ಹೇಳಿದ ಮತ್ತೊಬ್ಬ ಮನುಷ್ಯನಿಗೆ ಚಿಕಿತ್ಸೆ ಮಾಡುವುದರಿಂದ ಚೇಳು ಕುಟುಕಿದ ವ್ಯಕ್ತಿಗೆ ಬಾಧೆ ಕಡಿಮೆಯಾಗುತ್ತದೆ" ಎಂದು ಕೇಳಿದ್ದೇವೆ. ಇದು ಹೇಗೆ ಸಾಧ್ಯವೋ ವಿವರಿಸಬೇಕೆಂದು ಕೋರುತ್ತಿದ್ದೇವೆ?**

**ಉತ್ತರ :–** ಈ ವಿಷಯವನ್ನು ಯಾರೂ ಹೇಳಿರುವುದಿಲ್ಲ. ಬಹುಶಃ ನಾನೇ ಹೇಳಿರುತ್ತೇನೆ. ಏಕೆಂದರೆ! ಆ ಚಿಕಿತ್ಸೆ ನನ್ನ ಅನುಭವದೊಳಗಿನದ್ದು. ಆದರೇ ಆ ವಿಧಾನವನ್ನು ನಾನೇ ಮೊದಲು ಹೊರಗಿಟ್ಟಿದ್ದೇನೆ. ಅಂತಹ ಚಿಕಿತ್ಸೆ ನನಗೆ

ಹೇಗೆ ತಿಳಿದಿದೆಯೋ ಅಲ್ಲಿಂದ ಹೇಳಿದರೇ ಮಾತ್ರ ಈ ವಿಷಯ ನಿಮಗೆ ಅರ್ಥವಾಗುತ್ತದೆ. ಆದ್ದರಿಂದ ಮೊದಲಿನಿಂದ ಹೇಳುತ್ತೇನೆ ಕೇಳಿರಿ. ನನಗೆ ಹತ್ತು ವರ್ಷಗಳ ವಯಸ್ಸಿನಲ್ಲಿ ನಾನು ನನ್ನ ಸೋದರ ಮಾವನ ಮನೆಗೆ ಹೋಗುವುದು, ಅಲ್ಲೇ ಒಂದು ತಿಂಗಳು ಇರುವುದು ನಡೆದಿದೆ. ನನ್ನ ಸೋದರ ಮಾವನಾದ ವ್ಯಕ್ತಿಗೆ ಚೇಳು ಕಚ್ಚಿದರೆ ಚಿಕಿತ್ಸೆ ಮಾಡುವ ವಿಧಾನ ತಿಳಿದಿದೆ. ಆತನು ವೈದ್ಯನು ಅಲ್ಲದಿದ್ದರೂ ಆತನಿಗೆ ಆ ಒಂದು ಚಿಕಿತ್ಸೆ ಮಾತ್ರ ತಿಳಿದಿದೆ. ಎರಡು ಮೂರು ದಿನಗಳಿಗೆ ಒಬ್ಬರು ಚೇಳು ಕುಟುಕಿದವರು ಬಂದರೆ ಅವರಿಗೆ ಎಲೆ ಚಿಕಿತ್ಸೆಯನ್ನು ಮಾಡುತ್ತಿದ್ದನು. ಚೇಳು ಕಚ್ಚಿದ ವ್ಯಕ್ತಿ ಬಂದ ಕೂಡಲೇ ಈತನು ಹೊರಗೆ ಹೋಗಿ, ಗುಂಪಾಗಿ ಗಿಡಗಳು ಬೆಳೆದ ಯಾವುದೋ ಒಂದು ಎಲೆಗಳನ್ನು ತಂದು ಚೆನ್ನಾಗಿ ಎಲೆಗಳನ್ನು ಅರೆದು ಚೇಳಿನ ವಿಷ ಬಾಧೆ ಎಲ್ಲಿಯವರೆಗು ಇದೆಯೋ ಕೇಳಿ, ಅಲ್ಲಿ ಅರೆದ ಎಲೆಯನ್ನಿಟ್ಟು ನಿಧಾನವಾಗಿ ಎಲೆಯನ್ನು ಕೆಳಕ್ಕೆ ಸರಿಸುತ್ತಾ ಇರುವಾಗ ನೋವು ಸಹ ಎಲೆಯೊಂದಿಗೆ ಇಳಿದು ಬರುತ್ತಿದೆಯೆಂದು ಚೇಳು ಕಚ್ಚಿಸಿಕೊಂಡವರು ಹೇಳುತ್ತಿದ್ದರು. ಅದನ್ನು ನಾನು ಶ್ರದ್ಧೆಯಿಂದ ನೋಡುತ್ತಿದ್ದೆನು.

ಕೈಗೆ ಚೇಳು ಕುಟುಕಿದ್ದರೇ ವಿಷದ ಬಾಧೆ ಭುಜದವರೆಗು ಇರುತ್ತದೆ. ಭುಜದಿಂದ ಎಲೆಯನ್ನು ಚರ್ಮಕ್ಕೆ ತಗುಲಿಸಿ ಕೆಳಕ್ಕೆ ತೆಗೆದುಕೊಂಡು ಬಂದಾಗ, ನೋವು ಎಲೆಯೊಂದಿಗೆ ಇಳಿದು ಬರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿತ್ತು. ಆ ಕೆಲಸವನ್ನೇ ಎಷ್ಟೋ ಶ್ರದ್ಧೆಯಿಂದ ನೋಡುತ್ತಿದ್ದೆನು. ನನ್ನ ಶ್ರದ್ಧೆ ಆ ಕೆಲಸದ ಮೇಲೆಯೇ ಹೆಚ್ಚಾಗಿ ಇರುವುದರಿಂದ ಸ್ವಲ್ಪ ಕಾಲಕ್ಕೆ ಆತನು ಉಪಯೋಗಿಸುವ ಎಲೆಯನ್ನು ತಿಳಿದುಕೊಂಡೆನು. ನಂತರ ನನ್ನ ವಯಸ್ಸು 23 ವರ್ಷಗಳ ಸಮಯದಲ್ಲಿ ನಾನು ವೈದ್ಯನಾಗಿ ಕಾಲ ಕಳೆಯಬೇಕಾಗಿ ಬಂದಿದೆ. ಜೀವನೋಪಾಯಕ್ಕಾಗಿ ಆಗ ನಾನು ವೈದ್ಯನು ಆಗಲಿಲ್ಲ, ರೋಗಗಳು ಚಿಕಿತ್ಸೆ ಅವುಗಳ ಹಿಂದಿರುವ ರಹಸ್ಯವನ್ನು ತಿಳಿಯುವುದಕ್ಕೆ ಪರಿಶೋಧನೆ ಸಲುವಾಗಿ ಚಿಕಿತ್ಸೆ ಮಾಡುತ್ತಿದ್ದೆನು. ಆಗ ಚೇಳು ಕುಟುಕಿದವರಿಗೆ ಚಿಕ್ಕಂದಿನಲ್ಲಿ

ನಾನು ನೋಡಿದ ಎಲೆಯನ್ನು ಉಪಯೋಗಿಸಿ ಚಿಕಿತ್ಸೆ ಮಾಡಿದಾಗ ಅದು ಚೆನ್ನಾಗಿ ಕೆಲಸ ಮಾಡಿ ಚೇಳಿನ ಬಾಧೆ ಬೇಗನೇ ಕಡಿಮೆಯಾಗುತ್ತಿತ್ತು. ಮೊದಲೇ ಹೇಳಿದ್ದೇನೆ ಅಲ್ಲವೆ! ನಾನು ಚಿಕಿತ್ಸೆ ಮಾಡಿರುವುದು ಸಂಪಾದನೆಗೋಸ್ಕರ ಅಲ್ಲ. ರೋಗಗಳು, ಚಿಕಿತ್ಸೆ ಎರಡರ ಮೇಲೆ ಪರಿಶೋಧನೆ ನನಗೆ ತಿಳಿದ ಪದ್ಧತಿಯಲ್ಲಿ ಮುಂದುವರೆಸುತ್ತಿದ್ದೆನು. ಆಗಲೇ ಮನುಷ್ಯನ ಶರೀರದಲ್ಲಿ ಸೂಕ್ಷ್ಮ ಶರೀರಗಳು (ದೆವ್ವಗಳು) ಇರುವುದರಿಂದ ಔಷಧಗಳಿಗೆ ಒಳಗಾಗದ ರೋಗಗಳು ಇರುತ್ತವೆಂದು ತಿಳಿದುಕೊಂಡೆನು. ರೋಗಗಳ ಪರಿಶೋಧನೆಯೇ ಅಲ್ಲದೆ ಚಿಕಿತ್ಸೆಯ ಮೇಲೆಯೂ ಸಹ ಪರಿಶೋಧನೆ ಸಾಗಿಸುತ್ತಿದ್ದೆನು. ಆದ್ದರಿಂದ ಚೇಳು ಕುಟಿಕಿದಾಗ ಉಂಟಾಗುವ ಬಾಧೆ ಕೈಯ್ಯಲ್ಲಿ ಭುಜದವರೆಗು ಇರುತ್ತದೆ. ಚೇಳಿನ ವಿಷ ಬಾಧೆ ಬಹಳ ನೋವಿನಿಂದ ಇರುತ್ತದೆ. ಅಷ್ಟು ದೊಡ್ಡ ನೋವು ಇಷ್ಟು ಚಿಕ್ಕ ಎಲೆಗೆ ಹೇಗೆ ಹೋಗುತ್ತದೆ? ಎನ್ನುವ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿದ್ದೆನು. ಅನೇಕ ವಿಧಗಳಲ್ಲಿ ಎಲೆ ಚಿಕಿತ್ಸೆಯನ್ನು ಕುರಿತು ಆಲೋಚಿಸಿದ್ದೇನೆ. ಕೈಮೇಲೆ ಚರ್ಮಕ್ಕೆ ತಾಕಿಸಿದ ಎಲೆ ಕೈ ಒಳಗಿರುವ ನೋವನ್ನು ಹೇಗೆ ಕೆಳಗೆ ಇಳಿಸುತ್ತಿದೆ? ಎಂದು ಆಲೋಚಿಸಿದ್ದೇನೆ. ಆಗ ಚಿಕ್ಕ ಯೋಚನೆ ಬಂದಿತು. ಎಲೆ ಕಾಣಿಸುವುದಾದರೂ ಎಲೆವೊಂದರ ಶಕ್ತಿ ಪರಿಧಿ ಸ್ವಲ್ಪ ದೂರದವರೆಗು ಇರುತ್ತದೆಂದು ಅರ್ಥವಾಗಿದೆ. ಎಲೆ ಶಕ್ತಿ ಪರಿಧಿ ಸ್ವಲ್ಪ ದೂರ ಇರುವುದರಿಂದ ಕೈಯೊಳಗಿನ ವಿಷ ಕೆಳಗೆ ಇಳಿದು ಬರುತ್ತಿದೆಯೆಂದು ಅರ್ಥವಾಗಿದೆ. ಇದೆಲ್ಲವೂ ನನಗೆ ಸ್ವತಃವಾಗಿ ಬಂದಿರುವ ಯೋಚನೆಗಳು. ಅದೇ ವಿಧಾನದ ಪ್ರಕಾರ ಆ ಪರಿಧಿಯೊಳಗಿರುವ ಯಾವ ಮನುಷ್ಯನಿಗೆ ಚಿಕಿತ್ಸೆ ಮಾಡಿದರೂ, ಅದು ಚೇಳಿನ ವಿಷದ ಮೇಲೆ ಕೆಲಸ ಮಾಡುತ್ತದೆಂದು, ಒಳಗಿನಿಂದ ಒಂದು ಆಲೋಚನೆ ಬಂದಾಗ ಆ ವಿಧಾನವಾಗಿಯೇ ಮೊದಲು ಪ್ರಯೋಗ ಮಾಡಿ ನೋಡಿದ್ದೇವೆ. ಒಬ್ಬ ವ್ಯಕ್ತಿ ಕೈಗೆ ಎಲೆಯನ್ನು ಉಪಯೋಗಿಸಿದಾಗ ಸ್ವಲ್ಪ ದೂರದಲ್ಲಿರುವ ವ್ಯಕ್ತಿಗೆ ಚೇಳಿನ ವಿಷ ಇಳಿದು ಬರುವುದು ನಡೆದಿದೆ. ಒಬ್ಬ ವ್ಯಕ್ತಿಗೆ ಎಲೆಯನ್ನು ಶರೀರದ ಮೇಲೆ ಎಲ್ಲಿ ಪ್ರಯೋಗಿಸಿದರೆ ಸ್ವಲ್ಪ ಪರಿಧಿವರೆಗು ಇರುವ ಮನುಷ್ಯರೆಲ್ಲರ ಶರೀರದ ಮೇಲೆ

ಪ್ರಯೋಗಿಸಿದಂತೆ ಎಲೆ ಚಿಕಿತ್ಸೆ ಎಲೆಯಲ್ಲಿನ ಶಕ್ತಿ ಕೆಲಸ ಮಾಡುತ್ತಿದೆ. ಒಬ್ಬ ಮನುಷ್ಯನಿಗೆ ಮೂಗಿನಲ್ಲಿ ಎಲೆ ರಸವನ್ನು ಹಿಂಡಿದರೆ ಅಲ್ಲಿ ಸ್ವಲ್ಪ ಪರಿಧಿವರೆಗಿರುವ ಮನುಷ್ಯರ ಎಲ್ಲರ ಮೂಗುಗಳಲ್ಲಿ ಎಲೆ ರಸವನ್ನು ಹಿಂಡಿದ ಹಾಗೆ ಎಲೆಶಕ್ತಿ ಎಲ್ಲರ ಮೂಗಿನ ಮೇಲೆ ಕೆಲಸ ಮಾಡುತ್ತಿದೆ. ಅದೇ ವಿಧಾನದ ಪ್ರಕಾರ ಚೇಳು ಕುಟುಕಿದ ವ್ಯಕ್ತಿಗೇ ಅಲ್ಲದೆ ಅವನ ಪಕ್ಕದಲ್ಲಿರುವ ಯಾರಿಗಾದರೂ ಎಲೆಯನ್ನು ಪ್ರಯೋಗಿಸಿದಾಗ, ಎಲೆ ಶಕ್ತಿ ಪಕ್ಕದಲ್ಲೇ ಇರುವ ಚೇಳಿನ ವಿಷ ಬಾಧೆಯನ್ನು ಅನುಭವಿಸುವ ವ್ಯಕ್ತಿಯಲ್ಲಿನ ಬಾಧೆ ಕಡಿಮೆಯಾಗುತ್ತಿದೆ. ಇದೆಲ್ಲವೂ ಸ್ವತಃವಾಗಿ ಅಂದಾಜು ಮಾಡಿ ಇಲಿಗ್ಗೆ ಸುಮಾರು 40 ವರ್ಷಗಳ ಸಮಯದಲ್ಲಿ ಪಕ್ಕದ ಮನುಷ್ಯನಿಗೂ ಸಹ ಈ ಎಲೆ ಕೆಲಸಮಾಡುತ್ತದೆಂದು ತಿಳಿದಿದೆ. ಪ್ರತ್ಯೇಕಿಸಿ ಆ ಎಲೆಯಲ್ಲಿಯೇ ಅಂತಹ ಶಕ್ತಿ ಇದೆಯೆಂದು, ಉಳಿದ ಗಿಡಗಳ ಎಲೆಗಳಲ್ಲಿ ಅಂತಹ ಶಕ್ತಿ ಇಲ್ಲವೆಂದು ತಿಳಿದಿದೆ. ಈ ಎಲೆ ಚಿಕಿತ್ಸೆ ಹೊರಗೆ ನೋಡುವವರಿಗೆ ವಿಚಿತ್ರವಾಗಿ ಕಾಣಿಸಿದರೂ ಒಳಗಿರುವ ವಿಷಯ, ವಿವರ ಎರಡೂ ಮೊದಲೇ ನನಗೆ ತಿಳಿದಿವೆ. ಆದ್ದರಿಂದ ನನಗೆ ವಿಚಿತ್ರವಾಗಿ ಏನೂ ಇಲ್ಲ. ಅಶ್ವರ್ಥ ವೃಕ್ಷ ಎನ್ನುವ ಆಲದ ಮರವೂ ಸಹ ಒಂದು ಮೀಟರ್‌ವರೆಗು ಶಕ್ತಿ ವ್ಯಾಪಿಸಿರುತ್ತದೆ. ಆದ್ದರಿಂದ ಆಲದ ಮರ ಮೀಟರ್ ಆವರಣದೊಳಗೆ ಹೋಗಿ ಪ್ರತಿ ದಿನ ಇರುವಾಗ 40 ದಿನಗಳಿಗೆ ಕೆಲವು ರೋಗಗಳು ಗುಣವಾಗಿ ಹೋಗಬಲ್ಲವು. ಆ ಮರದಲ್ಲಿಯೇ  ಆ ಶಕ್ತಿ ಇದೆಯೆಂದು ತಿಳಿಯುತ್ತಿದೆ. ಚೇಳಿನ ವಿಷ ಕಡಿಮೆಯಾಗುವುದು, ಇತರೆ ಮನುಷ್ಯನಿಗೆ ಪ್ರಯೋಗಿಸಿದರೂ ಅದು ಕೆಲಸ ಮಾಡುವುದು ನನ್ನ ಅಂದಾಜಿನಿಂದ ಮಾಡಿದ ಕೆಲಸ, ಆದ್ದರಿಂದ ನಾನು ಅದು ಹೇಗೆ ಸಾಧ್ಯವೋ ವಿವರಿಸಿದ್ದೇನೆ.

**9) ಪ್ರಶ್ನೆ :– ಯಜ್ಞಗಳಿಂದ, ಸೋಮಪಾನದಿಂದ ಪುಣ್ಯ ಬರುತ್ತದೆಂದು ಹೇಳುತ್ತಿದ್ದಾರೆ. ಮೇಲಾಗಿ ಅಧರ್ಮ ಎನ್ನುತ್ತಿದ್ದಾರೆ. ಅಧರ್ಮಗಳಿಂದ ಪುಣ್ಯ ಬಂದರೇ ಮತ್ತು ಅದರಲ್ಲಿ ನಡೆದ ಪಶುಹಿಂಸೆಯಿಂದ ಸಹ ಪುಣ್ಯ ಬರುತ್ತದಾ? ಅದು ಕರ್ಮ ಅಲ್ಲವಾ?**

**ಉತ್ತರ :–** ಬಾಹ್ಯ ಯಜ್ಞಗಳಿಂದ ಪುಣ್ಯ ಬರುತ್ತದೆಂದು ಅಕ್ಷರ ಪರಬ್ರಹ್ಮ ಯೋಗದಲ್ಲಿ ಕೊನೆಯ ಶ್ಲೋಕದಲ್ಲಿ ಹೇಳಿದ್ದಾರೆ. ಯಜ್ಞ ಅಧರ್ಮವಾಗಿರುವುದರಿಂದ ಮೋಕ್ಷ ಬರುವುದಿಲ್ಲವೆಂದು ವಿಶ್ವರೂಪ ಸಂದರ್ಶನ ಯೋಗದಲ್ಲಿ 48ನೇ ಶ್ಲೋಕದಲ್ಲಿಯೂ, 53ನೇ ಶ್ಲೋಕದಲ್ಲಿಯೂ ಹೇಳಲಾಗಿದೆ. ಯಜ್ಞಗಳಿಂದ ಪುಣ್ಯ ಬರುತ್ತದೆ ಎನ್ನುವ ಮಾತು ವಾಸ್ತವವೇ ಆದರೂ ಅದು ಕರ್ಮಕ್ಕೆ ಸಂಬಂಧಿಸಿರುವುದೇ ಹೊರತು, ಮೋಕ್ಷಕ್ಕೆ ಸಂಬಂಧಿಸಿರುವುದು ಅಲ್ಲ. ಯಜ್ಞಗಳಲ್ಲಿ ಪಶುಹಿಂಸೆ ನಡೆದರೇ ಅದಕ್ಕೆ ತಕ್ಕಷ್ಟು ಪಾಪ ಸಹ ಬರುತ್ತದೆ. ಯಜ್ಞ ಎಂದರೆ ಎಲ್ಲಾ ಪುಣ್ಯವೇಯೆಂದು ಹೇಳುವುದಕ್ಕೆ ಅವಕಾಶವಿಲ್ಲ. ಯಜ್ಞಗಳಲ್ಲಿ ಎಷ್ಟು ಒಳ್ಳೆಯದು ನಡೆದರೆ ಅಷ್ಟು ಪುಣ್ಯ ಬರುತ್ತದೆ. ಹಾಗೆಯೇ ಕೆಟ್ಟದ್ದು ನಡೆದರೇ, ಪ್ರಾಣಹಿಂಸೆ ನಡೆದರೇ, ಪ್ರಾಣಿಬಲಿಗಳು ನಡೆದರೇ ಅದಕ್ಕೆ ತಕ್ಕಷ್ಟು ಪಾಪ ಕೂಡಾ ಬರುತ್ತದೆ. ಪಾಪಪುಣ್ಯಗಳಿಗೆ ಸಂಬಂಧಿಸಿದ ಯಜ್ಞಗಳನ್ನು ಕರ್ಮದೊಂದಿಗೆ ಕೂಡಿಕೊಂಡಿವೆಯೆಂದು ಹೇಳಬಹುದು. ಆದ್ದರಿಂದ ಬಾಹ್ಯವಾಗಿ ನಡೆಯುವ ಯಜ್ಞಗಳಿಗಿಂತ ಕಾಣಿಸದಂತೆ ಅಂತರಂಗದಲ್ಲಿ ಎಂದರೆ ಶರೀರದಲ್ಲಿ ನಡೆಯುವ ಯಜ್ಞಗಳನ್ನು ಎಂದರೆ ದ್ರವ್ಯಯಜ್ಞ, ಜ್ಞಾನಯಜ್ಞವನ್ನು ಮಾಡಿದರೆ, ಅದರಲ್ಲಿ **ಜ್ಞಾನಯಜ್ಞಗಳಿಂದ** ಕರ್ಮ ಇಲ್ಲದಂತೆ ಹೋಗಿ, ಮೋಕ್ಷಕ್ಕೆ ಹೋಗುವುದಕ್ಕೆ ದಾರಿ ಲಭಿಸುತ್ತದೆ. ಆದ್ದರಿಂದ ಅಂತರಂಗದಲ್ಲಿ ನಡೆಯುವ ಜ್ಞಾನ ಯಜ್ಞವನ್ನು ಆಚರಿಸಿರೆಂದು ಹಿರಿಯರು ಹೇಳುತ್ತಿರುವರು.

**10) ಪ್ರಶ್ನೆ :– 'ಜೀಹಾದ್' ಎನ್ನುವ ಹೆಸರಿನಿಂದ ಮುಸ್ಲಿಮ್‌ರು ಮಾಡುತ್ತಿರುವ ಹಿಂಸೆ ಕೂಡಾ ಒಂದು ವಿಧವಾಗಿ ಪುಣ್ಯವಾ? ಏಕೆಂದರೇ ಅವರು ಮಾಡುತ್ತಿರುವುದು ಸ್ವರ್ಗ ಎನ್ನುವುದನ್ನು ಆಶಿಸಿಯೇ ಅಲ್ಲವೆ! ಸ್ವರ್ಗ ಎನ್ನುವ ಭಾವನೆಯೊಂದಿಗೆ ಮಾಡುತ್ತಿರುವಾಗ ಅವರಿಗೆ ಪಾಪ ಬರುತ್ತದಾ? ಪುಣ್ಯ ಬರುತ್ತದಾ?**

**ಉತ್ತರ :–** ಮನುಷ್ಯ ತನ್ನದು ಒಳ್ಳೆಯ ಉದ್ದೇಶವೇ ಎಂದು ಮಾಡಿದರೂ, ಅವನು ಅಂದುಕೊಂಡಿರುವುದು ಕೆಲಸಕ್ಕೆ ಬರುವುದಿಲ್ಲ. **ದೇವರು ನಿರ್ಣಯಿಸಿದಂತೆ**

ಅದು ಹಿಂಸೆಯಾದರೇ ಪಾಪ ಬರುತ್ತದೆ. ಸ್ವರ್ಗವನ್ನು ಆಶಿಸಿ ಮಾಡಿದ ಕೆಲಸ ಒಳ್ಳೆಯದಾದರೇ ಪುಣ್ಯ ಬರುತ್ತದೆ. ಕೆಟ್ಟ ಕೆಲಸವಾದರೇ ಪಾಪ ಬರುತ್ತದೆ. ಮನುಷ್ಯ ಸುಖಕ್ಕೋಸ್ಕರ ಪಾಪವನ್ನೇ ಮಾಡುತ್ತಿದ್ದಾನೆ. ಜೀಹಾದ್ ಎನ್ನುವುದು ಪವಿತ್ರ ಯುದ್ಧ ಎಂದು ಹೇಳುವ ಮಾತು ಗುಣಗಳೊಂದಿಗೆ ಹೋರಾಡುತ್ತಾ ದೇವರ ಧರ್ಮಗಳನ್ನು ಆಚರಿಸುವುದನ್ನೇ ಪವಿತ್ರ ಯುದ್ಧ ಎಂದು ಹೇಳುತ್ತಿದ್ದಾರೆ. **ಜೀಹಾದ್** ಎನ್ನುವುದು **ಪವಿತ್ರ ಯುದ್ಧ** ಎಂದು ಹೇಳುವ ಮಾತು ಗುಣಗಳೊಂದಿಗೆ ಹೋರಾಡುತ್ತಾ ದೇವರ ಧರ್ಮಗಳನ್ನು ಆಚರಿಸುವುದನ್ನೇ ಪವಿತ್ರ ಯುದ್ಧವೆಂದು ಹೇಳುತ್ತಿದ್ದಾರೆ. ಜೀಹಾದ್ ಎನ್ನುವುದು ಇತರರನ್ನು ಹಿಂಸಿಸುವುದು ಅಲ್ಲ. ದೇವರ ಮಾರ್ಗದಲ್ಲಿ ಪ್ರಯಾಣಿಸುವುದಕ್ಕೆ ಶರೀರದಲ್ಲಿಯೇ ಗುಣಗಳೊಂದಿಗೆ ಯುದ್ಧ ಮಾಡುವುದನ್ನು 'ಪವಿತ್ರ ಯುದ್ಧ' ಎಂದೂ, ಜೀಹಾದ್ ಎಂದೂ ಕರೆಯುತ್ತಾರೆ. ಜೀಹಾದ್ ಹೆಸರಿನಿಂದ ಹೊರಗೆ ಅರಾಚಕವನ್ನು ಸೃಷ್ಟಿಸಿ, ಹೊರಗಿನ ಪ್ರಪಂಚದಲ್ಲಿ ಹಿಂಸೆಯನ್ನು ಮಾಡುವವನು ತನಗೆ ತಿಳಿಯದಂತೆಯೇ ಪಾಪವನ್ನು ಸಂಪಾದಿಸಿಕೊಳ್ಳುತ್ತಿದ್ದಾನೆ. ಅದರಿಂದ ಅವನಿಗೆ ಸ್ವರ್ಗ ಬರುವುದಿಲ್ಲ ಆದರೆ, ನರಕ ಮಾತ್ರ ತಪ್ಪದೆ ಬರುತ್ತದೆ. ಸ್ವರ್ಗವನ್ನು ಆಶಿಸುವವನು ಜೀಹಾದ್ ಮಾಡುವುದಿಲ್ಲ. ಸ್ವರ್ಗವನ್ನು ಆಶಿಸಿ ಮಾಡುವುದು ಜೀಹಾದ್ ಎನಿಸಿಕೊಳ್ಳುವುದಿಲ್ಲ. ಸ್ವರ್ಗ ನರಕಗಳಿಗೆ ಅತೀತವಾದ ಪರಲೋಕಕ್ಕಾಗಿ ಜೀಹಾದ್ ಮಾಡುವುದು ನಡೆಯುತ್ತಿರುತ್ತದೆ. ಪರಲೋಕ ಎಂದರೆ ದೇವರ ಸನ್ನಿಧಾನದೊಳಗೆ ಸೇರುವುದು. ಸ್ವರ್ಗ ಎಂದರೆ ಸುಖಗಳೊಂದಿಗೆ ಕೂಡಿ ಕೊಂಡಿರುವುದು. ಭೂಮಿಮೇಲೆಯೇ ಸ್ವರ್ಗವಿದೆ. ಇಹಲೋಕ ಸೌಖ್ಯಗಳಿಗಾಗಿ ಪರದಾಡುವವನು ಸ್ವರ್ಗಕ್ಕಾಗಿ ಪರದಾಡುವವನಾಗಿ ಇದ್ದಾನೆ. ಜೀಹಾದ್‌ನಲ್ಲಿ ಎಂದರೆ ಪವಿತ್ರ ಯುದ್ಧದಲ್ಲಿ ಜ್ಞಾನ ಸಂಬಂಧ ವಿಷಯಗಳಿರುತ್ತವೆ. ಇದು ಯಾರ ಹಿಂಸೆಗು ಕಾರಣವಲ್ಲ. ಜೀಹಾದ್ ಎನ್ನುವುದು ಪವಿತ್ರವಾದ ದೇವರ ಮಾರ್ಗದೊಳಗಿನದ್ದು, ನೀಚವಾದ ಪ್ರಪಂಚ ಸಂಬಂಧವಾದುದು ಅಲ್ಲವೆಂದು ಹೇಳುತ್ತಿದ್ದೇವೆ.

**11) ಪ್ರಶ್ನೆ :– ಸ್ವಪ್ನ ಎನ್ನುವುದು ನಿಜವಲ್ಲ ಅಲ್ಲವೆ! ಮತ್ತೆ ನೀವು "ಕೃಷ್ಣಮೂಸ" ಎನ್ನುವ ಗ್ರಂಥದಲ್ಲಿ ಕೃಷ್ಣನು ಮೂಸಾಗೆ ಕಾಣಿಸಿ ಹೇಳುವುದು ವಾಸ್ತವವೇ ಎನ್ನುವಂತೆ ಹೇಳಿದ್ದೀರ. ಮತ್ತೆ ಸ್ವಪ್ನವೂ ಸಹ ಕೆಲವು ಸಲ ವಾಸ್ತವವಾಗಿ ಬದಲಾಗುತ್ತದಾ?**

**ಉತ್ತರ :–** ಸ್ವಪ್ನವನ್ನು ಕುರಿತು ಸಂಪೂರ್ಣವಾಗಿ ಹೇಳುವವರು ಬಹುಶಃ ಭೂಮಿಮೇಲೆ ಯಾರೂ ಇಲ್ಲವೆಂದೇ ಹೇಳಬಹುದು. ಶರೀರದಲ್ಲಿನ ಆತ್ಮವನ್ನು ಯಾವ ವಿಧವಾಗಿ ತಿಳಿಯಲಾರೆವೋ ಅದೇ ವಿಧವಾಗಿ ಸ್ವಪ್ನವನ್ನು ತಿಳಿಯುವುದು ದುರ್ಲಭವಾಗಿ ಇರುತ್ತದೆ. ಆದ್ದರಿಂದ ಸ್ವಪ್ನ ರಾತ್ರಿಯನ್ನು ಆತ್ಮ ಗುರುತಾಗಿ ಹೋಲಿಸಿ ಹೇಳಿದ್ದೇವೆ. ಸ್ವಪ್ನವನ್ನು ಸತ್ಯವೆಂದು ಹೇಳುವುದಕ್ಕೆ ಎಷ್ಟು ಆಧಾರ ಇದೆಯೋ, ಹಾಗೆಯೇ ಸ್ವಪ್ನ ಅಸತ್ಯವೆಂದು ಹೇಳುವುದಕ್ಕೆ ಅಷ್ಟೇ ಆಧಾರ ಇದೆ. ಆತ್ಮವನ್ನು ಯಾವಕಡೆ ತೀರ್ಮಾನಿಸಿ ಹೇಳಲಾರದಂತೆ ಸ್ವಪ್ನವನ್ನು ಸಹ ಯಾವಕಡೆ ತೀರ್ಮಾನಿಸಿ ಹೇಳಲಾರೆವು. ಗತ ಚರಿತ್ರೆಯಲ್ಲಿ ಕೃಷ್ಣನು ಮೂಸಾ (ಮೋಷೇ) ಎನ್ನುವ ವ್ಯಕ್ತಿಗೆ ಸ್ವಪ್ನದಲ್ಲಿ ಕಾಣಿಸಿ ಗ್ರಂಥವನ್ನು ಕೊಟ್ಟು ಅದರ ಹೆಸರು **'ತೌರಾತ್'** ಎಂದು ಹೇಳಿದ್ದಾನೆ. ಕೊಟ್ಟಿರುವುದು ಭಗವದ್ಗೀತೆಯೇ ಆದರೂ ಹೇಳಿರುವುದು ತೌರಾತ್‌ಯೆಂದು ಹೇಳುವುದು ನಡೆದಿದೆ. ಅದು ಸತ್ಯವೆನ್ನುವುದಕ್ಕೆ ಪ್ರತಿ ದಿನ ರಾತ್ರಿಯಲ್ಲಿ ಮೂಸಾಗೆ ತೌರಾತ್ ಗ್ರಂಥ ಕಾಣಿಸುತ್ತಿತ್ತು, ಅದರಲ್ಲಿನ ಜ್ಞಾನವನ್ನು ಮೋಷೇ ತಿಳಿದುಕೊಳ್ಳುತ್ತಿದ್ದನು. ಇದೆಲ್ಲವೂ ಸ್ವಪ್ನದಲ್ಲಿಯೇ ನಡೆಯುತ್ತಿತ್ತು. ಆದರೇ ಮೋಷೇಗೆ ಎಚ್ಚರದಿಂದಿರುವಂತೇ ಇರುತ್ತಿತ್ತು. ಸ್ವಪ್ನದಲ್ಲಿ ಓದಿದ ತೌರಾತ್ ಗ್ರಂಥ ವಿಷಯಗಳೆಲ್ಲವೂ ಬೆಳಗಾದ ನಂತರ ಮೋಷೇಗೆ ಚೆನ್ನಾಗಿ ಜ್ಞಾಪಕ ಇರುತ್ತಿದ್ದವು. ರಾತ್ರಿ ಓದಿದ ತೌರಾತ್ ಗ್ರಂಥವನ್ನು ಮೋಷೇ (ಮೂಸಾ) ಪ್ರಜೆಗಳಿಗೆ ಹೇಳುತ್ತಿದ್ದನು. ಈ ವಿಧವಾಗಿ ತೌರಾತ್ ಗ್ರಂಥ ಮೋಷೇಗೆ ಒಬ್ಬನಿಗೇ ಕಾಣಿಸುತ್ತಿತ್ತು. ತೌರಾತ್ ಗ್ರಂಥವನ್ನು ಮೋಷೇ ಹೊರತು ಯಾರೂ ನೋಡಲಿಲ್ಲ. ಏಕೆಂದರೆ! ಹೊರಗೆ ಎಲ್ಲೂ ಪ್ರಜೆಗಳಿಗೆ ಅದು ಕಾಣಿಸಲಿಲ್ಲ. ಮೋಷೇಗೆ ಸಹ ರಾತ್ರಿ ಹೊತ್ತು ಮಾತ್ರವೇ ಸ್ವಪ್ನದಲ್ಲಿ ಕಾಣಿಸುತ್ತಿತ್ತು. ಮೋಷೇ ತೌರಾತ್ ಜ್ಞಾನವನ್ನು ಹೊರಗೆ ಹೇಳಿದಾಗ ಅದು ಮೋಷೇ ಧರ್ಮಶಾಸ್ತ್ರವಾಗಿ

ಹೆಸರುಪಡೆದಿದೆ. ಸ್ವಪ್ನ ಸತ್ಯವಾಗಿ ಬದಲಾಗುತ್ತದೆ. ಹಾಗೆಯೇ ಸ್ವಪ್ನ ಅಸತ್ಯವಾಗಿ ಕೂಡಾ ಇರುತ್ತದೆ. ಸ್ವಪ್ನವನ್ನು ಸತ್ಯವೆನ್ನುವುದಕ್ಕೆ ಪ್ರತ್ಯಕ್ಷ ಆಧಾರಗಳು ಇವೆ. ಕೆಲವು ಕಡೆ ಕೆಲವು ಸ್ವಪ್ನಗಳು ನಿಜವೆಂದು ಹೇಳುವುದಕ್ಕೆ ಪರೋಕ್ಷ ಆಧಾರವೂ ಸಹ ಇರುವುದಿಲ್ಲ. ಆದ್ದರಿಂದ ಸ್ವಪ್ನ ಕೆಲವು ಸಲ ಸತ್ಯ ಆಗಬಹುದು. ಕೆಲವು ಸಲ ಅಸತ್ಯ ಆಗಬಹುದು. ಸ್ವಪ್ನ ವಿಷಯದಲ್ಲಿ ಯಾರೂ ಹೇಗೂ ತೀರ್ಮಾನಿಸಿ ಹೇಳಲಾರರು.

**12. ಪ್ರಶ್ನೆ :– ರಾಗಿ ತಗಡುಗಳು ಧರಿಸುವುದರಿಂದ ಶರೀರದಲ್ಲಿರುವ negative energy (ನೆಗಿಟಿವ್ ಎನರ್ಜೀ) ಹೊರಗೆ ಬರುತ್ತಿದ್ದಂತೆ ತಿಳಿಯುತ್ತಿದೆ. ಹಾಗೆಯೇ ಕೆಲವು ಲೋಹಗಳು ಕೈಗೆ ಧರಿಸಿದರೇ ಪಾಜಿಟಿವ್ ಕಿರಣಗಳು ಒಳಗೆ ಪ್ರವೇಶಿಸಿ ಆ ವ್ಯಕ್ತಿಯಲ್ಲಿ ಸತ್ವ ಗುಣ ಬೆಳೆದು ಕೋಪ ಕಡಿಮೆಯಾದಂತೆ ನಮ್ಮ ಪರಿಶೋಧನೆಗಳಲ್ಲಿ ತಿಳಿದಿದೆ. ಅಂದರೇ ಕೋಪ ಎನ್ನುವ ಗುಣದಿಂದ ಹೊಂದುವ ಕರ್ಮವನ್ನು ಸಂಪಾದಿಸದಂತೆ ನಾವು ನಿಲ್ಲಿಸಿದಂತೇ ಅಲ್ಲವೆ! ಮತ್ತೆ ನೀವು "ಕರ್ಮ ಅನುಭವಿಸದಂತೆ ಹೋಗುವುದಿಲ್ಲ" ಎಂದು ಹೇಳುತ್ತಿದ್ದೀರ. ನಾವು ಮಾಡಿದ ಕೆಲಸದಿಂದ ಕರ್ಮವನ್ನು ನಿಲ್ಲಿಸಿದಂತೆ ಅಲ್ಲವೆ!**

**ಉತ್ತರ :–** ಮೊದಲೇ ಮೂಟೆಕಟ್ಟಿಕೊಂಡ ಹಳೆ ಕರ್ಮವನ್ನು ಅನುಭವಿಸದಂತೆ ಯಾರೂ ನಿಲ್ಲಿಸಲಾರರು. ಅದು ನಡೆಯುವುದು ನಡೆದು ತೀರಬೇಕಾದ್ದೆ. ನೀವು ಹೇಳುವುದು ಮುಂಬರುವ ಹೊಸ ಕರ್ಮವನ್ನು ನಿವಾರಿಸಿದ್ದೀರೆಂದು ಹೇಳುತ್ತಿದ್ದೀರ. ಮುಂಬರುವ ಕರ್ಮವನ್ನು ಬಾರದಂತೆ ಮಾಡಿಕೊಳ್ಳುವುದಕ್ಕೆ ಅನೇಕ ಕ್ರಿಯೆಗಳಿಂದ ಹೊಸ ಕರ್ಮ ಬಾರದಂತೆ ಮಾಡಿಕೊಳ್ಳಬಹುದು. ಅದರಲ್ಲಿ ನೀನು ಹೇಳಿದ ಲೋಹಗಳ ಪ್ರಯೋಗದಿಂದ ಕೂಡಾ ಮಾಡಿಕೊಳ್ಳ ಬಹುದು. ಅಷ್ಟೇಅಲ್ಲ ಮೌನವಾಗಿ ಇದ್ದರೂ ಹೊಸ ಕರ್ಮ ಬರುವುದಿಲ್ಲ. ಮಂತ್ರ ಜಪ ಮಾಡಿದರೂ, ನಿದ್ರೆಯೊಳಗೆ ಹೋದರೂ, ಕಾಲದಲ್ಲಿ ಮನಸ್ಸನ್ನು ಕಥೆಯಲ್ಲಿ ಲಗ್ನ ಮಾಡಿ ಕೇಳುತ್ತಿರುವಂತೆ ಮಾಡಿದರೂ, ಗುಣಗಳಲ್ಲಿ ಇಲ್ಲದಂತೆ ಮಾಡಿದರೂ ಹೊಸ ಕರ್ಮ ಬರುವುದಿಲ್ಲ. ಹೊಸ ಕರ್ಮ ಬಾರದಂತಿರುವುದಕ್ಕೆ

ಅನೇಕ ಉಪಾಯಗಳು ಹೇಳಲಾಗಿವೆ. ಆದರೇ ಇರುವ ಕರ್ಮವನ್ನು ಅನುಭವಿಸದಂತೆ ತಪ್ಪಿಸಿಕೊಳ್ಳುವುದಕ್ಕೆ ಯಾವ ವಿಧಾನವೂ ಇಲ್ಲ. ರಾಗಿ ತಗಡಾಗಲಿ, ಕಬ್ಬಿಣ ಕಡ್ಡಿಗಳಾಗಲಿ ಕರ್ಮವನ್ನು ಅನುಭವಿಸದಂತೆ ತಪ್ಪಿಸಲಾರವು. ಜ್ಞಾನಾಗ್ನಿಯಿಂದ ದಹಿಸಿದರೆ ಕರ್ಮ ಭಸ್ಮವಾಗಿ ಕಾರ್ಯ ಇಲ್ಲದಂತೆ ಹೋಗಿ ಅನುಭವಕ್ಕೆ ಬಾರದಂತೆ ಹೋಗುತ್ತಿದೆ. ಅಷ್ಟು ಹೊರತು ಬೇರೆ ಯಾವ ಪ್ರಕ್ರಿಯೆಯಿಂದ ಮನುಷ್ಯನನ್ನು ಹಳೆ ಕರ್ಮದಿಂದ ತಪ್ಪಿಸಲಾರೆವು ತಪ್ಪದೆ ಅನುಭವಿಸಬೇಕಾಗಿರುವುದೇ.

**13) ಪ್ರಶ್ನೆ :– "ಗರ್ಭಸ್ಥ ಶಿಶುವಿಗೆ ಪ್ರಾಣವಿಲ್ಲ" ಎನ್ನುವ ವಿವರಣೆ ವಿಪ್ಲವಾತ್ಮಕವಾಗಿ, ಪರಿಶೋಧನಾತ್ಮಕವಾಗಿ ಇದ್ದರೂ, ಆ ಸಮಾಚಾರದಿಂದ ಭ್ರೂಣ ಹತ್ಯೆಗಳು (ಗರ್ಭಹತ್ಯೆಗಳು) ಇನ್ನೂ ಹೆಚ್ಚಾಗಿ ನಡೆಯುತ್ತವೇನೋ ಎಂದು ನನ್ನ ಅಭಿಪ್ರಾಯ. ಇದಕ್ಕೆ ನೀವೇನನ್ನುತ್ತಿರಾ?**

**ಉತ್ತರ :–** ನಡೆಯುವವು ನಡೆಯದೆ ಇರುವುದಿಲ್ಲ. ಪ್ರತಿಯೊಂದು ಕರ್ಮವನ್ನನುಸರಿಸಿ ಮೊದಲೇ ನಿರ್ಣಯಿಸಲ್ಪಟ್ಟಿರುತ್ತವೆ. ಈ ದಿನ "ಗರ್ಭದಲ್ಲಿ ಶಿಶುವಿಗೆ ಪ್ರಾಣ ಇಲ್ಲ" ಅಂದಷ್ಟು ಮಾತ್ರಕ್ಕೆ ಇದರಿಂದ ಏನೂ ನಡೆಯುವುದಿಲ್ಲ. ಒಂದು ಚಿಕ್ಕ ಕಾರ್ಯ ನಡೆಯಬೇಕೆಂದರೂ ಅದಕ್ಕೆ ಮೊದಲೇ ಕರ್ಮ ನಿರ್ಣಯ ಇರುತ್ತದೆ. ಕರ್ಮ ನಿರ್ಣಯದ ಪ್ರಕಾರವೇ ಎಲ್ಲಾ ನಡೆಯುತ್ತಿರುತ್ತವೆ ಹೊರತು, ಈ ದಿನ ನಾವು ಹೇಳಿಕೊಳ್ಳುವುದರಿಂದ ನಡೆಯುತ್ತದೆಂದು ಅಂದುಕೊಳ್ಳುವುದು ತಪ್ಪಾಗುತ್ತದೆ. ಮನುಷ್ಯರು ಮಾಡಿಕೊಂಡ ಪಾಪ, ಪುಣ್ಯ ಫಲಿತವಾಗಿ ಪ್ರತಿ ಕೆಲಸ ಹುಟ್ಟುವುದಕ್ಕಿಂತ ಮೊದಲೇ ನಿರ್ಣಯಿಸಲ್ಪಟ್ಟಿರುತ್ತದೆ. ಇದನ್ನನುಸರಿಸಿ " ಈ ದಿನ ನಾವು ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲವೆಂದು ಹೇಳುವುದರಿಂದ ಭ್ರೂಣ ಹತ್ಯೆಗಳು ನಡೆಯುತ್ತವೆ" ಎಂದು ಅಂದುಕೊಳ್ಳಬಾರದು. ಒಂದುವೇಳೆ ಕರ್ಮ ಪ್ರಕಾರ ಗರ್ಭದಲ್ಲಿನ ಶಿಶುವನ್ನು ಹುಟ್ಟುವುದಕ್ಕಿಂತ ಮೊದಲೇ ಗರ್ಭಸ್ರಾವದಿಂದ ತೆಗೆದುಹಾಕಿದರೂ ಅದಕ್ಕೆ ಪ್ರಾಣ ಇಲ್ಲದಿರುವುದರಿಂದ ಅದು ಹತ್ಯೆಯೂ ಅಲ್ಲ.

**14) ಪ್ರಶ್ನೆ :– ಅಮೀಬಾದಂತಹ ಏಕಕಣ ಜೀವಿಗಳು ಅಂಡಜಗಳಾ? ಪಿಂಡಜಗಳಾ? ಉದ್ಭಿಜಗಳಾ? ಆದರೇ ಅವುಗಳ ಶರೀರದಲ್ಲಿ ಪೀಯೂಶ ಗ್ರಂಥಿ ಇಲ್ಲದಂತೆ ಆತ್ಮ ಸ್ಥಾನ ಎಲ್ಲಿರುತ್ತದೆ?**

**ಉತ್ತರ :–** ಅಂಡಜ, ಪಿಂಡಜ, ಉದ್ಭಿಜಗಳೆನ್ನುವ ಮೂರು ವಿಧಗಳ ಹುಟ್ಟುವಿಕೆಗಳು ಇರುವವುಗಳನ್ನೇ ಇಲ್ಲಿಯತನಕ ನೋಡಿದ್ದೇವೆ, ಕೇಳಿದ್ದೇವೆ. ಈ ಮೂರು ವಿಧಗಳು ಅಲ್ಲದಿರುವವು ಇವೆಯೆಂದು ಇದಕ್ಕೂ ಮೊದಲು ನಾವು ಮೊದಲು ಹೇಳಲಿಲ್ಲ. ಮನುಷ್ಯ ತಾಯಿಯಾಗಲೀ ತಂದೆಯಾಗಲೀ ಇಲ್ಲದಂತೆ ಮೊದಲು ಹುಟ್ಟಿದ್ದಾನೆ. ಸೃಷ್ಠಿ ಇಲ್ಲದಿರುವಾಗ ಮನುಷ್ಯರೇ ಇಲ್ಲದಿರುವಾಗ ಹೊಸದಾಗಿ ಮನುಷ್ಯ ಹುಟ್ಟಿದ್ದಾನೆ. ಆ ಮನುಷ್ಯನಿಗೆ ತಾಯಿ ತಂದೆ ಇಲ್ಲ ಅಲ್ಲವೆ! ಭೂಮಿ ಮೇಲೆ ಯಾವ ಬೀಜವಾದರೂ, ಯಾವ ಗಿಡವಾದರೂ ಇಲ್ಲದಿರುವಾಗ ಎಷ್ಟೋ ವೃಕ್ಷಗಳು ಹುಟ್ಟಿವೆ. ಹಾಗೆಯೇ ಯಾವ ಕ್ರಿಮಿ ಕೀಟಗಳು ಯಾವ ಪಕ್ಷಿ ಜಾತಿ ಇಲ್ಲದ ದಿನ ಎಷ್ಟೋ ಪಕ್ಷಿಗಳು ಬಂದಿವೆ. ಮೊದಲು ಹುಟ್ಟಿದ ಮನುಷ್ಯರಾಗಲೀ, ಮೊದಲು ಹುಟ್ಟಿದ ಪಕ್ಷಿಗಳಾಗಲೀ, ಮೊದಲು ಹುಟ್ಟಿದ ವೃಕ್ಷಲತಾದಿಗಳಾಗಲೀ ಅವುಗಳಿಗೆ ಬಾಲ್ಯವಿಲ್ಲ. ಅಂಡಜ, ಪಿಂಡಜ, ಉದ್ಭಿಜಗಳಾಗಿ ಹುಟ್ಟಲಿಲ್ಲ. ಸೃಷ್ಠಿ ಆದಿಯಲ್ಲಿ ಇರುವ ಮನುಷ್ಯನಿಗೆ ಬಾಲ್ಯವಿಲ್ಲ. ಶಿಶುವಾಗಿ ತಾಯಿತಂದೆಯರಿಂದ ಹುಟ್ಟಲಿಲ್ಲ. ಒಂದು ಪಿಂಡಜವೇ ಅಲ್ಲ, ಉಳಿದ ಅಂಡಜಗಳು ಅಂಡದಿಂದ ಹುಟ್ಟಲಿಲ್ಲ. ಅವುಗಳಿಗೆ ಬಾಲ್ಯವಿಲ್ಲ. ಉಳಿದ ವೃಕ್ಷಗಳು ಬಳ್ಳಿಗಳು ಸಹ ಅಷ್ಟೇ. ಇದೆಲ್ಲಾ ಕೇಳುತ್ತಿದ್ದರೇ ವಿಡ್ಡೂರವಾಗಿ ಇದೆಯಲ್ಲವೆ! ಮೊದಲು ತಾಯಿ ತಂದೆಯರು ಇಲ್ಲದಂತೆ ಹುಟ್ಟಿದವರು ಅಂಡಜಗಳಾ, ಪಿಂಡಜಗಳಾ, ಉದ್ಭಿಜಗಳಾ? ಎಂದು ಅಮೀಬಾ ಏಕಕಣ ಜೀವಿಯನ್ನು ಕುರಿತು ಕೇಳಿದಂತೇ ಇರುತ್ತದೆ. ಆ ದಿನ ಸೃಷ್ಠಿ ಆದಿಯಲ್ಲಿ ಎಲ್ಲರೂ ಹೇಗೆ ಹುಟ್ಟಿರುವುದು ಮರೆಯದಂತಿರುವುದಕ್ಕೆ ದೇವರು ಏಕಕಣ ಅಮೀಬಾವನ್ನು ಗುರುತಿಗಾಗಿ ಇಟ್ಟಿದ್ದಾನೆ. ಏಕ ಕಣ ಅಮೀಬಾ ಅಂಡಜವಾಗಲೀ, ಪಿಂಡಜವಾಗಲೀ, ಉದ್ಭಿಜವಾಗಲೀ ಅಲ್ಲ. ಹಾಗೆಯೇ ಮೊದಲು ಹುಟ್ಟಿದ

ಮನುಷ್ಯನಿಗೆ ತಾಯಿತಂದೆಯರು ಇಲ್ಲ. ಅವರು ಪಿಂಡದಿಂದ ಹುಟ್ಟಲಿಲ್ಲ. ಹಾಗೆಯೇ ಮೊದಲು ಹುಟ್ಟಿದ ಪಕ್ಷಿಗೆ ತಾಯಿ ತಂದೆ ಪಕ್ಷಿಗಳು ಇಲ್ಲ. ಅವು ಅಂಡದಿಂದ ಹುಟ್ಟಲಿಲ್ಲ. ಜೀವಿಗಳು ಸೃಷ್ಠಿ ನಂತರ ಮೂರು ವಿಧಗಳಾಗಿ ಆತ್ಮದಿಂದ ಹುಟ್ಟಿಸಲ್ಪಡುತ್ತಿವೆ. ಸೃಷ್ಠಿ ಪೂರ್ವ ಆತ್ಮವೂ ಸಹ ಇಲ್ಲದ ದಿನಗಳಲ್ಲಿ ಮೊದಲ ಜೀವರಾಶಿಗಳೆಲ್ಲವೂ ಬ್ರಹ್ಮಾಂಡದಿಂದ ಬಂದಿವೆ. ಅಂಡ, ಪಿಂಡ ಅಲ್ಲದಿರುವವು ಬ್ರಹ್ಮಾಂಡದಿಂದ ಹುಟ್ಟಿರುವವೆಂದು ಹೇಳಬಹುದು. ಸೃಷ್ಠಿ ಆದಿಯಲ್ಲಿ ದೇವರ ಸೃಷ್ಠಿ ಬ್ರಹ್ಮಾಂಡದಿಂದ ನಡೆದಿದೆ. ಬ್ರಹ್ಮಾಂಡ ಎಂದರೆ ದೊಡ್ಡ ಮೊಟ್ಟೆ ಎಂದು ಅರ್ಥ. ಬ್ರಹ್ಮಾಂಡದಿಂದ (ದೊಡ್ಡ ಮೊಟ್ಟೆಯಿಂದ) ಒಂದು ಬಾರಿಯಾಗಿ ನಡೆಯುತ್ತಿರುವ ಪ್ರಪಂಚ, ನಿಂತಿರುವ ಪ್ರಪಂಚ, ಬಾಲ್ಯವಿಲ್ಲದ ಪ್ರಪಂಚ ಹುಟ್ಟಿದೆ. ಮೊದಲು ಒಂದು ಬಾರಿ ಹಾಗೆ ನಡೆದ ನಂತರ ಮನುಷ್ಯರಿಂದ ಮನುಷ್ಯ, ಪ್ರಾಣಿಗಳಿಂದ ಪ್ರಾಣಿ, ಪಕ್ಷಿಗಳಿಂದ ಪಕ್ಷಿಗಳು, ಗಿಡಗಳಿಂದ ಗಿಡಗಳು, ಬೀಜದಿಂದ ತಯಾರಾಗುತ್ತಾ (ಹುಟ್ಟುತ್ತಾ) ಬಂದಿವೆ. ನಂತರ ಈ ದಿನ ಹೇಗಿದೆಯೋ ಹಾಗೇ ತಯಾರಾಗುವುದು ಶುರುವಾಗಿದೆ. ಈ ವಿಷಯವನ್ನು ಇದಕ್ಕಿಂತ ಹೆಚ್ಚಾಗಿ ಹೇಳಬೇಕಾದ ಅವಶ್ಯವಿಲ್ಲ. ಏಕ ಕಣ ಜೀವಿಯಲ್ಲಿ ಆತ್ಮ ಕಣವೆಲ್ಲಾ ವ್ಯಾಪಿಸಿದೆ.

**15) ಪ್ರಶ್ನೆ :– ಹುಚ್ಚನಲ್ಲಿನ ಆತ್ಮ ಕೂಡಾ ಹುಚ್ಚದಾ? ಜೀವಿಯೇ ಹುಚ್ಚನಾ?**

**ಉತ್ತರ :–** ಹುಚ್ಚನಲ್ಲಿ ಆತ್ಮವಿರುವುದು ವಾಸ್ತವವೇ. ಹಾಗೆಯೇ ಒಬ್ಬ ಮನುಷ್ಯನಲ್ಲಿ ಇರುವಂತೇ ಮೂರು ಆತ್ಮಗಳೇ ಅಲ್ಲದೆ ಮನಸ್ಸು, ಬುದ್ಧಿ, ಚಿತ್ತ, ಅಹಂ ಎನ್ನುವ ನಾಲ್ಕು ಒಳಗಿನ ಭಾಗಗಳಿರುವುದು ಸಹಜವೇ. ಆದರೇ ಹುಚ್ಚನಲ್ಲಿನ ಜೀವಿಯು ಹುಚ್ಚನಲ್ಲ, ಆತ್ಮ ಹುಚ್ಚದು ಅಲ್ಲ. ಬುದ್ಧಿಗೆ ಒಂದಕ್ಕೇ ಹುಚ್ಚು ಇರುತ್ತದೆ. ಉಳಿದ ಮನಸ್ಸು, ಚಿತ್ತ, ಅಹಂ ಎಲ್ಲಾ ಸಕ್ರಮವಾಗಿಯೇ ಇರುತ್ತವೆ. ಬುದ್ಧಿ ಒಂದು ಸರಿಯಾಗಿ ಇಲ್ಲದೆ ಹೋದರೇ ಅವನನ್ನು ಹುಚ್ಚನೆಂದು ಕರೆಯುತ್ತೇವೆ. ಈಗಲೂ ಕೂಡಾ ಬುದ್ಧಿ ಸರಿಯಾಗಿ ಇಲ್ಲದವನನ್ನು, ಸಕ್ರಮವಾಗಿ ಮಾತನಾಡದೆ, ಮುಂದೆ ಹಿಂದೆ ಮಾತನಾಡುವವನನ್ನು ನಿನಗೇನಾದರೂ ಹುಚ್ಚು

ಹಿಡಿದಿದೆಯಾ? ಎಂದು ಅನ್ನುತ್ತಿರುತ್ತೇವೆ. ಇದನ್ನನುಸರಿಸಿ ನೋಡಿದರೆಹುಚ್ಚು ಎನ್ನುವುದು ಬುದ್ಧಿಗೆ ಸಂಬಂಧಿಸಿರುವುದೇಯೆಂದು ತಿಳಿಯುತ್ತಿದೆ.

**16) ಪ್ರಶ್ನೆ :– ಕ್ರೂರಮೃಗ ಇರುವ ಹುಲಿ ಮರಿಯನ್ನು ಮನುಷ್ಯ ಸೌಮ್ಯವಾಗಿ ಬೆಳಸಿದರೇ ಅದರ ಕ್ರೂರತ್ವ ನಶಿಸುತ್ತದಾ?**

**ಉತ್ತರ :–** ಹುಲಿ ಕ್ರೂರವಾಗಿ ಇರುವುದು ಅದರ ಸಹಜ ಸ್ವಭಾವ. ಆದರೇ ಬೆಳಸಿದವರಿಗೆ ಚೆನ್ನಾಗಿ ಅಭ್ಯಾಸವಾಗಿರುತ್ತದೆ. ಹುಲಿಯಾದರೂ 'ತನ್ನ' 'ಪರ' ಎನ್ನುವ ಭೇದ ಚೆನ್ನಾಗಿ ತಿಳಿದಿರುತ್ತದೆ. ಆದ್ದರಿಂದ ಹಾಲುಕೊಡುವ ತಾಯಿ ಹತ್ತಿರ ಹುಲಿ ಮರಿಗಳು ಆಡಿಕೊಳ್ಳುತ್ತವೆ. ಏಕೆಂದರೆ! ಅದು ತನ್ನ ತಾಯಿಯೆಂದು ಅವುಗಳಿಗೆ ಚೆನ್ನಾಗಿ ತಿಳಿದಿದೆ. ಅದೇ ವಿಧವಾಗಿ ಬೆಳೆಸಿದವರನ್ನು ಸಹ ಗುರುತಿಸಿ ಅವರ ಬಳಿ ಸ್ನೇಹವಾಗಿ ಇರುತ್ತವೆ. ಆದರೂ 'ಕ್ರೂರತ್ವ ಅವುಗಳಲ್ಲಿ ಇಲ್ಲ' ಎಂದು ಹೇಳುವುದಕ್ಕೆ ಅವಕಾಶವಿಲ್ಲ. ನಾಯಿಯನ್ನು ಮನೆಯಲ್ಲಿ ಚಿಕ್ಕಂದಿನಿಂದ ಸಾಕಿದರೇ ಸಾಕಿದವರ ಮೇಲೆ ಪೂರ್ತಿ ಪ್ರೇಮವನ್ನು ತೋರಿಸುತ್ತವೆ. ಅದೇ ಕಳ್ಳ ಕಾಣಿಸಿದರೇ ಬೊಗಳುತ್ತವೆ, ಸಮಯಸಿಕ್ಕರೆ ಕಚ್ಚುತ್ತವೆ. ಹಾಗೆಯೇ ಹುಲಿ ಕೂಡಾ ಅಷ್ಟೇ. ಸಾಕಿದವರ ಮೇಲೆ ಪ್ರೇಮವನ್ನು ತೋರಿಸಿದರೂ, ಮೇಕೆ ಕಾಣಿಸಿದರೇ ಅದನ್ನು ನೇರವಾಗಿ ಸಾಯಿಸುತ್ತದೆ. ಸಾಕಿದವರೂ ಸಹ ಅವುಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿರಬೇಕು. ಇಲ್ಲದೇ ಹೋದರೆ ತನ್ನವರ ಮೇಲೆ ಸಹ ದಾಳಿ ಮಾಡುವುದಕ್ಕೆ ಹಿಂಜರಿಯುವುದಿಲ್ಲ. ವಯಸ್ಸು ಬಂದ ನಂತರ ಲೈಂಗಿಕ ಸಂಬಂಧ ವಾಂಛೆಗಳು ತೀರದೇ ಹೋದರೇ ಅದರ ಬುದ್ಧಿಯಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತವೆ. ಆಗ 'ತನ್ನ' 'ಪರ' ಎನ್ನುವ ಭೇದವನ್ನು ಮರೆತುಹೋಗುವ ಅವಕಾಶವಿದೆ. ಆಗ ಅವುಗಳನ್ನು ಏಕಾಂತವಾಗಿ ಇರಲು ಬಿಡುವುದು ಒಳ್ಳೆಯದು. ಎಷ್ಟೋ ಸಾಧು ಸ್ವಭಾವವಾಗಿ ಇರುವ ಆನೆ ಕೆಲವು ಸಂದರ್ಭಗಳಲ್ಲಿ ಅಸಾಧಾರಣವಾಗಿ ಪ್ರವರ್ತಿಸುತ್ತದೆ. ಆಗ ಸಾಕಿದವರು ಹತ್ತಿರಕ್ಕೆ ಹೋದರೂ ಯಾವುದನ್ನೂ ಲೆಕ್ಕಿಸದೆ ಅವರ ಮೇಲೆ ಕೂಡಾ ದಾಳಿ ಮಾಡುತ್ತವೆ. ಆದ್ದರಿಂದ ಕ್ರೂರ ಪ್ರಾಣಿಗಳಾದರೂ ಸಾಕಿದವರ ಹತ್ತಿರ ಸಾಧುವಾಗಿಯೇ

ಪ್ರವರ್ತಿಸುತ್ತಿರುತ್ತವೆ. ಆದರೂ ಅವುಗಳ ಆರೋಗ್ಯ ಪರಿಸ್ಥಿತಿಗಳನ್ನನುಸರಿಸಿ ಯಾವಾಗಾದರೂ ಅವು ತಮ್ಮ ಕ್ರೂರತ್ವವನ್ನು ಪ್ರದರ್ಶಿಸುವುದಿಲ್ಲವೆನ್ನುವ ನಂಬಿಕೆ ಇಲ್ಲ. ಆದ್ದರಿಂದ ಕ್ರೂರ ಪ್ರಾಣಿಗಳು ಎಲ್ಲವೇಳೆಯಲ್ಲೂ ಒಂದೇ ವಿಧವಾಗಿ ಇರುತ್ತವೆನ್ನುವ ನಂಬಿಕೆ ಇಲ್ಲ. ಹಾಗೆಂದು ಅವು ಎಲ್ಲಾ ಸಂದರ್ಭಗಳಲ್ಲಿ ಕ್ರೂರವಾಗಿ ಇರುತ್ತವೆಂದು ಹೇಳುವುದು ಸಹ ಸರಿಯಲ್ಲ. ಕ್ರೂರ ಪ್ರಾಣಿಗಳು ತಮ್ಮನ್ನು ಸಾಕಿದವರಮೇಲೆ ಹೆಚ್ಚಿನ ಪ್ರೇಮದಿಂದಲೇ ಇರುತ್ತವೆ ಆದರೇ ಅವುಗಳ ವಯಸ್ಸನ್ನನುಸರಿಸಿ, ಆರೋಗ್ಯವನ್ನನುಸರಿಸಿ ಬದಲಾಗುವುದಕ್ಕೆ ಅವಕಾಶವಿರುವುದರಿಂದ ಸ್ವಲ್ಪ ಜಾಗ್ರತೆಯಾಗಿ ಇರುವುದು ಒಳ್ಳೆಯದು.

**17) ಪ್ರಶ್ನೆ :– ದೇವರು ಮೊದಲು ಸೃಷ್ಟಿಸಿದ ಮಾನವರು ಯಾವ ವಯಸ್ಸಿನಲ್ಲಿ ಇದ್ದರು? ಆಗ ಕರ್ಮ ಇಲ್ಲದ ಅವರಿಗೆ ಗುಣಚಕ್ರದಲ್ಲಿ ಮಾಯೆಯನ್ನು ಸೃಷ್ಟಿಸಿ ಅವರನ್ನು ಮಾಯೆಯಲ್ಲಿ ಬಂಧಿಸಿ ಆಟ ಆಡುವುದು ದೇವರಿಗೆ ಭಾವ್ಯವಾ? "ಕೆಸರು ತುಳಿಯುವುದೇಕೆ, ಕಾಲು ತೊಳೆಯುವುದೇಕೆ" ಎನ್ನುವ ಗಾದೆಮಾತಿನಂತೆ ಇದೆ.**

**ಉತ್ತರ :–** ಮೊದಲು ದೇವರು ಸೃಷ್ಟಿಸಿದ ಮಾನವರು ಒಂದು ಬಾಲ್ಯಾವಸ್ಥೆ ಬಿಟ್ಟು ನಂತರ ಇರುವ ಯವ್ವನ, ಕೌಮಾರ, ವೃದ್ಧಾಪ್ಯ ಎನ್ನುವ ಮೂರು ದಶೆಗಳಲ್ಲಿ ಸಮಾನವಾಗಿ ಇರುತ್ತಿದ್ದರು. ಮೊದಲು ಅವರಿಗೆ ಕರ್ಮ ಇಲ್ಲದಿರುವುದು ವಾಸ್ತವವೇ! ದೇವರು ಮನುಷ್ಯನನ್ನು ತಯಾರುಮಾಡಿದಾಗಲೇ ಮನುಷ್ಯರಿಗೆ ಸಂಬಂಧಿಸಿದ ಎಲ್ಲ ವಿಧಾನಗಳನ್ನು ಸೃಷ್ಟಿಸಿದ್ದಾನೆ. ಆಗಲೇ ಕರ್ಮ ವಿಧಾನವೂ ಸಹ ತಯಾರಾಗಿದೆ. ಮೊದಲು ನಮಗೆ ಕರ್ಮ ಇಲ್ಲದಿದ್ದರೂ ನಡೆಯುವ ಕೆಲಸಗಳಲ್ಲಿ ತನಗೆ ಸಂಬಂಧ ಇಲ್ಲವೆನ್ನುವವರಿಗೆ ಕರ್ಮ ಅಂಟಿಕೊಳ್ಳದಂತೆ ಇರುವ ಕರ್ಮ ಸಿದ್ಧಾಂತವನ್ನು, ಹಾಗೆಯೇ ನಡೆಯುವ ಕೆಲಸದೊಂದಿಗೆ ತನಗೆ ಸಂಬಂಧ ಇದೆಯೆಂದುಕೊಳ್ಳುವುದರಿಂದ ಕರ್ಮ ಅಂಟಿಕೊಳ್ಳುವ ಹಾಗೆ ಕರ್ಮ ಸಿದ್ಧಾಂತವನ್ನು ದೇವರು ನಿರ್ಮಿಸಿದ್ದಾನೆ. ಆ ವಿಧಾನದ ಪ್ರಕಾರ ಸರ್ವ ಸಾಧಾರಣವಾಗಿ ನಡೆಯುವ ಕೆಲಸಗಳನ್ನು ಮನುಷ್ಯ

'ತಾನೇ ಮಾಡಿದ್ದೇನೆ' ಎಂದು ಅಂದುಕೊಳ್ಳುವುದರಿಂದ ಮನುಷ್ಯನಿಗೆ ಕರ್ಮ ಅಂಟಿಕೊಳ್ಳುವುದು ನಡೆಯುತ್ತಿದೆ. ಹಾಗೆ ಆರಂಭವಾದ ಕರ್ಮವನ್ನು ಮನುಷ್ಯನೇ ತನ್ನ ನೆತ್ತಿಮೇಲೆ ಹಾಕಿಕೊಳ್ಳುತ್ತಿದ್ದಾನೆ ಹೊರತು, ದೇವರು ಯಾರಿಗೂ ಎಂತಹ ಕರ್ಮವನ್ನು ಅಂಟಿಸಲಿಲ್ಲ. ಕರ್ಮಸಿದ್ಧಾಂತವನ್ನು ನಿರ್ಮಿಸಿದ ದೇವರು ಅದಕ್ಕೆ ಪರಿಹಾರವಾಗಿ ಜ್ಞಾನವನ್ನು ಸಹ ಹೇಳಿದ್ದಾನೆ.

**18. ಪ್ರಶ್ನೆ :– ದೇವರಿದ್ದರೆ ಎಲ್ಲರಿಗೂ ಕೇಳಿಸುವಂತೆ ಆಕಾಶವಾಣಿಯಿಂದ "ನಾನು ಇದ್ದೇನೆ" ಎನ್ನುವ ಮಾತನ್ನು ಹೇಳಬಹುದಲ್ಲವೆ! ಆಗ ನಮ್ಮಂತಹವರು ಸಹ ನಂಬುತ್ತಾರಲ್ಲವೆ! ಸರ್ವ ಶಕ್ತಿವಂತನಾದ ದೇವರು ಏಕೆ ಹಾಗೆ ಮಾಡುವುದಿಲ್ಲ?**

**ಉತ್ತರ :–** ದೇವರಿರುವ ಮಾತು ನಿಜವೇ. ಆದರೇ ಆತನಿಗಿರುವ ಧರ್ಮದ ಪ್ರಕಾರ ಆತನು ನಾವಂದುಕೊಂಡಂತೆ ತಿಳಿಯಬಾರದು. ದೇವರಿಗಿರುವ ಪ್ರಾಥಮಿಕ ಧರ್ಮ **ರೂಪ, ನಾಮ, ಕ್ರಿಯೆಗಳು ಇಲ್ಲದವನು ದೇವರು**. ಈ ಧರ್ಮದ ಪ್ರಕಾರ ದೇವರಿದ್ದರೂ ತಿಳಿಯುವುದಿಲ್ಲ. ದೇವರಿದ್ದಾನೆಂದು ಆತನು ತಿಳಿಯದಂತೆ ಹೋದರೂ ದೇವರಿದ್ದಾನೆಂದು ಅಂದುಕೊಳ್ಳುವುದು, ನಾವು ನೋಡಿದ್ದೇವೆಂದು ಹೇಳಿಕೊಳ್ಳುವುದು, ನಾವು ದೇವರೊಂದಿಗೆ ಮಾತನಾಡಿದ್ದೇವೆಂದು ಹೇಳಿ ಕೊಳ್ಳುವುದು ನೋಡಿ ದೇವರೇ ನಗುತ್ತಿದ್ದಾನೆ. ನಾಸ್ತಿಕವಾದಿಗಳು ತಮಗೆ ತಿಳಿದೋ ತಿಳಿಯದೋ 'ದೇವರು ಇಲ್ಲ' ಎಂದು ಹೇಳುತ್ತಿದ್ದಾರೆ. ಆದರೆ ಆಸ್ತಿಕವಾದಿಗಳು 'ದೇವರಿದ್ದಾನೆ' ಎಂದು ಹೇಳುತ್ತಿದ್ದಾರೆ. ದೇವರಿರುವ ಮಾತು ವಾಸ್ತವವೇ ಆದರೂ ಆಸ್ತಿಕರು ಹೇಳಿದಂತೆ ದೇವರು ಇಲ್ಲ. ಹಾಗೆಯೇ 'ದೇವರು ಇಲ್ಲ' ಎಂದು ನಾಸ್ತಿಕವಾದಿಗಳು ಹೇಳುತ್ತಿದ್ದರೂ, ಅವರಂದುಕೊಂಡಂತೆ ಸಹ ದೇವರು ಇಲ್ಲ. ನಿಜ ಹೇಳಿದರೇ ನಾಸ್ತಿಕರ ಪಕ್ಕದಲ್ಲಿ ದೇವರಿದ್ದಾನೆ. ನಾಸ್ತಿಕರಲ್ಲಿ ಸಹ ದೇವರಿದ್ದಾನೆ. ಆದರೂ ದೇವರು ಇಲ್ಲದಂತೇ ಇದ್ದಾನೆ. ದೇವರು ಇಲ್ಲ ಎಂದರೂ ಆ ಮಾತು ಸರಿಹೋಗುತ್ತದೆ. ಒಂದು ವಿಧವಾಗಿ ದೇವರು ಇಲ್ಲ. ಆದರೇ ದೇವರು ಇಲ್ಲದಂತೆ ಇದ್ದಾನೆ. ಆದ್ದರಿಂದ ನಾವು ದೇವರನ್ನು ಕುರಿತು ಒಂದು ಪ್ರತ್ಯೇಕವಾದ ಮಾತನ್ನು ಹೇಳುತ್ತಾ **"ದೇವರು ಅಬದ್ಧವಾಗಿ ಇದ್ದಾನೆ"**

ಎಂದು ಹೇಳಿದ್ದೇವೆ. ಆದ್ದರಿಂದ ನಾಸ್ತಿಕರು ಕುರುಡರಂತೆ ದೇವರು ಇಲ್ಲ ಎನ್ನುವುದಕ್ಕಿಂತ ವಿವರ ತಿಳಿದು 'ಶಾಸ್ತ್ರಬದ್ಧವಾಗಿ ಇಲ್ಲ' ಎನ್ನುವುದು ಒಳ್ಳೆಯದು. ಹಾಗೆಯೇ ನಾಸ್ತಿಕರು 'ದೇವರು ಇದ್ದಾನೆ' ಎನ್ನುವುದಕ್ಕಿಂತ ದೇವರ ನಿಜ ಸ್ಥಿತಿ ತಿಳಿದು ಆತನು ಹೇಗೆ ಇದ್ದಾನೋ ಶಾಸ್ತ್ರೀಯವಾಗಿ ಹೇಳಿದರೇ ಚೆನ್ನಾಗಿರುತ್ತದೆ. ಶಾಸ್ತ್ರ ಬದ್ಧವಿಲ್ಲದಂತೆ ದೇವರಿದ್ದಾನೆಂದು ಆಸ್ತಿಕರು ಹೇಳಬಾರದು. ಹಾಗೆಯೇ ಶಾಸ್ತ್ರಾಧಾರ ಇಲ್ಲದಂತೆ ದೇವರು ಇಲ್ಲವೆಂದು ನಾಸ್ತಿಕರು ಹೇಳಬಾರದು.

**19) ಪ್ರಶ್ನೆ :– ಉಪ್ಪು ನೀರನ್ನು ಬಿಸಿಮಾಡಿ ಅದರ ಮೇಲೆ ಪ್ಲೇಟನ್ನು ಮುಚ್ಚಿದರೆ, ನಂತರ ಮುಚ್ಚಿರುವುದನ್ನು ತೆಗೆದರೆ ಪ್ಲೇಟಿಗಿರುವ ನೀರಿನ ಆವಿ ನೀರಾಗಿ ಬದಲಾದರೆ ಆ ನೀರು ಉಪ್ಪಾಗಿ ಇರುವುದಿಲ್ಲ. ಅದೇ ರೀತಿ ಸೂರ್ಯನು ಸಮುದ್ರದಲ್ಲಿರುವ ಉಪ್ಪು ನೀರನ್ನು ತಕ್ಕ ಉಷ್ಣೋಗ್ರತೆಯಲ್ಲಿ ಹಾಗೆ ಮಾಡುವುದರಿಂದಲೇ, ಉಪ್ಪು ನೀರಿನ ಮಳೆ ಬೀಳುತ್ತಿಲ್ಲ ಎಂದು ನಾವೆನ್ನುತ್ತೇವೆ, ನೀವೇನು ಹೇಳುತ್ತೀರಾ?**

**ಉತ್ತರ :–** ಸಮುದ್ರ ಜಲವೆಲ್ಲವೂ ಉಪ್ಪಾಗಿರುವುದು ನಿಜವೇ. ಅರ್ಧ ನೀರು, ಅರ್ಧ ಉಪ್ಪು ಇರುವ ಸಾಂಧ್ರತೆಯಲ್ಲಿ ನೀರು ಉಪ್ಪಾಗಿ ಇದೆ. ಸಮುದ್ರ ಜಲ ಆವಿಯಾಗಿ ಬದಲಾಗಿ ಮೇಘಗಳಾಗಿ ತಯಾರಾಗಿ ಮಳೆಯ ರೂಪದಲ್ಲಿ ಬೀಳುತ್ತಿದೆಯೆಂದು ಶಾಸ್ತ್ರ ಪರಿಶೋಧಕರು, ಶಾಸ್ತ್ರ ತಜ್ಞರು ಹೇಳುತ್ತಿದ್ದಾರೆ. ನೀರು ಆವಿಯಾಗಿ ಬದಲಾಗಿ ಮೇಲಕ್ಕೆ ಹೋಗುವುದರಿಂದ ನೀರಿನಲ್ಲಿನ ಉಪ್ಪೆಲ್ಲವೂ ಸಮುದ್ರದಲ್ಲೇ ಇದ್ದು ಆವಿಯಿಂದ ಸ್ವಚ್ಛವಾದ ನೀರು ಮೇಲಕ್ಕೆ ಮೇಘಗಳಲ್ಲಿ ಸೇರಿಹೋಗಿ ಅವು ಮಳೆ ಸುರಿಸುವಾಗ ಉಪ್ಪು ಇಲ್ಲದ ಸ್ವಚ್ಛವಾದ ಒಳ್ಳೆಯ ನೀರನ್ನು ಮಳೆಯ ರೂಪದಲ್ಲಿ ಸುರಿಸುತ್ತಿವೆಯೆಂದು ಹೇಳುತ್ತಿರುವರು. ಅವರು ಹೇಳಿದಂತೆ ಮೇಘಗಳು ಒಳ್ಳೆಯ ನೀರನ್ನು ಸುರಿಸುವುದು ವಾಸ್ತವವೇ. ಆದರೇ ಅವರು ಹೇಳಿದ ವಿಧಾನವನ್ನು ನಾವು ಪೂರ್ತಿ ವಿರೋಧಿಸಿದ್ದೇವೆ. ನೂರು ಸೆಂಟೀಗ್ರೇಡ್ ಡಿಗ್ರೀಗಳ ಹತ್ತಿರ ನೀರು ಆವಿಯಾಗ ಬಲ್ಲದು. ಕಡಿಮೆ ಉಷ್ಣೋಗ್ರತೆಯಲ್ಲಿ ನೀರು ಆವಿಯಾಗುವುದಿಲ್ಲವೆಂದು ಹೇಳಿದ್ದೇವೆ. ವಾತಾವರಣ ದಲ್ಲಿ ಬೇಸಿಗೆ ಕಾಲದಲ್ಲಿ ಸಹ 40 ರಿಂದ 50 ಡಿಗ್ರೀಗಳ ವರೆಗು ಬಿಸಿ

ಬರುವುದು ನಡೆಯುತ್ತಿದೆ ಆದರೆ, ನೂರು ಡಿಗ್ರೀಗಳ ಉಷ್ಣೋಗ್ರತೆ ಎಲ್ಲೂ ಬರುತ್ತಿಲ್ಲ. ಹಾಗಿರುವಾಗ ಸಮುದ್ರದ ನೀರು ಆವಿಯಾಗಿ ಬದಲಾಗಿ ಮೇಘಗಳಾಗುತ್ತವೆಂದು ಹೇಳುವುದು ಪೂರ್ತಿ ವಿರುದ್ಧ.

ಮೇಘಗಳ ವಿಷಯವಾಗಿ ಇಲ್ಲಿಯವರೆಗು ಯಾರೂ ಆಳವಾಗಿ ಆಲೋಚಿಸಲಿಲ್ಲವೆಂದು, ಆದ್ದರಿಂದ ಸಮುದ್ರದ ನೀರು ಆವಿಯಾಗಿ ಮೇಘಗಳಲ್ಲಿ ಸೇರುತ್ತಿದೆಯೆಂದು ಕೆಲವರು ಹೇಳಿದಾಗ ಎಲ್ಲರೂ ಕೇಳಿದ್ದಾರೆಂದು, ಅದು ತಪ್ಪೋ ಒಪ್ಪೋ ಎಂದು ಆಲೋಚಿಸದೆ ಹೋಗುವುದರಿಂದ ನೀರು ಆವಿಯಾಗಿ ಮೇಲಕ್ಕೆ ಸೇರುತ್ತಿದೆಯೆಂದು ಪೂರ್ತಿಯಾಗಿ ನಂಬಿದ್ದಾರೆ. ನಾವು ಆ ವಿಷಯವನ್ನು **"ದೆವ್ವಗಳ–ಭೂತಗಳ ಯಥಾರ್ಥ ಸಂಘಟನೆಗಳು"** ಎನ್ನುವ ಗ್ರಂಥದಲ್ಲಿ ಪೂರ್ತಿಯಾಗಿ ವಿರೋಧಿಸಿ ನೂರು ಡಿಗ್ರೀಗಳ ಉಷ್ಣೋಗ್ರತೆ ಇಲ್ಲದೆ ನೀರು ಹೇಗೆ ಆವಿಯಾಗುತ್ತಿದೆಯೆಂದು ಕೇಳಿದ್ದೇವೆ. ಅಷ್ಟಕ್ಕೆ ನಿಲ್ಲದೆ ಮೇಘವು ಸಮುದ್ರದ ನೀರನ್ನು ನೇರವಾಗಿ ತೆಗೆದುಕೊಳ್ಳುತ್ತಿದೆಯೆಂದು, ಒಂದೊಂದು ಸಲ ಸಮುದ್ರದ ನೀರನ್ನು ತೆಗೆದುಕೊಳ್ಳುವಾಗ ನೀರಿನೊಂದಿಗೆ ಮೀನುಗಳನ್ನು ಸಹ ತೆಗೆದುಕೊಳ್ಳುತ್ತಿದೆಯೆಂದು, ಮೇಘ ಸಮುದ್ರದ ನೀರನ್ನು ಟೋರ್ನಡೋಲುಗಳ ರೂಪದಲ್ಲಿ ಸಮುದ್ರದಿಂದ ನೀರನ್ನು ಗ್ರಹಿಸುತ್ತಿದೆಯೆಂದು ಹೇಳಿದ್ದೇವೆ. ಟೋರ್ನಡೋಲು ಎಂದರೆ ಮೇಘಗಳಲ್ಲಿ ಹುಟ್ಟುವ ಸುಂಟರಗಾಳಿ ಯಿಂದ ಏರ್ಪಡುವವೆಂದು ಹೇಳಿದ್ದೇವೆ. ಹಾಗೆ ಸುಂಟರಗಾಳಿ ಮೇಘಗಳಿಂದ ಸಮುದ್ರದ ನೀರನ್ನು ಗ್ರಹಿಸಿದ ಮೇಘಗಳು ಅದೇ ನೀರನ್ನೇ ಭೂಮಿಮೇಲೆ ಮಳೆಯಾಗಿ ಸುರಿಸುತ್ತಿವೆಯೆಂದು ಸಹ ಹೇಳಿದ್ದೇವೆ. ಈ ವಿಷಯ ಎಲ್ಲರಿಗೂ ತಿಳಿದರೂ, ತಿಳಿಯದೆ ಹೋದರೂ ಇಂದಿಗೂ ಎಂದಿಗೂ ನಡೆಯುತ್ತಿರುವ ಸತ್ಯ. ಯಾವಾಗಾದರೂ ಅಪರೂಪವಾಗಿ ಭೂಮಿಮೇಲೆ ಕೆರೆಗಳಲ್ಲಿ ನೀರನ್ನು ಕೂಡಾ ಮೇಘ ಹೀರಿಕೊಂಡು ಕೆರೆಯನ್ನು ಖಾಲಿ ಮಾಡುತ್ತಿದೆ. ನಾವು ಹೇಳಿದ ವಿಧಾನ ಸಮುದ್ರದ ಮೇಲೆ ನಡೆಯುತ್ತಿದೆಯೆಂದು ಹೇಳಿರುವುದು ಸತ್ಯವೆಂದು ಎಲ್ಲರಿಗೂ ತಿಳಿಯುವುದಕ್ಕೆ ಆಗಾಗ ಭೂಮಿಮೇಲೆ ಕೆರೆಗಳಲ್ಲಿನ

ನೀರನ್ನು ಮೇಘವು ಮನುಷ್ಯರು ನೋಡುತ್ತಿದ್ದಂತೆ ಮೇಲಕ್ಕೆ ಸೆಳೆದುಕೊಳ್ಳುವುದು, ಕೆರೆ ಖಾಲಿ ಆಗುವುದನ್ನು ಪ್ರತ್ಯಕ್ಷವಾಗಿ ನೋಡಿದವರು ಇದ್ದಾರೆ. ಸೃಷ್ಠಿ ಆದಿಯಿಂದ ಇದೇ ವಿಧಾನ ಮುಂದುವರೆಯುತ್ತಿದ್ದರೂ ಮನುಷ್ಯರು ಅದನ್ನು ಇಲ್ಲಿಯವರೆಗು ತಿಳಿಯದೆ ನೀರು ಆವಿಯಾಗಿ ಮೇಘಗಳಲ್ಲಿ ಸೇರಿ, ನಂತರ ಭೂಮಿಮೇಲೆ ಮಳೆಯಾಗಿ ಬೀಳುತ್ತಿದೆಯೆಂದು ತಿಳಿಯದೆ ಹೋಗಿದೆ. ಪ್ರಸ್ತುತ ಆ ವಿಷಯವನ್ನು ನಾವು ಗ್ರಂಥದಲ್ಲಿ ವಿವರವಾಗಿ ಬರೆದಿದ್ದೇವೆ. ಮಳೆ ಒಂದೇ ಅಲ್ಲದೆ ಮೇಘಗಳು ಮಾಡುವ ಕಾರ್ಯಗಳೆಲ್ಲವನ್ನೂ ಮಣಿಪೋಣಿಸಿದಂತೆ ಹೇಳಿದ್ದೇವೆ.

ಆದರೇ ಈಗ ಮಳೆ ನೀರಿನಲ್ಲಿ ಉಪ್ಪು ಇಲ್ಲವೇ, ಸಮುದ್ರ ನೀರನ್ನು ಮೇಘವು ನೇರವಾಗಿ ತೆಗೆದುಕೊಂಡಾಗ ಸಮುದ್ರದ ನೀರಿನಲ್ಲಿ ಉಪ್ಪು ಇರಬೇಕೆಂದು, ಹಾಗೆ ಇಲ್ಲದೆ ಹೋಗುವುದರಿಂದ ನೀರು ಆವಿಯಾಗಿ ಮೇಘಗಳಲ್ಲಿ ಸೇರುತ್ತದೆನ್ನುವ ಮಾತು ಸತ್ಯವಾಗಿ ಕಾಣಿಸುತ್ತಿದೆ. ನೀವು ಹೇಳುವ ಮಾತು ಅಸತ್ಯವಾಗಿ ಕಾಣಿಸುತ್ತಿದೆಯೆಂದು ಮೇಲಿನ ಪ್ರಶ್ನೆಯನ್ನು ಕೇಳುವುದು ನಡೆದಿದೆ. ಮೇಘಗಳನ್ನು ಕುರಿತು ಅನೇಕ ವಿಷಯಗಳನ್ನು ಹೇಳಿದ ನಾನು ಈಗ ನೀವು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಬೇಕಾಗಿದೆ. ಉತ್ತರ ಹೇಳುವುದು ನನ್ನ ಜವಾಬ್ದಾರಿ.

ಮೇಘವು ಸಮುದ್ರದ ನೀರನ್ನು ನೇರವಾಗಿ ಮೇಲಕ್ಕೆ ತೆಗೆದುಕೊಳ್ಳುವುದರಿಂದ ಸಮುದ್ರದಲ್ಲಿನ ಉಪ್ಪುನೀರು ಮೇಘಗಳಲ್ಲಿ ಸೇರಿಹೋಗುತ್ತಿದೆ. ಬೇಸಿಗೆ ಕಾಲದಲ್ಲಿಯೇ ಅಲ್ಲದೆ ಯಾವಾಗ ಅಗತ್ಯವೆನಿಸಿದರೇ ಆಗ ಮೇಘಗಳು ಸಮುದ್ರದ ನೀರನ್ನು ತೆಗೆದುಕೊಳ್ಳುತ್ತವೆ. ಉಪ್ಪುನೀರನ್ನು ತೆಗೆದುಕೊಂಡ ಮೇಘವು ಆಕಾಶದಲ್ಲಿ ಅದೃಶ್ಯವಾಗಿ ಹೋಗುತ್ತದೆ. 20 ಎಕರೆಗಳ ವಿಸ್ತೀರ್ಣವಿರುವ ಒಂದು ಮೇಘವು ಸಮುದ್ರದ ನೀರನ್ನು ತುಂಬಿಕೊಂಡು ನಂತರ ಅದೇ ದಿನವಾಗಲೀ, ಎರಡನೆ ದಿನವಾಗಲೀ ದೃಶ್ಯರೂಪವಾಗಿರುವ ಮೇಘವು ಅದೃಶ್ಯ ರೂಪವಾಗಿ ಬದಲಾಗಿ ಹೋಗುತ್ತಿದೆ. ಕರಗಿ ಕಾಣಿಸದಂತೆ ಹೋದ ಮೇಘವು ನಂತರ ಸ್ವಲ್ಪ ಕಾಲಕ್ಕೆ ಪ್ರಪಂಚದಲ್ಲಿ ಎಲ್ಲೋ ಒಂದು ಕಡೆ ಕಾಣಿಸುತ್ತದೆ. ಕೆಲವು ಗಂಟೆಗಳಾಗಲೀ,

ಕೆಲವು ದಿನಗಳಾಗಲೀ, ಕೆಲವು ತಿಂಗಳುಗಳಾಗಲೀ ಕಾಣಿಸದಂತೆ ಹೋದ ಮೇಘವು ಪುನಃ ಕಾಣಿಸುತ್ತದೆ. ಕೆಲವು ಗಂಟೆಗಳಾಗಲೀ, ಕೆಲವು ದಿನಗಳಾಗಲಿ ಕಾಣಿಸದಂತೆ ಹೋದ ಮೇಘವು ಪುನಃ ಕಾಣಿಸುವವರೆಗೂ ಎಲ್ಲಿದೆ? ಏನು ಮಾಡುತ್ತಿದೆ? ಎನ್ನುವ ಪ್ರಶ್ನೆಗಳು ಬರುತ್ತವೆ. ಈ ವಿಷಯವೆಲ್ಲಾ ತಿಳಿಯುವುದಕ್ಕೆ ಮೇಘಗಳನ್ನು ಕುರಿತು ಇನ್ನೂ ಸ್ವಲ್ಪ ತಿಳಿಯಬೇಕಾಗಿದೆ.

ಆಕಾಶ ಒಂದು ಭೂತ (ಒಬ್ಬ ಜೀವಿಯು). ಆಕಾಶ ಅದೃಶ್ಯ ರೂಪದಲ್ಲಿ ಶೂನ್ಯವಾಗಿ ಇದ್ದರೂ ತನ್ನ ಕರ್ಮೇಂದ್ರಿಯಗಳಾದ ಕೈಗಳನ್ನು ಆಗಾಗ ಕಾಣಿಸುವಂತೆ ಮಾಡುತ್ತಿರುತ್ತದೆ. ಆಕಾಶವೊಂದರ ಕೈಗಳೇ ಮೇಘಗಳಾಗಿ ಆಕಾಶದಲ್ಲಿ ಕಾಣಿಸುತ್ತಿರುತ್ತದೆ. ಆಕಾಶದಲ್ಲಿ ಮೇಘಗಳಾಗಿ ಕಾಣಿಸುವ ಆಕಾಶ ಕೈಗಳು ಸ್ವಲ್ಪ ಹೊತ್ತು ಕಾಣಿಸಿ ನಂತರ ಕಾಣಿಸದಂತೆ ಹೋಗುತ್ತಿರುತ್ತವೆ. ಆಕಾಶವೆಲ್ಲಾ ಒಂದೇ ಮೇಘವಾಗಿ ಯಾವಾಗಲೂ ಕಾಣಿಸುವುದಿಲ್ಲ. ಆಕಾಶಕ್ಕೆ ಕೆಲವು ಕೋಟಿ ಕೈಗಳಿರುತ್ತವೆ. ಆ ಕೈಗಳು ಮಾತ್ರವೇ ಕಾಣಿಸುವುದರಿಂದ ಸ್ವಲ್ಪ ಆಕಾಶ ಖಾಲಿಯಾಗಿದ್ದು, ಸ್ವಲ್ಪ ಆಕಾಶ ಮೇಘವಾಗಿ ಇರುತ್ತದೆ. ಕೆಲವು ಕೈಗಳನ್ನು ಸೇರಿಸಿ ಒಂದು ಕಡೆಇಟ್ಟರೆ ಅದೇ ಹೊಗೆ ಮೇಘ (ಕ್ಯುಮುಲೋ ನಿಂಬಸ್ ಮೇಘ) ಆಗುತ್ತದೆ. ಕೆಲವು ಕೈಗಳು ಸೇರಿಸಿ ತಿರುಗಿಸಿದರೇ ಸುಳಿ ಮೇಘ (ಟೋರ್ನಡೋ) ಆಗುತ್ತದೆ. ಎರಡು ಕೈಗಳ ಆಕಾರವೇ ಸುಮಾರು 20 ಎಕರೆಗಳ ವಿಸ್ತೀರ್ಣದವರೆಗು ವ್ಯಾಪಿಸಿಕೊಳ್ಳಬಹುದು. ಆಕಾಶವೊಂದರ ಕೈಗಳ ಬಲ ಯಾರ ಅಂದಾಜಿಗೂ ಬರುವುದಿಲ್ಲ. ಅದರ ಬಲ ಯಾರಿಗೂ ತಿಳಿದಿಲ್ಲ. ಆಕಾಶದಲ್ಲಿ ಉಂಟಾಗುವ ವಾತಾವರಣ ಬದಲಾವಣೆಗಳನ್ನು, ತುಫಾನುಗಳು ಸುನಾಮೀಗಳನ್ನು ಮೇಘಗಳೇ ಕಲ್ಪಿಸುತ್ತವೆ. ಎರಡು ಕೈಗಳ ಮೇಘವು ಎಷ್ಟು ಉಪದ್ರವವನ್ನಾದರೂ ಉಂಟುಮಾಡಬಲ್ಲದು. ಕೆಲವು ಸಾವಿರ ಕೈಗಳು ಸೇರಿದರೇ ಎಂತಹ ಕೆಲಸವನ್ನಾದರೂ ಮಾಡಬಲ್ಲವು. ಎಂತಹ ವಿನಾಶವನ್ನಾದರೂ ಸೃಷ್ಠಿಸಬಲ್ಲವು. ಆಕಾಶದಲ್ಲಿ ಕೆಲವು ಲಕ್ಷಗಳ ಮೀನುಗಳನ್ನು ಇಟ್ಟುಕೊಂಡು ಕೆಲವು ದಿನಗಳು ಪೋಷಿಸಿ ನಂತರ ಒಂದು ಮೀನು ಸಹ

ಕೆಳಗೆ ಬಿದ್ದು ಸತ್ತುಹೋಗದಂತೆ ಬದುಕಿರುವ ಮೀನುಗಳನ್ನು ಚಿಕ್ಕ ಪೆಟ್ಟು ಸಹ ಬೀಳದಂತೆ ತಮ್ಮ ಕೈಗಳಿಂದ ಭೂಮಿಮೇಲೆ ಬಿಡುತ್ತವೆ. ಮೀನುಗಳು ಆಕಾಶದಿಂದ ಮಳೆಯಲ್ಲಿ ಕೆಳಗೆಬಿದ್ದಂತೆ ಕಾಣಿಸಿದರೂ ಆಕಾಶ ಕೈಗಳು ಭೂಮಿಗೆ ಅಡಿ ಎತ್ತರದಲ್ಲಿ ಬಿಡುತ್ತಿವೆ. ಹಾಗೆಯೇ ಆಲಿಕಲ್ಲಿನ ಮಳೆ ಬಿದ್ದಾಗ ಚಿಕ್ಕ ಚಿಕ್ಕ ಐಸ್ ತುಣುಕುಗಳನ್ನು ಮೇಲಿಂದಾದರೂ ಬೀಳಿಸುತ್ತವೆ. ಕೆಳಗಿನಿಂದಾದರೂ ಬಿಡುತ್ತವೆ. ಕೆಲವು ಕಡೆ ಮೇಲಿಂದ ವೇಗವಾಗಿ ಬೀಸಿದ ಆಲಿಕಲ್ಲುಗಳಿಂದ ಹಸಿ ಬಾಳೆ ಕಾಯಿಗಳ ಗೊನೆಗಳಿಗೆ ರಂಧ್ರಗಳು ಬಿದ್ದಿರುವುದು ಸಹ ನೋಡಿದ್ದೇವೆ. ಮೇಘಗಳು ಅಂದುಕೊಂಡರೇ ಏನಾದರೂ ಮಾಡಬಲ್ಲವು. ಗತದಲ್ಲಿ ಮೇಘಗಳನ್ನು ಕುರಿತು ಸ್ವಲ್ಪ ಮಟ್ಟಿಗೆ ಬರೆದಿಟ್ಟಿದ್ದೇವೆ.

ಸಮುದ್ರದ ನೀರನ್ನು ಗ್ರಹಿಸಿದ ಮೇಘವು ಒಂದು ದಿನದಿಂದ ಕೆಲವು ತಿಂಗಳವರೆಗಾದರೂ ತನ್ನಲ್ಲಿಯೇ ನೀರನ್ನು ಕಾಣಿಸದಂತೆ ಅದೃಶ್ಯರೂಪದಲ್ಲಿ ಇಟ್ಟುಕೊಳ್ಳುತ್ತವೆ. ಯಾವಾಗ ಅಗತ್ಯವಾದರೇ, ಎಲ್ಲಿ ಅಗತ್ಯವಾದರೇ ಅಲ್ಲಿ ತನ್ನಲ್ಲಿರುವ ನೀರನ್ನು ಮಳೆ ರೂಪದಲ್ಲಿ ಬಿಡುತ್ತದೆ. ಸಮುದ್ರದಿಂದ ತೆಗೆದುಕೊಂಡಾಗ ಮೇಘವು ಉಪ್ಪುನೀರನ್ನು ತೆಗೆದುಕೊಂಡಿರುತ್ತದೆ. ಉಪ್ಪು ನೀರು ತೆಗೆದುಕೊಂಡ ಮೇಘ ಪೂರ್ತಿ ಅದೃಶ್ಯವಾಗಿ ಹೋಗುತ್ತದೆ. ಅದೃಶ್ಯರೂಪದಲ್ಲಿರುವ ಮೇಘ ತನ್ನಲ್ಲಿರುವ ನೀರಿನಲ್ಲಿನ ಉಪ್ಪನ್ನು ನೀರಿನಿಂದ ಬೇರ್ಪಡಿಸುತ್ತದೆ. ನೀರಿನಲ್ಲಿರುವ ಉಪ್ಪನ್ನು ನೀರಿನಿಂದ ಬೇರ್ಪಡಿಸಿ ಹೊರಗೆ ಬಂದಿರುವ ಉಪ್ಪನ್ನು ಅದೃಶ್ಯ ರೂಪದಲ್ಲಿಯೇ ಪುನಃ ಸಮುದ್ರದಲ್ಲಿ ಬಿಟ್ಟು ಹಾಕುತ್ತಿದೆ. ಈ ವಿಧವಾಗಿ ಸಮುದ್ರದಿಂದ ಬಂದಿರುವ ಉಪ್ಪು ಪುನಃ ಸಮುದ್ರದಲ್ಲಿ ಬೆರೆತುಹೋಗುತ್ತಿದೆ. ಉಪ್ಪಿನಿಂದ ಬೇರ್ಪಟ್ಟ ಒಳ್ಳೆಯ ನೀರನ್ನು ಮೇಘವು ಮಳೆರೂಪದಲ್ಲಿ ಸುರಿಸುತ್ತಿದೆ. ಮೊದಲು ಸಮುದ್ರದಿಂದ ಬಂದಿರುವ ಉಪ್ಪುನೀರು ಮೇಘಗಳಲ್ಲಿ ಅದೃಶ್ಯವಾಗಿ ನೀರಿನಿಂದ ಬೇರ್ಪಡಿಸಲ್ಪಟ್ಟು ಉಪ್ಪು ಸಮುದ್ರದಲ್ಲಿ ಬಿದ್ದಾಗ ನೀರು ಭೂಮಿ ಮೇಲೆ ಮಳೆರೂಪದಲ್ಲಿ ಬೀಳುತ್ತಿದೆ. ಈ ವಿಧವಾಗಿ ಮೇಘಗಳು ಕೆಲಸ ಮಾಡುತ್ತಿರುವಾಗ ಭೂಮಿಮೇಲೆ ಒಳ್ಳೆಯ ನೀರು ಮಳೆ ರೂಪದಲ್ಲಿ ಬೀಳುತ್ತಿದೆ.

**20) ಪ್ರಶ್ನೆ :– ಭೂಮಿ ಎನ್ನುವುದು ಒಂದು ಜೀವಿ (ಒಂದು ಭೂತ) ಎಂದು ಅನ್ನುತ್ತಿದ್ದಾರೆ ಅಲ್ಲವೆ! ಮತ್ತೆ ಮನುಷ್ಯರ, ಪ್ರಾಣಿಗಳ ಮಲಮೂತ್ರಗಳನ್ನು ಭರಿಸುವುದಕ್ಕೆ ಅದರ ಕರ್ಮವೆಂದು ಅಂದುಕೊಳ್ಳೋಣವಾ?**

**ಉತ್ತರ :–** ಮಲಮೂತ್ರಗಳು ಮನುಷ್ಯರಿಗೆ ಅಸಹ್ಯವಾಗಿ ಇದ್ದರೂ ಹಂದಿಗಳಿಗೆ ಆನಂದವಾಗಿ ಇರುವುದು ತಿಳಿದ ವಿಷಯವೇ. ಹಾಗೆಯೇ ನಿನಗೆ ಅಸಹ್ಯವಾಗಿ ಇರುವ ಮಲಮೂತ್ರಗಳು ಭೂಮಿಗೂ ಸಹ ಅಸಹ್ಯವಾಗಿ ಇರುತ್ತದೆಂದು ಏಕೆ ಅಂದುಕೊಳ್ಳಬೇಕು? ಭೂಮಿಗೆ ಮನುಷ್ಯರ, ಪ್ರಾಣಿಗಳ ಮಲಮೂತ್ರಗಳು ಗೊಬ್ಬರಗಳಾಗಿ ಉಪಯೋಗಪಡುತ್ತಿವೆ. ಗೊಬ್ಬರಗಳು ಹಾಕಿರುವ ಭೂಮಿ ಫಲವತ್ತಾಗಿರುತ್ತದೆಂದು ಅನ್ನುವುದನ್ನು ಕೇಳಿರುತ್ತೇವೆ. ಮಲಮೂತ್ರಗಳ ಗೊಬ್ಬರ ಭೂಮಿಗೆ ಒಳ್ಳೆಯ ಬಲವಾದ ಪೋಷಕ ಪದಾರ್ಥಗಳಾಗಿದ್ದು ಅಂದರೆ ಆಹಾರಪದಾರ್ಥಗಳಾಗಿದ್ದು, ಅದರಲ್ಲಿನ ಪೋಷಕಗಳಿಂದ ನೆಲ ಬಲವಾಗಿರುವು ದೆಂದು ಅನಿಸಿಕೊಳ್ಳುತ್ತಿದೆಯೆಂದರೇ ಭೂಮಿಗೆ ಮಲಮೂತ್ರಗಳು ಸರಿಹೋಗದ ಪದಾರ್ಥಗಳಾಗಿ ಏಕೆ ಅಂದುಕೊಳ್ಳಬೇಕು? ಭೂಮಿಗೆ ಸರಿಹೋಗುವ ಒಳ್ಳೆಯ ಆಹಾರಗಳೆಂದು ಏಕೆ ಅಂದುಕೊಳ್ಳಬಾರದು? ನಿನಗೆ ಸರಿಹೋಗದಷ್ಟು ಮಾತ್ರಕ್ಕೆ ಭೂಮಿಗೆ ಸರಿಹೋಗುವುದಿಲ್ಲ ಎಂದು ಏಕೆ ಅಂದುಕೊಳ್ಳಬೇಕು? ನಮಗೆ ಕೊಳೆತು ನಾರುವ ಪದಾರ್ಥಗಳು ಇತರೆ ಪ್ರಾಣಿಗಳಿಗೆ ಆನಂದವಾಗಿ ಇರುವಂತೆ, ನಮಗೆ ಅಸಹ್ಯವಾಗಿ ಇರುವವು ಭೂಮಿಗೆ ಬಲವಾದ ಪೋಷಕ ಪದಾರ್ಥಗಳಾಗಿ ಇವೆಯೆಂದು ತಿಳಿಯಬೇಕು.

**21. ಪ್ರಶ್ನೆ :– ಭೂಮಿ ತಿರುಗುವುದಕ್ಕೆ ಸೆಂಟ್ರೀಫ್ಯೂಗಲ್, ಸೆಂಟ್ರಿಪೆಟಲ್ ಫೋರ್ಸ್ ಕಾರಣವೆಂದು ನಮ್ಮ ಸೈನ್ಸ್ ಹೇಳುತ್ತಿದೆ. ನೀವೇನೋ ಭೂಮಿ ಒಂದು ಭೂತ ಅದು ಆತ್ಮದ ಮೂಲಕ ತಿರುಗುತ್ತಿದೆಯೆಂದು ಹೇಳುತ್ತಿದ್ದೀರಿ? ಇದಕ್ಕೆ ನೀವೇ ನನ್ನುತ್ತೀರಾ?**

**ಉತ್ತರ :–** ಭೂಮಿ ಎನ್ನುವ ಜೀವಿಯು ಆಕಾಶವೆನ್ನುವ ಜೀವಿಯಲ್ಲಿ ಒಬ್ಬನಾಗಿ ಇದ್ದಾನೆ. ಹೊಟ್ಟೆಯಲ್ಲಿ ಹುಳ ಇರುವಾಗ ಅದು ಮನುಷ್ಯನಲ್ಲಿ ಇರುವುದೇ

ಆದರೂ ಹೊಟ್ಟೆಯಲ್ಲಿನ ಹುಳ ಬೇರೆ, ಹೊಟ್ಟೆ ಇರುವ ಮನುಷ್ಯ ಬೇರೆಯಾಗಿ ಇದ್ದಾರೆ. ಹಾಗೆಯೇ ಆಕಾಶ ವಿಶಾಲವಾದುದು, ಆಕಾಶದಲ್ಲಿ ಭೂಮಿ ತಿರುಗುತ್ತಿದೆ. ಆಕಾಶದಲ್ಲಿನ ಆತ್ಮ ಹೊರಗೆ ಸೈನ್ಸ್‌ಗೆ ಕಾಣಿಸುವಂತೆ ಸೆಂಟ್ರೀ ಫ್ಯೂಗಲ್, ಸೆಂಟ್ರಿ ಪೆಟಲ್ ಫೋರ್ಸ್‌ಗಳನ್ನು ಸೃಷ್ಠಿಸಿ ಭೂಮಿಯನ್ನು ತಿರುಗಿಸುತ್ತಿದೆ. ಆಕಾಶದಲ್ಲಿನ ಆತ್ಮದಿಂದ ತಯಾರಾದ ಎರಡು ಫೋರ್ಸ್‌ಗಳಿಂದ ಭೂಮಿ ತಿರುಗುತ್ತಿದೆ. ಭೂಮಿ ಶರೀರದಲ್ಲಿನ ಆತ್ಮ ತಿರುಗಿಸಲಿಲ್ಲ. ಆಕಾಶ ಆತ್ಮದಿಂದ ಭೂಮಿ ತಿರುಗಿಸಲ್ಪಡುತ್ತಿದೆ. ಭೂಮಿಯಲ್ಲಿಯೂ ಆತ್ಮವಿದೆ, ಆಕಾಶದಲ್ಲಿಯೂ ಆತ್ಮವಿದೆ. ಯಾವ ಆತ್ಮದಿಂದ ಭೂಮಿ ತಿರುಗುತ್ತಿದೆಯೆಂದು ಬಹಳ ಜನರಿಗೆ ತಿಳಿದಿಲ್ಲ. ಹೊರಗಿನ ಆತ್ಮ ಫೋರ್ಸ್‌ನಿಂದ ಭೂಮಿ ತಿರುಗಿಸಲ್ಪಡುತ್ತಿದೆ ಆದರೇ ಭೂಮಿ ತನಗೆ ತಾನಾಗಿ ತಿರುಗುವುದಿಲ್ಲ.

**22) ಪ್ರಶ್ನೆ :– ದೇವರು ಎನ್ನುವವನು ಅಣುಅಣುವಿನಲ್ಲೂ ಇರುವಂತೆ, ದೇವರು ಸೂಜಿಮೊನೆಯಷ್ಟು ಸಹ ಜಾಗ ಖಾಲಿ ಇಲ್ಲದೆ ಎಲ್ಲಾಕಡೆ ವ್ಯಾಪಿಸಿದ್ದಾನೆಂದು ನೀವು ಹೇಳುತ್ತಿದ್ದೀರ. ಹಾಗಾದರೇ ಮಲಮೂತ್ರಗಳಲ್ಲಿ ಕೂಡಾ ದೇವರಿದ್ದಾನಾ? ನಿಮ್ಮ ಸೂತ್ರದ ಪ್ರಕಾರವಾದರೇ ಮಲದಲ್ಲಿ ಕೂಡಾ ದೇವರಿದ್ದಾನೆ ಎಂದು ನೀವನ್ನಬಹುದು. ಅದರಿಂದ, ನೀವು ಹಾಗೆ ಹೇಳುವುದರಿಂದ ನಿಮ್ಮ ದೇವರನ್ನು ಅಪವಿತ್ರ ವಸ್ತುಗಳಲ್ಲಿ ಇರುವಂತೆ ಹೇಳಿ, ನೀವೇ ನಿಮ್ಮ ದೇವರನ್ನು ಅವಮಾನಿಸಿ ದಂತೆ ಅಲ್ಲವೆ!**

**ಉತ್ತರ :–** ಮನುಷ್ಯನಿಗೆ ಪವಿತ್ರತೆ, ಅಪವಿತ್ರತೆ ಇರುತ್ತದೆ. ಹಾಗೆಯೇ ಶುದ್ಧ, ಅಶುದ್ಧ ಇರುತ್ತದೆ. ಇವೇ ವಸ್ತುಗಳು ದೇವರಿಗೆ ಎಲ್ಲಾ ಸಮಾನವಾಗಿಯೇ ಇರುತ್ತವೆ. ಒಂದು ಒಳ್ಳೆಯದೆಂದಾಗಲೀ, ಮತ್ತೊಂದು ಕೆಟ್ಟದೆಂದಾಗಲೀ ಏನೂ ಇರುವುದಿಲ್ಲ. ದೇವರ ಬಗ್ಗೆ ಎಲ್ಲಾ ಸಮಾನವಾಗಿ ಇರುತ್ತವೆ. ಮನುಷ್ಯ ತನ್ನ ಬಗ್ಗೆ ಪವಿತ್ರತೆ ಅಪವಿತ್ರತೆ ಎಂದುಕೊಂಡಂತೆ ದೇವರ ಬಗ್ಗೆ ಅಂದುಕೊಳ್ಳಬಾರದು. ಅಗ್ನಿ ಕಣದಲ್ಲಿ, ಬಂಗಾರ ಅಣುವಿನಲ್ಲಿ, ಧೂಳಿನಕಣದಲ್ಲಿ, ಮನುಷ್ಯನ ಶರೀರ ಕಣದಲ್ಲಿ, ಹಾಲಿನಲ್ಲಿ, ಸಗಣಿಯಲ್ಲಿ ದೇವರಿಗೆ ಸಮ ಭಾವವಿರುತ್ತದೆ. ಮನುಷ್ಯನಿಗಿರುವ ಭಾವನೆಯ ಪ್ರಕಾರ ದೇವರ ಭಾವನೆ ಇರುವುದಿಲ್ಲ.

**23) ಪ್ರಶ್ನೆ :– ತಿಂದ ಆಹಾರವೆಲ್ಲಾ ಜೀರ್ಣವಾಗಿ, ಪೋಷಣೆ ನಡೆದು ಶಕ್ತಿಯಾಗಿ ಬದಲಾಗಬಹುದಲ್ಲವೆ! ಆತ್ಮವಾಗಿ ಇರುವುದೇನೋ ಮಾನವ ಶರೀರದಲ್ಲಿ ಅಶುದ್ಧವನ್ನು ಏಕೆ ತಯಾರಿಸಬೇಕು? ಆ ವ್ಯವಸ್ಥೆಯನ್ನು ನಿಲ್ಲಿಸಬಹುದಲ್ಲವೆ?**

**ಉತ್ತರ :–** ಕಟ್ಟಿಗೆಯನ್ನು ಸುಟ್ಟರೆ ಅದು ಸುಟ್ಟು ಹೋಗಿ ಕೊನೆಗೆ ಇದ್ದಿಲು ಬೂದಿ ಉಳಿದುಹೋಗುತ್ತದೆ. ಹಾಗೆಯೇ ಶರೀರದಲ್ಲಿ ಜಠರಾಗ್ನಿಯಿಂದ ಸುಟ್ಟುಹೋಗುವ ಆಹಾರಕ್ಕೂ ಸಹ ಇದ್ದಿಲು ಬೂದಿಯಂತಹ ಕಲುಷಿತ ಏರ್ಪಡುತ್ತದೆ. ಯಾವ ವಸ್ತುವಾದರೂ ಇದಕ್ಕೂ ಮೊದಲು ಇದು ಇದೆ ಎನ್ನುವುದಕ್ಕೆ ಗುರುತಿಗಾಗಿ ಅವುಗಳ ಅವಶೇಷ ಉಳಿಯುತ್ತದೆ. ಯಜ್ಞ ಮಾಡಿದರೆ ಯಜ್ಞ ಭಸ್ಮ ಉಳಿಯುತ್ತದೆ. ಶವವನ್ನು ಸುಟ್ಟರೆ ಚಿತಾಭಸ್ಮ ಉಳಿಯುತ್ತದೆ. ಯಜ್ಞ ಭಸ್ಮವನ್ನು ಲ್ಯಾಬ್‌ನಲ್ಲಿ ಪರೀಕ್ಷಿಸಿದರೆ ಅದರಲ್ಲಿ ಬೆರೆತ ಕಣಗಳನ್ನನುಸರಿಸಿ ಯಜ್ಞ ಭಸ್ಮವೆಂದು ಹೇಳಬಹುದು. ಹಾಗೆಯೇ ಚಿತಾ ಭಸ್ಮವನ್ನು ಪರೀಕ್ಷಿಸಿ ಇದು ಚಿತಾ ಭಸ್ಮವೆಂದು ಹೇಳಬಹುದು. ಆಹಾರ ಜೀರ್ಣವಾದ ನಂತರ ಮಲವನ್ನು ಪರೀಕ್ಷಿಸಿ ಆಹಾರದಲ್ಲಿ ವಿಷ ಬೆರೆತಿದೆಯೆಂದು ಹೇಳಬಹುದು. ತಿಂದ ಆಹಾರದ ಗುರುತಿಗಾಗಿ ಅವುಗಳ ಅವಶೇಷಗಳನ್ನು ನೋಡಿ ಇದು ಇಂತಹ ಆಹಾರವೆಂದು ಗುರುತಿಸಬಹುದು. ಹಾಗೆಯೇ ಒಬ್ಬ ಮನುಷ್ಯ ಭೂಮಿಮೇಲೆ ಹುಟ್ಟಿ ಸತ್ತುಹೋದರೂ, ಅವನ ಗುರುತಿಗಾಗಿ ಅವನ ಒಳ್ಳೆಯ ಕೆಡಕುಗಳು ಉಳಿದಿರುತ್ತವೆನ್ನುವ ಗುರುತಿಗಾಗಿ, ಆಹಾರ ಜೀರ್ಣ ಶೇಷವನ್ನು ದೇವರು ಉಳಿಸಿ ತೋರಿಸಿದ್ದಾನೆ.

**24) ಪ್ರಶ್ನೆ :– ಒಂದು ಸಲ ಯಾರೊಂದಿಗಾದರೂ ಮಾತನಾಡಿದ ಮಾತುಗಳು ಇದಕ್ಕೂ ಮೊದಲು ಯಾವಾಗಲೋ, ಎಲ್ಲೋ ಇಂತಹ ಸಂದರ್ಭ ಬಂದಂತೆ ಅನಿಸುತ್ತದೆ. ಆದರೆ ಅದು ಯಾವಾಗಲೂ ನಡೆಯಲಿಲ್ಲ. ಹಾಗೆ ಏಕೆ ಅನಿಸಿತು?**

**ಉತ್ತರ :–** ಆ ಭಾವ ಕೆಲವರಲ್ಲಿ ಅಪರೂಪವಾಗಿ ಬರುವುದು ನಡೆಯುತ್ತಿರುತ್ತದೆ. ಆದರೇ ಅದು ಎಂದಿಗೂ ನಡೆಯಲಿಲ್ಲವೆಂದು ತಿಳಿದರೂ, ಅದು ಈ ಜನ್ಮದಲ್ಲಿ

ನಡೆದಿರುವುದು ಅಲ್ಲ. ಹಿಂದಿನ ಜನ್ಮಗಳಲ್ಲಿ ಅದೇ ಮನುಷ್ಯನೊಂದಿಗೆ ನೀನು ಮಾತನಾಡಿದ ಸಂದರ್ಭ ನಡೆದಿರುತ್ತದೆ. ಆದ್ದರಿಂದ ಆ ವಿಧವಾಗಿ ಅನಿಸುತ್ತದೆ.

**25) ಪ್ರಶ್ನೆ :– ಹಾವಿಗೆ ಶ್ರವಣೇಂದ್ರಿಯಗಳು ಕಣ್ಣಿನಲ್ಲಿ ಇವೆಯೆಂದಿದ್ದೀರ. ಎಲ್ಲ ಹಾವುಗಳಿಗಾ? ಕೆಲವು ಹಾವುಗಳಳಿಗಾ? ಮತ್ತೆ ಉಳಿದ ಹಾವುಗಳು ಹೇಗೆ ಕೇಳುತ್ತವೆ? ಕಣ್ಣುಗಳೇ ಶ್ರವಣೇಂದ್ರಯಗಳಾಗಿ (ಕಿವಿಗಳಾಗಿ) ಇರುವ ಇನ್ನೂ ಕೆಲವು ಜೀವಿಗಳು ಇವೆಯಾ?**

**ಉತ್ತರ :–** ಹಾವುಗಳ ವಿಷಯ ಬಾಹ್ಯ ವಿಷಯವಾಗುತ್ತದೆ. ಆದ್ದರಿಂದ ಅವುಗಳ ವಿಷಯ ನನಗೆ ಪೂರ್ತಿಯಾಗಿ ತಿಳಿದಿಲ್ಲ. ಆದರೇ ನನಗೆ ತಿಳಿದಷ್ಟು ಮಟ್ಟಿಗೆ, ನಾನು ಕೇಳಿದಷ್ಟು ಮಟ್ಟಿಗೆ ವಿಷದ ಹಾವುಗಳಿಗೆ ಕಿವಿಗಳು ಇಲ್ಲವೆಂದು ಕೇಳಿದ್ದೇನೆ. **"**ಕಣ್ಣಿನಲ್ಲಿಯೇ ಆಲಿಸುವ ಶಕ್ತಿ ಇರುವುದರಿಂದ ಶಬ್ದ ಕೇಳಿಸಿದಾಗ ಹಾವಿಗೆ ಕಣ್ಣು ಕಾಣಿಸುವುದಿಲ್ಲ**"** ಎಂದು ಕೇಳಿದ್ದೇವೆ. ಆದ್ದರಿಂದ ವಿಷವಿರುವ ನಾಗರಹಾವನ್ನು ಆಡಿಸುವವರು ತಲೆಯನ್ನು ಅಲ್ಲಾಡಿಸುತ್ತಾ, ಶಬ್ದ ಮಾಡುತ್ತಾ ಅದಕ್ಕೆ ಕಣ್ಣು ಕಾಣಿಸದಂತೆ ಮಾಡಿ ಹಾವುಗಳನ್ನು ಹಿಡಿಯುತ್ತಿದ್ದಾರೆ. ಹಾಗೆ ಅವುಗಳನ್ನು ಆಡಿಸುತ್ತಿರುವರು. ಶಬ್ಧವನ್ನನುಸರಿಸಿ ಹಾವು ತಲೆ ತಿರುಗಿಸುತ್ತಿರುತ್ತದೆ. ಅದು ಒಂದು ಆಟದಂತೆ ಹಾವಾಡಿಗರು ತಲೆಯನ್ನು ತೂಗಿಸುತ್ತಾ ತೋರಿಸುತ್ತಿರುವರು. ಹಾವಿಗೆ ಕಣ್ಣಿನಲ್ಲಿಯೇ ಕೇಳುವ ಶಕ್ತಿ ಇರುವುದರಿಂದ ಕೀಟಗಳು ಶಬ್ಧ ಮಾಡುತ್ತಾ ಹಾವುಗಳನ್ನು ಪ್ರಸ್ತುತ ಕುರುಡಾಗಿ ಇರುವಂತೆ ಮಾಡಿ ತಪ್ಪಿಸಿಕೊಳ್ಳುತ್ತವೆ. ಆದ್ದರಿಂದ ಕೆಲವು ಕೀಟಕಗಳಿಗೆ, ಪಕ್ಷಿಗಳಿಗೆ ಶಬ್ದ ಹೆಚ್ಚಿಗೆ ಮಾಡುವಂತೆ ಅವುಗಳ ಕಂಠಗಳು ತಯಾರಾಗಿವೆ. **"ಪಕ್ಷಿ ಚಿಕ್ಕದು ಕಂಠ ದೊಡ್ಡದು"** ಎಂದು ಹಿರಿಯರು ಹೇಳುವುದು ಸಹಜವೇ. ಹಾವುಗಳಿಂದ ತಪ್ಪಿಸಿಕೊಳ್ಳುವುದಕ್ಕೇ ಪಕ್ಷಿಗಳ ಧ್ವನಿಯನ್ನು ಘನವಾಗಿ ಇರುವಂತೆ ದೇವರು ಮಾಡಿದ್ದಾನೆ. ಕೆಲವು ದೊಡ್ಡ ಹಾವುಗಳಾದ ಅನಕೊಂಡ, ಹೆಬ್ಬಾವುಗಳಿಗೆ ಕಿವಿಗಳು ಬೇರೆಯಾಗಿ ಇರುತ್ತವೆಂದು ಕೇಳಿದ್ದೇವೆ. ಆದ್ದರಿಂದ ಅವು ಎಷ್ಟು ಶಬ್ದವಿದ್ದರೂ ನೋಡಬಲ್ಲವು. ಉಳಿದ ಎಲ್ಲಾ ಜೀವಿಗಳಿಗೆ ಐದು ಕರ್ಮೇಂದ್ರಿಯ ಗಳು, ಐದು ಜ್ಞಾನೇಂದ್ರಿಯ ಗಳು ಸಮಾನವಾಗಿ ಇವೆ.

**26) ಪ್ರಶ್ನೆ :– ಪುಣ್ಯ ಕ್ಷೇತ್ರಗಳಿಗೆ ಹೋಗುತ್ತಿರುವವರು ರಸ್ತೆ ಅಪಘಾತಗಳಲ್ಲಿ, ಉಳಿದ ಪ್ರಮಾದಗಳಲ್ಲಿ ಸತ್ತುಹೋಗುತ್ತಿದ್ದಾರಲ್ಲವೆ! ಮತ್ತೆ ಅವರನ್ನು ದೇವರು ಏಕೆ ರಕ್ಷಿಸಲಿಲ್ಲ?**

**ಉತ್ತರ :–** ಪುಣ್ಯ ಕ್ಷೇತ್ರಗಳಿಗೆ ಹೋಗುವವರು ಎಲ್ಲರೂ ಅಲ್ಲದೆ ಕೆಲವರು ಪ್ರಮಾದಗಳಿಗೆ ಗುರಿಯಾಗುವುದು ವಾಸ್ತವ. ಪುಣ್ಯ ಕ್ಷೇತ್ರಗಳಿಗೆ ಹೋದಾಗ ಅದಕ್ಕೆ ತಕ್ಕ ಪುಣ್ಯ ಇರದೇ ಹೋಗುವುದರಿಂದ, ಪಾಪ ಜಾರಿಗೆ ಬಂದಿರುವು ದರಿಂದ ಮನುಷ್ಯರಿಗೆ ಪ್ರಮಾದಗಳು ನಡೆಯುತ್ತಿವೆ. ದೇವರು ಎಂದಿಗಾಗಲೀ, ಎಲ್ಲೇಯಾಗಲೀ ರಕ್ಷಿಸುವವನು ಅಲ್ಲ, ಹಾಗೆಯೇ ಶಿಕ್ಷಿಸುವವನು ಅಲ್ಲ ಮನುಷ್ಯರು ಮಾಡಿಕೊಂಡ ಪಾಪಪುಣ್ಯಗಳಿಂದ ಪ್ರಮಾದಗಳು ನಡೆಯುತ್ತಿರುತ್ತವೆ. ದೇವರು ಸಾಕ್ಷಿಯಾಗಿ ನೋಡುವವನೇ ಹೊರತು ಏನೂ ಮಾಡುವವನು ಅಲ್ಲ. ಪ್ರಪಂಚ ಕೆಲಸಗಳೊಂದಿಗೆ ದೇವರಿಗೆ ಸಂಬಂಧವಿಲ್ಲ. ಆದ್ದರಿಂದ ಮನುಷ್ಯನೊಂದರ ಸುಖ ದುಃಖಗಳನ್ನು ದೇವರು ವಿಧಿಸುವವನಲ್ಲ. ಕರ್ಮವನ್ನನುಸರಿಸಿ **ಆತ್ಮವೇ** ಎಲ್ಲವೂ ಮಾಡುತ್ತಿರುತ್ತದೆ, ಜೀವಾತ್ಮ ಅನುಭವಿಸುತ್ತಿರುತ್ತಾನೆ.

**27) ಪ್ರಶ್ನೆ :– ದೇವರು ಎನ್ನುವುದು ವಿಶ್ವಾಸವಾ? ಮೂಢನಂಬಿಕೆಯಾ?**

**ಉತ್ತರ :–** ದೇವರು ಎನ್ನುವುದು ವಿಶ್ವಾಸ ಮಾತ್ರವೇ. ದೇವರನ್ನು ನೋಡಿದ್ದೇ ನೆಂದು ಹೇಳುವುದು ಮೂಢನಂಬಿಕೆಯಾಗುತ್ತದೆ. ದೇವರು ಕಾಣಿಸುತ್ತಾನೆಂದು, ಮಾತನಾಡುತ್ತಾನೆಂದು ಅಂದುಕೊಳ್ಳುವುದು ಮೂಢನಂಬಿಕೆ.

**28) ಪ್ರಶ್ನೆ :– ಭಗವದ್ಗೀತೆ ನನ್ನದೇ ಸರಿಯಾದ ಭಾವನೆ ಇರುವುದು ಎನ್ನುತ್ತಿದ್ದೀರ. ನೀವು ಸಂಸ್ಕೃತ ಪಂಡಿತರಾ?**

**ಉತ್ತರ :–** ಭಗವದ್ಗೀತೆಯನ್ನು ಜೀವಿಯಾಗಿರುವ ನಾನು ಬರೆಯಲಿಲ್ಲ. ನಾನು ಮೌನವಾಗಿ ಇರುವಾಗ ಬರೆಯುವವನೇ ಬರೆದಿದ್ದಾನೆ. ಆತನು ಪಂಡಿತರನ್ನು ಮೀರಿದ ಪಂಡಿತನು. ಆದ್ದರಿಂದ ನಮ್ಮಿಂದ ಬಂದಿರುವ ಭಗವದ್ಗೀತೆ ಪ್ರತ್ಯೇಕವಾಗಿ ಕಾಣಿಸುತ್ತಿರುತ್ತದೆ. ನಾವು ಹೇಳಿದರೂ, ಹೇಳದೇ ಹೋದರೂ ನಮ್ಮ ತ್ರೈತ ಸಿದ್ಧಾಂತ ಭಗವದ್ಗೀತೆ ಎಲ್ಲರಿಗೂ ದೊಡ್ಡದಾಗಿಯೇ ಕಾಣಿಸುತ್ತಿದೆ.

**29) ಪ್ರಶ್ನೆ :– ಜಿರಳೆಗೆ ತಲೆ ತೆಗೆದರೂ ಹತ್ತು ದಿನಗಳು ಅದರ ಶರೀರ ಕೆಲಸ ಮಾಡುತ್ತಿರುತ್ತದೆ. ಅಷ್ಟು ದಿನಗಳು ಆತ್ಮ ಸ್ಥಾನವಾದ ತನ್ನ ತಲೆ ಇಲ್ಲದೆ ಹೇಗೆ ಬದುಕುತ್ತದೆ?**

**ಉತ್ತರ :–** ಜಿರಳೆ ತಲೆ ಹೋದರೂ ಬದುಕುವುದು ವಾಸ್ತವ! ಆದರೇ ಆತ್ಮ ಶಾಶ್ವತ ಸ್ಥಾನ ತಲೆ ಎಂದು ಅಂದುಕೊಳ್ಳಬಾರದು. ಏಳು ನಾಡೀ ಕೇಂದ್ರಗಳಲ್ಲಿ ತಲೆ ಸ್ವಸ್ಥಾನವೆಂದು ಹೇಳಿದರೂ ಆತ್ಮ ತನ್ನ ಸ್ಥಾನವನ್ನು ಉಳಿದ ಆರು ಸ್ಥಾನಗಳಲ್ಲಿ ಯಾವ ಸ್ಥಾನದೊಳಗಾದರೂ ಬದಲಾಯಿಸಿಕೊಳ್ಳಬಹುದು. ಒಂದು ಜಿರಳೆ ಶರೀರದಲ್ಲಿಯೇ ಹಾಗೆ ಆತ್ಮ ಬದಲಾಯಿಸಿಕೊಳ್ಳುವುದರಿಂದ ಜಿರಳೆಯೇ ನಮಗೆ ಕಾಣಿಸುತ್ತಿದೆ. ಈ ಮಧ್ಯೆ ಸುಮಾರು ವರ್ಷದ ಕೆಳಗೆ ಒಂದು ಕೋಳಿಗೆ ತಲೆ ಕೊಯ್ದುಹಾಕಿದರೆ ಅದು ರುಂಡದಿಂದಲೇ ಬದುಕಿದ್ದಂತೆ ನ್ಯೂಸ್ ಪೇಪರ್‌ನಲ್ಲಿ ಗೊಂಬೆಯೊಂದಿಗೆ ಸಹ ವಾರ್ತೆ ಬಂದಿದೆ. ಅಲ್ಲಿ ಕೋಳಿ ಶರೀರದಲ್ಲಿಯೂ ಸಹ ಆತ್ಮ ತಲೆಯನ್ನು ಬಿಟ್ಟು ಉಳಿದ 6 ನೆ ಸ್ಥಾನದೊಳಗೆ ತನ್ನ ಸ್ಥಾನವನ್ನು ಬದಲಾಯಿಸಿಕೊಂಡಂತೆ ಅಲ್ಲವೆ! ಇನ್ನೂ ಆಳವಾಗಿ ವಿಷಯವನ್ನು ತಿಳಿಯುವುದಾದರೆ **ಆತ್ಮ**ಕ್ಕೆ ಶರೀರದಲ್ಲಿ ಸ್ವಂತ ಸ್ಥಾನವೆನ್ನುವುದು ಯಾವುದು ಇಲ್ಲವೆಂದು, ಇರುವುದು **ಜೀವಾತ್ಮ**ನಿಗೇ ಎಂದು ತಿಳಿಯುತ್ತಿದೆ. ಜೀವಿಯೊಂದಿಗೆ ಆತ್ಮ ಕದಲಿ ಹೋಗಬೇಕಾಗಿರುವುದರಿಂದ ಆತ್ಮವೂ ಸಹ ಜೀವಾತ್ಮನ ಹಾಗೆ ಏಳನೇ ಸ್ಥಾನದಲ್ಲಿಯೇ ಇದೆಯೆಂದು ಅಂದುಕೊಳ್ಳುವುದು ನಡೆಯುತ್ತಿದೆ. ಅಷ್ಟೇ ಹೊರತು ಆತ್ಮಕ್ಕೆ ಸ್ವಂತ ಸ್ಥಾನ ಎಲ್ಲಿಯೂ ಇಲ್ಲ. ಜೀವಿಯು ಹುಟ್ಟಿದಾಗಿನಿಂದ ಆತ್ಮ ಶರೀರವೆಲ್ಲಾ ವ್ಯಾಪಿಸಿದೆ. ಆತ್ಮಕ್ಕೆ ಏಳು ನಾಡೀ ಸ್ಥಾನಗಳು ಇವೆ. ಲೆಕ್ಕಾಚಾರಕ್ಕೆ ಮೇಲಿನ ನಾಡೀ ಕೇಂದ್ರದಿಂದ ಆತ್ಮ ಶರೀರದಲ್ಲಿ ಶ್ವಾಸವನ್ನು ಆಡಿಸುವ ಕೆಲಸವನ್ನು ಮಾಡುವುದರಿಂದ ಮೊದಲ ಸ್ಥಾನವನ್ನು ಆತ್ಮ ಸ್ವಂತ ಸ್ಥಾನವೆಂದಿದ್ದಾರೆ ಹೊರತು, ಮೇಲಿನ ಸ್ಥಾನವೇ ಸ್ವಂತ ಸ್ಥಾನವೆನ್ನುವುದಕ್ಕೆ ಧೃಡವಾದ ಆಧಾರ ಯಾವುದೂ ಇಲ್ಲ. ಜೀವಿಗೆ ಪಕ್ಕದವನೆಂದು ಆತ್ಮವನ್ನು ಹೇಳುವುದರಿಂದ ಸಹ ಜೀವಿಯಿರುವ ಕಡೆಯೇ ಆತ್ಮ ಇರುತ್ತದೆನ್ನುವ

ಉದ್ದೇಶದಿಂದ ಎಲ್ಲರೂ ಆತ್ಮ ಸ್ಥಾನ ಮೇಲೆ ಎಂದು ಹೇಳುತ್ತಿದ್ದಾರೆ ಹೊರತು ಮತ್ತೇನು ಇಲ್ಲ. ಆತ್ಮಕ್ಕೆ ಒಂದು ಸ್ಥಾನವಂತೂ ಇಲ್ಲ.

**30) ಪ್ರಶ್ನೆ :– ಕೋಮಾದಲ್ಲಿ ಇರುವ ವ್ಯಕ್ತಿ ಯಾರನ್ನೂ ಗುರುತು ಹಿಡಿಯುವುದಿಲ್ಲ. ಹಾಗೆ ಗುರುತು ಹಿಡಿಯದಂತಿರುವುದಕ್ಕೆ ಕಾರಣವೇನು? ಆತನಲ್ಲಿ ಆತ್ಮ ಯಾವುದರಲ್ಲಿ ಪ್ರಸಾರವಾಗಲಿಲ್ಲ?**

**ಉತ್ತರ :–** ಕೋಮಾದಲ್ಲಿರುವ ವ್ಯಕ್ತಿಗೆ ಆತ್ಮ ಎಲ್ಲ ವಿಧಗಳಲ್ಲಿ ಸಕ್ರಮವಾಗಿಯೇ ಇದೆ. ಶರೀರವೆಲ್ಲಾ ಸಕ್ರಮವಾಗಿಯೇ ವ್ಯಾಪಿಸಿದೆ. ಆದರೇ ಬುದ್ಧಿ ಒಂದು ಕೆಲಸ ಮಾಡದ ಸ್ಥಿತಿಯಲ್ಲಿ ಇರುವುದರಿಂದ ಹೊರಗಿನ ವಿಷಯಗಳನ್ನು ಇಂದ್ರಿಯಗಳು ತಿಳಿಸುತ್ತಿದ್ದರೂ ಬುದ್ಧಿ ಗ್ರಹಿಸಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಆತ್ಮವೇ ಅದೇ ಕೆಲಸವಾಗಿ ಬುದ್ಧಿಯನ್ನು ಕೆಲಸಮಾಡಲು ಬಿಡುವುದಿಲ್ಲ. ಶರೀರದಲ್ಲಿ ಎಲ್ಲಾ ಭಾಗಗಳನ್ನು ನಡೆಸುವುದು ಆತ್ಮ. ಆತ್ಮ ಬುದ್ಧಿಯನ್ನು ನಡೆಸದಂತಿರುವುದರಿಂದ ಮನುಷ್ಯ ಹೊರಗಿನ ಸ್ಥಿತಿಯನ್ನು ಗ್ರಹಿಸಿಕೊಳ್ಳುವುದಿಲ್ಲ. ಹಾಗೆಯೇ ಒಳಗಿನ ಸ್ಥಿತಿಯನ್ನು ಸಹ ಬುದ್ಧಿ ತಿಳಿಸುವುದಿಲ್ಲ. ಶರೀರದಲ್ಲಿ ಬುದ್ಧಿ ಕೆಲಸ ಮಾಡದಂತಿರುವುದರಿಂದ ಮನುಷ್ಯ ಕೋಮಾದಲ್ಲಿ ಇರುತ್ತಿದ್ದಾನೆ.

**31) ಪ್ರಶ್ನೆ :– ಮನುಷ್ಯ ಸತ್ತುಹೋದರೆ ಕಾಲ ಮರಣವಾ? ಅಕಾಲ ಮರಣವಾ ಎಂದು ತಿಳಿದುಕೊಳ್ಳುವುದು ಹೇಗೆ?**

**ಉತ್ತರ :–** ಮನುಷ್ಯ ಸತ್ತುಹೋದಾಗ ಅವಸಾನ ದಶೆ ಏರ್ಪಟ್ಟು ಮರಣಿಸಿದ್ದರೆ ಕಾಲಮರಣವಾಗುತ್ತದೆ. ಅವಸಾನ ದಶೆ ಏರ್ಪಡದೆ ಅಕಸ್ಮಾತ್ತಾಗಿ ಮರಣಿಸಿದವನು ಅಕಾಲಮರಣವನ್ನು ಹೊಂದಿದಂತೆ ಲೆಕ್ಕಿಸಬೇಕು.

**32) ಪ್ರಶ್ನೆ :– ಪ್ರಬೋಧಾಶ್ರಮದಲ್ಲಿರುವ ಶಿಷ್ಯ ಗಣ ಎಷ್ಟು ಜನರಿದ್ದಾರೆ?**

**ಉತ್ತರ :–** ಕಾಣಿಸುವವರು ಸುಮಾರು 200 ಮಂದಿ ನಿವಾಸವಿರುತ್ತಿದ್ದಾರೆ. ಕಾಣಿಸದವರು ಸುಮಾರು 500 ಮಂದಿ ಇರುತ್ತಾರೆ. ಹುಣ್ಣಿಮೆ, ಅಮಾವಾಸ್ಯೆ

ದಿನಗಳಲ್ಲಾದರೆ ಕಾಣಿಸದವರು ಕೆಲವು ಸಾವಿರ ಮಂದಿ ಇರುತ್ತಾರೆ, ಕಾಣಿಸುವವರು ಕೆಲವು ಸಾವಿರ ಮಂದಿ ಬರುತ್ತಾರೆ.

**33) ಪ್ರಶ್ನೆ :– ಶ್ರೀ ಕೃಷ್ಣನನ್ನೇ ಜಗದ್ಗುರು ಎನ್ನುತ್ತಿದ್ದಾರೆ. ಹಾಗೆಯೇ ಪೀಠಾಧಿಪತಿ ಗಳನ್ನು ಸಹ ಜಗದ್ಗುರು ಎಂದು ಕರೆಯುತ್ತಿದ್ದಾರೆ. ಇದರ ಪ್ರಕಾರ ಜಗದ್ಗುರುಗಳು ಎಷ್ಟು ಮಂದಿಯಾದರೂ ಇರಬಹುದಾ?**

**ಉತ್ತರ :–** ಪ್ರಪಂಚದಲ್ಲಿ ಜಗದ್ಗುರು ಒಬ್ಬನೇ ಇರುತ್ತಾನೆ. ಅವನೇ ಭಗವಂತನು. ಪ್ರಪಂಚಕೆಲ್ಲದಕ್ಕೂ ಅನ್ವಯಿಸುವ ಬೋಧನೆಯನ್ನು ಹೇಳುವವನು ಜಗದ್ಗುರು. ಅಂದರೇ **ಪ್ರತಿ ಜೀವರಾಶಿಗೂ ಅನ್ವಯಿಸುವ ಬೋಧನೆಯನ್ನು ಹೇಳುವವನು ಜಗದ್ಗುರು.** ಶಿಷ್ಯರ ಸಂಖ್ಯೆಯನ್ನನುಸರಿಸಿ ಜಗದ್ಗುರು ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಭಗವಂತನಿಗೆ ಶಿಷ್ಯರಿರುವುದಿಲ್ಲ ಆದರೂ ಆತನು ಜಗದ್ಗುರುವೇ. ಹೇಳುವ ಬೋಧನೆಯನ್ನನುಸರಿಸಿ ಜಗದ್ಗುರು ಎಂದು ಹೇಳಬಹುದಾಗಲೀ, ಕೇಳುವ ಶಿಷ್ಯರ ಸಂಖ್ಯೆಯನ್ನನುಸರಿಸಿ ಜಗದ್ಗುರು ಎಂದು ಹೇಳಬಾರದು. ಶಂಕರಾಚಾರ್ಯರವರಿಗೆ ಶಿಷ್ಯರ ಸಂಖ್ಯೆ ಹೆಚ್ಚಾಗಿ ಇದೆಯೆಂದು ಜಗದ್ಗುರು ಶಂಕರಾಚಾರ್ಯ ಎಂದು ಕರೆದಿದ್ದಾರೆ. ಹಾಗೆ ಹೇಳುವುದು ತಪ್ಪು. ಎಲ್ಲಾ ಮತಗಳಿಗು ಅನ್ವಯಿಸುವ ಬೋಧನೆಯನ್ನು, ಎಲ್ಲಾ ಜೀವರಾಶಿಗಳಿಗು ಅನ್ವಯಿಸುವ ಬೋಧನೆಯನ್ನು ಹೇಳುವವನನ್ನೇ ಜಗದ್ಗುರು ಎನ್ನಬೇಕು. ಒಂದು ಮತಕ್ಕೆ ಹೇಳಿದ ಬೋಧನೆ ಇತರೆ ಮತಗಳಿಗೆ ಅನ್ವಯಿಸುತ್ತಿಲ್ಲ. ಹಾಗಿರುವಾಗ ಒಂದು ಮತದ ಗುರುವನ್ನು ಜಗದ್ಗುರು ಎಂದು ಹೇಳಬಾರದು.

**34) ಪ್ರಶ್ನೆ :– ಸೃಷ್ಠಿಯಲ್ಲಿ ಇಷ್ಟು ವಿಚ್ಛಿನ್ನತೆ ಏಕೆ ಇದ್ದಂತೆ?**

**ಉತ್ತರ :–** ಕರ್ಮವನ್ನನುಸರಿಸಿಯೇ ಮನುಷ್ಯರಲ್ಲಿ ವಿಚ್ಛಿನ್ನತೆ ಏರ್ಪಟ್ಟಿದೆ. ಕರ್ಮವನ್ನನುಸರಿಸಿ ಮನುಷ್ಯರ ಮಧ್ಯದಲ್ಲಿ ದ್ವೇಷಗಳು ಏರ್ಪಟ್ಟಿವೆ. ಮನುಷ್ಯರಲ್ಲಿ ಎಷ್ಟು ವಿಚ್ಛಿನ್ನತೆಗಳಿದ್ದರೂ ಅವೆಲ್ಲವೂ ಕರ್ಮವನ್ನನುಸರಿಸಿ ಏರ್ಪಟ್ಟಿರುವವೇ ಎಂದು ತಿಳಿಯಬೇಕು.

**35) ಪ್ರಶ್ನೆ :– ಸೂಕ್ಷ್ಮ ಶರೀರದಿಂದಿರುವ ಜೀವಿಯು ಬದುಕಿರುವವರ ಶರೀರದಲ್ಲಿ ಸೇರಿದಾಗ, ಶರೀರದಲ್ಲಿ ಯಾವುದೋ ಒಂದು ಕಡೆ ಇರುತ್ತಾನೆ. ಒಂದು ಬಾರಿ ಹೊಟ್ಟೆಯಲ್ಲಿರುವುದು ಮತ್ತೊಂದು ಬಾರಿ ತಲೆಯೊಳಗೆ, ನಂತರ ಕಾಲಿನೊಳಗೆ, ಆ ನಂತರ ಭುಜದೊಳಗೆ ಹರಡುತ್ತಿರುತ್ತದೆ. ಆ ವಿಧವಾಗಿ ಶರೀರವೆಲ್ಲಾ ಎಲ್ಲಂದರೆ ಅಲ್ಲಿ ಇರುವುದು ಸಾಧ್ಯವಾಗುತ್ತದಾ? ಸೂಕ್ಷ್ಮ ಶರೀರಕ್ಕೆ ಗುಣಚಕ್ರವಿದ್ದರೆ ಅವರು ಬದುಕಿರುವವರ ಶರೀರದಲ್ಲಿ ತಲೆಯಲ್ಲಿಯೇ ಇರಬೇಕಲ್ಲವೆ! ಗುಣಚಕ್ರ ಅದರಲ್ಲಿ ಜೀವಿಯು ಸೂಕ್ಷ್ಮವಾಗಿ ಇರುವ ತಲೆ ಇತರರ ಶರೀರ ಭಾಗಗಳಲ್ಲಿ ಹೇಗೆ ಇರುತ್ತಿದೆ?**

**ಉತ್ತರ :–** ಸೂಕ್ಷ್ಮ ಶರೀರದೊಂದಿಗೆ ಜೀವಿಯು ಬದುಕಿರುವವರ ಶರೀರದಲ್ಲಿ ಎಲ್ಲಾದರೂ ಇರಬಹುದು. ಒಂದೇ ಕಡೆಯಾದರೂ ಇರಬಹುದು. ಇತರೆ ಶರೀರ ಭಾಗಗಳೊಳಗೆ ಕೂಡಾ ಬದಲಾಗಬಹುದು. ತಲೆಯಲ್ಲಿ ಮಧ್ಯಭಾಗದಲ್ಲಿ ಸೇರಿದರೆ ಸೂಕ್ಷ್ಮ ಶರೀರ ಬದುಕಿರುವವನನ್ನು ನಿದ್ರೆ ಮತ್ತಿನೊಳಗೆ ಕಳುಹಿಸಿ, ನಿದ್ರೆಯೊಳಗೆ ಹೋಗುವಂತೆ ಮಾಡಿ ಶರೀರದಿಂದ ಹೊರಗೆ ಬಂದು ಮಾತನಾಡುತ್ತಾನೆ. ಶರೀರದಲ್ಲಿ ಹೊರಗೆ ಬಂದು ಮಾತನಾಡಲಿಲ್ಲವೆಂದರೆ ಶರೀರದಲ್ಲಿ ಯಾವುದೋ ಒಂದು ಕಡೆ ಇರುತ್ತದೆಂದು ತಿಳಿಯಬೇಕು. ಪೂರ್ತಿ ಹೊರಗೆ ಬಂದು ಮಾತನಾಡಬೇಕೆಂದರೆ ಶರೀರದಲ್ಲಿ ಇತರೆ ಭಾಗಗಳಲ್ಲಿರುವ ಸೂಕ್ಷ್ಮ ಶರೀರ ತಲೆ ಮಧ್ಯೆ ಭಾಗದಲ್ಲಿ ಸಮಾನವಾಗಿ ಬಂದು ಮಾತನಾಡುವನು.

**36) ಪ್ರಶ್ನೆ :– ಹದ್ದುಗಳನ್ನು ಮೀರುತ್ತಿರುವ ನಾಗರಿಕತೆ, ಅಶ್ಲೀಲ ನೃತ್ಯಗಳು, ವೇಶ್ಯವಾಟಿಕೆಗಳು, ಮಿತಿಮೀರಿದ ವ್ಯಭಿಚಾರ, ಪಾಶ್ಚಾತ್ಯ ನಾಗರಿಕತೆ ಬಹಳ ಬೇಸರಗೊಳ್ಳುವಂತೆ ಇದೆ. ತನ್ನ ಸೃಷ್ಠಿ ಹೀಗೆ ಬದಲಾಗಿರುವುದಕ್ಕೆ ದೇವರಿಗೆ ತಿರುಗೇಟು ಬಿದ್ದಂತೆ ನಾವು ಭಾವಿಸುತ್ತಿದ್ದೇವೆ. ದೇವರಿದ್ದರೇ ಈ ಸೃಷ್ಠಿಯನ್ನು ಏಕೆ ಮಾಡಿದ್ದೇನೋ! ಎಂದು ತಲೆ ಹಿಡಿದುಕೊಂಡು ಬಾಧೆಬೀಳುತ್ತಾನೆಂದು ಅಂದುಕೊಳ್ಳಬಹುದಾ?**

**ಉತ್ತರ :–** 'ತನ್ನ ಸೃಷ್ಠಿ ಹೀಗೆ ಬದಲಾಗಿರುವುದಕ್ಕೆ' ಎಂದು ನೀವು ಹೇಳಿದ್ದೀರ.

ಇಲ್ಲಿ ನಾವು ತಿಳಿಯಬೇಕಾಗಿರುವುದು ಏನೆಂದರೆ! ದೇವರಿಗೆ ತಿಳಿಯದಂತೆ ಯಾವುದೂ ಸ್ವತಃವಾಗಿ ಬದಲಾಗುವುದಕ್ಕಾಗಲೀ, ತಯಾರಾಗುವುದಕ್ಕಾಗಲೀ ಅವಕಾಶವಿಲ್ಲ. ಎಲ್ಲಾ ದೇವರಿಗೆ ತಿಳಿದೇ ನಡೆಯುತ್ತಿರುತ್ತವೆ. ದೇವರ ಸಂಕಲ್ಪದಿಂದಲೇ ಆತ್ಮ ಮಾಡಿಸಿದಾಗ ಎಲ್ಲರೂ ಎಲ್ಲ ಕೆಲಸಗಳು ಮಾಡುತ್ತಿದ್ದಾರೆ. ತಾನು ಮಾಡಿದ ಸೃಷ್ಠಿಯನ್ನು ತಾನೇ ನಡೆಸುತ್ತಿದ್ದಾನೆ ಆದ್ದರಿಂದ ದೇವರಿಗೆ ತಿರುಗೇಟು, ಹೊರಗಿನ ಪೆಟ್ಟು ಬೀಳಲಿಲ್ಲ. ಮನುಷ್ಯರು ಅವರವರ ಕರ್ಮಗಳನ್ನು ಅನುಭವಿಸುವುದಕ್ಕೆ ದೇವರೇ ಆತ್ಮದಿಂದ ಸಮಾಜವನ್ನು ಹೀಗೆ ಬದಲಾಯಿಸಿದ್ದಾನೆ ಎಂದು ಅಂದುಕೊಳ್ಳುವುದು ಒಳ್ಳೆಯದು. ನಡೆದಿರುವುದು ಸಹ ಅಷ್ಟೇ!

**37) ಪ್ರಶ್ನೆ :– "ಸೂಕ್ಷ್ಮಗಳು (ದೆವ್ವಗಳು) ಸ್ಥೂಲವಾದವುಗಳನ್ನು ಗ್ರಹಿಸಿ ಅವುಗಳ ಪರಿಮಾಣವನ್ನು ತಗ್ಗಿಸುತ್ತಿವೆ" ಎಂದು ನೀವು ಹೇಳುತ್ತಿದ್ದೀರ. ಅಂದರೆ ದೆವ್ವಗಳಲ್ಲಿ ಕೂಡಾ ಕೆಲವು ವಿಧಗಳ ಸಾಮರ್ಥ್ಯಗಳು ಇರುವ ದೆವ್ವಗಳಿವೆಯಾ?**

**ಉತ್ತರ :–** ಸೂಕ್ಷ್ಮಶರೀರಗಳು ಎಂದರೆ ದೆವ್ವಗಳು ಒಂದೇ ಅಲ್ಲ. ಅನೇಕ ದೇವತೆಗಳು ಸಹ ಸೂಕ್ಷ್ಮವಾಗಿಯೇ ಇದ್ದಾರೆ. ಮನುಷ್ಯರನ್ನು, ದೇವತೆಗಳನ್ನು ದೇವರು ಸೃಷ್ಠಿಸಿದ್ದಾನೆ. ಮನುಷ್ಯರು ಶರೀರವನ್ನು ಬಿಟ್ಟು ಅಕಾಲಮೃತ್ಯು ಹೊಂದಿದರೆ ದೆವ್ವಗಳಾಗಿ ಬದಲಾಗುತ್ತಾರೆ. ಪುನಃ ಅವರ ಆಯುಷ್ಷು ಮುಗಿದುಹೋಗುವವರೆಗು, ಅವರಿಗೆ ಕಾಲಮರಣ ಬರುವವರೆಗು ದೆವ್ವಗಳಾಗಿ (ಸೂಕ್ಷ್ಮ ಶರೀರಗಳೊಂದಿಗೆ) ಇರಬೇಕಾದ್ದೇ. ಇನ್ನು ದೇವತೆಗಳ ವಿಷಯಕ್ಕೆ ಬಂದರೆ ದೇವತೆಗಳು ಹುಟ್ಟಿದಾಗಿನಿಂದ ಸೂಕ್ಷ್ಮವಾಗಿಯೇ ಹೊರಗೆ ತಿರುಗುತ್ತಿದ್ದಾರೆ. ಅವರು ಗುಡಿಯಲ್ಲಿ ಪ್ರತಿಮೆಯಲ್ಲಿರುವಾಗ ಮಾತ್ರ ಸ್ಥೂಲವಾಗಿ ಇರುವಂತೆ, ಪ್ರತಿಮೆಯನ್ನು ಬಿಟ್ಟು ಹೊರಗೆ ಬಂದು ಅಲೆದಾಡುತ್ತಿರುವಾಗ ಸೂಕ್ಷ್ಮವಾಗಿ ಇರುವಂತೆ ತಿಳಿಯಬೇಕು. ಪ್ರತಿಮೆಯಲ್ಲಿ ಒಂದು ಗಂಟೆ, ಎರಡು ಗಂಟೆಗಳಿರುವಾಗ ಉಳಿದ ಕಾಲವೆಲ್ಲಾ ಹೊರಗೆ ಅಲೆದಾಡುವುದಕ್ಕೇ ದೇವತೆಗಳು ಇಷ್ಟಪಡುತ್ತಿರುತ್ತಾರೆ. ಕೆಲವರು ದೇವತೆಗಳು ಎರಡು ಮೂರು ತಿಂಗಳಿಗೊಂದು ಬಾರಿ ಗುಡಿಗೆ ಹೋಗಿ ಅಲ್ಲಿ ಒಂದು ದಿನವಿದ್ದು ಪುನಃ ಹೊರಗೆ ಬಂದು

ಅಲೆಯುವವರು ಇದ್ದಾರೆ. ದೇವತೆಗಳಲ್ಲಿ ಅನೇಕ ತರಗತಿಗಳ ಶಕ್ತಿ ಇರುವವರು ಇದ್ದಾರೆ. ದೆವ್ವಗಳಲ್ಲಿ ಜ್ಞಾನಿಗಳು, ಅಜ್ಞಾನಿಗಳು ಎರಡು ವಿಧಧವರು ಇದ್ದಾರೆ. ದೇವತೆಗಳಲ್ಲಿ ಸಹ ಜ್ಞಾನಿಗಳಿದ್ದಾರೆ, ಅಜ್ಞಾನಿಗಳಿದ್ದಾರೆ. ದೇವತೆಗಳಲ್ಲಿ ಕೆಲವರು ಸ್ಥೂಲವನ್ನು ಗ್ರಹಿಸಿ ಅವುಗಳನ್ನು ಬೇರೆ ಜಾಗದೊಳಗೆ ಸೇರಿಸುತ್ತವೆ. ಆಗ ಮೊದಲಿರುವ ಕಡೆ ಆ ವಸ್ತು ಇಲ್ಲದಂತೆ ಹೋಗುತ್ತದೆ. ಅದೇ ವಿಧವಾಗಿ ವಸ್ತುಗಳನ್ನೇ ಅಲ್ಲದೆ ದಾನ್ಯವನ್ನು ಸಹ ತೆಗೆದುಕೊಂಡು ಹೋಗುವ ಅವಕಾಶವಿರುವುದರಿಂದ ಅಂತಹ ದೇವತೆಗಳಿಗೆ ಮೊದಲೇ ಜಾತಣಕೂಟ ಏರ್ಪಡಿಸಿದಹಾಗೆ **'ಪೊಲಿ'** ಎನ್ನುವ ಹೆಸರಿನೊಂದಿಗೆ ಅವರಿಗೆ ಮಾಡುವ ಪ್ರಕ್ರಿಯೆ ಕೂಡಾ ಇದೆ. ಅದೇ ದೆವ್ವಗಳಲ್ಲಾದರೇ ಸ್ಥೂಲವನ್ನು ಗ್ರಹಿಸುವ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ. ಎಲ್ಲೋ ಒಬ್ಬರಿಗೆ ಮಾತ್ರ ಸ್ಥೂಲವನ್ನು ಗ್ರಹಿಸುವ ಸಾಮರ್ಥ್ಯ ಇರುತ್ತದೆ. ಇವೆಲ್ಲವೂ ಹೇಳಿದರೇ ಅರ್ಥವಾಗದಿರಬಹುದು. ಇವೆಲ್ಲಾ ಸೂಕ್ಷ್ಮ ವಿಷಯಗಳಾದ್ದರಿಂದ ಹೊರಗೆ ಕಾಣಿಸುವ ನಿರೂಪಣೆಗೆ ಬರುವುದಿಲ್ಲ. ಆದ್ದರಿಂದ ಇವುಗಳನ್ನು ಅನುಭವಪೂರ್ವಕವಾಗಿ ತಿಳಿಯಬೇಕಾಗಿರುವುದೇ. ನಾವು ನಮ್ಮ ಅನುಭವದಲ್ಲಿ ಎಷ್ಟೋ ವಿಷಯಗಳನ್ನು ನೋಡಿದ್ದೇವೆ ಆದ್ದರಿಂದ ಇವುಗಳನ್ನು ಕುರಿತು ಹೇಳುತ್ತಿದ್ದೇವೆ.

**38) ಪ್ರಶ್ನೆ :– ಮಾಟ ಮಾಡುವುದರ ಮೇಲೆ ಇರುವ ಗುಟ್ಟನ್ನು ನಾವು ಎಷ್ಟೋ ಸಲ ರಟ್ಟು ಮಾಡಿದ್ದೇವೆ. ನೀವು ಮಾಟ ಮಾಡುವುದನ್ನು ನಂಬುತ್ತೀರಾ? ಮಂತ್ರಗಳಿಗೆ ಹುಣಸೆಕಾಯಿಗಳು ಉದುರುತ್ತವೆ ಎನ್ನುತ್ತೀರಾ?**

**ಉತ್ತರ :–** 'ಮಾಟ ಮಾಡುವುದು' ಎನ್ನುವವು ಈ ದಿನ ಕಂಡುಹಿಡಿದಿರುವವು ಅಲ್ಲ. ಕೃತಯುಗದಿಂದ ಇವೆಯೆಂದು ಹೇಳುತ್ತಿದ್ದೇವೆ. ಆದಿನ ಅವುಗಳ ಹೆಸರು ಬೇರೆ, ಈ ದಿನ ಅವುಗಳ ಹೆಸರು ಬದಲಾಗುತ್ತಾ ಬಂದು 'ಮಾಟ' ಎಂದು ಅನ್ನುವುದು ನಡೆದಿದೆ. ಹೆಸರು ಬದಲಾವಣೆ ಹೊಂದಿದೆ ಎನ್ನುವುದಕ್ಕಿಂತ ಹೆಸರನ್ನು ಮರೆತುಹೋಗಿ ಕೊನೆಗೆ ಮಾಟಮಾಡುವುದು ಎನ್ನುತ್ತಿದ್ದಾರೆ. ಮಾಟ ಎನ್ನುವುದು ಕಲಿಯುಗದಲ್ಲಿನ ಮಾತು. ಹಿಂದೆ ಮೂರು ಯುಗಗಳಲ್ಲಿ **'ಶಸ್ತ್ರ'**

ಗಳೆಂದು ಹೇಳುವ ಮಾತನ್ನು ಈ ದಿನ 'ಮಾಟ' ಎಂದು ಕರೆಯುತ್ತಿದ್ದೇವೆ. ಪೂರ್ವದಲ್ಲಿ ಒಂದು ಮಂತ್ರವನ್ನು ಕಲಿತು ಆ ಮಂತ್ರವನ್ನು ಶತ್ರು ಮೇಲೆ ಪ್ರಯೋಗಿಸುವುದನ್ನು ಶಸ್ತ್ರವನ್ನು ಪ್ರಯೋಗಿಸುವುದು ಎಂದು ಅನ್ನುತ್ತಿದ್ದರು. ಮೊದಲು ಬಿಲ್ಲುವಿದ್ಯೆಯಲ್ಲಿ ಈ ಶಸ್ತ್ರ ಪ್ರಯೋಗ ಜಾರಿಯಲ್ಲಿತ್ತು. ಒಂದು ಕಡ್ಡಿಯನ್ನು ಮಂತ್ರಪ್ರಯೋಗ ಮಾಡಿ ಬಿಟ್ಟರೇ ಅದು ದೊಡ್ಡ ಬಾಣವಾಗಿ ತಯಾರಾಗಿ ಎದುರಿಗಿರುವ ಮನುಷ್ಯನನ್ನು ಸಾಯಿಸುತ್ತಿತ್ತು. ಅದನ್ನೇ ಶಸ್ತ್ರಪ್ರಯೋಗ ಎನ್ನುತ್ತಿದ್ದರು. ನಂತರ ಸ್ವಲ್ಪ ಕಾಲಕ್ಕೆ ಒಂದು ಬಾಣವನ್ನು ಶಸ್ತ್ರವಾಗಿ ಉಪಯೋಗಿಸದಂತೆ ಬಾಣಕ್ಕೆ (ಕಡ್ಡಿ) ಬದಲು ಒಂದು ಗೊಂಬೆಯನ್ನು ತಯಾರಿಸಿ ಅದನ್ನು ಮಂತ್ರ ಪ್ರಯೋಗದಲ್ಲಿ ಶಸ್ತ್ರವಾಗಿ ಗೊಂಬೆಯನ್ನು ಉಪಯೋಗಿಸುತ್ತಿದ್ದರು. ಆಗ ಅದು ಬಾಣದ ಹಾಗೆ ಅಲ್ಲಿಗೆ ಹೋಗಿ ಸೂಕ್ಷ್ಮವಾಗಿ ಹಿಂಸಿಸುತ್ತಿತ್ತು. ಈ ವಿಧವಾಗಿ ಒಂದು ಬಾಣದಿಂದ ಆರಂಭವಾದ ಶಸ್ತ್ರಪ್ರಯೋಗ ಗೊಂಬೆಯಾಗಿ ತಯಾರಾಗಿದೆ. ಈ ದಿನ ಗೊಂಬೆ ಪ್ರಯೋಗಗಳು ಮಂತ್ರಗಳಿಂದ ಮಾಡುತ್ತಾ ಕೆಡಕು ಮಾಡಿದ್ದೇವೆಂದು ಅನ್ನುತ್ತಿದ್ದಾರೆ. ನೂರು ವರ್ಷಗಳ ಪೂರ್ವದಲ್ಲಿ ಈ ಮಾಟಮಾಡುವುದು ಹೆಚ್ಚಾಗಿ ಇರುತ್ತಿದ್ದವು. ಈ ದಿನ ಅವು ಯಾವುವು ಇಲ್ಲವೆಂದೇ ಹೇಳಬಹುದು. ಅವುಗಳ ವಿದ್ಯೆ ತಿಳಿಯದೆ ಹೋಗುವುದರಿಂದ ಯಾರೂ ಮಾಟ ಮಾಡುವ ಸ್ಥಿತಿಯಲ್ಲಿ ಇಲ್ಲ. ಆದರೂ ನಮಗೆ ಮಂತ್ರಗಳು ತಿಳಿದಿವೆಯೆಂದು, ಮಾಟ ಮಾಡುತ್ತೇವೆಂದು ಬೆದರಿಸುತ್ತಿರುವರು. ವಾಸ್ತವಕ್ಕೆ ಈ ದಿನ ಆ ವಿದ್ಯೆ ಈ ರಾಜ್ಯದಲ್ಲಿ ಇಲ್ಲವೆಂದೇ ಹೇಳಬಹುದು. ಪೂರ್ವದಲ್ಲಿ ಮಂತ್ರ ಪ್ರಯೋಗದಿಂದಲೇ ಎಷ್ಟೋ ಕೆಲಸಗಳನ್ನು ಸಾಧಿಸುತ್ತಿದ್ದರು. ಅನೇಕ ವಿಷಯಗಳಲ್ಲಿ ಮಂತ್ರಗಳ ಶಕ್ತಿ ಸಾಮರ್ಥ್ಯವಿತ್ತು. ಆ ಕಾಲದಲ್ಲಿ ಮಂತ್ರಗಳಿಗೆ ಹುಣಿಸೇಕಾಯಿಗಳನ್ನು ಉದರಿಸುತ್ತಿದ್ದರು. ಈ ದಿನ ಆ ವಿದ್ಯೆ ಇಲ್ಲ ಆದರೇ ಇದ್ದಿದ್ದರೇ ಹುಣಿಸೇಕಾಯಿಗಳನ್ನೇ ಅಲ್ಲ ತುಂಬೆಕಾಯಿಗಳು ಕೂಡಾ ಉದುರುತ್ತಿದ್ದವು. ಮಂತ್ರಗಳ ವಿಷಯ ಸಂಪೂರ್ಣವಾಗಿ ತಿಳಿಯಬೇಕೆಂದರೇ, ಮಂತ್ರಗಳು ತಯಾರು ಮಾಡುವ ವಿಧಾನ ತಿಳಿಯಬೇ ಕೆಂದರೇ ನಮ್ಮ ರಚನೆಗಳಲ್ಲಿನ **"ಮಂತ್ರ–ಮಹಿಮೆ"** ಗ್ರಂಥವನ್ನು ಓದಿರಿ.

ಮಾಟವನ್ನು ಕೆಲವು ಪ್ರಾಂತಗಳಲ್ಲಿ ಕೆಡಕುಗಳು ಎಂದು ಕರೆಯುತ್ತಿದ್ದಾರೆ. ಕೆಲವು ಪ್ರಾಂತಗಳಲ್ಲಿ 'ಪ್ರಯೋಗಗಳು' ಎಂದು ಸಹ ಕರೆಯುತ್ತಿದ್ದಾರೆ. ತೆಲಂಗಾಣ ಪ್ರಾಂತದಲ್ಲಿ 'ಚಿಲ್ಲಂಗಿ' ಎಂದು ಕರೆಯುತ್ತಿದ್ದಾರೆ.

**39) ಪ್ರಶ್ನೆ :– ಬೆಳಗ್ಗೆ ನಾಲ್ಕು ಗಂಟೆಗೆ ನಿದ್ರೆಯಿಂದ ಏಳಬೇಕೆಂದರೆ, ರಾತ್ರಿ ನಿದ್ರೆ ಹೋಗುವುದಕ್ಕಿಂದ ಮೊದಲು ಆ ವಿಷಯವನ್ನು ನೆನಪಿಸಿಕೊಂಡು ಮಲಗಿದರೇ ಜೀವಿಯಾದ ನನಗೆ ನಿಜವಾಗಿಯೇ ಮರುದಿನ ನಾಲ್ಕು ಗಂಟೆಗಳಿಗೇ ಎಚ್ಚರ ವಾಗುತ್ತಿದೆ. ಆ ವಿಧವಾಗಿ ನನ್ನಲ್ಲಿರುವ ಆತ್ಮ ಏಕೆ ಸಹಕರಿಸಬೇಕು? ಎಚ್ಚರ ಬಾರದಂತೆ ಮಾಡಬಹುದಲ್ಲವೆ! ಆದರೇ ನಾಲ್ಕು ಗಂಟೆಗಳಿಗೇ ಏಳಬೇಕೆಂದು ಅಂದುಕೊಂಡಿರು ವುದು ಜೀವಾತ್ಮನಾ? ಆತ್ಮನಾ?**

**ಉತ್ತರ :–** ಬೆಳಗ್ಗೆ ನಾಲ್ಕು ಗಂಟೆಗಳಿಗೇ ಏಳಬೇಕೆಂದು ಜೀವಾತ್ಮ ಅಂದುಕೊಂಡಿಲ್ಲ. ಆತ್ಮ ಬುದ್ಧಿಯಿಂದ ಅನಿಸುತ್ತಿದೆ. ಆತ್ಮ ಬುದ್ಧಿಯಿಂದ ಹೇಳಿಸಿದರೂ ಮನುಷ್ಯ ತಾನೇ ಅಂದುಕೊಂಡಿದ್ದೇನೆಂದುಕೊಳ್ಳುತ್ತಿದ್ದಾನೆ. ತಾನು ಮಾಡದ ಕೆಲಸಗಳನ್ನು ಜೀವಿಯು ಸ್ವತಃವಾಗಿ ತನ್ನ ನೆತ್ತಿಯ ಮೇಲೆ ಹಾಕಿಕೊಳ್ಳುತ್ತಿದ್ದಾನೆ. ಶರೀರದಲ್ಲಿ ಬುದ್ಧಿ ಮಾಡುವ ಕೆಲಸಗಳನ್ನು ತಾನೇ ಮಾಡಿದ್ದೇನೆಂದು ಅಂದುಕೊಳ್ಳುವುದು ಜೀವಿಗೆ ಪೂರ್ತಿ ಅಭ್ಯಾಸವಾಗಿ ಹೋಗಿದೆ. ವಾಸ್ತವವಾಗಿ ಕರ್ಮ ಪ್ರಕಾರ ಜೀವಿಯನ್ನು ನಡೆಸಿ ಅನುಭವಿಸುವಂತೆ ಮಾಡುವ ಆತ್ಮ ಬುದ್ಧಿಯಿಂದ ಬೆಳಗ್ಗೆ ನಾಲ್ಕು ಗಂಟೆಗಳಿಗೆ ಏಳಬೇಕೆಂದು ಅನಿಸುವಂತೆ ಮಾಡಿದೆ. ಜೀವಿಯನ್ನು ನಿದ್ರೆಯಿಂದ ಎಬ್ಬಿಸುವುದು ಆತ್ಮವೇ ಆಗಿರುವುದರಿಂದ ಅಂದುಕೊಂಡ ಸಮಯಕ್ಕೆ ಐದು, ಹತ್ತು ನಿಮಿಷಗಳ ಮೊದಲೋ ಅಥವಾ ಐದು ಹತ್ತು ನಿಮಿಷಗಳ ಹಿಂದೆಯೋ ಅಥವಾ ಸಮಾನ ಸಮಯಕ್ಕೋ ಎಬ್ಬಿಸುತ್ತಿದೆ. ಆತ್ಮವೇ ಅಂದು ಕೊಳ್ಳುತ್ತಿದೆ, ಆತ್ಮವೇ ಎಬ್ಬಿಸುತ್ತಿದೆ.

**40) ಪ್ರಶ್ನೆ :– ಪ್ರಪಂಚ ಪರವಾಗಿ ಕಂಡುಹಿಡಿದ ಆವಿಷ್ಕರಣೆಗಳಾಗಲೀ, ಪ್ರತಿ ಅಂಶವನ್ನು ಪರಿಶೋಧನಾತ್ಮಕವಾಗಿ ನೋಡಿ, ಎಷ್ಟೋ ಸೈನ್ಸ್ ಪರಿಶೋಧನೆಗಳು**

**ಮಾಡುವ ಅವಕಾಶ ಲಾಟಿನ್, ಗ್ರೀಕ್ ಮತ್ತು ಅಮೆರಿಕಾ ದೇಶಗಳಲ್ಲಿ ಇರುವ ಮನುಷ್ಯರಲ್ಲಿಯೇ ಆತ್ಮ ಹೆಚ್ಚಾಗಿ ತಿಳಿಸುತ್ತಿದೆ ಏಕೆ?**

**ಉತ್ತರ :–** ಆ ದೇಶದವರನ್ನು ಹೊರಗೆ ಪ್ರಕೃತಿಯಲ್ಲಿ ತಲ್ಲೀನರಾಗುವಂತೆ ಮಾಡುವುದಕ್ಕೆ ಆತ್ಮ ಆ ವಿಧವಾಗಿ ಮಾಡುತ್ತಿದೆ. ಅಂತಹ ಪರಿಶೋಧಕರು ತಾವೇ ಎಲ್ಲ ಮಾಡುವಂತೆ ತಿಳಿಯುತ್ತಾ ದೇವರನ್ನು ವಿಶ್ವಾಸಿಸುವುದಿಲ್ಲ. ಪರಿಶೋಧನೆಗಳಲ್ಲಿ ಹಿಂದುಳಿದ ದೇಶದವರೇ ಹೆಚ್ಚಾಗಿ ದೇವರನ್ನು ವಿಶ್ವಾಸಿಸುತ್ತಾರೆ. ಪರಿಶೋಧನೆಗಳು ಮಾಡಿ ಕೆಲವು ಫಲಿತಗಳನ್ನು ಹೊಂದಿದವರು ಆಧ್ಯಾತ್ಮಿಕವನ್ನು ನಂಬುವುದಿಲ್ಲ. ಪರಿಶೋಧನೆಗಳಲ್ಲಿ ಹಿಂದುಳಿದ ಭಾರತದೇಶದಲ್ಲಿ ಆತ್ಮಜ್ಞಾನಿಗಳು ಇದ್ದಾರೆಂದು ಭಾರತ ದೇಶವನ್ನು **'ಇಂದೂ ದೇಶ'** ಎಂದು ಕರೆಯುತ್ತಿದ್ದಾರೆ.

**41) ಪ್ರಶ್ನೆ :– ಕೂದಲು ಆತ್ಮಕ್ಕೆ ಗುರುತಾಗಿ ಅರ್ಥವಾಗಿದೆ. ಆದರೇ 'ತಲೆ ಬೋಳಿಸಿಕೊಳ್ಳುವುದು' ಎನ್ನುವ ಕ್ರಿಯೆಯಲ್ಲಿ ತಲೆಮೇಲೆ ಕೂದಲುಗಳನ್ನು ಮಾಯೆಗೆ ಗುರುತಾಗಿ, ಗುಣಗಳ ಸಮೂಹವಾಗಿ ಹೇಳಿದ್ದೀರ. ದೇವರಾಗಿರುವ ಸಂಕೇತವನ್ನು ಮಾಯೆಯಾಗಿ ಹೇಗೆ ಹೇಳುತ್ತೀರಾ?**

**ಉತ್ತರ :–** ಕೂದಲು ಆತ್ಮಕ್ಕೆ ಗುರುತೆಂದು ನಾನು ಈ ಮಧ್ಯೆ ಕಾಲದಲ್ಲಿ ಹೇಳಿದ್ದೇನೆ ಹೊರತು ಇದಕ್ಕೂ ಮೊದಲು ಯಾರಿಗೂ ಆ ವಿಷಯ ತಿಳಿದಿಲ್ಲ. **"ತಲೆಗಳು ಬೋಳಾದರೂ ಕೋರಿಕೆಗಳು ಬೋಳಾಗುತ್ತವಾ"** ಎಂದು ವೇಮನ ಯೋಗಿ ತನ್ನ ಪದ್ಯದಲ್ಲಿ ಹೇಳಿದಾಗ ಕೂಡಾ ಕೂದಲುಗಳನ್ನು ಗುಣಗಳ ಆಲೋಚನೆಗಳಾಗಿಯೇ ಅಂದುಕೊಂಡು ಹೇಳಿದ್ದಾನೆ. ಹಾಗೆಯೇ ಪೂರ್ವದಲ್ಲಿ ವೆಂಕಟೇಶ್ವರ ಗುಡಿಮುಂದೆಯಾಗಲೀ, ಇತರೆ ಗುಡಿಗಳ ಮುಂದೆಯಾಗಲೀ ತಲೆ ಕೂದಲುಗಳನ್ನು ತಲೆಯಲ್ಲಿನ ಕೋರಿಕೆಗಳಾಗಿಯೇ ಲೆಕ್ಕಿಸಿ ಅದೇ ಭಾವನೆಯಿಂದಲೇ 'ನಮ್ಮ ಹತ್ತಿರ ಕೋರಿಕೆಗಳು ಇಲ್ಲ' ಎಂದು ಹೇಳಿದಂತೆ ತಲೆಗಳನ್ನು ಬೋಳು ಮಾಡಿ ದೇವರಿಗೆ ತೋರಿಸುತ್ತಿದ್ದರು. ದೇವರ ದರ್ಶನದಲ್ಲಿ

ಜ್ಞಾನಿಗಳಾದವರು ಅದೇ ಉದ್ದೇಶ್ಯವನ್ನೇ ತೋರಿಸುತ್ತಾ ಕೈಮುಗಿಯುತ್ತಿದ್ದರು. ಆದರೇ ಅಂದಿನ ಆಚರಣೆಯಾದ ತಲೆಗಳು ಬೋಳು ಮಾಡಿಕೊಳ್ಳುವುದು ಇಂದಿಗೂ ಇದ್ದರೂ ಆ ದಿನದ ಭಾವವೂ ಸಹ ಈ ದಿನ ಇಲ್ಲವೆಂದು ಹೇಳಬಹುದು.

**42) ಪ್ರಶ್ನೆ :– ಹಾವನ್ನು ಮಾಯೆಗೆ ಗುರುತಾಗಿ ಹೇಳಿದ್ದೀರ. ಕೂದಲು ಇಲ್ಲದಿರುವುದು ಒಂದು ಹಾವೇ ಅಲ್ಲ, ಏಕಕಣ ಜೀವಿಗಳು, ಮಳೆಹಾವುಗಳು ಸಹ ಇವೆ. ಹಾಗಿರುವಾಗ ಒಂದು ಹಾವೇ ಮಾಯೆಗೆ ಗುರುತೆಂದು ಏಕೆ ಹೇಳಬೇಕು?**

**ಉತ್ತರ :–** ಏಕಕಣ ಜೀವಿಗಳನ್ನು, ಮಳೆ ಹುಳಗಳನ್ನು ಕೆಲವರು ನೋಡಿರುವುದಿಲ್ಲ. ಈ ದಿನ ಕೂಡಾ ಬಹಳ ಜನ ಮಳೆಹಾವುಗಳನ್ನು ನೋಡದವರು ಇದ್ದಾರೆ. ಹಾವುಗಳನ್ನಾದರೇ ಎಲ್ಲರೂ ನೋಡಿರುವುದರಿಂದ ಹಾವನ್ನು ಮಾಯೆಯಾಗಿ **ಇಂಜೀಲ್** ಗ್ರಂಥದಲ್ಲೇ ಹೇಳಿದ್ದಾರೆ. ಮಾಯೆಯೊಂದಿಗೆ ಕೂಡಿಕೊಂಡ ಮನುಷ್ಯರನ್ನು 'ಸರ್ಪ ಸಂತಾನ' ಎಂದು ಹೇಳಿದ್ದಾರೆ. ಮಾಯೆ ಮನುಷ್ಯರಲ್ಲಿನ ಆಧ್ಯಾತ್ಮಿಕವನ್ನು ಇಲ್ಲದಂತೆ ಮಾಡುತ್ತದೆ. ಹಾಗೆಯೇ ಹಾವಿನ ವಿಷ ಮನುಷ್ಯರಲ್ಲಿನ ಪ್ರಾಣವನ್ನು ಇಲ್ಲದಂತೆ ಮಾಡುತ್ತದೆ. ಆದ್ದರಿಂದ ಮಾಯೆಗೆ ಸಮಾನವಾಗಿ ಹಾವನ್ನು ಗುರುತಿಸಿ ಹೇಳಿದ್ದಾರೆ.

**43) ಪ್ರಶ್ನೆ :– ಪೀಯೂಷ ಗ್ರಂಥಿ (ಗ್ರಂಥಿ ರಾಜ) ಇಲ್ಲದಂತೆ ಏಕ ಕಣ ಜೀವಿಗಳಲ್ಲಿ ಆತ್ಮ ನಿವಾಸವೆಲ್ಲಿ? ಹಾಗೆಯೇ ವೃಕ್ಷಜಾತಿಯಲ್ಲಿ ಆತ್ಮ ಸ್ಥಾನ (ಕೇಂದ್ರ ಸ್ಥಾನ) ಆತ್ಮ ಚೈತನ್ಯ ಎಲ್ಲಿಂದ ಪ್ರಸಾರವಾಗುತ್ತದೆ? ಬೇರಿನಿಂದಾ? ಕಾಂಡದಿಂದನಾ?**

**ಉತ್ತರ :–** ಏಕಕಣ ಜೀವಿಯಲ್ಲಿ ಆತ್ಮ ಕಣವೆಲ್ಲಾ ಇದೆ. ವೃಕ್ಷಜಾತಿಯಲ್ಲಿ ನಾಡೀಕೇಂದ್ರಗಳಿರುವುದಿಲ್ಲ. ಹಾಗೆಯೇ 25 ಶರೀರ ಭಾಗಗಳಿರುವುದಿಲ್ಲ. ವೃಕ್ಷದ ಮೇಲಿನ ಭಾಗವೆಲ್ಲಾ ಕಡಿದರೂ ಗಿಡ ಸತ್ತುಹೋಗುವುದಿಲ್ಲ ಆದ್ದರಿಂದ ಅದರ ಆತ್ಮ ಸ್ಥಾನ ಬೇರಿನ ಭಾಗದಲ್ಲಿಯೇ ಇರುತ್ತದೆ. ಬಹುಶಃ ಬೇರಿನಿಂದ ಕಾಂಡ ಪ್ರಾರಂಭವಾದ ಕಡೆ ಕಾಂಡಕ್ಕಿಂತ ಕೆಳಗೆ ಬೇರಿನ ಭಾಗದಲ್ಲಿ ಕೇಂದ್ರ ಸ್ಥಾನವಿರುತ್ತದೆ.

ಆದ್ದರಿಂದ ಅದಕ್ಕೆ ಚೈತನ್ಯ ಕಾಂಡದ ಕೆಳಗೆ ಬೇರಿನ ಭಾಗದಿಂದ ಪ್ರಸಾರ ವಾಗುತ್ತದೆಂದು ತಿಳಿಸುತ್ತಿದ್ದೇವೆ.

**44) ಪ್ರಶ್ನೆ :– ಭಗವದ್ಗೀತಾ ಶ್ಲೋಕದಲ್ಲಿ "ಅಶ್ವತ್ಥಂ ಪ್ರಾಹು ರವ್ಯಯಂ" ಎಂದು ಇರುವಾಗ ನೀವೇನೋ 'ಅಶ್ವರ್ಥಂ ಪ್ರಾಹು ರವ್ಯಯಂ" ಎಂದು ವಿವರಣೆ ಬರೆದಿದ್ದೀರ?**

**ಉತ್ತರ :–** ಸಂಸ್ಕೃತದಲ್ಲಿ "ಅಶ್ವತ್ಥಂ" ಎನ್ನುವುದು ವಾಸ್ತವ. ಅದೇ ತೆಲುಗು ಭಾಷೆಯಲ್ಲಿ "ಅಶ್ವರ್ಥಂ' ಎನ್ನುವುದು ಸರಿಹೋಗುತ್ತದೆ. ಭಾಷೆಯನ್ನನುಸರಿಸಿ ಸ್ವಲ್ಪ ವ್ಯತ್ಯಾಸವಿದೆಯೆಂದು ತಿಳಿಯಬೇಕು.

**45) ಪ್ರಶ್ನೆ :– ಅನಾಗರಿಕರಾಗಿ ಇರುವ ಮೊದಲ ಸಂತತಿ ಪ್ರಜೆಗಳಲ್ಲಿ ಮದುವೆ ಎನ್ನುವ ತಂತು ಇಲ್ಲದೆ, ವಾವಿ ವರಸೆಗಳು ಇಲ್ಲದಂತೆ ಸಂಭೋಗಗಳಲ್ಲಿ ಪಾಲ್ಗೊಂಡಂತೆ ಚರಿತ್ರೆ ಇದೆ. ಮತ್ತೆ ದೇವರು ಆ ಸಮಯದಲ್ಲಿ ದೇವರ ಧರ್ಮಗಳು ಏಕೆ ತಿಳಿಸಲಿಲ್ಲ?**

**ಉತ್ತರ :–** ಸಂಭೋಗಗಳು, ವಾವಿ ವರಸೆಗಳು ಎಲ್ಲಾ ಪ್ರಪಂಚ ಸಂಬಂಧವಾದವು ಗಳಾಗುತ್ತವೆ. ಅವು ದೇವರಿಗೆ ಸಂಬಂಧಿಸಿದ ವಿಷಯಗಳು ಅಲ್ಲ. ಆದ್ದರಿಂದ ಅವುಗಳನ್ನು ಕುರಿತು ಏನೂ ಹೇಳಲಿಲ್ಲ. ದೇವರ ಧರ್ಮಗಳು ಪ್ರಪಂಚ ಜೀವನಕ್ಕೆ ಸಂಬಂಧಿಸಿಲ್ಲ. ದೇವರ ಧರ್ಮಗಳೆಲ್ಲವೂ ಆಧ್ಯಾತ್ಮಿಕ ಸಂಬಂಧ ವಾದವುಗಳೇಯೆಂದು ತಿಳಿಯಬೇಕು.

**46) ಪ್ರಶ್ನೆ :– ಸೃಷ್ಠಿ, ಪರಿಣಾಮ ಸಿದ್ಧಾಂತ ಪರವಾಗಿ ನಡೆದಿದೆಯೆಂದು ನಾವು ಅನ್ನುತ್ತಿದ್ದೇವೆ. ನೀವೇನೋ ಎಲ್ಲಾ ಒಂದೇ ಸಲ ನಡೆದಿದೆಯೆಂದು ಅನ್ನುತ್ತಿದ್ದೀರ. ಎಲ್ಲಾ ಒಂದೇ ಸಲ ನಡೆದಿದೆ ಎನ್ನುವುದಕ್ಕೆ ನಿಮ್ಮ ಹತ್ತಿರ ಸಾಕ್ಷ್ಯವಿದೆಯಾ?**

**ಉತ್ತರ :–** ಪರಿಣಾಮ ಸಿದ್ಧಾಂತದ ಪ್ರಕಾರ ಸೃಷ್ಠಿ ತಯಾರಾಗಲಿಲ್ಲ. ಎಲ್ಲಾ ಒಂದೇ ಸಲ ಹುಟ್ಟಿದೆಯೆಂದು ನಾವು ಹೇಳುತ್ತಿದ್ದೇವೆ. ಅದಕ್ಕೆ ಸಂಬಂಧಿಸಿದ

ಸಾಕ್ಷ್ಯಕ್ಕಾಗಿ ಹುಡುಕಬೇಕಾದ ಕೆಲಸವಿಲ್ಲ. ಮೊದಲು ಹುಟ್ಟಿದವರಿಗೆ ತಾಯಿತಂದೆಯರು ಇಲ್ಲ. ಮೊದಲು ಮನುಷ್ಯರನ್ನು ಯೌವನ, ಕೌಮಾರಗಳಿಂದ ದೇವರು ತಯಾರು ಮಾಡಿದ್ದಾನೆ (ಸೃಷ್ಟಿಸಿದ್ದಾನೆ.) ನಂತರ ತಾಯಿ ತಂದೆಯರಿಂದ ಎಲ್ಲರೂ ಹುಟ್ಟುವುದು ನಡೆದಿದೆ. ಮೊದಲು ತಾಯಿ ತಂದೆ ಇಲ್ಲವೆನ್ನುವುದೇ ದೇವರ ಸೃಷ್ಟಿಗೆ ಆಧಾರ ಸಾಕ್ಷ್ಯ. ಮೊದಲು ಬ್ರಹ್ಮಾಂಡದಿಂದ ಮನುಷ್ಯರು ನೇರವಾಗಿ ಹುಟ್ಟಿದಾಗ ನಂತರ ಅಂಡದಿಂದ, ಪಿಂಡದಿಂದ ಹುಟ್ಟಿದ್ದಾರೆಂದು ತಿಳಿಯುತ್ತಿದೆ.

**47) ಪ್ರಶ್ನೆ :– ಸ್ತ್ರೀ, ಪುರುಷ, ನಿರ್ಧಿಷ್ಟತೆ ಇಲ್ಲದ ಏಕಕಣ ಜೀವಿಗಳು ಪ್ರಕೃತಿಗೆ ಗುರುತಾಗಿ ಇರುವಂತೆಯಾ, ಅಥವಾ ಪುರುಷನಿಗೆ ಗುರುತಾಗಿ ಇರುವಂತೆಯಾ?**

**ಉತ್ತರ :–** ಪುರುಷನಾದ ದೇವರಿಗೆ ಗುರುತಾಗಿರುವಂತೆ. ಪರಮಾತ್ಮ ಎಂದರೆ ದೇವರಾದರೂ ಪರಮಾತ್ಮ ಅದು ಎಂದು ಸ್ತ್ರೀ ಲಿಂಗವಾಗಿ ಒಂದು ಸಲ, ಅವನು, ಆತನು ಎಂದು ಮತ್ತೊಂದು ಸಲ ಪುಲ್ಲಿಂಗವಾಗಿ ಕರೆಯಲ್ಪಡುತ್ತಿದೆ. ದೇವರು ಸ್ತ್ರೀ ಲಿಂಗವಾಗಿ ಪುಲ್ಲಿಂಗವಾಗಿ ಎರಡು ವಿಧಗಳಲ್ಲಿ ಕರೆಯಲ್ಪಡುವುದರಿಂದ ಸ್ತ್ರೀ ಲಿಂಗ, ಪುಲ್ಲಿಂಗ ಯಾವ ನಿರ್ಣಯ ಮಾಡಲಾರದ ವನು ದೇವರು ಆದ್ದರಿಂದ ಏಕಕಣ ಜೀವಿಗಳನ್ನು ದೇವರಾದ ಪುರುಷನಿಗೆ ಗುರುತಾಗಿ ಹೇಳಲ್ಪಡುತ್ತಿವೆ. ಏಕ ಕಣ ಜೀವಿಗಳೇ ಅಲ್ಲದೆ ಕೆಲವು ಹಲ್ಲಿ ಜಾತಿ ಓತಿಕ್ಯಾಟಗಳು ಕೂಡಾ ಹೆಣ್ಣು, ಗಂಡು ಇಲ್ಲದವು ಇವೆ. ಅವೆಲ್ಲಾ ಕಾಣಿಸುವಂತೆ ಇವೆ.

**48) ಪ್ರಶ್ನೆ :– ಮದುವೆಯಲ್ಲಿ ಮಂಗಳ ವಾದ್ಯಗಳು ಯಾವುದಕ್ಕಾಗಿ ಇವೆ?**

**ಉತ್ತರ :–** ನಾಶನಕ್ಕೆ ಮೊದಲು ಶಬ್ದ ತಪ್ಪದೆ ಇರುತ್ತದೆ. ಕರ್ಮ ನಾಶನ ಮಾಡುವ ಚಕ್ರ ಬಲಗೈಯ್ಯಲ್ಲಿ ಧರಿಸಿದ ವಿಷ್ಣು, ತನ್ನ ಎಡ ಕೈಯ್ಯಲ್ಲಿ ಶಂಖಿನ್ನು ಧರಿಸಿದ್ದಾನೆ. ಚಕ್ರ ಕರ್ಮನಾಶವಾಗುವುದಾದಾಗ, ಶಂಖು ಕರ್ಮನಾಶನಕ್ಕೆ ಮೊದಲು ತಿಳಿಯುವ ಜ್ಞಾನ ಶಬ್ದಕ್ಕೆ ಗುರುತಾಗಿ ಇದೆಯೆಂದು ಹೇಳಿಕೊಂಡಿದ್ದೇವೆ. ಈಗ ಮದುವೆಯಲ್ಲಿ ಅದೇ ಸೂತ್ರವನ್ನು ಅನುಸರಿಸಿ ಮದುವೆ ತಂತು ಎಲ್ಲವೂ

ಜ್ಞಾನ ಆಚರಣೆಗೆ ಗುರುತಾಗಿ ಕರ್ಮನಾಶನಕ್ಕೆ ಗುರುತಾಗಿ ಇರುವುದರಿಂದ ಅದಕ್ಕೆ ಜೊತೆಯಾಗಿ ಜ್ಞಾನಕ್ಕೆ ಗುರುತಾಗಿ ಮಂಗಳ ಧ್ವನಿಗಳನ್ನು ಇರಿಸುವುದಾಗಿದೆ. ಜ್ಞಾನ ಶಬ್ದದಿಂದ ಕೂಡಿಕೊಂಡಿರುವುದು, ಆದ್ದರಿಂದ ಶಬ್ದದಿಂದ ಕೂಡಿಕೊಂಡಿದೆಯೆಂದು ಧ್ವನಿಗಳನ್ನು ಮದುವೆ ಹತ್ತಿರ, ಗುಡಿ ಹತ್ತಿರ ಇಡುವುದಾಗಿದೆ.

**49) ಪ್ರಶ್ನೆ :– ನೆಲ ವೆಂಪಲಿ ಗಿಡವನ್ನು ಹಾಸಿ ಅದರಮೇಲೆ ನಿಂತಿರುವ ವ್ಯಕ್ತಿಗೆ ನಕ್ಷತ್ರಗಳು ಕಾಣಿಸುತ್ತವೆಂದಿದ್ದೀರ. ನೆಲ ವೆಂಪಲಿ ಗಿಡದಲ್ಲಿ ಯಾವ ಪದಾರ್ಥ ಕಣ್ಣುಗಳಿಗೆ ಕತ್ತಲನ್ನು ಕಲ್ಪಿಸುತ್ತಿದೆ?**

**ಉತ್ತರ :–** ಆ ವಿಷಯ ಆಳವಾಗಿ ನನಗೆ ತಿಳಿದಿಲ್ಲ. ಅದೂ ಅಲ್ಲದೆ ಪೂರ್ವದಲ್ಲಿ ಮಾಡುತ್ತಿರುವ ಪದ್ಧತಿಯನ್ನು ಕೇಳುವುದು ಹೊರತು ನನ್ನ ಸ್ವ ಅನುಭವ ಕೂಡಾ ಇಲ್ಲ. ನೆಲವೆಂಪಲಿ ಎನ್ನುವ ಹೆಸರನ್ನು ಕೆಲವು ವೈದ್ಯ ಗ್ರಂಥಗಳಲ್ಲಿ ನೋಡುವುದು ಹೊರತು ಪ್ರತ್ಯಕ್ಷವಾಗಿ ನೋಡಲಿಲ್ಲ. ಅದು ಹೇಗಿರುವುದೋ ಸಹ ತಿಳಿದಿಲ್ಲ. ಪೂರ್ವದಲ್ಲಿ ನಡೆಯುತ್ತಿತ್ತೆಂದು ಹಿರಿಯರು ಹೇಳಿದಾಗ ಕೇಳಿದ ವಿಷಯವನ್ನು ನಿಮಗೆ ತಿಳಿಸಿದ್ದೇನೆ ಹೊರತು ಅದರಲ್ಲಿ ಯಾವ ಪದಾರ್ಥ ಹಾಗೆ ಕತ್ತಲು ಮಾಡುತ್ತಿದೆಯೋ ತಿಳಿದಿಲ್ಲ.

**50) ಪ್ರಶ್ನೆ :– ಸೂರ್ಯನು ನಕ್ಷತ್ರವಾ? ಗ್ರಹವಾ? ನಕ್ಷತ್ರವೆಂದು ಸೈನ್ಸ್ ಹೇಳುತ್ತಿದ್ದರೇ ಜ್ಯೋತಿಷ್ಯರು ಗ್ರಹವೆನ್ನುತ್ತಾರೆ. ಸೈನ್ಸ್ ಪ್ರಪಂಚವೆಲ್ಲಾ ಅದು ನಕ್ಷತ್ರವೆಂದು ನಿರೂಪಿಸಿದರೂ ಕೆಲವರು ಸೂರ್ಯನನ್ನು ಗ್ರಹವೇ ಎನ್ನುತ್ತಿದ್ದಾರೆ. ಅದಕ್ಕೆ ಇರುವ ಕಾರಣವೇನು?**

**ಉತ್ತರ :–** ಸೂರ್ಯನು ನಕ್ಷತ್ರ ಎನ್ನುವುದಕ್ಕೆ ನನ್ನ ಹತ್ತಿರ ಯಾವ ಆಧಾರವೂ ಇಲ್ಲ ಆದರೆ, ಗ್ರಹ ಎನ್ನುವುದಕ್ಕೆ ಆಧಾರವಿದೆ. ನಕ್ಷತ್ರ ಮೋಕ್ಷಕ್ಕೆ ಗುರುತು. ಅವು ದೇವರಿಗೆ ಗುರುತಾಗಿರುವ ನಕ್ಷತ್ರಗಳಲ್ಲಿ ಜೀವವು ಇರುವುದಿಲ್ಲ. ಗ್ರಹಗಳಾಗಿ ಇರುವವುಗಳಲ್ಲಿ ಜೀವವಿದೆ. ಸೂರ್ಯನಲ್ಲಿ ಜೀವ ಇದೆ ಆದ್ದರಿಂದ ಸೂರ್ಯನನ್ನು ಗ್ರಹ ಎನ್ನುತ್ತಿದ್ದೇವೆ. ಸೂರ್ಯನು ಆಕಾಶ ಹೇಳಿದ ಶಬ್ದಗಳಲ್ಲಿನ ಜ್ಞಾನವನ್ನು

ಗ್ರಹಿಸಿ ಪುನಃ ಭೂಮಿಮೇಲೆ ಮನುಷ್ಯರಿಗೆ ಹೇಳಿದ್ದಾನೆ. ಸೂರ್ಯನು ಜ್ಞಾನವನ್ನು ಗ್ರಹಿಸುವ ಶಕ್ತಿ ಇರುವವನಾದ್ದರಿಂದ ಸೂರ್ಯನನ್ನು ಗ್ರಹ ಎಂದು ಕರೆಯುತ್ತಿದ್ದೇವೆ. ಒಂದು ವೇಳೆ ಸೂರ್ಯನು ನಕ್ಷತ್ರವೇ ಆಗಿದ್ದರೇ ಆಕಾಶ ಶಬ್ದ ಜ್ಞಾನವನ್ನು ಗ್ರಹಿಸಲಾರದೆ ದೇವರ ಹಾಗೆ ಸ್ಥಬ್ದತೆಯಾಗಿ ಇರುವುದೆಂದು ಹೇಳಬಹುದು. ನಕ್ಷತ್ರ ನಾಶ ಮಾಡಬಲ್ಲದು ಆದರೆ, ಜ್ಞಾನವನ್ನು ಗ್ರಹಿಸಲಾರದು. ಗ್ರಹಿಸುವ ಸಾಮರ್ಥ್ಯ ಸೂರ್ಯನಿಗೆ ಇರುವುದರಿಂದ ಸೂರ್ಯನನ್ನು ಗ್ರಹವಾಗಿಯೇ ನಮ್ಮ ತತ್ತ್ವ ಜ್ಞಾನಿಗಳು ಹೇಳುತ್ತಿದ್ದಾರೆ. ಈ ದಿನ ಸೈನ್ಸ್ ಯಾವ ಸೂತ್ರವನ್ನು ಆಧಾರ ಮಾಡಿಕೊಂಡು ಸೂರ್ಯನನ್ನು ನಕ್ಷತ್ರವೆಂದು ಹೇಳಿದೆಯೋ ನನಗೆ ತಿಳಿದಿಲ್ಲ.

**51) ಪ್ರಶ್ನೆ :– ಮಂತ್ರ ರಹಿತವಾಗಿ, ಶಾಸ್ತ್ರ ಬದ್ಧವಾಗಿ ನಡೆದ ಮದುವೆ ನಂತರ ಅವರ ಪ್ರಾರಬ್ಧದಲ್ಲಿ ಮದುಮಗಳು ಮರಣಿಸುವ ಕರ್ಮವೋ, ಇಬ್ಬರೂ ಮರಣಿಸುವ ಕರ್ಮವೋ ಇದ್ದರೇ, ಆ ಕಾರ್ಯ (ಸತ್ತುಹೋಗುವುದು) ನಿಂತುಹೋಗುತ್ತದಾ? ಅರ್ಥ ತಿಳಿಯದೆ ಮಾಡಿದ ಮದುವೆ ಕಾರ್ಯಗಳು ಪ್ರಾರಬ್ಧವನ್ನು ತಪ್ಪಿಸುವುದಿಲ್ಲ. ಭಾವನೆ ತಿಳಿದು ಮಾಡಿದ ಮದುವೆಯಲ್ಲಿ ಸಹ ಪ್ರಾರಬ್ಧವನ್ನು ತಪ್ಪಿಸಲಾರೆವಾ?**

**ಉತ್ತರ :–** ಮಂತ್ರ ರಹಿತವಾಗಿ ಶಾಸ್ತ್ರಬದ್ಧವಾಗಿ ನಡೆದ ಮದುವೆ ಪ್ರಾರಬ್ಧವನ್ನು ತಪ್ಪಿಸುವಂತೆ ಮಾಡಲಿಲ್ಲ. ಹಾಗೆ ಮಾಡುವುದರಿಂದ ಪ್ರಾರಬ್ಧ ಹೋಗುತ್ತದೆ ಯೆಂದು ಹೇಳುವುದಕ್ಕೆ ಅವಕಾಶವಿಲ್ಲ. ಭಾವನೆಯೊಂದಿಗೆ ಕೂಡಿದ ಮದುವೆ ಯನ್ನು ಭಾವನೆ ತಿಳಿಸಿ ಮಾಡುವುದರಿಂದ ಮದುವೆ ಮಾಡಿಕೊಳ್ಳುವವರು ಅವರ ಜೀವನಗಳಲ್ಲಿ ಜ್ಞಾನವನ್ನು ತಿಳಿದು ಜ್ಞಾನ ಜೀವನವನ್ನು ಕಳೆಯಬೇಕೆಂದು, ಅಜ್ಞಾನ ಜೀವನವನ್ನು ಕಳೆಯಬಾರದೆನ್ನುವ ಉದ್ದೇಶದಿಂದ ಭಾವನೆಯನ್ನು ಹೇಳಿ ಮಾಡುತ್ತಿದ್ದಾರೆ ಹೊರತು, ಕರ್ಮಗಳು ಹೋಗುತ್ತವೆನ್ನುವ ಉದ್ದೇಶದಿಂದ ಮಾಡಲಿಲ್ಲ. ಮರಣಗಳು ಮೊದಲೇ ನಿರ್ಣಯಿಸಲ್ಪಟ್ಟಿರುತ್ತವೆ. ಅವುಗಳನ್ನು ಯಾರೂ ಬದಲಾಯಿಸಲಾರರು. ದಂಪತಿಗಳು ಜ್ಞಾನ ಜೀವನವನ್ನು ಕಳೆದರೆ ಬಂದಿರುವ ಜ್ಞಾನ ಶಕ್ತಿಯಿಂದ ಅವರು ಅನುಭವಿಸುವ ಕರ್ಮದಿಂದ ಸ್ವಲ್ಪ

ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದೆ ಆದರೆ, ಮರಣದಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಮದುವೆ ಜ್ಞಾನಜೀವನವನ್ನು ಕಳೆಯುವುದಕ್ಕೆ ತಿಳಿಸುವ ವೇದಿಕೆಯೇ ಹೊರತು ಮಂತ್ರ ರಹಿತವಾಗಿ ಮಾಡುವ ಮದುವೆಯಲ್ಲಿ ಕರ್ಮ ಹೋಗುತ್ತದೆಂದಾಗಲೀ, ಮರಣ ತಪ್ಪಿಹೋಗುತ್ತದೆಂದಾಗಲೀ ಎಲ್ಲೂ ಹೇಳಲಿಲ್ಲ.

**52) ಪ್ರಶ್ನೆ :– ವಿನಾಯಕ ವಿಗ್ರಹಗಳು ಹಾಲು ಕುಡಿಯುವುದು ಎಷ್ಟು ವಿಡ್ಡೂರವೋ ಹಾಗೆಯೇ ಬ್ರಹ್ಮಯ್ಯನವರ ವಿಗ್ರಹ ಕಣ್ಣಿನಿಂದ ನೀರು ಸೋರುವುದು ಅಷ್ಟೇ ವಿಡ್ಡೂರವಾಗುತ್ತದೆ. ವಾಸ್ತವವಾಗಿ ಭಾರತೀಯರನ್ನು ಸೆಂಟಿಮೆಂಟಲ್ ಫೂಲ್ಸ್ ಎನ್ನುತ್ತೇನೆ. ನೀವೇನೆನ್ನುತ್ತೀರಾ?**

**ಉತ್ತರ :–** ವಿನಾಯಕ ವಿಗ್ರಹಗಳು ಹಾಲು ಕುಡಿಯುವುದು ಆಶ್ಚರ್ಯವೇನೂ ಅಲ್ಲ. ಒಣಗಿಹೋದ ಪ್ರತಿಮೆ ತೇವಾಂಶವನ್ನು ಹೀರಿಕೊಳ್ಳುವುದರಿಂದ ವಿನಾಯಕನು ಹಾಲು ಕುಡಿದಿದ್ದಾನೆಂದು ಎಲ್ಲರೂ ಅಂದುಕೊಂಡಿರಬಹುದು. ತಂಬಿಗೆ ನೀರನ್ನು ಬಂಡೆ ಮೇಲೆ ಹಾಕಿದರೇ ಸ್ವಲ್ಪ ಹೊತ್ತಿಗೆ ನೀರು ಬಂಡೆ ಮೇಲೆ ಇಲ್ಲದಂತೆ ಹೋಗುತ್ತಿವೆ. ಆಗ ನೀರನ್ನು ಬಂಡೆ ಕುಡಿದಿದೆಯೆಂದು ಹೇಳುತ್ತೇವಾ! ಅಥವಾ ಗಾಳಿ ಕುಡಿದಿದೆಯೆಂದು ಹೇಳುತ್ತೇವೆ! ಇರುವ ನೀರು ಇಲ್ಲದಂತೆ ಹೋಗುವುದು ಸುಲಭ ಆದರೆ, ಇಲ್ಲದ ನೀರು ಬಂಡೆ ಮೇಲೆ ಬರುವುದು ನಡೆಯುವುದಿಲ್ಲ. ಹಾಗೆಯೇ ಇರುವ ಹಾಲನ್ನಾಗಲೀ ನೀರನ್ನಾಗಲೀ ಒಣಗಿಹೋದ ವಿಗ್ರಹ ನೀರನ್ನು ಹೀರಿಕೊಳ್ಳುವುದರಿಂದ ವಿಗ್ರಹ ನೀರು ಕುಡಿದಿದೆಯೆಂದು ಹೇಳುತ್ತಿದ್ದೇವೆ. ವಿನಾಯಕನಾಗಲೀ, ಮತ್ತು ಯಾವ ವಿಗ್ರಹವಾಗಲೀ ನೀರನ್ನು ಗ್ರಹಿಸ ಬಹುದು ಆದರೆ ನೀರನ್ನು ಬಿಡುಗಡೆ ಮಾಡುವುದಿಲ್ಲ. ನೀರನ್ನು ಬಿಡುಗಡೆ ಮಾಡುವುದಕ್ಕೆ ಪ್ರತಿಮೆಯಲ್ಲಿ ಮೊದಲೇ ನೀರು ಇರಬೇಕು. ಆದ್ದರಿಂದ ಯೋಚಿಸುವವರಿಗೆ ವಿನಾಯಕನು ಹಾಲನ್ನು ಕುಡಿಯುವುದು ವಿಚಿತ್ರವಲ್ಲ. ಆದರೇ ಒಣಗಿಹೋದ ಕಲ್ಲಿನ ಪ್ರತಿಮೆಯಿಂದ ಅಂದರೆ ಬ್ರಹ್ಮಯ್ಯನವರ ವಿಗ್ರಹದಿಂದ ಒಂದು ಕಣ್ಣಿನಲ್ಲಿಯೇ ನೀರು ಸೋರುವುದು ವಿಚಿತ್ರವೇ ಆಗುತ್ತದೆ. ವಿನಾಯಕನು ಹಾಲು ಕುಡಿಯುವು ದನ್ನು, ಬ್ರಹ್ಮಯ್ಯನವರ

ಪ್ರತಿಮೆಗೆ ಕಣ್ಣೀರು ಬರುವುದನ್ನು ಒಂದೇ ವಿಧವಾಗಿ ಹೋಲಿಸಬಾರದು. ಎರಡರಲ್ಲೂ ಎಷ್ಟೋ ವೈವಿಧ್ಯವಿದೆ. ವಿನಾಯಕನು ಹಾಲು ಕುಡಿಯುವುದು ಎಲ್ಲಾದರೂ ನಡೆಯಬಹುದು, ಯಾರಾದರೂ ಕುಡಿಸಬಹುದು. ಬ್ರಹ್ಮಯ್ಯನವರ ಪ್ರತಿಮೆಯಿಂದ ಬಲ ಕಣ್ಣಿನಲ್ಲಿ ನೀರು ಸೋರುವುದು ನಾನು ಸ್ವತಃವಾಗಿ ನೋಡಿದ್ದೇನೆ. ಅಲ್ಲಿ ಅಜ್ಞಾನ ಕೆಲಸಕ್ಕೆ ಬರುವುದಿಲ್ಲ. ಕೇವಲ ಜ್ಞಾನ ಮಾತ್ರ ಕೆಲಸಕ್ಕೆ ಬರುತ್ತದೆ. ಬ್ರಹ್ಮಯ್ಯನವರ ಬಲ ಕಣ್ಣಿನಲ್ಲಿ ನೀರು ಸೋರುವುದಕ್ಕೆ ಕಾರಣ ಜ್ಞಾನದಿಂದ ತಿಳಿಯಲಾಗುತ್ತದೆ.

**53) ಪ್ರಶ್ನೆ :– ನಿಮ್ಮ ಗ್ರಂಥ ಚರ್ಮಕ್ಕೆ ಬಾಧೆ ಇರುವ ಕಡೆ ಅಂಟಿಕೊಂಡಹಾಗೆ ಹೇಳಿಕೊಳ್ಳುತ್ತಿದ್ದಾರೆ. ಬಾಧೆಇಲ್ಲದಿದ್ದರೂ ನಿಮ್ಮ ಗ್ರಂಥಗಳು ಚರ್ಮಕ್ಕೆ ಅಂಟಿ ಕೊಳ್ಳುವುದು ನಡೆಯುತ್ತಿದೆ. ಅದಕ್ಕೆ ನಿಮ್ಮ ಸಮಾಧಾನ ಏನು? ನಿಮ್ಮ ಗ್ರಂಥಗಳೇ ಅಲ್ಲದೆ ಬೇರೆ ಗ್ರಂಥಗಳು ಕೂಡಾ ಹಾಗೆ ಅಂಟಿಕೊಳ್ಳುವುದು ಗಮನಿಸಿದ್ದೇವೆ. ಆ ಗ್ರಂಥಗಳು ಸೈನ್ಸ್ ಪುಸ್ತಕಗಳು. ಮತ್ತೆ ಅವು ಏಕೆ ಅಂಟಿಕೊಂಡಂತೆ ವಿವರಿಸುತ್ತೀರಾ?**

**ಉತ್ತರ :–** ನಮ್ಮ ಗ್ರಂಥಗಳಲ್ಲಿ ಆತ್ಮಜ್ಞಾನವಿದೆ. ಅದಕ್ಕೂ ಮೀರಿ ಏನೂ ಇಲ್ಲ. ಕರ್ಮದಿಂದ ಬಾಧೆಪಡುವ ಮನುಷ್ಯರಿಗೆ ನಮ್ಮ ಗ್ರಂಥಗಳು ಅಂಟಿಕೊಂಡು ಅವರ ಕರ್ಮಗಳನ್ನು ಇಲ್ಲದಂತೆ ಮಾಡಿದಹಾಗೆ ಕರ್ಮಗಳಿಂದ ಹೊರ ಬಿದ್ದವರೇ ಹೇಳಿದಾಗ ಕೇಳಿದ್ದೇವೆ. ನಮ್ಮ ಗ್ರಂಥಗಳು ಅಂಟಿಕೊಂಡಿರುವುದು ಪ್ರತ್ಯಕ್ಷವಾಗಿ ನೋಡದಿದ್ದರೂ ಕೆಲವು ಫೋಟೋಗಳಲ್ಲಿ ನೋಡಿದ್ದೇನೆ. ಗ್ರಂಥಗಳ ಮೇಲೆ ವಿಶ್ವಾಸವಿರುವವರಿಗೆ ಅಂಟಿಕೊಳ್ಳಬಹುದೆಂದು ಅಂದುಕೊಂಡಿದ್ದೇವೆ. ಕಾಲ ಕಳೆದಂತೆಲ್ಲ ಬಹಳ ಕಡೆ ಬಹಳ ಜನರಿಗೆ ಗ್ರಂಥಗಳು ಅಂಟಿಕೊಂಡು ಕ್ಯಾನ್ಸರ್, ಎಯಿಡ್ಸ್ ಮುಂತಾದ ದೀರ್ಘ ಕಾಲ ರೋಗಗಳನ್ನು ಕೂಡಾ ಇಲ್ಲದಂತೆ ಮಾಡಿದಹಾಗೆ ಕೇಳಿದ್ದೇವೆ. ನಮ್ಮ ಅಂದಾಜಿನ ಪ್ರಕಾರ ಗ್ರಂಥಗಳಲ್ಲಿ ಪ್ರತ್ಯೇಕಿಸಿ ಆತ್ಮ ವಿಧಾನ, ಆತ್ಮಜ್ಞಾನ ಇರುವುದರಿಂದ ನಂಬಿಕೆ ಇರುವ ಜೀವಾತ್ಮಗಳ ಶರೀರಗಳಲ್ಲಿನ ಆತ್ಮ ತನ್ನ ಜ್ಞಾನ ಗ್ರಂಥಗಳನ್ನು ಆಕರ್ಷಿಸಿಕೊಂಡು ಗ್ರಂಥದಲ್ಲಿನ ಆತ್ಮಜ್ಞಾನದಿಂದ ಕರ್ಮ ಸುಟ್ಟು ಹೋಗುವಂತೆ ಮಾಡುತ್ತಿದೆಯೆಂದು

ಅಂದುಕೊಂಡಿದ್ದೇವೆ. ಗ್ರಂಥಗಳು ಮನುಷ್ಯನನ್ನು ಅಂಟಿಕೊಂಡಿಲ್ಲವೆಂದು ಮನುಷ್ಯನಲ್ಲಿನ ಆತ್ಮವೇ ಗ್ರಂಥಗಳನ್ನು ಆಕರ್ಷಿ ಸಿಕೊಳ್ಳುತ್ತಿದೆಯೆಂದು ಇದೆಲ್ಲವೂ ಆತ್ಮ ಮಾಡುವ ಕೆಲಸವೇಯೆಂದು ಅಂದುಕೊಳ್ಳುತ್ತಿದ್ದೇವೆ. ಇತರೆ ಗ್ರಂಥಗಳನ್ನು ಇಟ್ಟುಕೊಂಡರೂ, ಅಂಟಿಕೊಂಡಿಲ್ಲವೆಂದು ಬಹಳ ಜನ ಹೇಳಿದ್ದಾರೆ. ಈಗ ನೀವು ಬಾಧೆ ಇಲ್ಲದಿದ್ದರೂ ಗ್ರಂಥಗಳು ಅಂಟಿಕೊಂಡಿವೆ ಎಂದಿದ್ದೀರ. ಅದು ನಡೆದಿರಬಹುದು. ಬಾಧೆಗಳು ತಿಳಿಯದಿದ್ದರೂ ಕರ್ಮಗಳು ಒಳಗೆ ಇರುವು ದರಿಂದ ಗ್ರಂಥಗಳು ಅಂಟಿಕೊಂಡಿರ ಬಹುದು. ಈಗ ನೀವು ಸೈನ್ಸ್ ಗ್ರಂಥಗಳು ಕೂಡಾ ಅಂಟಿಕೊಂಡಿವೆ ಎಂದಿದ್ದೀರ. ಆ ವಿಷಯ ನಮಗೆ ತಿಳಿದಿಲ್ಲ. ಅಂಟಿಕೊಂಡು ಕರ್ಮವನ್ನು ಕಳೆದಿವೆಯಾ ಇಲ್ಲವಾ ಎಂದು ಹೇಳಲಿಲ್ಲ. ಕೆಲವರನ್ನು ದೇವರೇ ತಪ್ಪು ಮಾರ್ಗದಲ್ಲಿ ಕಳುಹಿಸುವನೆಂದು ದೈವ ಗ್ರಂಥದಲ್ಲಿ ಬರೆದಿರುವುದನ್ನು ನೋಡಿದ್ದೇನೆ. ದೇವರ ಮೇಲೆ ಶ್ರದ್ಧೆ ಇರುವವರನ್ನು ದೈವಮಾರ್ಗದಲ್ಲಿ ಕಳುಹಿಸುತ್ತೇನೆಂದೂ, ಶ್ರದ್ಧೆ ಇಲ್ಲದವರನ್ನು ಅಪಮಾರ್ಗದಲ್ಲಿ ಕಳುಹಿಸುವೆನೆಂದು ತಿಳಿಸಿದ್ದಾನೆ. ಆದ್ದರಿಂದ ಕೆಲವರನ್ನು ತಪ್ಪು ಮಾರ್ಗದಲ್ಲಿ ಕಳುಹಿಸುವುದಕ್ಕೆ ಆ ವಿಧವಾಗಿ ಆತ್ಮವೇ ಮಾಡಿರಬಹುದು. ಯಾವುದು ಏನಾದರೂ ನಾವು ಪ್ರತ್ಯಕ್ಷವಾಗಿ ಸೈನ್ಸ್‌ಗೆ ಸಂಬಂಧಿಸಿದ ಗ್ರಂಥಗಳು ಅಂಟಿ ಕೊಂಡಾಗ ನೋಡಿದರೇ ಹಿಂದಿರುವ ಸತ್ಯವನ್ನು ಹೇಳಬಲ್ಲೆನು.

**54) ಪ್ರಶ್ನೆ :– "ಕಥೆಗಳ ಜ್ಞಾನ" ಎನ್ನುವ ಗ್ರಂಥದಲ್ಲಿ ದೆವ್ವಗಳ ಕಣಿವೆ ಪ್ರಾಂತ ದೇಶದಲ್ಲಿ ಎಲ್ಲಿದೆ? ಇಂದಿಗೂ ಅದು ಇದೆಯಾ? ಕಲ್ಪಿತವಾ?**

**ಉತ್ತರ :–** ಆ ಗ್ರಂಥದಲ್ಲಿ ಆ ಹೆಸರು ಕಲ್ಪಿತವೇ ಆದರೇ ಉಪ್ಪಲಪಾಡು ಕೋನ ಎನ್ನುವುದು ಇರುವುದು ವಾಸ್ತವವೇ. ಆ ಗ್ರಂಥದಲ್ಲಿ ಒಬ್ಬ ಮಹರ್ಷಿ ಮರದಿಂದ ಇಳಿದುಬಂದು ಕಣಿವೆ ನೀರಿನಲ್ಲಿ ಸ್ನಾನ ಮಾಡಿ ಆಲದ ಮರದ ಕೆಳಗೆ ಗುಡಿ ಮುಂದೆ ತಪಸ್ಸು ಮಾಡುವವನೆಂದು ಬರೆದಿದ್ದೇವೆ ಅಲ್ಲವೆ! ಅದೇ ಉಪ್ಪಲಪಾಡು ಕಣವೆ. ಆದರೇ ವಾಸ್ತವ ವಿಷಯಗಳನ್ನೇ ಕಲ್ಪಿತ ಕಥೆಗಳೊಂದಿಗೆ ಹೇಳುವುದಾಗಿದೆ. ದೆವ್ವಗಳ ಕಣಿವೆ ಎನ್ನುವುದು ಗ್ರಂಥದಲ್ಲಿ

ಹೇಳಿದ ವಿಧವಾಗಿ ಎಲ್ಲೂ ಇಲ್ಲ. ಆದರೂ ಕಥೆಗಳಲ್ಲಿ ಹೇಳಿರುವವೆಲ್ಲಾ ವಾಸ್ತವವೇ ಯೆಂದು ತಿಳಿಯಬೇಕು.

**55) ಪ್ರಶ್ನೆ :– ಕಥೆಗಳ ಜ್ಞಾನದಲ್ಲಿನ ಭೇತಾಳನ ಕಥೆಯಲ್ಲಿ ಇರುವ ಮೂರು ಪ್ರಶ್ನೆಗಳಿಗೆ ಸಮಾಧಾನ ಎಷ್ಟು ಯೋಚಿಸಿದರೂ ಉತ್ತರಗಳು ಸಿಗುತ್ತಿಲ್ಲ. ಯಾವುವೋ ಸಮಾಧಾನಗಳು ಬಂದರೂ ವಾಸ್ತವ ಅಲ್ಲವೇನೋ ಅನಿಸುತ್ತಿದೆ. ಆದ್ದರಿಂದ ದಯೆಮಾಡಿ ಆ ಕಥೆ ವಿವರವನ್ನು ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಬೇಕೆಂದು ಕೋರುತ್ತಿದ್ದೇವೆ?**

**ಉತ್ತರ :–** ನಿಮ್ಮಲ್ಲಿ ಅಂದರೆ ಓದುತ್ತಿರುವವರಲ್ಲಿ ಉತ್ಸಾಹವನ್ನು ತರಿಸುವುದಕ್ಕಾಗಿ ಆ ಕಥೆಯನ್ನು ಹೇಳಿದ್ದೇವೆ ಹೊರತು, ಅದರಲ್ಲಿ ವಾಸ್ತವವಾಗಿ ಉತ್ತರಗಳು ಇರುವುದಿಲ್ಲ. ಆಲೋಚಿಸಿದರೂ ಉತ್ತರಗಳು ಸಿಗಬಾರದೆನ್ನುವ ಉದ್ದೇಶದಿಂದಲೇ ಬರೆದಿದ್ದೇವೆ.

**56) ಪ್ರಶ್ನೆ :– ಎಂಟು ಅಡಿಗಳ ವಿಗ್ರಹದಲ್ಲಿ ಆ ವಿಗ್ರಹವೆಲ್ಲಾ ಆವರಿಸಿ ಆ ದೇವತೆ ಆತ್ಮ ಇರುತ್ತದಾ? ಒಂದು ವೇಳೆ ಅಷ್ಟು ಅಡಿಗಳಾಗಿ ಇರುವ ದೇವತೆಗಳು ವಿಗ್ರಹದಿಂದ ಹೊರಗೆ ಬಂದು ಸಂಚರಿಸಿದರೇ ಅದನ್ನು ನೋಡುವವರಿಗೆ ಅಷ್ಟು ಎತ್ತರದಲ್ಲೇ (ಉದ್ದವಾಗಿ) ಕಾಣಿಸುತ್ತದಾ?**

**ಉತ್ತರ :–** ವಿಗ್ರಹ ಎಷ್ಟು ಎತ್ತರ ಇರುತ್ತದೋ ಅಷ್ಟು ಎತ್ತರ ಸೂಕ್ಷ್ಮಗಳು ಕಾಣಿಸುವುದು ವಿಚಿತ್ರವೇನೂ ಅಲ್ಲ. ವಿಗ್ರಹಗಳು ಇಲ್ಲದ ಸೂಕ್ಷ್ಮಗಳು ಬೆಟ್ಟದಷ್ಟು ಎತ್ತರ, ಪರ್ವತದ ಎತ್ತರ ಕಾಣಿಸಿದ ಸಂಘಟನೆಗಳು ಇವೆ. ಅದನ್ನನುಸರಿಸಿ ನೋಡಿದರೇ ಎಂಟು ಅಡಿಗಳ ಸೂಕ್ಷ್ಮ ಕಾಣಿಸುವುದು ವಿಚಿತ್ರವಲ್ಲ.

**57) ಪ್ರಶ್ನೆ :– ನೀವು ಇಷ್ಟು ಹೊಸ ವಿಷಯಗಳು ಯಾವ ಗ್ರಂಥದಲ್ಲಿ ನೋಡಿ ಹೇಳುತ್ತಿದ್ದೀರ?**

**ಉತ್ತರ :–** ಗ್ರಂಥಗಳನ್ನು ಓದುವ ಹವ್ಯಾಸ ನನಗಿಲ್ಲ. ನಾನು ಯಾವ ಗ್ರಂಥ

ದಲ್ಲಿಯೂ ನೋಡಲಿಲ್ಲ. ನನ್ನಲ್ಲಿನ ಆತ್ಮ ತಿಳಿಸಿದರೆ ನಾನು ನಿಮಗೆ ಮಧ್ಯವರ್ತಿಯಂತೆ ತಿಳಿಸುತ್ತಿದ್ದೇನೆ. ಅಷ್ಟು ಹೊರತು ನಾನು ಸ್ವತಃವಾಗಿ ಹೇಳಿದ ಹೊಸ ವಿಷಯಗಳು ಏನೂ ಇಲ್ಲ. ಏನು ಹೇಳಿದರೂ ನನ್ನ ಆತ್ಮ ಹೇಳಬೇಕಾಗಿರುವುದೇ.

**58) ಪ್ರಶ್ನೆ :– ಒಬ್ಬನು ಕಳ್ಳತನ ಮಾಡುವಾಗ ಯಾವ ಭಾವನೆಯೊಂದಿಗೆ ಮಾಡುತ್ತಿದ್ದಾನೋ, ಆ ಭಾವನೆಗೆ ಸರಿಯಾದ ಕರ್ಮ ಬರುತ್ತದಲ್ಲವೆ! ನಾನು ಮಾಡುತ್ತಿರುವುದು ಪಾಪಕರ್ಮ ಅಂದುಕೊಳ್ಳದೆ, ಯಾವ ಕೆಲಸ ಸಿಗದೆ ಬರಗಾಲದಿಂದ ಒಬ್ಬ ಧನಿಕನ ಮನೆಯಲ್ಲಿ ಕಳ್ಳತನ ಮಾಡಿ ತಿಂದರೇ ತಪ್ಪೇನಿದೆ? ಎಂದು "ರಾಬಿನ್ ಹುಡ್"ನ್ನು ಅನುಸರಿಸಿದರೆ ಅವರಿಗೆ ಪಾಪ ಬರಬಾರದಲ್ಲವೆ! ಅಷ್ಟಕ್ಕೂ ಪಾಪದ ಕೆಲಸಗಳು ಇವು ಎಂದು ಲಿಸ್ಟು ಇದೆಯಾ? ಇದ್ದರೆ ಎಲ್ಲಿದೆ. ಒಳ್ಳೆಯ ಆಡಿಟರ್‌ನೊಂದಿಗೆ ಆಡಿಟ್ ಮಾಡಿಸುತ್ತೇವೆ.**

**ಉತ್ತರ :–** ಅಂತಹ ಲಿಸ್ಟು ಯಾವುದೂ ಇಲ್ಲ. ಇವು ಕೆಟ್ಟ ಕೆಲಸಗಳೆಂದು ದೇವರು ಹೇಳಲಿಲ್ಲ ಅಲ್ಲವೆ! ಮನುಷ್ಯ ಮಾಡುವ ಕೆಲಸದಿಂದ ಪಾಪ ಬರಲಿಲ್ಲ. ಆತನು ಅಹಂನಿಂದ "ನಾನೇ ಈ ಕೆಲಸವನ್ನು ಮಾಡುತ್ತಿದ್ದೇನೆ" ಎಂದು ಅಂದುಕೊಳ್ಳುವುದರಿಂದ ನಡೆದಿರುವ ಕೆಲಸದಲ್ಲಿ ಪಾಪಪುಣ್ಯಗಳು ಏರ್ಪಡುತ್ತಿವೆ. ಅಷ್ಟೇ ಹೊರತು ದೇವರ ದೃಷ್ಠಿಯಲ್ಲಿ ಒಳ್ಳೆಯ ಕೆಟ್ಟ ಕಾರ್ಯಗಳು ಇಲ್ಲ.

**59) ಪ್ರಶ್ನೆ :– ವ್ಯಭಿಚಾರ ಮಾಡುವವನ ಭಾವನೆಯಲ್ಲಿ ನಾನು ಪಾಪ ಮಾಡುತ್ತಿದ್ದೇನೆ ಎನ್ನುವ ಭಾವನೆ ಇರುವುದಿಲ್ಲವಲ್ಲವೆ! 'ನಾನು ಆನಂದಿಸುತ್ತಿದ್ದೇನೆ' ಎನ್ನುವ ಭಾವನೆಯೇ ಇದ್ದರೇ ಪಾಪ ಎನ್ನುವ ಕರ್ಮ ಹೇಗೆ ತಗಲುತ್ತದೆ? ಏಕೆಂದರೆ ಕೆಲಸಕ್ಕಿಂತ ಕೆಲಸದಲ್ಲಿರುವ ಭಾವನೆಯೇ ಮುಖ್ಯವಲ್ಲವೆ! "ಮೋಹದ ನೋಟದಿಂದ ಒಬ್ಬ ಸ್ತ್ರೀಯನ್ನು ನೋಡಿದರೂ ವ್ಯಭಿಚಾರಮಾಡಿದಂತೆ ಅಲ್ಲವೆ!" ಎಂದು ಪ್ರಭು ಹೇಳಿದ್ದಾನೆ. ಕೆಲಸ ಇಲ್ಲದಂತೆ ಕೆಲಸದಲ್ಲಿರುವ ಭಾವನೆಯೇ ಅಲ್ಲವೆ! ಮುಖ್ಯ. ಮೇಲಿನ ಕೆಲಸಗಳಲ್ಲಿ ಜೀವಿಯ ಭಾವನೆಗಳು 'ಆನಂದಿಸುತ್ತಿದ್ದೇನೆ' ಎಂದಲ್ಲವೆ! ಮತ್ತೆ ಪಾಪ ಎನ್ನುವುದು ಮಧ್ಯದಲ್ಲಿ ಎಲ್ಲಿಂದ ಬಂದಿದೆ?**

**ಉತ್ತರ :–** "ನಾನು ಆನಂದಿಸುತ್ತಿದ್ದೇನೆ" ಎನ್ನುವುದಕ್ಕಿಂತ ಮೊದಲು ಆನಂದ ಕೆಲಸ ಮಾಡಿದರೇನೆ ಬಂದಿದೆಯೆಂದು ಅವನಿಗೆ ತಿಳಿದಿದೆ. ಕೆಲಸವನ್ನು ನಾನು ಮಾಡುತ್ತಿದ್ದೇನೆಂದು ಇತರರೊಂದಿಗೆ ಹೇಳದಿದ್ದರೂ ಆನಂದ ಹೊಂದುವ ಕಾರ್ಯ ಮಾಡುವುದಕ್ಕೆ ಮೊದಲು ಸ್ವಲ್ಪ ಪ್ರಯತ್ನಿಸಿ ಕಾರ್ಯವನ್ನು ಮಾಡುವುದಕ್ಕೆ ಶುರು ಮಾಡುತ್ತಾನೆ. ಆಗ ಸ್ವಲ್ಪ ಬುದ್ಧಿಯನ್ನು, ಸ್ವಲ್ಪ ಮನಸ್ಸನ್ನು, ಸ್ವಲ್ಪ ಕರ್ಮೇಂದ್ರಿಯಗಳ ಕೆಲಸವನ್ನು ಮಾಡಬೇಕಾಗಿರುತ್ತದೆ. ಆಗ ಆ ಕೆಲಸವನ್ನು ತಾನು ಮಾಡುತ್ತಿದ್ದೇನೆನ್ನುವ ಭಾವನೆ ಎಲ್ಲರಲ್ಲಿ ಅಂಟಿಕೊಂಡಿರುತ್ತದೆ. ಯಾವಾಗ ಬುದ್ಧಿ ಕೆಲಸ ಮಾಡುತ್ತದೋ ಆಗ ಅಹಮ್ ಕೆಲಸ ಮಾಡುತ್ತದೆ. ಅಹಮ್ ನನ್ನ ಕೈಗಳು ಕೆಲಸಮಾಡುತ್ತಿವೆಯೆನ್ನುವ ಭಾವನೆಯಿಂದಲೇ ಮಾಡುತ್ತವೆ. ಅಹಮ್ ಎನ್ನುವುದು ನಡೆಯುವ ಪ್ರತಿ ಕೆಲಸದಲ್ಲಿಯೂ ಭಾಗವಾಗಿ ಇರುವುದರಿಂದ ಕಾರ್ಯವನ್ನು ಮಾಡಿದಾಗ ಸುಖವನ್ನು ಅನುಭವಿಸಿದ್ದೇನೆನ್ನುವ ಭಾವನೆ ಇರುತ್ತದೆ. ಸುಖ ಗಾಳಿಯಲ್ಲಿ ಬಂದು ಆತನನ್ನು ಸೇರಲಿಲ್ಲ. ಹಾಗೆ ಬಂದು ಸೇರುವುದೇ ಆದರೇ ಅಲ್ಲಿ ಕಾರ್ಯವಿಲ್ಲ, ಅಹಮ್ ಇಲ್ಲ. ಆಗ ಪಾಪವಿಲ್ಲ. ವ್ಯಭಿಚಾರ ಮಾಡುವುದು ಎನ್ನುವುದು ಕಾರ್ಯದೊಂದಿಗೆ ಕೂಡಿಕೊಂಡಿರುವುದೇ ಅಲ್ಲವೆ! ಚಿಕ್ಕ ಕಾರ್ಯದೊಂದಿಗೆ ಕೂಡಿಕೊಂಡಿರುವುದಾದರೂ ಅವನು ನೂರರಷ್ಟು **'ನಾನು'** ಎನ್ನುವ ಭಾವನೆಯಿಂದಲೇ ಮಾಡುತ್ತಿದ್ದಾನೆ. 'ನಾನು' ಎನ್ನುವ ಭಾವನೆಯಿಂದಲೇ ಅನುಭವಿಸುತ್ತಿದ್ದಾನೆ. ಒಂದು ವೇಳೇ ಯಾರಾದರೂ ಕರ್ಮಯೋಗ ಪದ್ಧತಿ ತಿಳಿದು ಕಾರ್ಯವನ್ನು ಮಾಡುವುದಾದರೆ ಅನುಭವವನ್ನು ಜೀವಿ ಹೊಂದಿದರೂ ಕರ್ಮವನ್ನು ಜೀವಿ ಹೊಂದುವುದಿಲ್ಲ. ಹಾಗಲ್ಲದೆ ಮಾಡುವವನಿಗೆ ಕರ್ಮ ತಪ್ಪದೆ ಅಂಟುತ್ತದೆ. ಕರ್ಮವನ್ನು ಸುಡುತ್ತಾ ಕರ್ಮಯೋಗವೆನ್ನುವುದನ್ನು ಯಜ್ಞವಾಗಿ ಆಚರಿಸುತ್ತಾ ಮಾಡುವುದರಿಂದ ಯಜ್ಞದಲ್ಲಿ ಕರ್ಮ ದಹಿಸಲ್ಪಡುತ್ತಿದೆ. ಈ ವಿಷಯವಾಗಿ ಭಗವದ್ಗೀತೆ ಕರ್ಮಯೋಗದಲ್ಲಿ ಒಂಬತ್ತನೆಯ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ...

**ಶ್ಲೋ॥ ಯಜ್ಞಾರ್ಥಾತ್ಕ ರ್ಮಣೋ ನ್ಯತ್ರ ಲೋಕೋಯಂ ಕರ್ಮಬಂಧನಃ ।**
**ತದರ್ಥಂ ಕರ್ಮ ಕೌಂತೇಯ! ಮುಕ್ತ ಸಂಗಸ್ಸಮಾಚರ ॥**

**ಭಾವಾರ್ಥ :– "ಯಜ್ಞ ಸಂಬಂಧವಾದ ಕರ್ಮವನ್ನು ಆಚರಿಸುವುದಕ್ಕಿಂತ ಇತರೆಯಾಗಿ ಮಾಡುವುದರಿಂದ ಕರ್ಮ ಅಂಟಿಕೊಳ್ಳುತ್ತದೆ. ಕಾರ್ಯ ಫಲದಲ್ಲಿ ಧ್ಯಾಸವನ್ನು ಬಿಟ್ಟು ಕಾರ್ಯಗಳನ್ನು ಮಾಡುವುದು ಯಜ್ಞಕರ್ಮವಾಗುತ್ತದೆ. ಅಂದರೆ ಕರ್ಮ ಸುಟ್ಟುಹೋಗುತ್ತದೆ. ಇಲ್ಲದೆ ಹೋದರೆ ಕರ್ಮ ಬಂಧನಗಳು ಉಂಟಾಗುತ್ತಿರುತ್ತವೆ."** ಎಂದು ಹೇಳುವುದಾಗಿದೆ. ಅಗ್ನಿಗೆ ಹೊಗೆ ಅಂಟಿಕೊಂಡ ಹಾಗೆ ಪ್ರತಿ ಕಾರ್ಯಕ್ಕೂ ಅಹಂ ಎನ್ನುವುದರಿಂದ ಕರ್ಮ ಅಂಟಿಕೊಂಡಿರುತ್ತದೆ. ಅದನ್ನು ಯಜ್ಞ ಸಂಬಂಧವಾಗಿ ಅಂದರೆ ಕರ್ಮವನ್ನು ದಹಿಸಿ ಇಲ್ಲವೆ ಕರ್ಮವನ್ನು ಅಂಟದ ರೀತಿಯಲ್ಲಿ ಕಾರ್ಯವನ್ನು ಮಾಡು ಎಂದು ಹೇಳಿದ್ದಾನೆ. ಹಾಗಲ್ಲದೆ ಸುಖದ ಮೇಲಿನ ಆಸೆಯೊಂದಿಗೆ ಕೆಲಸ ಮಾಡಿದರೆ ಆಸಕ್ತಿಯಿಂದ ಮಾಡುವ ಕಾರ್ಯವೇ ಕರ್ಮವಾಗಿ ಬದಲಾಗುತ್ತಿದೆ. ಪ್ರತಿ ಕಾರ್ಯಕ್ಕೂ ಕರ್ಮ ಇರುವುದು ಸಹಜ. ಆದರೇ ಕೆಲವರು ಯಜ್ಞ ಪದ್ಧತಿಯಲ್ಲಿ (ಕರ್ಮಯೋಗ ಪದ್ಧತಿಯಲ್ಲಿ) ಹೊಂದದಂತೆ ಇದ್ದಾರೆ.

**60) ಪ್ರಶ್ನೆ :– ಬಾಹ್ಯ ಯಜ್ಞಗಳು ಮಾಡಿದರೆ ತಪ್ಪೇನು?**

**ಉತ್ತರ :–** ಬಾಹ್ಯ ಯಜ್ಞಗಳು ಅಂತರ್ ಯಜ್ಞಗಳಿಗೆ ನಮೂನೆಗಳು. ಆದರೇ ಅಂತರ್ ಯಜ್ಞಗಳಾದ ದ್ರವ್ಯ, ಜ್ಞಾನ ಎನ್ನುವ ಎರಡು ಯಜ್ಞಗಳಲ್ಲಿ ದ್ರವ್ಯಯಜ್ಞವನ್ನು ಎಲ್ಲರೂ ಮಾಡುತ್ತಿದ್ದಾರೆ ಹೊರತು, ಜ್ಞಾನ ಯಜ್ಞವನ್ನು ಯಾರೂ ಮಾಡುತ್ತಿಲ್ಲ. ಜ್ಞಾನಯಜ್ಞವನ್ನು ಮಾಡಲ್ಪಟ್ಟಾಗ ಯಾರಾದರೂ ಕರ್ಮಗಳಿಂದ ಹೊರಗೆ ಬೀಳುತ್ತಾನೆ. ಹಾಗಲ್ಲದೆ ಸುಖದ ಮೇಲೆಯೇ ಧ್ಯಾಸದಿಂದ ಮಾಡುವುದರಿಂದ ಆ ಮಾಡಿರುವುದೇ ಪಾಪವಾಗಿ ಬದಲಾಗುತ್ತದೆ. ಈ ವಿಷಯವನ್ನು ತಿಳಿಯುವುದಕ್ಕೆ ಕಣ್ಣು ನೋಡುತ್ತಿದೆ, ಕಿವಿ ಕೇಳುತ್ತಿದೆ ಎಂದು ತಿಳಿದಹಾಗೆ ಅಂತರೇಂದ್ರಿಯಗಳಾದ ಮನಸ್ಸು, ಬುದ್ಧಿ, ಚಿತ್ತ, ಅಹಮ್ ವೊಂದರ

ಕೆಲಸ ತಿಳಿದಾಗ ಯಜ್ಞಗಳ ಬೆಲೆ ತಿಳಿಯುತ್ತದೆ. ಆಗ ಬಾಹ್ಯ ಯಜ್ಞಗಳು ನಾಲ್ಕು ಅಧರ್ಮಗಳಲ್ಲಿ ಒಂದು ಅಧರ್ಮವೆಂದು ತಿಳಿಯುತ್ತಿದೆ. ಬಾಹ್ಯ ಯಜ್ಞಗಳು ಮಾಡಿದರೆ ತಪ್ಪಿಲ್ಲ ಆದರೆ ಅಧರ್ಮವನ್ನು ಆಚರಿಸಿದಂತಾಗುತ್ತದೆ.

**61) ಪ್ರಶ್ನೆ :– ಈ ಮಧ್ಯೆ ಕಾಣಿಸದಂತೆ ಹೋದ (MH–370) ಆಗಲಿ, (N–32) ವಿಮಾನವಾಗಲೀ ಕಾಣಿಸದಂತೆ ಹೋದ ವಿಧಾನದಲ್ಲಿ ಬೆರ್ಮುಡಾ ಟ್ರಯಾಂಗಿಲ್‌ನಲ್ಲಿ ಇರುವ ಶಕ್ತಿ ಪ್ರಮೇಯವೇ ಎನ್ನುತ್ತೀರಾ?**

**ಉತ್ತರ :–** ಅವು ಕಾಣಿಸದಂತೆ ಹೋದ ದಿನವೇ ನನಗೆ ಏನೂ ತಿಳಿಯದೆಯೇ ಇದಕ್ಕೆ ಕಾರಣ ಬೆರ್ಮುಡಾ ಟ್ರಯಾಂಗಿಲ್ ಶಕ್ತಿಯೆಂದು ಹೇಳುವುದಾಗಿದೆ. ಎಂತಹ ಆಧಾರ ಇಲ್ಲದಂತೆ ಹೇಳಿದ ಆ ಮಾತುಗಳು ನಿಜವಾಗಿವೆ. ನಿಜಕ್ಕೂ ಆ ಶಕ್ತಿಯೇ ಕಾರಣವೆಂದು ಹೇಳಬಹುದು. ವಿಮಾನದಲ್ಲಿ ಹೋದವರೆಲ್ಲರೂ ಒಂದು ವಿಧವಾಗಿ ಅದೃಷ್ಟವಂತರೇ. ಖರ್ಚು ಇಲ್ಲದಂತೆ ಮತ್ತೊಂದು ಗ್ರಹದಲ್ಲಿ ಇಳಿದು ಅಲ್ಲಿ ದೈವಜ್ಞಾನ ತಿಳಿಯುವುದು ಅದೃಷ್ಟವೆಂದೇ ಹೇಳಬಹುದು.

**62) ಪ್ರಶ್ನೆ :– ಕ್ರಿಸ್ತ ಪೂರ್ವ 1 ನೇ ಶತಾಬ್ದದಿಂದ ಕ್ರಿಸ್ತಶಕ 14, 15 ಶತಾಬ್ದಗಳವರೆಗು ರಾಜರು, ಚಕ್ರವರ್ತಿಗಳು ಪರಿಪಾಲಿಸಿದ್ದಾರೆ. ರಾಜರು, ರಾಜ್ಯಗಳು ಹೋಗಿ ಇಂದಿಗೆ ಹೀಗೆ ಇದೆ. ಈಗ ಎಲ್ಲಾ ದೇಶಗಳಿಗೆ ರಾಜ್ಯಾಂಗ ವ್ಯವಸ್ಥೆ ಇದೆ. ಈ ವಿಧವಾದ ರಾಜ್ಯಾಂಗದ ನಂತರ ಎಂತಹ ಪರಿಣಾಮ ಬರಲಿದೆ? ನೀವೇನೋ ಸಾವಿರ ವರ್ಷಗಳ ನಂತರ ಎಲ್ಲರೂ ಜ್ಞಾನಿಗಳಾಗುತ್ತಾರೆ ಎಂದಿದ್ದೀರ. ರಾಕೆಟ್ ಮಿಸೈಲ್ ಯುಗದಲ್ಲಿ ಇನ್ನೂ ನಾಗರಿಕತೆ ಅಭಿವೃದ್ಧಿ ಆಗುತ್ತಿರುವ ಭವಿಷ್ಯತ್ ಕಾಲದಲ್ಲಿ ಜ್ಞಾನವನ್ನು ಪ್ರಜೆಗಳು ತಿಳಿದುಕೊಳ್ಳುತ್ತಾರಾ?**

**ಉತ್ತರ :–** ಯಾವ ಯುಗದಲ್ಲಾದರೂ, ಯಾವ ಕಾಲದಲ್ಲಾದರೂ ಜ್ಞಾನ ಅಜ್ಞಾನ ಎರಡೂ ಇರುತ್ತವೆ. ಭೂಮಿ ಮೇಲೆ ನಾಗರಿಕತೆ ಕಾಲದಲ್ಲಾಗಲೀ, ಅನಾಗರಿಕ ಕಾಲದಲ್ಲಾಗಲೀ, ಜ್ಞಾನದಿಂದ ಅಜ್ಞಾನದ ಕಡೆ ಮನುಷ್ಯರು ಹೋಗುತ್ತಿರುವರು. ಜ್ಞಾನದಿಂದ ಅಜ್ಞಾನದ ಕಡೆ ಬದಲಾಗುತ್ತಾ ಬಂದಾಗ

ಇರುವ ಪ್ರಜೆಗಳಲ್ಲಿ ಶೇ. ಎರಡರಷ್ಟು ಜ್ಞಾನದವರೆಗು ನೋಡುತ್ತಿರುವ ದೇವರು ಆಗ ಧರ್ಮಗಳಿಗೆ ಮುಪ್ಪು ಏರ್ಪಟ್ಟಿದೆಯೆಂದು ಧರ್ಮ ಪ್ರತಿಷ್ಠಾಪನೆ ಪ್ರಾರಂಭಿಸುವನು. ದೇವರು ಭಗವಂತನಾಗಿ ಬಂದು ಧರ್ಮ ಪ್ರಚಾರ ಪ್ರಾರಂಭಿಸಿದಾಗ ಭೂಮಿ ಮೇಲೆ ಶೇ. ಒಂದರಷ್ಟು ಜ್ಞಾನ ಉಳಿದಿರುತ್ತದೆ. ಭಗವಂತನು ಪುನಃ ಧರ್ಮಗಳನ್ನು ನೆಲೆಗೊಳಿಸಿ, ಧರ್ಮಗಳನ್ನು ತಿಳಿಸಿ ಬಂದಿರುವ ದಾರಿಯಲ್ಲೇ ಹೋಗುತ್ತಾನೆ. ಭಗವಂತನು ಹೇಳಿದ ಜ್ಞಾನ ಪ್ರಜೆಗಳೊಳಗೆ ಹೋಗುವುದಕ್ಕೆ ಕೆಲವು ನೂರು ವರ್ಷಗಳು ಹಿಡಿಯುತ್ತದೆ. ಆಗ ಧರ್ಮಗಳು ಶೇ. ಒಂದರಿಂದ ಶೇ. ಅರ್ಧದವರೆಗು ಕಡಿಮೆಯಾ ಗುತ್ತವೆ. ಭಗವಂತನ ಜ್ಞಾನ ಪ್ರಜೆಗಳೊಳಗೆ ಹೋಗಿ ಪ್ರಜೆಗಳಿಗೆ ತಿಳಿಯುವುದಕ್ಕೆ ಪ್ರಾರಂಭಿಸಿದ ನಂತರ ಧರ್ಮಗಳಿಗೆ ಬಲ ಕೈಗೂಡಿ ಹಾಗೇ ಸ್ವಲ್ಪ ಕಾಲಕ್ಕೆ ಅಂದರೆ ಸಾವಿರ ವರ್ಷಗಳಿಗೆ ಶೇ. 90 ರಷ್ಟು ಧರ್ಮಗಳು ಬೆಳೆದು ಅಧರ್ಮಗಳು ಕ್ಷೀಣಿಸಿಹೋಗುತ್ತವೆ. ಆದರೂ ಅಂದಿಗೂ ಶೇ. 10 ರಷ್ಟು ಅಧರ್ಮಗಳು ಉಳಿದಿದ್ದು ನಂತರ ಕ್ರಮೇಣ ಅವು ಶೇ. ಹತ್ತರಷ್ಟರಿಂದ ಪುನಃ ತಮ್ಮ ಬಲವನ್ನು ಬೆಳೆಸಿಕೊಳ್ಳುತ್ತಾ ಬರುತ್ತವೆ. ಹಾಗೆ ಪುನಃ ಕಾಲ ನಡೆಯುತ್ತಿದ್ದಂತೆ ಅಧರ್ಮಗಳು ಬೆಳೆಯುತ್ತಾ ಬಂದು ಒಂದು ಯುಗ ಕಾಲಕ್ಕೆ ಅಂದರೆ ಕೆಲವು ಸಾವಿರ ವರ್ಷಗಳಿಗೆ ಪುನಃ ಅಜ್ಞಾನ ಪ್ರಜೆಗಳಲ್ಲಿ ತುಂಬಿ ಹೋಗಿ ಅಧರ್ಮಗಳು ಶೇ. 90 ವರೆಗು ಬೆಳೆದುಹೋಗುತ್ತದೆ. ಹಾಗೆಯೇ ಶೇ. ಎರಡರಷ್ಟಕ್ಕೆ ಇಳಿದುಹೋದಾಗ ಪುನಃ ಭಗವಂತನು ಬರಬೇಕಾಗಿದೆ. ಭಗವಂತನು ಬಂದು ಮೊದಲಿನ ಹಾಗೆ ಧರ್ಮಗಳನ್ನು ಬೋಧಿಸಿ ಹೋಗುತ್ತಾನೆ. ಬೋಧಿಸಿದ ಧರ್ಮಗಳು ಸ್ವಲ್ಪ ಕಾಲಕ್ಕೆ ಪ್ರಜೆಗಳೊಳಗೆ ಹರಡುವುದು ಅಧರ್ಮಗಳು ಶೇ. 90 ರಷ್ಟು ಬೆಳೆಯುವುದು ನಡೆಯುತ್ತಿರುತ್ತದೆ. ಈ ವಿಧವಾಗಿ ಧರ್ಮಾಧರ್ಮಗಳ ಸ್ಥಿತಿ ಭೂಮಿ ಮೇಲೆ ಇರುತ್ತದೆ. ಆಗಾಗ ಭಗವಂತನ ಆಗಮನ ಇರುತ್ತದೆ. ಇದೆಲ್ಲವೂ ಒಂದು ಚೈನಿನಂತೆ ನಡೆಯುತ್ತಿರುತ್ತದೆ. ಯಾವ ಕಾಲದಲ್ಲಾದರೂ ಧರ್ಮಗಳಿಗೆ ಮುಪ್ಪು ಉಂಟಾಗುತ್ತದೆ. ಯಾವಕಾಲದಲ್ಲಾದರೂ ಧರ್ಮಗಳ ಪ್ರತಿಷ್ಟಾಪನೆ ನಡೆಯುತ್ತದೆ. ಇದೆಲ್ಲವೂ ಬಂಡಿ ಚಕ್ರ ತಿರುಗುತ್ತಿದ್ದಂತೆ ನಡೆಯುತ್ತಿರುತ್ತದೆ. ಎಷ್ಟು ನಾಗರಿಕತೆ

ಕಾಲದಲ್ಲಾದರೂ ಧರ್ಮಗಳು ಇಲ್ಲದೆ ಹೋದರೆ ಭಗವಂತನಿಂದ ಪುನಃ ತಿಳಿಯಲ್ಪಡುತ್ತದೆ.

**63) ಪ್ರಶ್ನೆ :– ಈ ವಿಶ್ವದಲ್ಲಿ ಭೂಮಿಯಂತಹ ಬೇರೆ ಗ್ರಹ ಇದ್ದಿದ್ದರೆ ಅಲ್ಲಿನ ಪ್ರಜೆಗಳಿಗೆ ಜ್ಞಾನವನ್ನು ಬೋಧಿಸುವುದಕ್ಕೆ ಭಗವಂತನು ಬರುತ್ತಾನಾ? ಅಲ್ಲಿಯೂ ಸಹ ಭಗವಂತನ ಆಗಮನ ಮೂರು ಬಾರಿ ಇರುತ್ತದಾ?**

**ಉತ್ತರ :–** ಭಗವಂತನ ಆಗಮನ, ಭಗವಂತನು ಧರ್ಮಗಳನ್ನು ಬೋಧಿಸುವುದು ಭೂಮಿಮೇಲೆ ಮಾತ್ರವೇ ನಡೆಯುತ್ತಿರುತ್ತದೆ. ಬೇರೆ ಗ್ರಹದಲ್ಲಿ ಪರಿಸ್ಥಿತಿ ಬೇರೆಯಾಗಿ ಇರುತ್ತದೆ. ಅಲ್ಲಿ ಕಾಲಕ್ರಮದಲ್ಲಿ ಅಜ್ಞಾನ ಬೆಳೆಯುವುದಿಲ್ಲ. ಎಂದಿಗೂ ಜ್ಞಾನ ಒಂದೇ ವಿಧವಾಗಿ ಇರುತ್ತದೆ. ಭೂಮಿಮೇಲೆ ಭಗವಂತನಿಂದಲೇ ಜ್ಞಾನ ತಿಳಿಯಲ್ಪಡುತ್ತಿರುತ್ತದೆ. ಇತರೆ ಗ್ರಹಗಳಲ್ಲಿ ಗುರುವಿನಿಂದ ಜ್ಞಾನ ಬೋಧಿಸಲ್ಪಡುತ್ತಿರುತ್ತದೆ. ಅಲ್ಲಿರುವವರೆಲ್ಲರೂ ಜ್ಞಾನಿಗಳಾಗಿಯೇ ಇರುತ್ತಾರೆ. ಆದ್ದರಿಂದ ಅವರಿಗೆ ಗುರುವಿನ ಅವಶ್ಯವಿಲ್ಲ. ಗುರುಗಳಿಗೆ ಬೋಧಿಸುವ ಕೆಲಸ ಇರಬೇಕೆಂದು ಭೂಮಿಯಿಂದ ಸ್ವಲ್ಪ ಜನ ಮನುಷ್ಯರನ್ನು ಇತರೆ ಗ್ರಹಗಳೊಳಗೆ ಸೇರಿಸುವುದರಿಂದ ಅಲ್ಲಿ ಅವರಿಗೆ ಜ್ಞಾನವನ್ನು ಬೋಧಿಸುವರು. ಗುರುಗಳಾಗಿ ಇರುವವರು ಆ ಗ್ರಹದ ಮೇಲೆ ಅಜ್ಞಾನಿಗಳನ್ನು ಜ್ಞಾನಿಗಳಾಗಿ ಬದಲಾಯಿಸುತ್ತಿರುವರು. ಆದರೇ ಅಲ್ಲಿ ಭಗವಂತನ ಆಗಮನ ಇರುವುದಿಲ್ಲ.

**64) ಪ್ರಶ್ನೆ :– ಕೃಷ್ಣನು ವಿಶ್ವ ರೂಪವನ್ನು ಅರ್ಜುನನಿಗೆ ತೋರಿಸಿದಂತೆ, ಯೇಸು ಪ್ರಭು ಸಹ ತನ್ನ ಜೀವನದಲ್ಲಿ ವಿಶ್ವರೂಪವನ್ನು ತೋರಿಸಿದ್ದಾನಾ? ಮೂರನೆ ಬಾರಿ ಬರುವ ಭಗವಂತನು ಸಹ ತನ್ನ ವಿಶ್ವರೂಪವನ್ನು ತೋರಿಸುವ ಸನ್ನಿವೇಶ ಇರುತ್ತದಾ?**

**ಉತ್ತರ :–** ವಿಶ್ವರೂಪ ಗಾರಡಿ ವಿದ್ಯೆ ಪ್ರದರ್ಶನವಂಥದ್ದಲ್ಲ. “ದೇವರು ವಿಶ್ವರೂಪನು” ಎಂದು ತಿಳಿಸುವ ನಿಮಿತ್ತ ಒಂದು ಬಾರಿ ಕೃಷ್ಣನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸುವುದು ನಡೆದಿದೆ. ನಂತರ ಎರಡನೆ ಬಾರಿ ವಿಶ್ವರೂಪ

ತೋರಿಸಲಿಲ್ಲ. ನಂತರ ಕಾಲದಲ್ಲಿ ಎಂದೂ ವಿಶ್ವರೂಪ ಪ್ರದರ್ಶನ ಇರುವುದಿಲ್ಲ. ವಿಶ್ವರೂಪ ಸಾಕ್ಷ್ಯಕ್ಕಾಗಿ ತೋರಿಸಿರುವುದೇ ಅಲ್ಲದೆ ನಂತರ ಎರಡನೆ ಬಾರಿ ತೋರಿಸುವುದಲ್ಲ.

**65) ಪ್ರಶ್ನೆ :– ಕೆಲವು ವೃಕ್ಷಗಳಲ್ಲಿ ಇರುವ ಜೀವಾತ್ಮಗಳು ಕೆಲವು ಸಾವಿರ ವರ್ಷಗಳು ಜೀವಿಸುತ್ತಿರುವರು ಅಂದರೆ ನಾಲ್ಕು ಸಾವಿರ, ಐದು ಸಾವಿರ ವರ್ಷಗಳು ಜೀವಿಸುತ್ತಿವೆ. ಹಾಗೆಯೇ ಗಿಡಗಳಲ್ಲಿರುವ ಜೀವಾತ್ಮಗಳ ಹಾಗೆ ಪ್ರಾಣಿಗಳಲ್ಲಿ, ಮನುಷ್ಯರಲ್ಲಿ ಏಕೆ ಹೆಚ್ಚಿನ ಆಯುಸ್ಸು ಇರಲಿಲ್ಲ?**

**ಉತ್ತರ :–** ಪ್ರಾಣಿಗಳು, ಮನುಷ್ಯರು ಮಾಂಸದಿಂದ ಕೂಡಿಕೊಂಡ ಶರೀರಗಳು ಇರುವವರಾಗಿ ಇದ್ದಾರೆ. ಆದ್ದರಿಂದ ಅವರ ಶರೀರಗಳು ವಾತಾವರಣ ಬದಲಾವಣೆಗಳಿಗೆ, ಶೀತೋಷ್ಣಗಳಿಗೆ ಬೇಗನೇ ಶಿಥಿಲಾವಸ್ಥೆಗೆ ಬರುತ್ತಿವೆ. ಆದ್ದರಿಂದ ಮನುಷ್ಯರು, ಪ್ರಾಣಿಗಳು ಬೇಗನೇ ಮರಣಿಸುವುದು ನಡೆಯುತ್ತಿದೆ. ಮನುಷ್ಯರು, ಪ್ರಾಣಿಗಳು ಸ್ಥೂಲವಾಗಿ ಹೆಚ್ಚಿನ ಕಾಲ ಬದುಕುತ್ತಿಲ್ಲ. ಮರಣಿಸಿದ ಮನುಷ್ಯರು, ಪ್ರಾಣಿಗಳು ಸೂಕ್ಷ್ಮವಾಗಿ ಹೆಚ್ಚಿನ ಕಾಲ ಬದುಕುತ್ತಿವೆ. ವೃಕ್ಷಗಳಿಗೆ ಸೂಕ್ಷ್ಮ ಶರೀರದೊಂದಿಗೆ ಬದುಕುವ ಸದುಪಾಯವಿಲ್ಲ. ಎಷ್ಟು ಕಾಲವಾದರೂ ವೃಕ್ಷಗಳು ಸ್ಥೂಲವಾಗಿ ಬದುಕಬೇಕಾಗಿದೆ. ಮನುಷ್ಯರು ಪ್ರಾಣಿಗಳು ಬಹಳಮಟ್ಟಿಗೆ ಸ್ಥೂಲವಾಗಿ ಕಡಿಮೆ ಕಾಲ ಬದುಕುತ್ತಿವೆ. ಸೂಕ್ಷ್ಮವಾಗಿ ಹೆಚ್ಚಿನ ಕಾಲ ಬದುಕುತ್ತಿವೆ. ಮನುಷ್ಯರು ಬಹಳಮಟ್ಟಿಗೆ ಅಕಾಲ ಮರಣವನ್ನೇ ಹೊಂದುತ್ತಿದ್ದಾರೆ. ಅಪರೂಪವಾಗಿ ಕಾಲಮರಣವನ್ನು ಹೊಂದುತ್ತಿದ್ದಾರೆ. ಅಕಾಲ ಮರಣ ಹೊಂದಿ ಸೂಕ್ಷ್ಮವಾಗಿ ಬದುಕುವವರನ್ನು ಬಹಳ ಜನರೊಂದಿಗೆ ನಾನು ಮಾತನಾಡುವುದು ನಡೆದಿದೆ. 250 ವರ್ಷಗಳಿಂದ ಬದುಕಿರುವ ಮನುಷ್ಯನೊಂದಿಗೆ (ಸೂಕ್ಷ್ಮ ಶರೀರವಿರುವ ಮನುಷ್ಯನೊಂದಿಗೆ) ಮಾತನಾಡು ವುದು ನಡೆದಿದೆ. ಆಗ ನನಗೆ ಆಶ್ಚರ್ಯ ಉಂಟಾದರೂ ಈ ದಿನ ಅದು ಸಹಜವೇ ಎಂದುಕೊಳ್ಳುತ್ತಿದ್ದೇನೆ. ಸುಮಾರು 600 ವರ್ಷಗಳು ಬದುಕಿರುವ ಮನುಷ್ಯರೊಂದಿಗೆ ಮಾತನಾಡಿದ್ದೇನೆ. ಅವರನ್ನು ಕೆಲವು ಪ್ರಶ್ನೆಗಳು ಕೇಳಿ ತಿಳಿದುಕೊಂಡ ವಿಷಯಗಳಲ್ಲಿ ಮನುಷ್ಯರು

ಎರಡು ಸಾವಿರ ವರ್ಷಗಳವರು ಸಹ ಬದುಕೇ ಇದ್ದಂತೆ ತಿಳಿದಿದೆ. ಜಂತುಗಳು ಸಹ ಸುಮಾರು ಮುನ್ನೂರು ವರ್ಷಗಳು ಬದುಕಿರುವವು ಸಹ ಇರುವಂತೆ ತಿಳಿದಿದೆ. ಸ್ಥೂಲವಾಗಿ ಇಪ್ಪತ್ತು ವರ್ಷಗಳು ಬದುಕುವ ಪ್ರಾಣಿಗಳು ಮುನ್ನೂರು (300) ವರ್ಷಗಳು ಬದುಕಿರುವು ದರಿಂದ ಸ್ಥೂಲವಾಗಿ ಕಡಿಮೆ ಕಾಲ ಬದುಕುವ ಮನುಷ್ಯರು ಸಹ ಸೂಕ್ಷ್ಮವಾಗಿ ಸಾವಿರ ವರ್ಷಗಳು ಬದುಕುತ್ತಿದ್ದಾರೆಂದು ತಿಳಿಯುತ್ತಿದೆ.

**66) ಪ್ರಶ್ನೆ :– ಪ್ರಾಣಿಗಳಿಗಾಗಿ ಸ್ವಲ್ಪ ಆಯುಷ್ಯ ನಿರ್ಧಿಷ್ಟತೆ ಇರುವಂತೆ ಮರಗಳಿಗೆ ನಿರ್ಧಿಷ್ಟತೆ ಇಲ್ಲವಾ?**

**ಉತ್ತರ :–** ಮನುಷ್ಯರಿಗಾಗಲೀ ಪ್ರಾಣಿಗಳಿಗಾಗಲೀ ಆಯುಷ್ಷು ನಿರ್ಧಿಷ್ಟತೆ ಎನ್ನುವುದು ಇಲ್ಲವೇ ಇಲ್ಲ. ಆಯುಸ್ಸು ನಿರ್ಧಿಷ್ಟತೆ ಕರ್ಮ ಪ್ರಕಾರ ಎಷ್ಟು ಇರುತ್ತದೋ ಯಾರಿಗೂ ತಿಳಿದಿಲ್ಲ. ಸ್ಥೂಲವಾಗಿ ಬದುಕುತ್ತಿರುವ ಆಯುಷ್ಷನ್ನು ಸರಿಸಿ ಸರಿಸಿ ಹೇಳುವುದಕ್ಕೆ ಆಗುವುದಿಲ್ಲ. ಮನುಷ್ಯನಿಗಾಗಲೀ, ಪ್ರಾಣಿಗಳಿಗಾಗಲೀ 12 ಗ್ರಹಗಳ ದಸೆಗಳು ಒಂದುಬಾರಿ ಆಗಿಹೋಗುವುದಕ್ಕೆ 120 ವರ್ಷಗಳು ಹಿಡಿಯುತ್ತದೆ. ಅದನ್ನು ಮನುಷ್ಯರ ಆಯುಸ್ಸು ಎಂದು ಕೆಲವರು ಅಂದುಕೊಳ್ಳುವುದು ನಡೆಯುತ್ತಿದೆ. ಕೃಷ್ಣನು 126 ವರ್ಷಗಳು ಬದುಕಿದಂತೆ ಇದೆ. ವ್ಯಾಸನು ಸ್ಥೂಲವಾಗಿಯೇ 380 ವರ್ಷಗಳು ಬದುಕಿದಂತೆ ಹೇಳುತ್ತಿದ್ದಾರೆ. ವಿಕ್ರಮಾರ್ಕನು 2000 ವರ್ಷಗಳು ಬದುಕಿದಂತೆ ಚರಿತ್ರೆ ಇದೆ. ಆದ್ದರಿಂದ ಮನುಷ್ಯನೊಂದರ ನಿರ್ಧಿಷ್ಟ ಆಯುಸ್ಸಾಗಲೀ, ಪ್ರಾಣಿಗಳೊಂದರ ನಿರ್ಧಿಷ್ಟ ಆಯುಸ್ಸಾಗಲೀ ಇಷ್ಟು ಎಂದು ಯಾರೂ ಹೇಳಲಾರರು.

**67) ಪ್ರಶ್ನೆ :– ಬೆಳೆಯುವ ಭೂಮಿಯಲ್ಲಿ ಇರುವ ಪೈರನ್ನು (ಭತ್ತ ಅಥವಾ ಗೋದಿ) ಕುಡಗೋಲಿನಿಂದ ಕೊಯ್ದಾಗ ಅವುಗಳಲ್ಲಿರುವ ಆತ್ಮವನ್ನು ನಮ್ಮ ರೈತನ ಶರೀರದಲ್ಲಿರುವ ಚೈತನ್ಯದಿಂದಲೇ ಕೊಯ್ದು ಹಾಕಿದರೆ ಅದು ಹತ್ಯೆ ಆಗುತ್ತದಲ್ಲವೆ! ಆಗ ಪೈರಿನಲ್ಲಿರುವ ಜೀವಾತ್ಮಗಳ ಮರಣ ಅಕಾಲಮರಣ ವಾಗುತ್ತದಾ? ಅಥವಾ ಕಾಲಮರಣವಾಗುತ್ತದಾ?**

**ಉತ್ತರ :–** ಗಿಡಗಳ ಜೀವಾತ್ಮ ಬೇರಿನಲ್ಲಿರುವುದರಿಂದ ಗಿಡಗಳು ಸತ್ತುಹೋಗುವು ದಿಲ್ಲ. ಕೊಯ್ದನಂತರ ಎರಡು ಅಥವಾ ಮೂರು ದಿನಗಳಿಗೆ ಗಿಡ ಸತ್ತುಹೋ ಗುತ್ತದೆ. ಆಗ ಕಾಲಮರಣವನ್ನು ಹೊಂದುತ್ತಿದೆ.

**68) ಪ್ರಶ್ನೆ :– ಸ್ಥೂಲವಾಗಿ ನಮ್ಮ ಹೊಟ್ಟೆ ತುಂಬಿದಷ್ಟು ಆಹಾರವನ್ನು ತೆಗೆದುಕೊಂಡರೆ ಹಸಿವು ತೀರಿಹೋಗುತ್ತದೆ. ಹೊಟ್ಟೆ ತುಂಬಿ ಹೋಗುತ್ತದೆ. ಆದರೆ ದೇವತೆಗಳಿಗೆ ಒಂದೇ ದಿನ ಸಾವಿರ ಕುರಿಗಳು, ಮೇಕೆಗಳು, ಕೋಳಿಗಳನ್ನು ಬಲಿ ಕೊಟ್ಟರೆ ಸೂಕ್ಷ್ಮವಾಗಿ ದೇವತೆಗಳು ಗ್ರಹಿಸುತ್ತವಲ್ಲವೆ! ವಿಗ್ರಹಗಳಲ್ಲಿರುವ ದೇವತೆಗಳಿಗೆ ಅಷ್ಟು ದೊಡ್ಡ ಮೊತ್ತದಲ್ಲಿ ಇರುವ ಆಹಾರ ಸೂಕ್ಷ್ಮವಾಗಿಯಾದರೂ ಹೊಟ್ಟೆಯಲ್ಲಿ ಹಿಡಿಸುತ್ತದಾ?**

**ಉತ್ತರ :–** ಸೂಕ್ಷ್ಮವಾಗಿ ಇರುವ ದೇವತೆಗಳು ಸಾವಿರ ಕುರಿಗಳನ್ನು, ಮೇಕೆಗಳನ್ನು, ಕೋಳಿಗಳನ್ನು ಒಂದೇ ಬಾರಿ ಆಹಾರವಾಗಿ ತೆಗೆದುಕೊಳ್ಳುವುದಿಲ್ಲ. ಅವುಗಳ ಹೊಟ್ಟೆಯಲ್ಲಿ ಹಿಡಿಸಿದಷ್ಟು ಮಾತ್ರವೇ ತಿನ್ನುತ್ತವೆ. ಉಳಿದವುಗಳನ್ನು ತೆಗೆದುಕೊಳ್ಳುವುದಿಲ್ಲ. ಹೊರಗೆ ಸ್ಥೂಲವಾಗಿ ಎಷ್ಟು ಆಹಾರವಿದ್ದರೂ ತಮಗೆ ಅಗತ್ಯವಿದ್ದಷ್ಟು ಆಹಾರವನ್ನು ಮಾತ್ರ ತೆಗೆದುಕೊಳ್ಳುತ್ತವೆ. ಎಲ್ಲವನ್ನು ತೆಗೆದು ಕೊಳ್ಳುವುದಿಲ್ಲ.

**69) ಪ್ರಶ್ನೆ :– ಕಾಲಜ್ಞಾನದಲ್ಲಿ ವೀರಬ್ರಹ್ಮಯ್ಯರವರು ಹೇಳಿದ 'ಪ್ರಬೋಧಾಶ್ರಮ' ನಿಮ್ಮದೇಯೆಂದು ಸಾಕ್ಷ್ಯವೇನು? ಪ್ರಬೋಧಾಶ್ರಮ ಭವಿಷ್ಯತ್ತಿನಲ್ಲಿ ಬರಬಹುದಲ್ಲವೆ! ನಿಮ್ಮ ಗ್ರಂಥದಲ್ಲಿ ನಿಮ್ಮದೇ ಪ್ರಬೋಧಾಶ್ರಮವೆಂದು ಇರುವಂತೆ ತಿಳಿದಿದೆ. ಆದ್ದರಿಂದ ಕೇಳುತ್ತಿದ್ದೇವೆ.**

**ಉತ್ತರ :–** ಬ್ರಹ್ಮಯ್ಯರವರು ಬದುಕಿದ್ದಾಗ ಆತನಿಗೆ ರಹಸ್ಯ ಗುರುವು ಇರುತ್ತಿದ್ದನು. ತನ್ನ ಗುರು ಆಜ್ಞೆ ಪ್ರಕಾರ ಬ್ರಹ್ಮಯ್ಯನವರು ಜೀವ ಸಮಾಧಿ ಹೊಂದಿದ್ದನು. ಗುರುಗಳು ತನ್ನ ಸಮಾಧಿ ಹತ್ತಿರಕ್ಕೆ ಬಂದು ನೋಡಿದಾಗ ಬ್ರಹ್ಮಯ್ಯನವರು ಸಮಾಧಿಯಿಂದ ಹೊರಗೆ ಬಂದು ಜನ್ಮ ತೆಗೆದುಕೊಳ್ಳಬೇಕೆಂದು ಗುರು ಆಜ್ಞೆ

ಇದೆ. ಆ ಒಪ್ಪಂದ ಬ್ರಹ್ಮಯ್ಯರವರು ಹತ್ತು ಜನ್ಮಗಳ ಕೆಳಗೇ ಹೊಂದಿದ್ದಾನೆ. ಹತ್ತು ಜನ್ಮಗಳ ಕೆಳಗೆ ತನ್ನ ಗುರುಗಳು ಹೇಳಿದ ಮಾತನ್ನು ಬ್ರಹ್ಮಯ್ಯರವರು ಪಾಟಿಸಿ ಜೀವಸಮಾಧಿಯೊಳಗೆ ಹೋಗುವುದು ನಡೆದಿದೆ. ಆತನ ಗುರುಗಳು ತನ್ನ ಸಮಾಧಿ ಹತ್ತಿರಕ್ಕೆ ಬಂದಾಗ ಬ್ರಹ್ಮಯ್ಯರವರು ಶರೀರವನ್ನು ಬಿಟ್ಟು ಹೊರಗೆ ಬಂದು ಜನ್ಮವನ್ನು ತೆಗೆದುಕೊಳ್ಳುವುದು ನಡೆದಿದೆ. ಪ್ರಸ್ತುತ ಬ್ರಹ್ಮಯ್ಯರ ವರು 36 ವರ್ಷಗಳ ವಯಸ್ಸಿನಲ್ಲಿದ್ದರೂ ನಾನು ಗತಕಾಲದಲ್ಲಿ ಬ್ರಹ್ಮಯ್ಯರವರೆನ್ನುವ ಜ್ಞಾಪಕ ಉಂಟಾಗಲಿಲ್ಲ. ಆತನಿಗೆ ಜ್ಞಾಪಕ ಬಂದಾಗ ಸ್ವಲ್ಪ ಸಾಕ್ಷ್ಯವನ್ನು ತಿಳಿಸಬಲ್ಲನು.

**70) ಪ್ರಶ್ನೆ :– ಅರ್ಜುನಾ! ಶರೀರ ನಶ್ವರ, ಕ್ಷಣ ಭಂಗುರ. ನಿನ್ನ ಸಾಮರ್ಥ್ಯಕ್ಕೆ ಹಸ್ತಿನಾಪುರ ಕ್ಷಣ ಕಾಲದಲ್ಲಿ ಮಣ್ಣಿನಲ್ಲಿ ಬೆರೆತುಹೋಗಬಲ್ಲದು. ಪ್ರಪಂಚ ವಿಷಯಗಳು ತುಚ್ಛವಾದವು. ಯುದ್ಧ ಮಾಡದೆ ಹೋದರೆ ಕ್ಷತ್ರಿಯನು ಯುದ್ಧ ಭೂಮಿಯನ್ನು ಬಿಟ್ಟು ಹೋಗಿದ್ದಾನೆಂದು ಪ್ರಜೆಗಳು ನಗಾಡುತ್ತಾರೆ. ಆದರೆ ಯಾರು ನಿಜವಾದ ಜ್ಞಾನಿಗಳೋ ಅವರು ನಿಂದೆಗಳಿಗೆ ಪ್ರಶಂಸೆಗಳಿಗೆ ಚಲಿಸುವುದಿಲ್ಲ. "ತುಲ್ಯನಿಂದಾ ಸ್ಥುತಿರ್ಮೌನೀ ಸಂತುಷ್ಟೋಯೇನ ಕೇನಚಿತ್" ಎನ್ನುವ ಶ್ಲೋಕವನ್ನು ನೀನು ಏನು ಗ್ರಹಿಸಿದ್ದೀಯ. ಹಿಮಾಲಯಗಳಿಗೆ ಹೋಗಿ, ಬ್ರಹ್ಮ ಯೋಗ ಮಾಡಿಕೋ ಎಂದು ಕೃಷ್ಣನು ಬೋಧಿಸದೆ, ಯುದ್ಧಕ್ಕೆ ಹುರಿದುಂಬಿಸಿದ್ದಾನೆ. ಇಷ್ಟು ನಡೆದರೂ ಗೀತೆಯಲ್ಲಿ ಅಹಿಂಸಾ, ವೈರಾಗ್ಯ ಇದೆಯೆನ್ನುತ್ತಾರೆ. ಇದನ್ನು ಸಕ್ರಮಬುದ್ಧಿ ಎನ್ನಬೇಕಾ? ವಕ್ರ ಬುದ್ಧಿ ಎನ್ನಬೇಕಾ? ನೀವೇ ಹೇಳಿರಿ.**

**ಉತ್ತರ :–** ಭಗವದ್ಗೀತೆಯಲ್ಲಿ ಹೇಳಿದ ಜ್ಞಾನ ಎರಡು ವಿಭಾಗಗಳಾಗಿ ಇದೆ. ಹತ್ತು ಅಧ್ಯಾಯಗಳವರೆಗು ಎರಡು ಯೋಗಗಳ ಜ್ಞಾನವನ್ನು ಕೃಷ್ಣನು ಹೇಳಿದ್ದಾನೆ. ಒಂದು ಬ್ರಹ್ಮಯೋಗ, ಎರಡು ಕರ್ಮಯೋಗ ಜ್ಞಾನ. ಭಕ್ತಿಯೋಗ ಜ್ಞಾನದಲ್ಲಿ ನೀವು ಹೇಳಿದ ಸ್ಥುತಿಯು ನಿಂದೆಯು ಸಮವಾಗಿ ನೋಡುವುದು ಇದೆ. ಈ ವಿಷಯ ಭಕ್ತಿಯೋಗ ಎನ್ನುವ ಅಧ್ಯಾಯದಲ್ಲಿ 19ನೇ ಶ್ಲೋಕದಲ್ಲಿ ಹೇಳಿದ್ದಾರೆ. ಎರಡನೆಯದಾದ ಕರ್ಮಯೋಗದಲ್ಲಿ ಹೊರಗಿನ ವಿಷಯಗಳನ್ನು ಸಮಾನವಾಗಿ

ನೋಡದೆ ನಿಂದೆಗೆ ಸ್ಪಂದಿಸಿ ಯುದ್ಧ ಮಾಡಿದರೂ ಕರ್ಮಯೋಗ ಪದ್ಧತಿಯಲ್ಲಿ ಮಾಡೆಂದು ಹೇಳಿದ್ದಾನೆ. ಕರ್ಮಯೋಗದಲ್ಲಿ ಎಲ್ಲ ಕಾರ್ಯಗಳನ್ನು ಗುಣಗಳ ಪ್ರಕಾರ ಕರ್ಮ ಅಂಟದ ವಿಧಾನವಾಗಿ ಮಾಡಬೇಕೆಂದು ಹೇಳಿದ್ದಾನೆ. ಎರಡು ಯೋಗಗಳನ್ನು ಬೇರೆಯಾಗಿ ಅರ್ಥ ಮಾಡಿಕೊಳ್ಳದವರು ಅಲ್ಲಿ ನಿಂದೆಯನ್ನು ನೋಡಿ ಮೌನವಾಗಿರು ಎಂದು ಹೇಳಿ, ಇಲ್ಲಿ ನಿಂದೆಯನ್ನು ನೋಡಿ ಯುದ್ಧ ಮಾಡೆಂದಿದ್ದೀರಲ್ಲ? ಎಂದು ಪ್ರಶ್ನೆ ಬರುತ್ತದೆ. ಬ್ರಹ್ಮಯೋಗದಲ್ಲಿ ಮೌನವಾಗಿ ಇರುವುದು ಸಕ್ರಮ ಬುದ್ಧಿಯೇ. ಹಾಗೆಯೇ ಕರ್ಮ ಯೋಗದಲ್ಲಿ ಯುದ್ಧ ಮಾಡುವುದು ಸಕ್ರಮ ಬುದ್ಧಿಯೇಯೆಂದು ಹೇಳಬಹುದು. ಅಲ್ಲಿ ಸಂದರ್ಭ ವನ್ನನುಸರಿಸಿ, ಯೋಗವನ್ನನುಸರಿಸಿ ನಡೆಯದೆ ಹೋದರೇ ಅಂಥವರದ್ದೇ ಸಕ್ರಮ ಬುದ್ಧಿ ಅಲ್ಲ.

**71) ಪ್ರಶ್ನೆ :– ದುಃಖಗಳಲ್ಲಿ ಅಳದಂತೆ, ಸುಖಗಳಲ್ಲಿ ಹುಕ್ಕಿಹೋಗದಂತೆ, ರಾಗ, ಭಯ, ಕೋಪರಹಿತನಾಗಿ ಇರುವವನೇ ಸ್ಥಿತ ಪ್ರಜ್ಞನೆಂದು ಹೇಳಿದ ಕೃಷ್ಣನು ಯುದ್ಧದಲ್ಲಿ ಭೀಷ್ಮನ ಮೇಲೆ ಕೋಪದಿಂದ ಬಂಡಿ ಚಕ್ರವನ್ನು ಹಿಡಿದುಕೊಂಡು ಹೊಡೆಯುವುದಕ್ಕೆ ಹೊರಟರೆ ಆತನು ಭಯ ಕೋಪರಹಿತನಾಗುತ್ತಾನಾ? "ಹೇಳುವವು ಶ್ರೀರಂಗ ನೀತಿಗಳು ತೂರುವುದು ವೇಶ್ಯ ಗುಡಿಸಲು" ಎನ್ನುವ ಗಾದೆಮಾತಿನಂತೆ ಇದೆ. ಇದಕ್ಕೆ ನೀವೇನನ್ನುತ್ತೀರಾ?**

**ಉತ್ತರ :–** ಕೃಷ್ಣನು ಸ್ಥಿತ ಪ್ರಜ್ಞನಿಗೆ ಹೇಳಿದ ವಿಧಾನದ ಪ್ರಕಾರ ಪ್ರಪಂಚ ಸಂಬಂಧ ಯಾವ ಧ್ಯಾಸಗಳು ಇಲ್ಲದವನು ಸ್ಥಿತ ಪ್ರಜ್ಞನು. ಸ್ಥಿತ ಪ್ರಜ್ಞನು ಬ್ರಹ್ಮಯೋಗ ವಿಧಾನದಲ್ಲಿ ಇರಬೇಕಾದ ಪದ್ಧತಿ ಅದು. ಆದರೇ ಕೃಷ್ಣನು ತಾನು ಕರ್ಮಯೋಗವನ್ನು ಅನುಸರಿಸುತ್ತಿದ್ದೇನೆಂದು ಮೊದಲೇ ಹೇಳಿದ್ದಾನೆ. ಕರ್ಮಯೋಗದಲ್ಲಿ ಯಾವ ಸಮಯದಲ್ಲಿ ಹೇಗೆ ಪ್ರವರ್ತಿಸಬೇಕೋ ಹಾಗೆಯೇ ಪ್ರವರ್ತಿಸಬೇಕಾಗಿರುತ್ತದೆ. ಯುದ್ಧ ರಂಗದಲ್ಲಿ ಕತ್ತಿ ಹಿಡಿದು ಯುದ್ಧ ಮಾಡುವು ದಿಲ್ಲವೆಂದು ಮೊದಲೇ ಹೇಳಿದ ಕೃಷ್ಣನು ಮಾತಿಗೆ ತಪ್ಪಿ ಭೀಷ್ಮನ ಮೇಲೆ ಹೋಗಿದ್ದಾನೆ. ಕೃಷ್ಣನು ಕರ್ಮಯೋಗಿ ಆಗಿರುವುದರಿಂದ ಆ ಕೆಲಸ ಮಾಡುವುದು ಆತನಿಗೆ ಸಲ್ಲುತ್ತದೆ. ಆತನನ್ನು ಅರ್ಥಮಾಡಿಕೊಳ್ಳದಿರು ವುದು ನಾವೇ.

**72) ಪ್ರಶ್ನೆ :– ಶರೀರ ಅಶಾಶ್ವತ ಆದ್ದರಿಂದ ಯುದ್ಧ ಮಾಡು. ಆತ್ಮಕ್ಕೆ ಮರಣವಿಲ್ಲ ಆದ್ದರಿಂದ ಯುದ್ಧಮಾಡು. ಕ್ಷತ್ರಿಯನಾಗಿರುವುದರಿಂದ ಯುದ್ಧ ಮಾಡು. ಯುದ್ಧ ಮಾಡದೆ ಹೋದರೆ ನಿಂದನೆಗಳ ಪಾಲಾಗುತ್ತೀಯಾ. ಆದ್ದರಿಂದ ಯುದ್ಧ ಮಾಡು. ಇದೇ ಭಗವದ್ಗೀತೆಯಲ್ಲಿ ಕಾಣಿಸುತ್ತದೆ. ಮತ್ತು ಇದರಲ್ಲಿ ಜ್ಞಾನವಿದೆ. ಮನೋತತ್ವ ಶಾಸ್ತ್ರವಿದೆ. ಪರ್ಸನಾಲಟೀ ಡೆವಲಪ್‌ಮೆಂಟ್ ಇದೆ ಎನ್ನುತ್ತಾರೆ. ನನ್ನನ್ನು ಕೇಳಿದರೆ ಹಾಗೆ ಹೇಳುವುದು ಕುರುಡು ಎತ್ತು ಹೊಲದಲ್ಲಿ ಬಿದ್ದಂತಿರುತ್ತದೆ.**

**ಉತ್ತರ :–** ಕೇಳಿರುವುದು ಅರ್ಥವಾಗದಿದ್ದರೆ ಹಾಗೇ ಇರುತ್ತದೆ. ಮೊಟ್ಟೆಯನ್ನು ಕೈಯ್ಯಲ್ಲಿಟ್ಟುಕೊಂಡು ಓಡಬೇಕು. ಕುಳಿತುಕೊಂಡಾಗ ಜೇಬಿನಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದರೆ ಅರ್ಥವಾಗದೆ ಮೊಟ್ಟೆಯನ್ನು ನಿಕ್ಕರ್ ಜೇಬಿನಲ್ಲಿ ಇಟ್ಟುಕೊಂಡು ಓಡಿ ಮೊಟ್ಟೆ ಹೊಡೆದು ಹೋಗಿದೆಯೇ! ಎಂದರೆ ಓಡಿದರೆ ಮೊಟ್ಟೆ ಹೊಡೆಯದೆ ಏನಾಗುತ್ತದೆ? ಹಾಗೆಯೇ ನಿನ್ನ ಪ್ರಶ್ನೆ ಇದೆ. ಭಗವದ್ಗೀತೆಯಲ್ಲಿ ಎರಡು ವಿಧಗಳ ಜ್ಞಾನವಿದೆ.

**73) ಪ್ರಶ್ನೆ :– ಕ್ಷತ್ರಿಯನು ಯುದ್ಧದಿಂದ ಓಡಿಹೋಗಬಾರದು ಎಂದು ಹೇಳುತ್ತಾ ಜರಾಸಂಧನೊಂದಿಗೆ ಯುದ್ಧ ಮಾಡಲಾರದೆ ದ್ವಾರಕಗೆ ಓಡಿಹೋಗಿದ್ದಾನೆ ಇದೇನು ವಿಚಿತ್ರವೋ?**

**ಉತ್ತರ :–** ತಾನು ಯಾರೋ ಹೊರ ಬೀಳಬಾರದೆಂದು ಕೃಷ್ಣನು ಹಾಗೆ ಮಾಡಿದ್ದಾನೆ. ಈಗ ಕೃಷ್ಣನು ಭಗವಂತನೆಂದರೆ ಯಾರಾದರೂ ನಂಬುತ್ತಾರಾ? ನಂಬುವುದಿಲ್ಲ. ನಂಬಬಾರದೆಂದೇ ಹಾಗೆ ಮಾಡಿದ್ದಾನೆ.

**74) ಪ್ರಶ್ನೆ :– ಬೆಂಕಿಕಡ್ಡಿ ಬೆಳಗುವುದಕ್ಕೆ ಬೆಂಕಿ ಪಟ್ಣ ಅವಶ್ಯ, ಅದರಿಂದ ಬೆಂಕಿ ಹುಟ್ಟುತ್ತದೆ. ಈ ಎರಡು ರಸಾಯನ ಕ್ರಿಯೆಗಳೇ ಅಲ್ಲವೆ! ಈ ಎರಡಕ್ಕೂ ಪ್ರಾಣವಿಲ್ಲ ಆದರೆ ರಸಾಯನ ಕ್ರಿಯೆಯಿಂದಲೇ ಬೆಂಕಿ ಹುಟ್ಟಿದೆ. ಹಾಗೆಯೇ ಕಣಗಳ ಮಧ್ಯೆ ನಡೆಯುವ ರಸಾಯನ ಕ್ರಿಯೆಯಿಂದಲೆ ಜೀವಿ ಕದಲುತ್ತಿದೆ, ಜೀವನ ನಡೆಯುತ್ತಿದೆ. ಅಷ್ಟೇಯಾಗಲಿ ಪ್ರಾಣ ಎನ್ನುವ ಭಾಗವಿಲ್ಲ. ನೀವೆಲ್ಲರೂ ಅಂದಹಾಗೆ ಆತ್ಮ ಇಲ್ಲ,**

**ಜೀವಿಯು ಇಲ್ಲ. ಎಲ್ಲಾ ರಸಾಯನ ಕ್ರಿಯೆ ಪ್ರಕ್ರಿಯೆಗಳ ಪ್ರಭಾವದಿಂದಲೇ ನಡೆಯುತ್ತಿದೆ. ನಮ್ಮ ಮಾತು ನಿಜವೆನ್ನುವುದಕ್ಕೆ ಅನಾಟಮಿಸ್ಟ್‌ರು, ಭೌತ ಶಾಸ್ತ್ರ ತಜ್ಞರು, ವೈದ್ಯ ಪಂಡಿತರ ಸಾಕ್ಷ್ಯವಿದೆ. ನೀವು ಹೇಳುವ ಪ್ರಾಣ, ಆತ್ಮ, ಜೀವಾತ್ಮಗಳನ್ನು ನೀವು ತೋರಿಸಲಾರರು. ಹಾಗಿರುವಾಗ ನಿಮ್ಮ ಮಾತು ನಿಜವೆನ್ನುವುದಕ್ಕೆ ಆತ್ಮ, ಜೀವಾತ್ಮಗಳನ್ನು ತೋರಿಸುವ ಪರಿಕರವನ್ನು ದೇವರನ್ನು ಕೇಳಿ ತೆಗೆದುಕೊಂಡು ಬರಬಹುದಲ್ಲವೆ?**

**ಉತ್ತರ :–** ಸ್ವಲ್ಪ ವಿಜ್ಞಾನ ತಿಳಿದವರು ದೇವರ ಮೇಲೆ ವಿಶ್ವಾಸವಿಲ್ಲದ ಶಾಸ್ತ್ರಜ್ಞರು ಈ ಮಾತನ್ನು ದೊಡ್ಡ ಆಯುಧವಾಗಿ ಮಾಡಿಕೊಂಡು ಕೇಳುತ್ತಿರುವರು. ಜೀವಾತ್ಮನನ್ನು, ಆತ್ಮನನ್ನು ತೋರಿಸುವ ಪರಿಕರವಾದ ಜ್ಞಾನವನ್ನು ದೇವರು ಯಾವಾಗಲೋ ಕೊಟ್ಟಿದ್ದಾನೆ. ಈ ದಿನ ಹೊಸದಾಗಿ ಕೇಳಬೇಕಾದ ಅವಶ್ಯವಿಲ್ಲ. ನಿಂಬೆಹಣ್ಣನ್ನು ಗ್ಯಾಸ್ ಇರುವ ಸೋಡಾವನ್ನು ಬೆರೆಸಿದರೆ ರಸಾಯನ ಕ್ರಿಯೆಯಿಂದ ಬುಸಬುಸ ಹುಕ್ಕುತ್ತದೆ. 200 ಮಿಲೀ ಲೀಟರ್‌ಗಳ ಸೋಡಾ 2000 ಸಾವಿರ ಮಿಲಿ ಲೀಟರ್‌ಗಳವರೆಗು ಇರುವಂತೆ ಹುಕ್ಕುತ್ತದೆ. ಹಾಗೆ ಆಗುವುದು ರಾಸಾಯನ ಕ್ರಿಯೆಯೇ ಎಂದು ಹೇಳಬಹುದು. ಹಾಗೆಯೇ ಸುಣ್ಣ, ನವಾಸಾಗ್ರ ಸೇರಿದರೆ ಕಾರ್ಬನ್‌ಡೈಆಕ್ಸೈಡ್ ವಾಯು ಬರುತ್ತದೆ. ಅದೂ ಸಹ ರಸಾಯನ ಕ್ರಿಯೆಯೇ. ಆದರೆ ಈ ರಸಾಯನ ಕ್ರಿಯೆಯನ್ನು ಯಾರೂ ನಿಲ್ಲಿಸಲಾರರು. ಅದನ್ನು ನಿಲ್ಲಿಸುವ ಪದ್ಧತಿಯನ್ನು, ಅವಶ್ಯವಾದಾಗ ಉಪಯೋಗ ಪಡುವಂತೆ ಮಾಡುವ ವಿಧಾನವನ್ನು ಬುದ್ಧಿಯಿಂದ ತಯಾರಿಸಬಹುದು. ರಸಾಯನ ಕ್ರಿಯೆಯನ್ನು ಪರಿಮಿತಿ ಮಾಡುವುದು, ರಸಾಯನ ಕ್ರಿಯೆಯನ್ನು ಅವಶ್ಯ ಬಂದಾಗ ಉಪಯೋಗಪಡುವಂತೆ ಮಾಡುವ ಶಕ್ತಿ ಒಂದು ಇದೆ ಅದೇ ಬುದ್ಧಿ. ಬುದ್ಧಿಯಿಂದ ನಿಂಬೆರಸವನ್ನು ದ್ರವ ಪದಾರ್ಥದಿಂದ ಘನಪದಾರ್ಥ ವಾಗಿ ಬದಲಾಯಿಸಿದ್ದೇವೆ. ಹಾಗೆಯೇ ಸೋಡಾವನ್ನು ಸಹ ದ್ರವದಿಂದ ಪುಡಿಯಂತೆ ಬದಲಾಯಿಸಿದ್ದೇವೆ. ಎರಡನ್ನೂ ಸೇರಿಸಿ ಗುಳಿಗೆಯಂತೆ ತಯಾರುಮಾಡಿಸಿ ಯಾವಾಗ ನೀರು ಬೆರೆಸಿದರೆ ಆಗ ನಿಂಬೆ ರಸ ಸೋಡವಾಗಿ ತಯಾರಾಗುವಂತೆ

ರಸಾಯನ ಕ್ರಿಯೆಯನ್ನು ಬುದ್ಧಿಯಿಂದ ನಿಯಂತ್ರಿಸಿ ಇಟ್ಟಿದ್ದೇವೆ. ಆಗ ರಸಾಯನ ಕ್ರಿಯೆಯನ್ನು ನಿಯಂತ್ರಿಸುವ ಬುದ್ಧಿ ಯಾರಿಗೂ ಕಾಣಿಸದಂತೆ ಇದೆ. ರಸಾಯನ ಕ್ರಿಯೆಗಿಂತ ಅದನ್ನು ನಿಯಂತ್ರಿಸುವ ಬುದ್ಧಿ ದೊಡ್ಡದೆಂದು ಏಕೆ ಅಂದುಕೊಳ್ಳ ಬಾರದು? ಶರೀರದಲ್ಲಿ ಕಣಗಳ ಮಧ್ಯದಲ್ಲಿ ರಸಾಯನ ಕ್ರಿಯೆಯಿಂದ ಜೀವನ ಮುಂದುವರೆದರೂ ಆ ಜೀವನವನ್ನು ನಿಯಂತ್ರಿಸುವ ಬುದ್ಧಿ ಇರುವು ದರಿಂದ ಜೀವನವು ಕ್ರಮಬದ್ಧವಾಗಿ ಸಾಗುತ್ತಿದೆ. ಬುದ್ಧಿ ಕೆಲಸ ಮಾಡದೆ ಹೋದರೆ ಅವನನ್ನು ಹುಚ್ಚನು ಎನ್ನುತ್ತೇವೆ. ಅವನ ಜೀವನವು ವ್ಯರ್ಥ ಎನ್ನುತ್ತೇವೆ. ಹುಚ್ಚನಲ್ಲಿ ಸಹ ರಸಾಯನ ಕ್ರಿಯೆ ನಡೆಯುತ್ತಿದೆಯಲ್ಲವೆ! ಆದರೂ ಬುದ್ಧಿ ಕೆಲಸ ಮಾಡದೆ ಹೋದರೆ ಅವನ ಜೀವನವು ವ್ಯರ್ಥ ಎಂದಾಗ ರಸಾಯನ ಕ್ರಿಯೆಗೆ ಬೆಲೆಇಲ್ಲವೆಂದು ಅದನ್ನು ನಿಯಂತ್ರಿಸುವ ಬುದ್ಧಿಗೇ ಬೆಲೆ ಇದೆಯೆಂದು ತಿಳಿಯುತ್ತಿದೆ. ಬುದ್ಧಿಗೆ ಶಕ್ತಿಯನ್ನು ಕೊಡುವುದು ಆತ್ಮ. ಬುದ್ಧಿಯಿಂದ ಅನುಭವವನ್ನು ಹೊಂದುವುದು ಜೀವಾತ್ಮ. ಆತ್ಮ, ಜೀವಾತ್ಮಗಳಿಗಿಂತ ಕೆಳಗಿರುವ ಬುದ್ಧಿಯೇ ಹೇಗಿರುವುದು ಭೌತಿಕ ಶಾಸ್ತ್ರಜ್ಞರಿಗೆ, ವೈದ್ಯರಿಗೆ ತಿಳಿಯದಿರುವಾಗ ಬುದ್ಧಿಗಿಂತ ಶ್ರೇಷ್ಠವಾದ ಆತ್ಮವಾಗಲೀ, ಜೀವಾತ್ಮವಾಗಲೀ ತಿಳಿಯಬೇಕೆಂದು ಕೊಳ್ಳುವುದು ಆಸೆಯೇ ಆಗುತ್ತದೆ. ಯಾರಾದರೂ ದೈವಜ್ಞಾನವನ್ನು ತಿಳಿದರೆ ಶರೀರದೊಂದಿಗೆ ಇರುವ ರಸಾಯನ ಕ್ರಿಯೆಯನ್ನು ಸಹ **ಉಂಟುಮಾಡುವ ಆತ್ಮಗಳು ತಿಳಿಯುವುದಕ್ಕೆ ಅವಕಾಶವಿರುತ್ತದೆ.**

**75) ಪ್ರಶ್ನೆ :– ಬಡವರ ಹಸಿವನ್ನು ತೀರಿಸದ ಮೂಢಜನರ ಪೂಜೆಗಳು, ದೇವರು ಎನ್ನುತ್ತಾ ಕೋಟಿಗಳನ್ನು ಸುರಿದು ಹಣ ಇರುವ ದೇವತೆಗಳನ್ನು ಪೂಜಿಸುವವರು ಇದ್ದಾರೆ. ನಿಜವಾಗಿ ದೇವರು ಇದ್ದರೆ ನನಗೆ ಹಣ ಬೇಕಾಗಿಲ್ಲ. ನನ್ನ ಹುಂಡಿಯಲ್ಲಿ ಹಣ ಹಾಕಬೇಡಿ. ನನಗೆ ಕೊಡುವ ಹಣ ಬಡವರಿಗೆ ಖರ್ಚುಮಾಡಿರೆಂದು ಕನಸಿನಲ್ಲಾದರೂ ಹೇಳಬಹುದಲ್ಲವೆ! ಹಾಗೆ ಹೇಳದ ದೇವರಿಗು, ಪ್ರಸ್ತುತ ರಾಜಕೀಯ ನಾಯಕರಿಗು ಏನೂ ವ್ಯತ್ಯಾಸವಿಲ್ಲವೆಂದು ನಾನು ಹೇಳುತ್ತೇನೆ. ನೀವೇನನ್ನುತ್ತೀರಾ?**

**ಉತ್ತರ :–** ಸಾಮಾಜಿಕ ನ್ಯಾಯವನ್ನು ಕುರಿತು ಮಾತನಾಡಿದರೆ ನಾವೂ ಸಹ

ನೀವು ಹೇಳಿದಂತೆ ಹೇಳಬೇಕಾದ್ದೆ. ಆದರೇ ದೇವರ ಜ್ಞಾನದಲ್ಲಿ ಕರ್ಮ ಸಿದ್ಧಾಂತ ಹೊರತು ಸಾಮಾಜಿಕ ನ್ಯಾಯವಿರುವುದಿಲ್ಲ. ಯಾರ ಕೆಲಸ ಅವರದ್ದು, ಯಾರ ಕರ್ಮ ಅವರದ್ದು. ಕರ್ಮವನ್ನು ನಿರೋಧಿಸಿಕೊಳ್ಳುವುದಕ್ಕೆ ಜ್ಞಾನವಿದೆ. ಜ್ಞಾನದಲ್ಲಿ ಅನ್ಯಾಯದಿಂದ ಹೊರಬೀಳಬಹುದು. ಹಾಗಿರುವಾಗ ಎಲ್ಲರೂ ಜ್ಞಾನವನ್ನು ತಿಳಿದರೆ ಸಾಮಾಜಿಕ ನ್ಯಾಯ ನಡೆದುಹೋಗುತ್ತದಲ್ಲವೆ! ನಾವು ಹೀಗೇ ಕಷ್ಟಪಡುತ್ತೇವೆ, ನಮಗೆ ಜ್ಞಾನ ಬೇಡ ಎನ್ನುವವರನ್ನು ದೇವರು ಏನೂ ಮಾಡುವುದಿಲ್ಲ. ಮನುಷ್ಯರು ಏನೂ ಮಾಡಲಾರರು. ರಾಜಕೀಯ ನಾಯಕರು ಹಣವನ್ನು ಸಂಪಾದಿಸಬೇಕೆಂದು ರಾಜಕೀಯದೊಳಗೆ ಬಂದಿದ್ದಾರೆ. ದೇವರು ಹಾಗೆ ಹಣ ಸಂಪಾದಿಸಬೇಕೆಂದು ಅಂದುಕೊಂಡಿಲ್ಲ ಅಲ್ಲವೆ! ಹಾಗಿರುವಾಗ ರಾಜಕೀಯ ನಾಯಕರಿಗೂ ದೇವರಿಗೂ ಯಾವ ವ್ಯತ್ಯಾಸ ಇಲ್ಲವೆಂದು ಇಬ್ಬರನ್ನೂ ಒಂದಾಗಿ ಸೇರಿಸುವುದು ಅಜ್ಞಾನವಾಗುತ್ತದೆ.

**76) ಪ್ರಶ್ನೆ :– ಚರ್ಮಾಸನಗಳು ಹಾಕಿಕೊಂಡು ಬ್ರಹ್ಮಯೋಗ ಮಾಡಿದರೆ ಒಳ್ಳೆಯದೆಂದು ಚರ್ಮಾಸನಗಳ ಉಪಯೋಗ ಹೇಳಿದ್ದೀರ. ಅದು ಚೆನ್ನಾಗಿಯೇ ಇದೆ ಆದರೆ, ಅದನ್ನು ಮಾಡಬೇಕೆಂದು ತಾಪತ್ರಯ ಬೀಳುವ ಭಕ್ತರು ಚರ್ಮಗಳಿಗಾಗಿ ಹುಲಿಯನ್ನು, ಸಿಂಹಗಳನ್ನು ಬೇಟೆಯಾಡಿ ಅವುಗಳ ಚರ್ಮಗಳಿಗಾಗಿ ಪರದಾಡಿದರೆ ಬ್ರಹ್ಮಯೋಗಕ್ಕಿಂತ ಮೊದಲೇ ಕಾರಾಗಾರಯೋಗ ಹೊಂದುವ ಅವಕಾಶವಿದೆ ಯೆಂದು ನಾನನ್ನುತ್ತೇನೆ. ಇದಕ್ಕೆ ನೀವೇನನ್ನುತ್ತೀರ?**

**ಉತ್ತರ :–** "ಚರ್ಮಾಸನಗಳು ಬ್ರಹ್ಮಯೋಗದಲ್ಲಿ ಉಪಯೋಗಿಸುವುದರಿಂದ ಸ್ವಲ್ಪ ಮಟ್ಟಿಗೆ ಶಕ್ತಿಯನ್ನು ಹೊಂದಬಹುದು" ಎಂದು ಹೇಳಿದ್ದೇನೆ. ಅಷ್ಟೇ ಹೊರತು ಹುಲಿ ಚರ್ಮವನ್ನೇ ಬಳಸಬೇಕೆಂದಾಗಲೀ, ಇಲ್ಲವೆ ಸಿಂಹದ ಚರ್ಮವನ್ನೇ ಬಳಸಬೇಕೆಂದಾಗಲೀ ಹೇಳಲಿಲ್ಲ. ಯಾವ ಚರ್ಮವಾದರೂ ಒಂದೇ ವಿಧಾನ ಹೊಂದಿದೆಯೆಂದು ಹೇಳಿದ್ದೇವೆ. ಯಾವ ಸಮಸ್ಯೆ ಇಲ್ಲದ ಎತ್ತು ಚರ್ಮಗಳು, ಕೋಣದ ಚರ್ಮಗಳು ಬಜಾರಿನಲ್ಲಿ ಸಿಗುತ್ತವೆ ಅವುಗಳನ್ನು ಬಳಸಬಹುದಲ್ಲವೆ! ಅನವಶ್ಯಕವಾಗಿ ಹುಲಿ, ಸಿಂಹದ ಚರ್ಮಗಳನ್ನು ಏಕೆ

ಬಳಸಬೇಕು? ಕಾರಾಗಾರಯೋಗ ಏಕೆ ಹೊಂದಬೇಕು? ನಾನು ಹೇಳಿದಂತೆ ಸುಲಭವಾಗಿ ಸಿಗುವ ಚರ್ಮಗಳನ್ನು ಬಳಸಿ ಬ್ರಹ್ಮಯೋಗದಲ್ಲಿನ ಶಕ್ತಿಯನ್ನು ನಷ್ಟಹೋಗದಂತೆ ನೋಡಿಕೊಳ್ಳಬೇಕೆಂದು ಕೋರುತ್ತಿದ್ದೇವೆ.

**77) ಪ್ರಶ್ನೆ :– ನೀವು ಹೇಳುವ ದೆವ್ವಗಳು ನಾಸ್ತಿಕರಾದ ನಮ್ಮ ಹತ್ತಿರಕ್ಕೆ ಬರುವುದಿಲ್ಲ. ನಿಮ್ಮ ದೇವರಿಗಿಂತ ನಾವೆಂದರೇನೆ ಅವುಗಳಿಗೆ ಹೆಚ್ಚಿನ ಭಯವೇನೋ! ಈ ರಾಕೆಟ್ ಯುಗದಲ್ಲಿ ದೆವ್ವಗಳು, ದೇವತೆಗಳು ಎನ್ನುವವರು ಕೆಲವರಿದ್ದಾರೆ. ನೀವು ನಂಬಿದ ದೆವ್ವಗಳನ್ನು ನಾವೂ ಸಹ ನಂಬಬೇಕೆಂದು ನೀವು ಪ್ರಯತ್ನಿಸುತ್ತಿದ್ದೀರ. ದೆವ್ವಗಳು ಹೆದರಿ ನಮ್ಮ ಹತ್ತಿರಕ್ಕೆ ಬಾರದೆ ಹೋದರೆ ಅವುಗಳಿಂದ ದೂರ ದಿಂದಾದರೂ ವೀಡಿಯೋ ಕಾನ್ಫರೆನ್ಸ್ ಇಡಿಸಿರಿ. ನಾವು ದೆವ್ವಗಳಿವೆಯೆಂದು ನಂಬಿದರೆ ನಮ್ಮಿಂದ ದೇವರಿದ್ದಾನೆಂದು ಸುಲಭವಾಗಿ ನಂಬಿಸಬಹುದು. ಇದಕ್ಕೆ ನೀವೇನನ್ನುತ್ತಿರಾ?**

**ಉತ್ತರ :–** ದೆವ್ವಗಳಿವೆಯೆಂದು ನಂಬಿಸಬೇಕಾದ ಅವಶ್ಯಕತೆ ನನಗಿಲ್ಲ. ಮೇಲಾಗಿ ದೆವ್ವಗಳು ನಿಮಗೆ ಹೆದರಿ ನಮ್ಮ ಹತ್ತಿರಕ್ಕೆ ಬಂದಿಲ್ಲವೆಂದು ಹೇಳಿದ್ದೀರ. ದೆವ್ವಗಳು ನಿಮ್ಮ ಹತ್ತಿರಕ್ಕೆ ಬಂದಿಲ್ಲವೆಂದು ನೀವು ಹೇಗೆ ಹೇಳುತ್ತೀರಾ? ದೆವ್ವಗಳ ವಿಷಯ ಏನೂ ನಿಮಗೆ ತಿಳಿಯದಿರುವಾಗ ಅವು ನಿಮ್ಮ ಹತ್ತಿರಕ್ಕೆ ಬಂದರೂ ಅವು ಬಂದಹಾಗೆ ನಿಮಗೆ ತಿಳಿಯದಲ್ಲವೆ! ದೆವ್ವಗಳು ಹತ್ತು ಮಂದಿಯಲ್ಲಿ ಆರು ಅಥವಾ ಏಳು ಮಂದಿ ಹತ್ತಿರಕ್ಕೆ ಸೇರಿ ಅವರಲ್ಲಿ ಪ್ರವೇಶಿಸಿ ಯಾರಿಗೂ ತಿಳಿಯದಂತೆ ಇರುತ್ತವೆ. ಅವು ತಿಳಿಯದಷ್ಟು ಮಾತ್ರಕ್ಕೆ ಅವು ಇಲ್ಲವೆಂದು ಹೇಳಲಾರೆವು. ಅವುಗಳಿಂದ ಉಂಟಾಗುವ ಬಾಧೆಗಳನ್ನು ಅನುಭವಿಸುತ್ತಿದ್ದರೂ ಕೆಲವರು ಅವುಗಳನ್ನು ಗುರುತಿಸಲಾರರು. ದೆವ್ವಗಳು ಇಲ್ಲ ಎನ್ನುವವರಲ್ಲಿ ಬಹಳ ಜನರಿಗೆ ಅವರಿಗೆ ತಿಳಿಯದಂತೆಯೇ ದೆವ್ವಗಳು ಇವೆಯೆಂದು ಅವರಿಗೇ ತಿಳಿದಿಲ್ಲ. ದೆವ್ವಗಳಿಂದ ವೀಡಿಯೋ ಕಾನ್ಫರೆನ್ಸ್ ಇಡಲು ಹೇಳಿದ್ದೀರ. ಅಂತಹ ಅವಶ್ಯ ನಮಗೆ ಏನೂ ಇಲ್ಲ. ಇಲ್ಲಿ ನಮ್ಮ ಹತ್ತಿರ ಐದು ತಿಂಗಳಿಂದ ದೇವತೆಗಳು ಬಂದು ನಮ್ಮ ಬೋಧನೆಗಳು ಕೇಳುತ್ತಿದ್ದಾರೆ. ಅವರು ಇತರರ ಶರೀರಗಳ

ಮೇಲೆ ಬಂದು ಮಾತನಾಡುತ್ತಿದ್ದಾರೆ. ಅವರ ಹತ್ತಿರಕ್ಕೆ ಬಂದು ನಿಮ್ಮ ಅನುಮಾನಗಳನ್ನು ಕೇಳಿರಿ.

**78) ಪ್ರಶ್ನೆ :– ಹೆಂಡತಿ ಮಕ್ಕಳನ್ನು ಬಿಟ್ಟುಕೊಂಡ ಬುದ್ಧನು ಅಜ್ಞಾನಿ ಎಂದು ನೀವು ಒಂದು ಗ್ರಂಥದಲ್ಲಿ ಬರೆದಾಗ ನೋಡಿದ್ದೇನೆ. ಇನ್ನೊಂದು ಗ್ರಂಥದಲ್ಲಿ ಬುದ್ಧನು ಜ್ಞಾನಕ್ಕಾಗಿ ಸರ್ವಸಂಗ ಪರಿತ್ಯಾಗ ಮಾಡಿದ್ದಾನೆ. ಆತನಿಗಿಂತ ನಾವು ದೊಡ್ಡವರಾ? ಎಂದು ಹೇಳಿದ್ದೀರ. ಈ ಎರಡರಲ್ಲಿ ಯಾವುದು ನಿಜ?**

**ಉತ್ತರ :–** ಎರಡು ಸಂದರ್ಭಗಳಲ್ಲಿ ಹೇಳಿದ ಎರಡು ಮಾತುಗಳು ನಿಜ. ಜ್ಞಾನ ರೀತಿಯಲ್ಲಿ ನೋಡಿದರೆ ಶರೀರದೊಳಗೆ ಗುಣಗಳನ್ನು ಬಿಟ್ಟುಕೊಳ್ಳಬೇಕಾಗಿರುವಾಗ, ಶರೀರದೊಳಗೆ ಇರುವ ತನ್ನ ಪರಿವಾರವಾದವರು 24 ಮಂದಿ ಇರುವಾಗ ಅವರನ್ನು ಬಿಡದೆ, ಶರೀರದ ಹೊರಗೆ ಹೆಂಡತಿ ಮಕ್ಕಳನ್ನು ಬಿಡುವುದು ಅಜ್ಞಾನ. ಹೆಂಡತಿ ಮಕ್ಕಳನ್ನು ಬಿಡಬೇಕೆಂದು ಯಾವ ದೇವರು ಹೇಳಲಿಲ್ಲ. ಇನ್ನೊಂದು ಸಂದರ್ಭದಲ್ಲಿ ಹೊರಗಿನ ವಸ್ತುವಿನ ಮೇಲೆ, ಹಣದಮೇಲೆ, ಬಂಗಾರದ ಮೇಲೆ ಆಸೆಯನ್ನು ಬೆಳಸಿಕೊಂಡು ಅವುಗಳಿಗೋಸ್ಕರ ನಾವು ನಿತ್ಯವೂ ಪರದಾಡುತ್ತಿದ್ದೇವೆ. ಬುದ್ಧನು ಹೊರಗಿನ ಧನ, ಬಂಗಾರಕ್ಕಿಂತ ದೊಡ್ಡದಾಗಿರುವ ಹೆಂಡತಿ ಮಕ್ಕಳನ್ನೇ ಬಿಟ್ಟಾಗ ಹೊರಗೆ ಏನೂ ಬಿಟ್ಟುಕೊಳ್ಳದ ನಾವು, ಆತನಿಗಿಂತ ದೊಡ್ಡವರಾ ಎನ್ನುವ ಮಾತು ಸತ್ಯ. ಹೊರಗಿನ ವಿಷಯಗಳಲ್ಲಿ ನಮ್ಮೊಂದಿಗೆ ಹೋಲಿಸಿಕೊಂಡರೆ ಆತನೇ ದೊಡ್ಡವನು. ಅಂತರಂಗ ಜ್ಞಾನ ವಿಷಯದಲ್ಲಿ ಜ್ಞಾನ ಪ್ರಕಾರ ಬ್ರಹ್ಮವಿದ್ಯಾ ಶಾಸ್ತ್ರದ ಪ್ರಕಾರ ನೋಡಿದರೆ ಹೊರಗೆ ಹೆಂಡತಿ ಮಕ್ಕಳನ್ನು ಬಿಟ್ಟ ಆತನು ಅಜ್ಞಾನಿಯೇ ಎಂದು ಹೇಳಬಹುದು.

**79) ಪ್ರಶ್ನೆ :– ಅರ್ಜುನನಲ್ಲಿ ಪ್ರೇಮ, ಗೌರವ, ಹಿರಿಯರೆಂದರೆ ಪೂಜ್ಯಭಾವ ಇರುತ್ತಿತ್ತು. ಯುದ್ಧ ರಂಗದಲ್ಲಿ ಹಿರಿಯರಾದ ಭೀಷ್ಮ, ದ್ರೋಣರ ಮೇಲೆ ಕೈ ಹೇಗೆ ಎತ್ತುವುದು? ಎಂದು ಸಂದೇಹಪಟ್ಟನು. ಅವರ ಮೇಲೆ ಗೌರವ ಭಾವದಿಂದ ಧನುರ್ಭಾಣಗಳು ಕೆಳಗೆ ಹಾಕಿದ್ದಾನೆ. ಆದರೇ ಮತ್ತನ್ನು ಉಂಟುಮಾಡುವ ಸಾರಾಯಿ ಕುಡಿದ ವ್ಯಕ್ತಿ ಬದಲಾಗಿಹೋದಂತೆ ಕೃಷ್ಣನು ಕೊಟ್ಟ ಗೀತಾರಸವನ್ನು ಕುಡಿದ**

**ಅರ್ಜುನನು ಬದಲಾಗಿ ಹೋಗಿ ಹಿರಿಯರ ಮೇಲೆ ಗೌರವವನ್ನು ಬಿಟ್ಟು ಅವರ ಮೇಲೆಗೇ ಕೈಯ್ಯನ್ನು ಎತ್ತಿ ಯುದ್ಧ ಮಾಡಿದ್ದಾನೆ. ಅಂದಿನ ವಿಷಯಕ್ಕಿಂತ ಈಗ ಪಾಕಿಸ್ತಾನ್‌ರವರು ಕಲಿಸುವ ಉಗ್ರವಾದ ಚಿಕ್ಕದಲ್ಲವೆ? ಕೃಷ್ಣನು ಅರ್ಜುನನಿಗೆ ಕಲಿಸಿರುವುದು ಒಳ್ಳೆಯದಾ, ಕೆಟ್ಟದಾ? ಪ್ರೇಮವಾ, ಉಗ್ರವಾದವಾ?**

**ಉತ್ತರ :–** ನೀವು ಹೇಳುವ ಪದ್ಧತಿ ಪ್ರಕಾರವಾದರೆ ಕೃಷ್ಣನು ಹೇಳಿರುವುದು, ಕಲಿಸಿರುವುದು ಹಿಂಸೆಯನ್ನು ಕುರಿತೇ ಎಂದು ಹೇಳಬೇಕು. ಈಗ ಉಗ್ರವಾದವನ್ನು ಕಲಿಸಿ ಒಬ್ಬ ಮನುಷ್ಯನನ್ನು ಉಗ್ರವಾದಿಯಾಗಿ ಬದಲಾಯಿಸುವುದಕ್ಕೆ ಕನಿಷ್ಟ ಆರು ತಿಂಗಳಾದರೂ ಹಿಡಿಸುತ್ತದೆ. ಕೃಷ್ಣನು ಆರು ನಿಮಿಷಗಳಲ್ಲಿ ಅರ್ಜುನನನ್ನು ಉಗ್ರವಾದ ಭಾವನೆಗಳೊಳಗೆ ಬದಲಾಯಿಸಿದ್ದಾನೆ. ಈ ಕಾಲದಲ್ಲಿ ಕಲಿಸುವ ಉಗ್ರವಾದಕ್ಕಿಂತ ಕೃಷ್ಣನು ಕಲಿಸಿದ ಉಗ್ರವಾದವೇ ದೊಡ್ಡದೆಂದು ಹೇಳಬಹುದು. ಆದರೇ ಆ ದಿನಗಳಲ್ಲಿ ಮುಂಬರುವ ಭವಿಷ್ಯತ್ತಿನಲ್ಲಿನ ಪ್ರಜೆಗಳಿಗೆ ಜ್ಞಾನವನ್ನು ಒದಗಿಸುವುದಕ್ಕೆ ಅರ್ಜುನನಿಗೆ ಕರ್ಮಯೋಗವನ್ನು ಬ್ರಹ್ಮಯೋಗವನ್ನು ಹೇಳಿದ್ದಾನೆ. ಅರ್ಜುನನು ಆಚರಿಸುವುದಕ್ಕೆ ಕರ್ಮಯೋಗ ಯೋಗ್ಯವಾದುದೆಂದು ಹೇಳಿದ್ದಾನೆ. ಕರ್ಮಯೋಗವನ್ನು ಅರ್ಥಮಾಡಿಕೊಳ್ಳದಿದ್ದರೆ ಅದು ಉಗ್ರವಾದದ ಹಾಗೆ ಕಾಣಿಸುತ್ತದೆ. ಕರ್ಮಯೋಗವನ್ನು ಅರ್ಥ ಮಾಡಿಕೊಂಡರೆ ಮನುಷ್ಯ ಕರ್ಮಗಳಿಂದ ಹೊರಬಿದ್ದು ದೇವರಲ್ಲಿ ಐಕ್ಯವಾಗಿ ಹೋಗುತ್ತಾನೆ. ಅರ್ಥ ವಾಗದಿದ್ದರೆ ಕರ್ಮಗಳನ್ನು ಸಂಪಾದಿಸುವ ಉಗ್ರವಾದದಂತೆ ಕಾಣಿಸುತ್ತದೆ. ಯಾರ ದೃಷ್ಠಿ ಅವರದ್ದು. ಯಾರ ಗ್ರಾಹಿತ ಶಕ್ತಿ ಅವರದು.

**80) ಪ್ರಶ್ನೆ :– "ವಾಸಾಂಸಿ ಜೀರ್ಣಾನಿ" ಎನ್ನುವ ಶ್ಲೋಕವನ್ನು ಹೇಳಿ "ಮನುಷ್ಯ ಹರಿದು ಹೋದ ಬಟ್ಟೆಗಳನ್ನು ಬಿಟ್ಟು, ಹೊಸ ವಸ್ತ್ರಗಳನ್ನು ಹೇಗೆ ಧರಿಸುತ್ತಾನೋ, ಅದೇ ವಿಧವಾಗಿ ಜೀವಾತ್ಮ ಜೀರ್ಣವಾದ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಧರಿಸುತ್ತಿದೆ" ಎಂದು ಹೇಳಿ ವೇದಾಂತವನ್ನು ಬೋಧಿಸುತ್ತೀರಾ? ಮುದಕರಾದ ಭೀಷ್ಮ, ದ್ರೋಣ, ಕೃಪಾಚಾರ್ಯರಿಗಾದರೆ ವೃದ್ಧರಾಗಿರುವುದರಿಂದ ಶರೀರ ಜೀರ್ಣವಾಗಿದೆಯೆಂದು ಸ್ವಲ್ಪ ಮಟ್ಟಿಗೆ ಹೇಳಬಹುದು. ಅಭಿಮನ್ಯು, ದುಶ್ಯಾಸನ,**

**ಕರ್ಣನಂತಹವರನ್ನು ಎಳೆದರೂ ಎಳೆಯಲಾರದ ಶರೀರ ಹೊಂದಿರುವವರಿಗೆ ಮೇಲಿನ ಶ್ಲೋಕ ಹೇಗೆ ಅನ್ವಯಿಸುತ್ತದೆ? ಶರೀರ ಎಷ್ಟೋ ಧೃಢವಾಗಿದ್ದರೆ ಆತ್ಮ ಏಕೆ ಹೊರಬೀಳಬೇಕು? ಅದಕ್ಕೆ ಏನಾದರೂ ಚೆಲ್ಲಾಟವಾ? ಏಕೆ ಬಿಡಿ, ಇಲ್ಲದ ಆತ್ಮವನ್ನು ಇದೆಯೆಂದು ಹೇಳುವ ಪ್ರಯತ್ನ?**

**ಉತ್ತರ :–** ವಸ್ತ್ರ ಅದಷ್ಟಕ್ಕದು ಹಳೆಯದಾಗಿ ಹರಿದು ಹೋಗುವುದು. ಬಲವಂತವಾಗಿ ಹರಿದರೆ ಹರಿದು ಹೋಗುವುದು ಸಹ ಇದೆ. ಭೀಷ್ಮ, ದ್ರೋಣ, ಕೃಪಾಚಾರ್ಯರವರ ದೇಹಗಳು ಹಳೆಯದಾಗಿರುವವೇ. ಆದರೆ ಯುದ್ಧದಲ್ಲಿ ಎದುರಾದವರಲ್ಲಿ ಅಭಿಮನ್ಯ, ಕರ್ಣ, ದುಶ್ಯಾಸನ ಮುಂತಾದವರೆಲ್ಲರದ್ದು ಹೊಸ ಶರೀರವೇ. ಮಾಡುವುದು ಯುದ್ಧ, ಯುದ್ಧದಲ್ಲಿ ಹಳೆ ದೇಹ, ಹೊಸ ದೇಹ ಎಂದು ಅಂದುಕೊಳ್ಳಬಾರದು. ಶತ್ರು ದೊಡ್ಡವಯಸ್ಸಿನವನಾಗಲೀ, ಚಿಕ್ಕ ವಯಸ್ಸಿನವನಾಗಲೀ ತಪ್ಪದೆ ಎದುರಿಸಬೇಕಾಗಿರುತ್ತದೆ. ಯುದ್ಧದಲ್ಲಿ ಬಲವಂತ ವಾಗಿ ದೇಹ ಹರಿದುಹೋದಾಗ ಆತ್ಮ ಅದರಲ್ಲಿ ಇರುವುದಿಲ್ಲ. ಹಳೆ ಶರೀರ ಹೇಗೆ ನಿವಾಸಯೋಗ್ಯವಲ್ಲವೋ ಹಾಗೆಯೇ ಹರಿದ ವಸ್ತ್ರವಾಗಿ ಇರುವ ಶರೀರ ಹಳೆ ವಸ್ತ್ರದಂತೆ ಬದಲಾಗಿರುತ್ತದೆ. ಆದ್ದರಿಂದ ಮುದಕನಾದರೂ, ವಯಸ್ಸಿರುವ ವನಾದರೂ ಶರೀರ ಹಳೆಯದು ಸಹಜವಾಗಿಯಾದರೂ, ಬಲವಂತವಾಗಿ ಯಾದರೂ ಅವು ನಿವಾಸಯೋಗ್ಯಗಳು ಅಲ್ಲ. ಆದ್ದರಿಂದ ವೃದ್ಧರಿಗಾಗಲೀ, ಯುವಕರಿಗಾಗಲೀ ಮರಣ ತಪ್ಪುವುದಿಲ್ಲ. ಶರೀರ ವಿಷಯದಲ್ಲಿ ವಯಸ್ಸು ಕಳೆಯುತ್ತಿದ್ದಂತೆ ಹಳೆಯದಾಗುವುದು ಇದೆ. ಯುವಕರಾಗಿರುವಾಗಲೇ ಹಳೆಯ ದಾಗುವುದು ಇದೆ. ಅಂದಿಗೆ ಕರ್ಮ ಮುಗಿದುಹೋಗಿರುತ್ತದೆ. ಆದ್ದರಿಂದ ನಂತರ ಜನ್ಮಕ್ಕೆ ಹೋಗಿ ಅಲ್ಲಿ ಯಾವುದೂ ಜ್ಞಾಪಕ ಇಲ್ಲದಿರುವುದರಿಂದ ಹಿಂದಿನ ಜನ್ಮದೊಂದಿಗೆ ಸಂಬಂಧವಿಲ್ಲದಂತೆ ಬದುಕುತ್ತಾರೆ. ಇದೆಲ್ಲಾ ಸರ್ವಸಾಧಾರಣವಾಗಿ ನಡೆಯುವುದೇ.

**81) ಪ್ರಶ್ನೆ :– ಯಾರು ಯಾವಕೆಲಸವನ್ನು ಮಾಡಿದರೂ ಯಾವುದೋ ಒಂದು ಕೋರಿಕೆ ಪ್ರೇರಣೆಯೊಂದಿಗೆ ಮಾಡುತ್ತಾರೆ. ಎಲ್ಲ ಕೋರಿಕೆಗಳು ತ್ಯಜಿಸುವುದು ಸಹ ಕೋರಿಕೆಯಾಗುತ್ತದಲ್ಲವೆ! 'ನಿಷ್ಕಾಮ ಕರ್ಮ' ಎನ್ನುವುದರಲ್ಲಿ ಅರ್ಥವೇನಿದೆ?**

**ಉತ್ತರ :–** 'ಯಾವ ಕೋರಿಕೆ ಇರಬಾರದು' ಎಂದು ಅಂದುಕೊಳ್ಳುವುದು ಸಹ ಒಂದು ಕೋರಿಕೆಯಾಗುತ್ತದೆ. ಆದರೆ ಇಲ್ಲಿ ಹೇಳಿರುವುದು ಕೋರಿಕೆ ಇಲ್ಲದಂತೆಯೆಂದು ಅಲ್ಲ. ಕೋರಿಕೆಯಿಂದ ಬರುವ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳಿರೆಂದಿದ್ದಾನೆ. ಕೋರಿ ಮಾಡುವ ಕೆಲಸಗಳಲ್ಲಿ ಬರುವ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳಿರೆಂದಿದ್ದಾನೆ. ಮೊದಲು ಅಂದುಕೊಳ್ಳದಿರುವುದು, ಪ್ರಾರಂಭಿಸದಿರುವುದು ಯಾವುದನ್ನೂ ಮಾಡಲಾರೆವು. ಇಲ್ಲಿ ಕೆಲಸವನ್ನು ಮಾಡದಂತೆ ಬಿಡುತ್ತಿಲ್ಲ. ಆದರೇ ಕೆಲಸವನ್ನು ಮಾಡುವುದರಿಂದ ಬರುವ ಕರ್ಮವನ್ನು ಇಲ್ಲದಂತೆ ಮಾಡಿಕೊಳ್ಳಿರೆಂದಿದ್ದಾನೆ. ಅದನ್ನೇ 'ನಿಷ್ಕಾಮ ಕರ್ಮ' ಎಂದು ಅನ್ನುವುದು ನಡೆದಿದೆ.

**82) ಪ್ರಶ್ನೆ :– "ಭ್ರಾಮಯನ್ ಸರ್ವ ಭೂತಾನಿ ಯಂತ್ರಾ ರೂಢಾನಿ ಮಾಯಯಾ" (ಗೀತೆ 18–61) "ನನ್ನ ಮಾಯೆ ಪ್ರಭಾವದಿಂದ ಜೀವಿಗಳನ್ನು ಕೀಲುಗೊಂಬೆಗಳಂತೆ ಆಡಿಸುತ್ತಿದ್ದೇನೆ" ಎಂದು ಹೇಳಿದ ಭಗವದ್ಗೀತೆ ಒಂದು ಶ್ಲೋಕದ ನಂತರ ಶ್ಲೋಕದಲ್ಲಿ (18–63) 'ಯದ್ಧೇಚ್ಛಸಿ ತಥಾಕುರು' "ನಿನಗೆ ಹೇಗೆ ಇಚ್ಛೆ ಉಂಟಾದರೆ ಹಾಗೆ ಮಾಡು" ಎನ್ನುವ ಮಾತು ಏಕೆ ಇದ್ದಂತೆ?**

**ಉತ್ತರ :–** ಮನುಷ್ಯ ಇಷ್ಟದ ಪ್ರಕಾರ ಮಾಡಿದರೂ ಅದು ಅವನ ಇಷ್ಟವನ್ನನುಸರಿಸಿ ನಡೆಯುತ್ತಿಲ್ಲ. ಮನುಷ್ಯನಲ್ಲಿನ ಇಚ್ಛೆ ಕೂಡಾ ಆತ್ಮದ್ದೇ ಆಗಿರುವುದರಿಂದ ಮನುಷ್ಯನಿಗೆ ಒಂದು ಕೆಲಸವನ್ನು ಮಾಡಬೇಕೆನ್ನುವ ಇಚ್ಛೆಯನ್ನು ಉಂಟು ಮಾಡಿಸಿ, ಆ ಇಚ್ಛೆ ಪ್ರಕಾರ ಕೆಲಸವನ್ನು ಮಾಡಿಸುವುದರಿಂದ ಮನುಷ್ಯ ನನ್ನ ಇಷ್ಟದ ಪ್ರಕಾರ ಕೆಲಸ ನಡೆಯುತ್ತಿದೆಯೆಂದು ಭ್ರಮಿಸುತ್ತಿದ್ದಾನೆ. ವಾಸ್ತವವಾಗಿ ಒಳಗೆ ಹೋಗಿ ನೋಡಿದರೆ ಎಲ್ಲ ಕೆಲಸಗಳು ಆತ್ಮ ಕರ್ಮದ ಪ್ರಕಾರ ನಡೆಸುತ್ತಿದೆ. ತಾನು ಬೆಳಕಿಗೆ ಬಾರದಂತೆ ಆತ್ಮ ಮಾಡುವ ಕೆಲಸಗಳು ಸ್ವತಃವಾಗಿ ಜೀವಿಯು ಮಾಡಿದಹಾಗೆ ಭ್ರಮಿಸುವಂತೆ ಮಾಡುತ್ತಿದೆ. ಆತ್ಮ ತನ್ನ ಮಾಯೆಯಿಂದ ಮನುಷ್ಯನನ್ನು ಗೊಂಬೆಯನ್ನು ಆಡಿಸಿದಂತೆ ಕರ್ಮ ಪ್ರಕಾರ ಆಡಿಸುವುದು ನಡೆಯುತ್ತಿದೆ. ಮನುಷ್ಯ (ಜೀವಿಯು) ಆತ್ಮ ಕೈಯ್ಯಲ್ಲಿ ಆಡಿಸಲ್ಪಡುತ್ತಿದ್ದರೂ

ಆಡಿಸುವುದು ಆತ್ಮ, ಆಡಿಸಲ್ಪಡುವವನು ಮನುಷ್ಯ (ನಾನು) ಎಂದು ಗ್ರಹಿಸಲಾರದೆ ಹೋಗುತ್ತಿದ್ದಾನೆ. ಜ್ಞಾನದ ಪ್ರಕಾರ ಆತ್ಮ ಮನುಷ್ಯರನ್ನು ಗೊಂಬೆಗಳಂತೆ ನಡೆಸುವ ವಿಧಾನವನ್ನು 61ನೇ ಶ್ಲೋಕದಲ್ಲಿ ಹೇಳಿ ಪಕ್ಕದಲ್ಲಿಯೇ 63ನೇ ಶ್ಲೋಕದಲ್ಲಿ ಅಜ್ಞಾನದ ಪ್ರಕಾರ ಮನುಷ್ಯ ಇಚ್ಛೆ ಪ್ರಕಾರ ಕೆಲಸಗಳು ಮಾಡುವಂತೆ ಹೇಳುವುದು ನಡೆದಿದೆ. ಜ್ಞಾನಿಗಳಿಗೆ 61 ನೇ ಶ್ಲೋಕ ಸತ್ಯ. ಅಜ್ಞಾನಿಗಳಿಗೆ 63ನೇ ಶ್ಲೋಕ ಸತ್ಯ ಎನ್ನುವಂತೆ ಮಾಡಿದ್ದಾನೆ.

**83) ಪ್ರಶ್ನೆ :– "ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ, ಅಹಮ್ ತ್ವಾ ಸರ್ವ ಪಾಪೇಭ್ಯೋಃ ಮೋಕ್ಷಯಿಷ್ಯಾಮಿ ಮಾಶುಚಃ" ಈ ಒಂದು ಶ್ಲೋಕವನ್ನು ಹೇಳಿದರೇ, ಅದನ್ನೇ ಪರಿಗಣಿಸಿದರೆ, ಉಳಿದ ಶ್ಲೋಕಗಳು ಹೇಳುವ ಅವಕಾಶವಿಲ್ಲವಲ್ಲವೆ! ಎಂದು ನಾನು ಅನ್ನುತ್ತೇನೆ. ನೀವೇನನ್ನುತ್ತೀರಾ?**

**ಉತ್ತರ :–** ಭಗವದೀತೆಯಲ್ಲಿ ಹೇಳಿರುವವು ಮುಖ್ಯವಾಗಿ ಮೂರು ಧರ್ಮಗಳೆಂದು ಬಹಳ ಸಲ ಹೇಳಿದ್ದೇವೆ. ಅದರಲ್ಲಿ ಒಂದು ಬ್ರಹ್ಮಯೋಗ ಧರ್ಮ, ಎರಡು ಕರ್ಮಯೋಗ ಧರ್ಮ. ಈ ಎರಡು ಅಲ್ಲದಿರುವುದು ಭಕ್ತಿಯೋಗ. ಮೊದಲ ಎರಡು ಯೋಗಗಳು ಧರ್ಮಗಳೊಂದಿಗೆ ಕೂಡಿಕೊಂಡಿರು ವಾಗ ಮೂರನೆ ಭಕ್ತಿಯೋಗ ಧರ್ಮಗಳಿಗೆ ಅತೀತವಾಗಿ ಇದೆ. ಎರಡನ್ನು ಮೀರಿರುವುದು ಭಕ್ತಿಯೋಗ. ಮೊದಲು ಧರ್ಮಗಳ ಪ್ರಕಾರ ಎರಡು ಯೋಗಗಳನ್ನು ತಿಳಿದ ನಂತರ ಧರ್ಮಾತೀತವಾಗಿರುವ ಭಕ್ತಿಯೋಗವನ್ನು ತಿಳಿಯಬಹುದು. ಮೊದಲು ಎರಡು ಯೋಗಗಳನ್ನು ತಿಳಿಯದೆ ಕೊನೆಯದಾದ ಭಕ್ತಿಯೋಗ ಅವಗಾಹನೆಗೆ ಬರುವುದಿಲ್ಲ. ಆದ್ದರಿಂದ ಬ್ರಹ್ಮ, ಕರ್ಮ ಯೋಗ ಗಳನ್ನು ತಿಳಿದರೆ ನಂತರ ಭಕ್ತಿಯೋಗವನ್ನು ತಿಳಿಯಬಹುದು. ಮೊದಲಿರುವ ಎರಡು ಯೋಗಗಳನ್ನು ತಿಳಿದ ನಂತರ ಎರಡು ಯೋಗಗಳಿಗಿರು ವಂತೆ ಧರ್ಮಗಳಿಲ್ಲದ ಭಕ್ತಿಯೋಗವನ್ನು ತಿಳಿಯುವುದಾದರೆ ಅಂತಹವನಿಗೆ ಉಳಿದ ಶ್ಲೋಕಗಳೊಂದಿಗೆ ಕೆಲಸವೇ ಇಲ್ಲ. ಮೊದಲೇ ಧರ್ಮಗಳು ಇಲ್ಲದ ಶ್ಲೋಕವನ್ನು ಹೇಳುವುದಕ್ಕೆ ಅವಕಾಶವಿಲ್ಲ. ಧರ್ಮಗಳನ್ನು ತಿಳಿದನಂತರ ಧರ್ಮಗಳಿಲ್ಲದ

ಸ್ಥಿತಿಯೊಳಗೆ ಬರಬಹುದು. ಆದ್ದರಿಂದ ಮೊದಲು ಭಗವದ್ಗೀತೆ ಯಲ್ಲಿ 17 ಅಧ್ಯಾಯಗಳನ್ನು ಹೇಳಿ ಕೊನೆಯಲ್ಲಿ 18ನೇ ಅಧ್ಯಾಯ ಕೊನೆಯಲ್ಲಿ ಭಕ್ತಿಯೋಗವನ್ನು ಕುರಿತು ಹೇಳಿದ್ದಾನೆ. ಮೊದಲು ಧರ್ಮಗಳಿಲ್ಲದ ಭಕ್ತಿಯೋಗ ವನ್ನು ಹೇಳಿದರೂ ಅದು ವರಸೆಕ್ರಮವಲ್ಲ. ಹಾಗೆ ಹೇಳಿದರೂ ಭಗವದ್ಗೀತೆ ಜ್ಞಾನ ಅರ್ಥವಾಗುವುದಿಲ್ಲ. ಆದ್ದರಿಂದ ಮೊದಲು ಧರ್ಮಗಳೊಂದಿಗೆ ಕೂಡಿ ಕೊಂಡ ಜ್ಞಾನವನ್ನು ಹೇಳುವುದಾಗಿದೆ. ಧರ್ಮಯುಕ್ತವಾದ ಎರಡು ಯೋಗಗಳಿಂದಲೇ ಮನುಷ್ಯ ಮುಕ್ತಿಯನ್ನು ಹೊಂದಬಹುದು. ಆ ಎರಡು ವಿಧಾನಗಳನ್ನು ಆಚರಿಸುವುದರಿಂದ ಶರೀರದಲ್ಲಿನ ಆತ್ಮ ತಿಳಿಯುತ್ತದೆ. ಈ ಎರಡು ವಿಧಾನಗಳು ಅಲ್ಲದ ಭಕ್ತಿಯೋಗವನ್ನು ತಿಳಿಯುವುದರಿಂದ ಮನುಷ್ಯನಿಗೆ ಮುಕ್ತಿಯೇ ಲಭಿಸಿದರೂ ಭಕ್ತಿಯೋಗ ವೇಗವಂತವಾದುದು. ಮೊದಲು ಎರಡು ಯೋಗಗಳಿಂದ ಕರ್ಮ ಸುಟ್ಟುಹೋದನಂತರ ಮುಕ್ತಿ ಲಭಿಸುತ್ತದೆ. ಅವುಗಳಿಂದ ಮುಕ್ತಿ ಲಭಿಸಿದರೂ ಯೋಗಮಾಡಿದಂತೆಲ್ಲಾ ಕರ್ಮ ಸುಡುತ್ತಾ ಬರುತ್ತದೆ. ಇದೆಲ್ಲವೂ ಪದ್ಧತಿ ಪ್ರಕಾರ ನಡೆಯುತ್ತಿರುತ್ತದೆ. ಧರ್ಮಾತೀತವಾದ ಭಕ್ತಿಯೋಗದಲ್ಲಿ ಕರ್ಮಗಳು ಸುಟ್ಟುಹೋಗುವುದು ಬಹಳ ವೇಗವಾಗಿ ನಡೆಯುತ್ತದೆ. ಆದರೇ ಮೊದಲು ಬ್ರಹ್ಮ, ಕರ್ಮ ಯೋಗಗಳನ್ನು ತಿಳಿಯದೆ ಭಕ್ತಿಯೋಗ ಅರ್ಥ ವಾಗುವುದಿಲ್ಲ. ಬುದ್ಧಿಯಲ್ಲಿ ಶ್ರದ್ಧೆ ಇರುವವರು ಎರಡು ಯೋಗಗಳನ್ನು ತಿಳಿಯುತ್ತಾರೆ. ಇನ್ನೂ ಶ್ರದ್ಧೆ ಇರುವವನು ಭಕ್ತಿಯೋಗವನ್ನು ಸಹ ತಿಳಿಯುತ್ತಾನೆ. ಮೊದಲು ಬ್ರಹ್ಮ, ಕರ್ಮ ಯೋಗಗಳನ್ನು ತಿಳಿಯುವವನು ಯೋಗ ಭ್ರಷ್ಟನು ಎನ್ನುವುದಕ್ಕೆ ಅವಕಾಶ ಕಡಿಮೆಯಾಗಿ ಇರುತ್ತದೆ. ಭಕ್ತಿಯೋಗವನ್ನು ಅನುಸರಿಸುವ ವನು ಯೋಗ ಭ್ರಷ್ಟನಾಗುವುದಕ್ಕೆ ಅವಕಾಶ ಹೆಚ್ಚಿಗೆ ಇದೆ. ಆದ್ದರಿಂದ ಭಕ್ತಿಯೋಗ ದಲ್ಲಿ ಹೆಚ್ಚಿನ ಕಾಲ ಯಾರೂ ಮುಂದುವರೆಯುವುದಿಲ್ಲ. ಒಂದು ವೇಳೇ ಭಕ್ತಿಯೋಗದಲ್ಲಿ ಮುಂದುವರೆದರೆ ಕಡಿಮೆ ಕಾಲದಲ್ಲಿಯೇ ಮೋಕ್ಷ ಹೊಂದುವ ಅವಕಾಶವಿದೆ.

**84) ಪ್ರಶ್ನೆ :– ಶಿವಗೀತೆ, ರಾಮಗೀತೆ, ಗೋಪಿಗೀತೆ ಹಾಗೆಯೇ ಭಗವದ್ಗೀತೆ ಇವೆ. ಇವೆಲ್ಲವೂ ಕವಿಕಲ್ಪನೆ. ಕವಿಗೆ ಕಾವ್ಯ ಚಮತ್ಕಾರ ಪ್ರದರ್ಶಿಸುವುದಕ್ಕೆ**

**ಯಾವುದೋ ಒಂದು ಆಧಾರ ಬೇಕು. ಆದ್ದರಿಂದ ಈ ಹೆಸರುಗಳನ್ನಿಟ್ಟು ಆ ಹೆಸರುಗಳ ಆಧಾರದಿಂದ ಕಾವ್ಯವನ್ನು ಬರೆದಿದ್ದಾರೆ. ಅದರಲ್ಲಿ ಕವಿ ಚಮತ್ಕಾರ ಹೊರತು ಏನೂ ಇಲ್ಲವೆಂದು, ಕವಿ ಕಲ್ಪನೆ ಹೊರತು ಏನೂ ಇಲ್ಲವೆಂದು ಅನ್ನುತ್ತೇನೆ. ನೀವೇನನ್ನುತ್ತೀರಾ?**

**ಉತ್ತರ :–** ಶಿವಗೀತೆ, ರಾಮಗೀತೆ, ಗೋಪಿಗೀತೆ, ಗುರುಗೀತೆ ಎನ್ನುವ ಗ್ರಂಥಗಳನ್ನು ಕವಿಗಳು ಅವರ ಭಾವನೆಗಳನ್ನು ಅದರಲ್ಲಿ ಸೇರಿಸಿ ಬರೆದಿದ್ದಾರೆ. ಅವುಗಳನ್ನು ಓದಿದರೆ ಅವುಗಳ ವಿಷಯ ಕವಿಗಳು ಬರೆದಿರುವುದೆಂದು ತಿಳಿದುಹೋಗುತ್ತದೆ. ಅದರಲ್ಲಿ ಮನುಷ್ಯರಿಗೆ ತಿಳಿದ ಆಧ್ಯಾತ್ಮಿಕವಿದೆ ಆದರೆ, ದೇವರು ಹೇಳಿದ, ಮನುಷ್ಯರಿಗೆ ತಿಳಿಯದ ಆಧ್ಯಾತ್ಮಿಕವಿಲ್ಲ. ಭಗವದ್ಗೀತೆ ಅಂಥದ್ದಲ್ಲ. ದೇವರು ತಿಳಿಸಿದ ಆಧ್ಯಾತ್ಮಿಕ ಇದರಲ್ಲಿ ಇದೆ. ಆದ್ದರಿಂದ ಉಳಿದ ಗೀತೆಗಳೊಂದಿಗೆ ಸಮಾನವಾಗಿ ಹೋಲಿಸಿ ಭಗವದ್ಗೀತೆಯನ್ನು ಹೇಳಬಾರದು. ಭಗವದ್ಗೀತೆ ಪ್ರತ್ಯೇಕವಾದ ಬ್ರಹ್ಮವಿದ್ಯಾ ಶಾಸ್ತ್ರ. ಉಳಿದ ಗೀತೆಗಳಲ್ಲಿ ಶಾಸ್ತ್ರೀಯತೆ ಇರುವುದಿಲ್ಲ. ಪುರಾಣ ಕಲ್ಪಿತಗಳು ಉಳಿದ ಗ್ರಂಥಗಳಲ್ಲಿ ಕಾಣಿಸುತ್ತದೆ. ಆದರೇ ಭಗವದ್ಗೀತೆಯಲ್ಲಿ ಕರ್ಮ ರಹಸ್ಯ, ಯೋಗ ವಿವರಗಳು ಇವೆ. ಭಗವದ್ಗೀತೆ ಬ್ರಹ್ಮವಿದ್ಯೆಯಲ್ಲಿ ಶಾಸ್ತ್ರಬದ್ಧವಾದ ಗ್ರಂಥ.

**85) ಪ್ರಶ್ನೆ :– "ತಸ್ಮಾತ್ ಯುದ್ದ್ಯಸ್ಯ ಭಾರತಾ" ಎಂದು ಪದೇ ಪದೇ ಹೇಳಿದ್ದಾನೆ. ಅದೇ ಭಗವದ್ಗೀತೆಯೊಂದರ ಆಂತರ್ಯವೆಂದು ಕೆಲವರ ಭಾವನೆ. ನೀವು ಏನೆಂದುಕೊಳ್ಳುತ್ತೀರಾ?**

**ಉತ್ತರ :–** ಆಗ ಎದುರುಗಡೆ ಇರುವ ಕೆಲಸ ಯುದ್ಧ ಮಾಡುವುದೇ, ಕರ್ಮಯೋಗದ ಪ್ರಕಾರ ಯುದ್ಧ ಮಾಡೆಂದಿದ್ದಾರೆ ಹೊರತು ಯುದ್ಧ ಮಾಡುವುದೇ ಮುಖ್ಯವೆಂದು ಹೇಳಲಿಲ್ಲ. ಕರ್ಮಯೋಗದ ಪ್ರಕಾರ ತ್ಯಜಿಸುವುದಕ್ಕಿಂತ ಕೆಲಸ ಮಾಡುವುದು ಒಳ್ಳೆಯದು ಎಂದಿದ್ದಾರೆ. ಸಮಯವನ್ನು ಅನುಸರಿಸಿ ಕರ್ಮದ ಪ್ರಕಾರ ಎದುರಾದ ಕಾರ್ಯವನ್ನು ಮಾಡೆಂದು ಹೇಳುವುದೇ

ಭಗವದ್ಗೀತೆವೊಂದರ ಅಂತರ್ಯವಾಗಲೀ, ಯುದ್ಧವೇ ಮಾಡೆನ್ನುವುದು ಗೀತೆ ಅಂತರ್ಯವಲ್ಲ.

**86) ಪ್ರಶ್ನೆ :– ಗತಿಗಳು ಹೊಂದಿರುವ ಗತಿಗಳು ಇಲ್ಲದ ಎಂದು (ಪ್ರಕೃತಿ, ಮಾಯೆ) ಚರ, ಅಚರ ಪ್ರಕೃತಿ ಕುರಿತು ನಿಮ್ಮ ಗೀತೆಯಲ್ಲಿ "ಗತಾಸೂ ನಗತಾಸೂಂಶ್ಚ ನಾನು ಶೋಚನ್ತಿ ಪಂಡಿತಾಃ" ಎನ್ನುವ ಶ್ಲೋಕವನ್ನು ಕುರಿತು ಹೇಳಿದ್ದೀರ ಅರ್ಜುನನು ಕೇಳಿದ ಪ್ರಶ್ನೆ ಒಂದಾದರೇ ಕೃಷ್ಣನು ಹೇಳಿದ ಉತ್ತರ ಮತ್ತೊಂದು ವಿಧವಾಗಿದೆ. ಎಲ್.ಕೆ.ಜಿ ಓದುವವನಿಗೆ ಫಿಲಾಸಫೀ ಹೇಳಿದರೇ ಅರ್ಥವಾಗುತ್ತದಾ?**

**ಉತ್ತರ :–** ಆತನು ಅಳುತ್ತಿದ್ದಾನೆ ಆದ್ದರಿಂದ ಪ್ರಸ್ತುತ ಪರಿಸ್ಥಿತಿಯನ್ನು ಅನುಸರಿಸಿ ಆ ಶ್ಲೋಕದಿಂದಲೇ ಶುರು ಮಾಡುವುದು ಒಳ್ಳೆಯದಾಗಿದೆ. ಸಂದರ್ಭಾನುಸಾರ ಆ ಶ್ಲೋಕ ಹೇಳುವುದು ಸಮಂಜಸವಾಗಿಯೇ ಇದೆ. ಅದೇ ನಿಜವಾದ ದಾರಿಯೆಂದು ನಾವು ಅಂದುಕೊಳ್ಳುತ್ತಿದ್ದೇವೆ.

**87) ಪ್ರಶ್ನೆ :– ಸ್ಥೂಲವಾಗಿರುವ ವಸ್ತ್ರಗಳು ಧರಿಸಿದರೇ ಅವುಗಳಿಂದ ಶರೀರಕ್ಕೆ ಸ್ಪರ್ಶ, ಮೆತ್ತನೆಯ, ಬೆಚ್ಚನೆಯ ಅಥವಾ ತಂಪನ್ನು ಹೊಂದಬಹುದು. ಮತ್ತೆ ಸೂಕ್ಷ್ಮ ಶರೀರವಾಗಿ ಇರುವವರಿಗೆ ಶರೀರ, ಚರ್ಮ ಇಲ್ಲದಿರುವುದರಿಂದ ಸುಖಾನುಭೂತಿಯನ್ನು ಹೇಗೆ ಹೊಂದುತ್ತಾರೆ?**

**ಉತ್ತರ :–** ಸೂಕ್ಷ್ಮ ಶರೀರಕ್ಕೆ ಸ್ಥೂಲವಾದ ಚರ್ಮ ಇಲ್ಲದಿದ್ದರೂ ಸ್ಪರ್ಶ ಎನ್ನುವ ಇಂದ್ರಿಯಶಕ್ತಿ ಕೆಲಸ ಮಾಡುತ್ತಿರುತ್ತದೆ. ಆದ್ದರಿಂದ ಚರ್ಮದಿಂದ ಉಂಟಾಗುವ ಎಲ್ಲ ಅನುಭೂತಿಗಳನ್ನು ಸೂಕ್ಷ್ಮ ಶರೀರದವರು ಹೊಂದುತ್ತಿದ್ದಾರೆ. ಸೂಕ್ಷ್ಮ ಶರೀರಕ್ಕೆ ಐದು ಜ್ಞಾನೇಂದ್ರಿಯ ಶಕ್ತಿಗಳು ಇರುವುದರಿಂದ ಎಲ್ಲ ಅನುಭವಗಳನ್ನು ಸೂಕ್ಷ್ಮ ಶರೀರದವರು ಹೊಂದುತ್ತಿದ್ದಾರೆ. ನಮ್ಮ ಹಾಗೆ ನೋಡುತ್ತಿದ್ದಾರೆ, ತಿನ್ನುತ್ತಿದ್ದಾರೆ. ಉಳಿದ ಎಲ್ಲ ಅನುಭವಗಳನ್ನು ಸ್ಥೂಲ ಶರೀರ ಇಲ್ಲದಿದ್ದರೂ ಹೊಂದುತ್ತಿದ್ದಾರೆ.

**88) ಪ್ರಶ್ನೆ :– ಜೂಜಾಡಿ ಸರ್ವವನ್ನು ಕಳೆದುಕೊಂಡ ಧರ್ಮರಾಜ ಕೊನೆಗೆ ಹೆಂಡತಿಯನ್ನು ಸಹ ಜೂಜಿನಲ್ಲಿ ಇಟ್ಟರೂ ಧರ್ಮರಾಜನನ್ನು ತಪ್ಪುಯೆಂದು ಕೃಷ್ಣನು ದಂಡಿಸಲಿಲ್ಲ. ಹಾಗೆ ಮೊದಲೇ ದಂಡಿಸಿದ್ದರೇ ದ್ರೌಪತಿಗೆ ವಸ್ತ್ರಾಪಹರಣ ನಡೆಯುತ್ತಿರಲಿಲ್ಲ ಅಲ್ಲವೆ! ಅರ್ಜುನನಿಗೆ ಗೀತೋಪದೇಶ ಮಾಡಿದ ಕೃಷ್ಣನು ಧರ್ಮರಾಜನಿಗೆ ನೀತೋಪದೇಶ ಏಕೆ ಮಾಡಲಿಲ್ಲ?**

**ಉತ್ತರ :–** ಹೆಸರಿಗೆ ಧರ್ಮರಾಜ (ಪೆನು ಚೇಪವಿತ್ತು) ಎನ್ನುವ ಮಾತು ಇಲ್ಲಿ ಚೆನ್ನಾಗಿ ತಿಳಿಯುತ್ತದೆ. ಒಬ್ಬ ಮನುಷ್ಯ ತನಗಿರುವ ಎರಡು ಎಕರೆಗಳಲ್ಲಿ ಒಂದು ಎಕರೆಯನ್ನು ಜೂಜಿನಲ್ಲಿ ಕಳೆದುಕೊಂಡರೇ ಅವನನ್ನು ಎಲ್ಲರೂ ನಿಂದಿಸುತ್ತಾರೆ. ಬಂಧುಗಳು ನಿಂಧಿಸುವುದೇ ಅಲ್ಲದೆ ಇತರರು ಕೂಡಾ ಅವನನ್ನು ಜೂಜುಗಾರನೆಂದು ಹೇಳನೆ ಮಾಡುತ್ತಾರೆ. ಆದರೇ ತಮ್ಮಂದಿರನ್ನು, ಕೊನೆಗೆ ಹೆಂಡತಿಯನ್ನು ಜೂಜಿನಲ್ಲಿಟ್ಟು ಆಡಿದ ಧರ್ಮರಾಜ, ಎಕರೆ ಭೂಮಿ ಕಳೆದುಕೊಂಡವನಿಗಿಂತ ಎಷ್ಟೋ ನೀಚವಾಗಿ ಕಾಣಿಸುತ್ತಿದ್ದರೂ ಆತನನ್ನು ಯಾರೂ ದಂಡಿಸಲಿಲ್ಲ. ಅದೇನೋ ನಮಗೆ ಅರ್ಥವಾಗುವುದಿಲ್ಲ. ಬಹುಶಃ ಇರುವವನಿಗೆ ಇಲ್ಲದವನಿಗೆ ಇರುವ ವ್ಯತ್ಯಾಸ ಇದೇಯೇನೋ! ಕೃಷ್ಣನ ವಿಷಯಕ್ಕೆ ಬಂದರೆ ಆತನು ನಮಗೆ ತಿಳಿದರೂ ತಿಳಿಯದಿದ್ದರೂ ಭಗವಂತನೇ. ಭಗವಂತನು ಪ್ರಪಂಚ ವಿಷಯಗಳನ್ನು ಕುರಿತು ಹೇಳುವುದಿಲ್ಲ. ತಾನು ಹೇಳುವುದು ಒಂದು ದೈವಿಕವಾದ ವಿಷಯಗಳನ್ನೇ ಆಗಿರುವುದರಿಂದ ಅರ್ಜುನನಿಗೆ ಭಗವದ್ಗೀತೆಯನ್ನು ಹೇಳಿದರೂ, ಧರ್ಮರಾಜನಿಗೆ ಚಿಕ್ಕ ನೀತಿಯನ್ನು ಕೂಡಾ ಹೇಳಲಿಲ್ಲ. **ನೀತಿ, ನ್ಯಾಯ ಪ್ರಪಂಚ ಸಂಬಂಧವಾದವು. ಹಾಗೆಯೇ ಜ್ಞಾನ, ಧರ್ಮ ದೈವ ಸಂಬಂಧವಾದವು.** ಆದ್ದರಿಂದ ದೈವ ಸಂಬಂಧ ಜ್ಞಾನವನ್ನು ಹೇಳುವ ಕೃಷ್ಣನು ಪ್ರಪಂಚ ಸಂಬಂಧ ನೀತಿಯನ್ನು ಕುರಿತು ಹೇಳಲಿಲ್ಲ.

**89) ಪ್ರಶ್ನೆ :– ದ್ರೌಪತಿಗೆ ವಾಸ್ತವವಾಗಿ ಐದು ಮಂದಿ ಗಂಡಂದಿರಾ? ಅಂತಹ ಸಾಂಪ್ರದಾಯ ದ್ವಾಪರ ಯುಗದಲ್ಲಿ ಇನ್ನು ಯಾರ ಚರಿತ್ರೆಯಲ್ಲಿ ಕಾಣಿಸಲಿಲ್ಲ. "ಅಮ್ಮಾ ಹಣ್ಣನ್ನು ತಂದಿದ್ದೇವೆ ಎಂದರೇ ಐದು ಮಂದಿ ಹಂಚಿಕೊಳ್ಳಿರಿ" ಎನ್ನುವ**

**ಮಾತನ್ನು ಒಬ್ಬ ವ್ಯಕ್ತಿ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವುದು ಯಾವ ತಾಯಿ ಅನುಮತಿಸಬಾರದು. ಕನಿಷ್ಟ ಕೃಷ್ಣನಾದರೂ ಹೇಳಬೇಕಲ್ಲವೆ?**

**ಉತ್ತರ :–** ಈ ವಿಷಯ ಕಡಿಮೆ ಜಾತಿ ಮನುಷ್ಯರಲ್ಲಿ ಕೂಡಾ ಇದಕ್ಕೂ ಮೊದಲು ಇಲ್ಲ, ಈಗಲೂ ಇಲ್ಲ. ಅಮ್ಮಾ ಸೊಸೆಯನ್ನು ತಂದಿದ್ದೇನೆಂದು ಅರ್ಜುನನು ಹೇಳಿರಬಹುದಲ್ಲವೆ! ಹಾಗಲ್ಲದೆ ಹಣ್ಣನ್ನು ತಂದಿದ್ದೇನೆಂದು ಏಕೆ ಹೇಳಬೇಕು? ಇದು ಮೊದಲೇ ಮಾಡಿದ ತಪ್ಪನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಹೇಳಿದ ಮಾತುಯೆಂದು, ಅವರು ತಾಯಿ ಹತ್ತಿರಕ್ಕೆ ಬರುವುದಕ್ಕಿಂತ ಮೊದಲೇ ದ್ರೌಪದಿಯನ್ನು ಒಬ್ಬರಿಗೆ ತಿಳಿಯದಂತೆ ಒಬ್ಬರು ಅನುಭವಿಸಿದ್ದಾರೆಂದು, ಕೊನೆಗದು ತಿಳಿದು ಒಂದು ಒಡಂಬಡಿಕೆಗೆ ಬಂದಿದ್ದಾರೆಂದು, ಅದುವೇ ಐದು ಮಂದಿ ಆಕೆಯೊಂದಿಗೆ ಸಂಸಾರ ಮಾಡುವುದೆಂದು, ತಮ್ಮ ತಪ್ಪನ್ನು ಮುಚ್ಚಿಟ್ಟು ಕೊಳ್ಳುವ ನಿಮಿತ್ತ 'ಅಮ್ಮಾ ಹಣ್ಣು' ಮಾತನ್ನು ಮೇಲ್ನೋಟಕ್ಕೆ ತಂದಿದ್ದಾರೆಂದು ತಿಳಿಯುತ್ತಿದೆ. ಅವರೇನೋ ತಾಯಿ ಮಾತನ್ನು ಮೀರದವರಾಗಿ ಕಾಣಿಸುವುದಕ್ಕೆ ಹಾಗೆ ಹೇಳಿದ್ದಾರೆ ಹೊರತು ಅದರಲ್ಲಿ ನಿಜವಿಲ್ಲ. ಇದು ಅವರು ಮೊದಲು ಮಾಡಿದ ತಪ್ಪುಯೆಂದು, ಅವರ ಅಮ್ಮನ ತಪ್ಪು ಅಲ್ಲವೆಂದು ತಿಳಿಯುತ್ತಿದೆ. ಸಾಮಾಜಿಕ ನೀತಿ ಕೂಡಾ ಅವರಲ್ಲಿ ಇಲ್ಲವೆಂದು ತಿಳಿಯುತ್ತಿದೆ. ಅಷ್ಟೇಅಲ್ಲದೆ ಜೂಜಿನಲ್ಲಿ ಹೆಂಡತಿಯನ್ನು ಇಟ್ಟಿದ್ದಾರೆಂದರೆ ಅವರು ಎಷ್ಟು ನೀತಿವಂತರೋ ಹೇಳದೆಯೇ ತಿಳಿಯುತ್ತಿದೆ. ಕೃಷ್ಣನಿಗೆ ಅವರನ್ನು ಕುರಿತು ಚೆನ್ನಾಗಿ ತಿಳಿದಿದೆ. ಆದರೂ ಅವರನ್ನು ಹಿಡಿದುಕೊಂಡು ನಾಟಕವಾಡಿದ್ದಾನೆ ಹೊರತು ಅವರ ಬಗ್ಗೆ ಗೌರವವಿಲ್ಲ.

**90) ಪ್ರಶ್ನೆ :– ಕೌರವರು ನೂರುಮಂದಿ ಎಂದು ಸಮಾಚಾರ. ಎಲ್ಲರೂ ಗಾಂಧಾರಿಗೇ ಹುಟ್ಟಿದ್ದಾರಾ? ಪಿಂಡ ವಿಚ್ಛೇದನೆಯಿಂದ ನೂರು ತುಣುಕುಗಳು ಹೊರಗೆ ಪಾತ್ರೆಯಲ್ಲಿ ಬೆಳೆದಿವೆ ಎಂದಿದ್ದಾರೆ. ಅದನ್ನು ಈಗ ಕ್ಲೋನಿಂಗ್ ಪದ್ಧತಿಯಂತಹದು ಆಗ ಇದೆಯಾ? ಇಲ್ಲದಿದ್ದರೇ ಅದರಲ್ಲಿ ಯಾವುದಾದರೂ ದೈವ ರಹಸ್ಯ ಇದೆಯಾ?**

**ಉತ್ತರ :–** ಇದು ಆಧ್ಯಾತ್ಮಿಕ ಅಲ್ಲ, ಅಮ್ಮಾ ಹಣ್ಣು ಎಂದು ಪಾಂಡವರು

ಇತರರನ್ನು ನಂಬಿಸಿದಹಾಗೆ, ಪಾತ್ರೆಯಲ್ಲಿ ಗರ್ಭವಿಚ್ಛೇದನ ಅದೂ ನೂರು ಭಾಗಗಳು ಬೆಳೆದಿದೆಯೆಂದು ಹೇಳುವುದು ಚಾಕಚಕ್ಯವೇ ಆಗುತ್ತದೆ. ಕ್ಲೋನಿಂಗ್ ಪದ್ಧತಿ ಆ ದಿನಗಳಲ್ಲಿ ಇವರೊಬ್ಬರಿಗೇ ಇತ್ತಾ? ಅವರೆಲ್ಲರೂ ಇತರೆ ಸ್ತ್ರೀಯರಿಗೆ ಹುಟ್ಟಿದ ಮಕ್ಕಳಾಗಿರುತ್ತಾರೆ.  ಅಷ್ಟೇ ಹೊರತು ಒಂದು ಗರ್ಭದಲ್ಲಿ ಹುಟ್ಟಿದವರಿರುವುದಿಲ್ಲ.

**91) ಪ್ರಶ್ನೆ :– ಉತ್ತರ ಭಾರತದೇಶದಲ್ಲಿ ಸೋದರ ಮಾವನ ಮಗಳನ್ನು ತಂಗಿಯೊಂದಿಗೆ ಸಮಾನವಾಗಿ ನೋಡುತ್ತಾರೆ. ದಕ್ಷಿಣ ಭಾರತದೇಶದಲ್ಲಿ ಮದುವೆ ಮಾಡಿಕೊಂಡು ಹೆಂಡತಿಯಾಗಿ ಹೇಳಿಕೊಳ್ಳುತ್ತಾರೆ. ವಾವಿ ವರುಸೆಗಳ ವಿಷಯಗಳು ದೇವರು ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಏಕೆ ವಿವರಿಸಲಿಲ್ಲ? ವಾವಿ ವರಸೆಗಳು ತಿಳಿಯದೆ ಹೋದರೆ ನಮಗೂ ಪಶುಗಳಿಗೂ ಏನು ವ್ಯತ್ಯಾಸ? ಮುಸ್ಲಿಮ್‌ರು ಚಿಕ್ಕಪ್ಪನ ಮಗಳನ್ನು ಮದುವೆ ಮಾಡಿಕೊಳ್ಳುತ್ತಾರೆ. ದೇವರು ಅಸಲಾದ ವಿಷಯಗಳನ್ನು ವಿವರಿಸದಂತೆ ದೇವರನ್ನು ಸೇರುವ ಮಾರ್ಗವನ್ನೇ ಹೇಳಿದರೆ ಅದು ಅಸಂಪೂರ್ಣ ವೇಯಾಗುತ್ತದೆ. ಇದಕ್ಕೆ ನೀವೇನನ್ನುತ್ತೀರಾ?**

**ಉತ್ತರ :–** ದೇವರು ಪ್ರಪಂಚ ವಿಷಯಗಳಲ್ಲಿ ಜೋಕ್ಯ ಮಾಡಿಕೊಳ್ಳಬಾರದೆಂದು ಒಂದು ಹದ್ದನ್ನು ಏರ್ಪಡಿಸಿಕೊಂಡಿದ್ದಾನೆ. ನೀತಿ, ನ್ಯಾಯಗಳನ್ನು ಕುರಿತು ಯಾವ ಮಾತ್ರ ಆತನು ಜೋಕ್ಯ ಮಾಡಿಕೊಳ್ಳುವುದಿಲ್ಲ. ಹಾಗೆ ನೀತಿ, ನ್ಯಾಯಗಳ ಕುರಿತು ಹೇಳಿದರೇ ಪ್ರಪಂಚ ಸಂಬಂಧ ದೊಡ್ಡ ಮನುಷ್ಯನಾಗಿ ದೇವರು ತಯಾರಾದಂತೇಯಾಗುತ್ತದೆ. ದೇವರು ದೈವಿಕ ವಿಷಯಗಳಲ್ಲಿಯೇ ಜೋಕ್ಯ ಮಾಡಿಕೊಳ್ಳುತ್ತಾನೆ. ಅದೂ ಭಗವಂತನ ವೇಷಧಾರಣೆಯಲ್ಲಿ, ದೇವರು ದೇವರಾಗಿಯೇ ಇದ್ದು ಸಾಕ್ಷಿಯಾಗಿ ಎಲ್ಲವನ್ನೂ ನೋಡುತ್ತಿದ್ದಾನೆ ಹೊರತು ಆತನು ಏನೂ ಮಾಡುವ ಸ್ಥಿತಿಯಲ್ಲಿ, ಹೇಳುವ ಸ್ಥಿತಿಯಲ್ಲಿ ಇಲ್ಲ.

**92) ಪ್ರಶ್ನೆ :– ಚಂದ್ರನು ಉಪಗ್ರಹವಾದರೂ ಜ್ಯೋತಿಷ್ಯದಲ್ಲಿ ಚಂದ್ರನನ್ನು ಗ್ರಹವಾಗಿಯೇ ಹೇಳಿದ್ದಾರೆ. ಸೂರ್ಯನು ಗ್ರಹವೇ ಅಲ್ಲ ನೀವು ಗ್ರಹ ಎಂದು ಹೇಳುತ್ತಿದ್ದೀರ. ಅದು ಹೇಗೆ ಹೇಳುತ್ತಿದ್ದೀರ?**

**ಉತ್ತರ :–** ಭೂಮಿ ಮೇಲೆ ವಸ್ತುಗಳ ವಿಷಯಗಳನ್ನು ಗ್ರಹಿಸುವುದು ಪುನಃ ಮನುಷ್ಯರಿಗೆ ಲಭಿಸುವಂತೆ ಮಾಡುವುದು ಎರಡು ಕೆಲಸಗಳನ್ನು ಚಂದ್ರನು, ಸೂರ್ಯನು ಮಾಡುತ್ತಿದ್ದಾರೆ ಆದ್ದರಿಂದ ಜ್ಯೋತಿಷ್ಯದ ಪ್ರಕಾರ ಸೂರ್ಯ ಚಂದ್ರರನ್ನು ಗ್ರಹಗಳು ಎನ್ನುತ್ತಿದ್ದಾರೆ. ಚಂದ್ರನು ಕೆಲವು ವಿಷಯಗಳನ್ನು ಗ್ರಹಿಸಿ ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಉದಾಹರಣೆಗೆ ನೀರಿಗೆ ಸಂಬಂಧಿಸಿದ ಸಮಾಚಾರವನ್ನು ಚಂದ್ರನು ಗ್ರಹಿಸಿ ಭೂಮಿಮೇಲೆ ಮನುಷ್ಯರಿಗೆ ನೀರು ಯಾರಿಗೆ ಲಭ್ಯವಾಗಬೇಕೋ, ಯಾರಿಗೆ ಲಭ್ಯವಾಗಬಾರದೋ ತಿಳಿದು ಕೆಲವರಿಗೆ ನೀರನ್ನು ಅನುಕೂಲ ಮಾಡಿ ಅವನಿಗೆ ಚೆನ್ನಾಗಿ ಲಭ್ಯವಾಗುವಂತೆ ಮಾಡುತ್ತಿದ್ದಾನೆ. ಕೆಲವರಿಗೆ ಸರಿಯಾಗಿ ಲಭ್ಯವಾಗದಂತೆ, ಕೆಲವರಿಗೆ ನೀರಿನ ವಿಷಯದಲ್ಲಿ ಅನೇಕ ತೊಂದರೆಗಳು, ಬಾಧೆಗಳು ಉಂಟಾಗುವಂತೆ ಮಾಡುತ್ತಿದ್ದಾನೆ. ಜ್ಯೋತಿಷ್ಯದ ಪ್ರಕಾರ ಚಂದ್ರನು ಅನುಕೂಲ ಇಲ್ಲದವರಿಗೆ ಈ ತೊಂದರೆಗಳು ತಪ್ಪುವುದಿಲ್ಲವೆಂದು ಹೇಳಬಹುದು. ಹೇಳಿದಂತೇ ನೀರಿನ ತೊಂದರೆಗಳು ಅವರು ಹೊಂದುವುದು ಸತ್ಯವಾಗಿ, ಸಾಕ್ಷ್ಯವಾಗಿ ಕಾಣಿಸುತ್ತಿದೆ. ಆದ್ದರಿಂದ ಚಂದ್ರನು ಗ್ರಹವೇ ಎನ್ನುತ್ತಿದ್ದೇವೆ. ಹಾಗೆಯೇ ಸೂರ್ಯನು ಕೂಡಾ ಗ್ರಹವೆಂದು ನಿರೂಪಿಸಲ್ಪಡುತ್ತಿದೆ. ಭೂಮಿಮೇಲೆ ಇರುವ ವಸ್ತು ಸಮುದಾಯವೊಂದರ ಅಧಿಕಾರವನ್ನು ಗ್ರಹಿಸಿ ಅವರ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಆದ್ದರಿಂದ ಅವರು ಗ್ರಹಿಸುವವರಾದ್ದರಿಂದ ಗ್ರಹಗಳು ಎಂದು ಕರೆಯುತ್ತಿದ್ದೇವೆ.

**93) ಪ್ರಶ್ನೆ :– ಆಕಳಿಕೆಗಳು ಒಬ್ಬರಿಗೆ ಬಂದರೇ ಪಕ್ಕದವರಿಗೂ ಸಹ ಏಕೆ ಬರುತ್ತವೆ?**

**ಉತ್ತರ :–** ಆಕಳಿಕೆಗಳು ಅಂಟು ರೋಗವಂತಹವು. ಆದ್ದರಿಂದ ಪಕ್ಕದವರಿಗು ಕೂಡಾ ರೋಗದ ಹಾಗೆ ವ್ಯಾಪಿಸುತ್ತಿವೆ.

**94) ಪ್ರಶ್ನೆ :– "ಪಿತೃದೇವತೆಗಳನ್ನು ಆರಾಧಿಸುವವರು ಪಿತೃ ದೇವತೆಗಳನ್ನೇ ಸೇರುತ್ತಾರೆ" ಎಂದು ಭಗವದ್ಗೀತೆ ಹೇಳುತ್ತಿದೆ. ಪಿತೃದೇವತೆಗಳ ವಿಗ್ರಹಗಳಿವೆಯಾ, ಪಿತೃದೇವತೆಗಳು ವಿಗ್ರಹಗಳನ್ನು ಆವರಿಸುತ್ತಾರಾ?**

**ಉತ್ತರ :–** ಪಿತೃ ದೇವತೆಗಳು ವಿಗ್ರಹಗಳ ರೂಪದಲ್ಲಿ ಇಲ್ಲ. ಅಕಾಲ ಮರಣ ಹೊಂದಿ ಸೂಕ್ಷ್ಮ ಶರೀರಗಳೊಂದಿಗೆ ಇರುವವರನ್ನೇ ಪಿತೃದೇವತೆಗಳೆಂದು ಕರೆಯುತ್ತಿದ್ದೇವೆ. ಅವರನ್ನು ಪೂಜಿಸಿದಾಗ ಅವರೂ ಸಹ ಅಕಾಲ ಮರಣವನ್ನೇ ಹೊಂದಿ ಅವರ ಹಿರಿಯರ ಹತ್ತಿರಕ್ಕೆ ಹೋಗಿ ಸೂಕ್ಷ್ಮವಾಗಿಯೇ ಇರುತ್ತಾರೆಂದು ಅರ್ಥ ಮಾಡಿಕೊಳ್ಳಬೇಕು.

**95) ಪ್ರಶ್ನೆ :– ಅಕಾಲ ಮರಣ ಹೊಂದಿದ ವ್ಯಕ್ತಿಗೆ ಶ್ರಾದ್ಧಾದಿ ಕರ್ಮಗಳು ಕೆಲವು ದಿನಗಳು ಮಾಡಿ, ಜ್ಞಾನಮಾರ್ಗದೊಳಗೆ ಬಂದ ನಂತರ ನಾವು ಅವರಿಗೆ ಆ ಕರ್ಮಗಳು ಮಾಡದಂತೆ ಬಿಟ್ಟುಹಾಕಿ ಆಹಾರ ಇಡುವುದು, ಹೊಸ ವಸ್ತ್ರಗಳು ತೋರಿಸುವಂತಹವು ಬಿಟ್ಟು ಹಾಕಿದರೇ ಅವರು ಏನಾಗುತ್ತಾರೆ? ನಮ್ಮ ಮೇಲೆ ಕೋಪಿಸಿಕೊಳ್ಳುತ್ತಾರಾ? ಅಥವಾ ಯಾರನ್ನಾದರೂ ಸ್ಥೂಲವಾಗಿ ಇರುವವರನ್ನು ಆವರಿಸಿ ಅವರ ಹಸಿವು ತೀರಿಸಿಕೊಳ್ಳುತ್ತಾರಾ?**

**ಉತ್ತರ :–** ಶ್ರಾದ್ಧ ಕರ್ಮಗಳು ನಿಲ್ಲಿಸಿದರೇ ಪಿತೃದೇವತೆಗಳಿಗೆ ಕೋಪ ಬರುವುದು ಸಹಜವೇ. ಕೆಲವರು ಇತರರ ಶರೀರಗಳಲ್ಲಿ ಆವರಿಸಿ ನಮಗೆ ವಸ್ತ್ರಗಳು ಏಕೆ ಇಡುತ್ತಿಲ್ಲವೆಂದು, ಒಳ್ಳೆಯ ವಸ್ತ್ರಗಳು ಇಡಲಿಲ್ಲವೆಂದು ವಾದಿಸುವವರನ್ನು ನೋಡುತ್ತಲೇ ಇದ್ದೇವೆ. ತಪ್ಪದೆ ಪ್ರತಿ ವರ್ಷ ಹೊಸ ವಸ್ತ್ರಗಳನ್ನು ಇಡಬೇಕೆಂದು ಒಪ್ಪಂದ ಮಾಡಿಕೊಳ್ಳುವವರನ್ನು ನೋಡಿದ್ದೇವೆ. ತಿಂಡಿ ವಿಷಯಕ್ಕೆ ಬಂದರೆ ಇತರರನ್ನು ಆವರಿಸಿ ಹಸಿವು ತೀರಿಸಿಕೊಳ್ಳಬೇಕಾದ ಅವಶ್ಯ ಅವರಿಗೆ ಇಲ್ಲ. ಎಲ್ಲಾದರೂ ಸೂಕ್ಷ್ಮವಾಗಿಯೇ ಅವರು ಗ್ರಹಿಸಿಕೊಳ್ಳುತ್ತಾರೆ.

**96) ಪ್ರಶ್ನೆ :– ಪಿತೃದೇವತೆಗಳನ್ನು ಪೂಜೆ ಮಾಡುವವರು ಪಿತೃದೇವತೆಗಳೊಳಗೆ ಸೇರುತ್ತಾರೆ ಎಂದರೇ ಅವರು ಎಲ್ಲಿ ಇರುತ್ತಾರೆ? ಭೂಮಿಮೇಲೆಯೇ ಇರುತ್ತಾರಾ? ಭೂಮಿಮೇಲೆ ಇದ್ದರೇ ಅವರೆಲ್ಲರೂ ಉಳಿದ ದೆವ್ವಗಳಿಗಿಂತ ದೊಡ್ಡವರಾ? ಅವರ ಸಮೂಹ ಬೇರೆ ಇರುತ್ತದಾ?**

**ಉತ್ತರ :–** ಪಿತೃದೇವತೆಗಳನ್ನು ಪೂಜಿಸುವವರು ಮರಣಿಸಿದ ನಂತರ ದೆವ್ವಗಳ

ಗುಂಪಿನಲ್ಲಿಯೇ ಸೇರಿಹೋಗುತ್ತಾರೆ. ಅವರ ಹಿರಿಯರು ದೆವ್ವಗಳೇ ಆದ್ದರಿಂದ ಇವರು ಕೂಡಾ ಅವರ ಹತ್ತಿರ ಸೇರಬೇಕಾಗಿದ್ದೆ. ದೆವ್ವಗಳೆಲ್ಲ ಭೂಮಿಮೇಲೆಯೇ ಇರುತ್ತವೆ. ಪಿತೃದೇವತೆಗಳೆಂದು ಹೇಳಿದಷ್ಟು ಮಾತ್ರಕ್ಕೆ ಅವರು ದೇವತೆಗಳೇನು ಅಲ್ಲ. ಅವರು ಉಳಿದ ದೆವ್ವಗಳೊಂದಿಗೆ ಸಮಾನವಾಗಿ ಇದ್ದಾರೆ. ಅವರ ಸಮೂಹ ಬೇರೆಯಾಗಿ ಏನೂಯಿಲ್ಲ.

**97) ಪ್ರಶ್ನೆ :– ಸೂಕ್ಷ್ಮ ಶರೀರಗಳಿಗೆ ಮರಣಾವಸ್ಥೆ ಇರುತ್ತದಾ? ನಾವಾದರೆ ಶರೀರವನ್ನು ಬಿಡುತ್ತೇವೆ. ತದನಂತರ ಆತ್ಮ, ಜೀವಾತ್ಮಗಳು ಹೊರಬೀಳುತ್ತವೆ. ಶರೀರ, ಚರ್ಮವಿಲ್ಲದ ದೆವ್ವಗಳಲ್ಲಿ ಆತ್ಮ, ಜೀವಾತ್ಮಗಳು ಹೇಗೆ ಬೇರೆಯಾಗುತ್ತವೆ? ಅವುಗಳಿಗೆ ಬಾಲ್ಯ, ಯೌವನ, ಕೌಮಾರ್ಯ, ವೃದ್ಧಾಪ್ಯ ದಶೆಗಳು ಇರುತ್ತವಾ? ಮೂರು ವರ್ಷಗಳಲ್ಲಿ ಹತ್ಯೆ ಮಾಡಲ್ಪಟ್ಟ ಬಾಲಕನು ದೆವ್ವವಾಗಿ ಬದಲಾದರೆ ಆತನು ಸೂಕ್ಷ್ಮ ಶರೀರಧಾರಿಯಾಗಿ ವೃದ್ಧಾಪ್ಯ ದಶೆವರೆಗು ಸೇರುತ್ತಾನಾ?**

**ಉತ್ತರ :–** ಆಕಾಲ ಮರಣ ಹೊಂದಿ ಸೂಕ್ಷ್ಮ ಶರೀರಗಳಾಗಿ ಉಳಿದವರು ಪುನಃ ಮರಣದಶೆಯಲ್ಲಿ ಪೂರ್ತಿ ಮರಣ ಹೊಂದಿ ನಂತರ ಜನ್ಮಕ್ಕೆ ಹೋಗುತ್ತಾರೆ. ಸ್ಥೂಲ ಶರೀರ ಇಲ್ಲದಿದ್ದರೂ ಹದಿನೈದು ಭಾಗಗಳ ಸೂಕ್ಷ್ಮ ಶರೀರವಿದೆ. ಆದ್ದರಿಂದ ಅದರಲ್ಲಿ ಈಗ ಹೇಗೆ ಆತ್ಮ, ಜೀವಾತ್ಮಗಳು ಇದ್ದಾರೊ ಆಗಲೂ ಕೂಡಾ ಹಾಗೇ ಇರುತ್ತಾರೆ. ಅವರಿಗು ಕೂಡಾ ಬಾಲ್ಯ, ಯೌವನ, ಕೌಮಾರ, ವೃದ್ಧಾಪ್ಯ ದಶೆಗಳು ಇರುತ್ತವೆ. ಬಾಲ್ಯದಲ್ಲಿ ಮರಣಿಸಿ ಸೂಕ್ಷ್ಮ ಶರೀರವಾಗಿರುವವರು ಅದೇ ಶರೀರದಲ್ಲಿ ಬೆಳೆದು ವೃದ್ಧಾಪ್ಯದವರೆಗು ಜೀವನವನ್ನು ಸಾಗಿಸುವುದು ಇದೆ.

**98) ಪ್ರಶ್ನೆ :– ಮಡಿ, ಮೈಲಿಗೆ ಎನ್ನುವವು ಇವೆಯಾ? ದೇವತಾ ಉಪಾಸಕನು ಸ್ತ್ರೀ ಬಹಿಷ್ಟೆ ಸಮಯದಲ್ಲಿ ಇದ್ದಾಗ ತಾಕಿದರೆ ಆತನು ಹೊಂದಿದ ಸಿದ್ಧಿಗಳು ಕಳೆದುಕೊಳ್ಳುತ್ತಾನೆಂದು ಕೆಲವರು ಹೇಳುತ್ತಿರುತ್ತಾರೆ. ಆ ಮಾತು ವಾಸ್ತವವೇನಾ?**

**ಉತ್ತರ :–** ಮಡಿ, ಮೈಲಿಗೆ ಎನ್ನುವವು ಇವೆಯೆಂದೇ ಹೇಳಬಹುದು.

ದೇವತಾರಾಧನೆಗಳು ಕೆಲವು ನಿಯಮಗಳಿಂದ ಕೂಡಿಕೊಂಡಿರುತ್ತವೆ. ಆ ನಿಯಮಗಳ ಪ್ರಕಾರ ನಡೆದಾಗ ದೇವತಾರಾಧನೆಯಿಂದ ಕೆಲವು ಫಲಿತಗಳು (ಸಿದ್ಧಿಗಳು) ಉಂಟಾಗುವುದು ವಾಸ್ತವವೇ. ಆದರೇ ನಿಯಮಗಳ ಪ್ರಕಾರ ನಡೆಯದಿರುವಾಗ ಆ ಸಿದ್ಧಿಗಳು ಕಳೆದುಕೊಳ್ಳುವುದು ಕೂಡಾ ನಡೆಯುತ್ತದೆ. ನಿಯಮಗಳಲ್ಲಿ ಬಹಿಷ್ಟೆ ಮನುಷ್ಯರನ್ನು ತಾಕಬಾರದೆನ್ನುವುದು ಕೂಡಾ ಮುಖ್ಯವಾದ ನಿಯಮವಾಗಿರುವುದರಿಂದ ಅದನ್ನು ತಪ್ಪದೇ ಆಚರಿಸಬೇಕೆಂದು ಹೇಳುತ್ತಿರುತ್ತಾರೆ. ಹೊರಗಿನ ದೇವತೆಗಳ ಆರಾಧನೆಗಳೆಲ್ಲ ನಿಯಮಗಳಿಂದ ಇರುವುದು ವಾಸ್ತವ. ಅವುಗಳ ಪ್ರಕಾರ ಮಡಿ, ಮೈಲಿಗೆ ಎನ್ನುವವು ಕೂಡ ವಾಸ್ತವವೇ. ಆದರೇ ಅಸಲಾದ ದೇವರ ವಿಷಯಗಳಲ್ಲಿ, ಆರಾಧನೆಗಳಲ್ಲಿ ನಿಯಮಗಳಿರುವುದಿಲ್ಲ, ಸಿದ್ಧಿಗಳು ಇರುವುದಿಲ್ಲ. ಸಿದ್ಧಿಮಾತ್ರ ಇರುತ್ತದೆ. ಸಿದ್ಧಿ ಎಂದರೇ ಮೋಕ್ಷ.

**99) ಪ್ರಶ್ನೆ :– ಈ ಪ್ರಪಂಚದಲ್ಲಿ ಉತ್ತರವಿಲ್ಲದ ಪ್ರಶ್ನೆ ಒಂದೇ ಇದೆ, ಉಳಿದವುಗಳಿಗೆ ಉತ್ತರಗಳು ಇವೆಯೆಂದು ನೀವು ಪ್ರಸಂಗದಲ್ಲಿ ಹೇಳಿದ್ದೀರಾ. ಆ ಪ್ರಶ್ನೆ ಏನೊ ತಿಳಿಸಿರೆಂದು ಪ್ರಾರ್ಥನೆ?**

**ಉತ್ತರ:–** ಉತ್ತರವಿಲ್ಲದ ಪ್ರಶ್ನೆ ಇರುವುದು ನಿಜ. ಈ ಪ್ರಪಂಚದಲ್ಲಿ ದೊಡ್ಡ ಪ್ರಶ್ನೆ, ಉತ್ತರವಿಲ್ಲದ ಪ್ರಶ್ನೆ, ಬದುಕಿದ್ದಷ್ಟು ದಿನ ಹುಡುಕಿದರೂ ಉತ್ತರ ದೊರೆಯದ ಪ್ರಶ್ನೆ, “ದೇವರ್ಯಾರು?” ಎನ್ನುವುದೇ. ಅದಕ್ಕೆ ಉತ್ತರ ಬದುಕಿದವರ ಹತ್ತಿರವಿಲ್ಲ?

**100) ಪ್ರಶ್ನೆ:– ಜ್ಞಾನಕ್ಕೆ ಚಂದ್ರನು ಅಧಿಪತಿಯಾದಾಗ ಚಂದ್ರನ ಮೂಲಕ ನಮಗೆ ಜ್ಞಾನವನ್ನು ನೀಡದಂತೆ ದೇವರು ಸೂರ್ಯನ ಮೂಲಕ ಜ್ಞಾನವನ್ನು ಏಕೆ ತಿಳಿಸಿದ್ದಾನೆ. ದೇವರು ಸೃಷ್ಠಿ ಆದಿಯಲ್ಲಿ ಚಂದ್ರನಿಗೇ ಜ್ಞಾನವನ್ನು ಹೇಳಬಹುದಲ್ಲವೇ?**

**ಉತ್ತರ :–** ಹೇಗೆ ತಿಳಿಯಪಡಿಸಿದ್ದಾನೆ ಎನ್ನುವುದು ಮುಖ್ಯವಲ್ಲ, ಹೇಗೆ ಮನುಷ್ಯನ ತಲೆಗೆ ಸೇರುತ್ತದೆ ಎನ್ನುವುದೇ ಮುಖ್ಯ. ಸೂರ್ಯನ ಮೂಲಕ ಸೃಷ್ಠಿ ಆದಿಯಲ್ಲಿ ಜ್ಞಾನವನ್ನು ಹೊರಗಿನ ಪ್ರಪಂಚಕ್ಕೆ ತಿಳಿಸಿದರೂ ಅದು ಮನುಷ್ಯರ ತಲೆಗಳಿಗೆ

ಸೇರುವುದಕ್ಕೆ ಚಂದ್ರನ ಅನುಮತಿ ಅಗತ್ಯ. ಚಂದ್ರನ ಅಧೀನದಲ್ಲಿ ಜ್ಞಾನವಿರುತ್ತದೆ. ಆದ್ದರಿಂದ ಚಂದ್ರನ ಗ್ರಹಚಾರ ಮನುಷ್ಯನ ಕಡೆ ಇರುವಾಗಲೇ ಜ್ಞಾನ ಅವನ ತಲೆಗೆ ತಿಳಿಯುತ್ತದೆ. ಚಂದ್ರನ ದೃಷ್ಠಿಯಿಲ್ಲದ ಅಂದರೇ ಚಂದ್ರನ ಅನುಕೂಲತೆ ಇಲ್ಲದವನಿಗೆ ಜ್ಞಾನ ತಿಳಿಯುವುದು ಕಷ್ಟವಾಗುತ್ತದೆ. ಅಂತಹವನಿಗೆ ಜ್ಞಾನದ ಮೇಲೆ ಶ್ರದ್ಧೆ ಇರುವುದಿಲ್ಲ. ಜ್ಞಾನದ ಮೇಲೆ ಶ್ರದ್ಧೆಯನ್ನುಂಟುಮಾಡಿ ಜ್ಞಾನವನ್ನು ನೀಡುವ ಗ್ರಹ ಚಂದ್ರನೇಯೆಂದು ತಿಳಿಯಬೇಕು.

**101) ಪ್ರಶ್ನೆ :– ಭಾರತದೇಶದಲ್ಲಿ ಕೃಷ್ಣನು ಹುಟ್ಟುವುದಕ್ಕೆ ಕಾರಣ ಭಾರತದೇಶ ಜ್ಞಾನಿಗಳ ದೇಶವಾದ್ದರಿಂದ ಈ ದೇಶದಲ್ಲಿ ಹುಟ್ಟಿದ್ದಾನೆಂದು ಹೇಳಬಹುದು. ಆದರೆ ಯೇಸು ಪ್ರಭುವಾಗಿ ಬಂದಾಗ ಇಜ್ರಯೇಲ್ ದೇಶದಲ್ಲಿ ಹುಟ್ಟಿದ್ದಾನೆ. ಆ ದೇಶ ವಿಶಿಷ್ಟತೆ ಏನು?**

**ಉತ್ತರ :–** ಭಾರತದೇಶ ಜ್ಞಾನಿಗಳ ದೇಶ ಎಂಬ ಗುರುತು ಪ್ರಜೆಗಳಿಗೆ ಹೊರತು, ದೇವರಿಗಲ್ಲ. ದೇವರು ಜ್ಞಾನಿಗಳ ದೇಶದಲ್ಲಿ ಹುಟ್ಟಬೇಕಾದ ಕೆಲಸವಿಲ್ಲ. ಅಲ್ಲಿ ಜ್ಞಾನ ಇರುವುದರಿಂದ ಜ್ಞಾನಿಗಳ ದೇಶದಲ್ಲಿ ದೇವರ ಅವಶ್ಯಕತೆ ಇರುವುದಿಲ್ಲ. ಎಲ್ಲಿ ಅಜ್ಞಾನವಿರುತ್ತದೊ ಅಲ್ಲಿ ದೇವರು ಅವತರಿಸುತ್ತಾನೆ ಹೊರತು, ಜ್ಞಾನಿಗಳ ದೇಶವೆಂದು ನೋಡಿ ಹುಟ್ಟುವುದಿಲ್ಲ. ಎಲ್ಲಿ ತನ್ನ ಜ್ಞಾನ ತಿಳಿಯಬೇಕಾದ ಅವಶ್ಯಕತೆ ಇದೆಯೋ, ಎಲ್ಲಿ ಅಜ್ಞಾನವಿದೆಯೋ ಅಲ್ಲಿ ದೇವರು ಉದ್ಭವಿಸುತ್ತಾನೆಂದು ಕೇಳಿದ್ದೇವೆ. ದ್ವಾಪರಯುಗದಲ್ಲಿ ಭಾರತದೇಶದಲ್ಲಿ ಅಧರ್ಮಗಳು ತಾರಾಮಟ್ಟಕ್ಕೆ ಸೇರಿರುವುದರಿಂದ ಭಾರತದೇಶದಲ್ಲಿ ಹುಟ್ಟಬೇಕಾದ ಅವಶ್ಯಕತೆ ಏರ್ಪಟ್ಟಿದೆ ಅಷ್ಟೇ ಹೊರತು ಇದು ಜ್ಞಾನಿಗಳ ದೇಶವೆಂದು ಅಲ್ಲ.

**102) ಪ್ರಶ್ನೆ :– ಸೂಕ್ಷ್ಮ ಶರೀರ ಜೀವಿಗಳು ಆಹಾರ ಪದಾರ್ಥಗಳಲ್ಲಿ ಪೋಷಕ ಗಳನ್ನು ಗ್ರಹಿಸುತ್ತವಾ? ಅವುಗಳ ಪರಿಮಾಣವನ್ನು ಸ್ಥೂಲವಾಗಿ ಕಡಿಮೆ ಮಾಡುತ್ತವಾ?**

**ಉತ್ತರ :–** ಸೂಕ್ಷ್ಮ ಶರೀರ ಜೀವಿಗಳಲ್ಲಿ ಅನೇಕ ಜಾತಿಗಳು (ಅನೇಕ ವಿಧಗಳು)

ಇವೆ. ಅದರಲ್ಲಿ ಕೆಲವು ಆಹಾರ ಪದಾರ್ಥಗಳಲ್ಲಿ ಪೋಷಕಗಳನ್ನು ತೆಗೆದು ಕೊಳ್ಳುವವು ಇವೆ. ಉದಾಹರಣೆಗೆ ಒಂದು ಹೋಟಲ್‌ನಲ್ಲಿ ಎರಡು ಸೂಕ್ಷ್ಮಗಳು (ದೆವ್ವಗಳು) ಪ್ರವೇಶಿಸಿ ಒಂದೊಂದು ಹತ್ತು ಇಡ್ಲಿಗಳನ್ನು ಇಬ್ಬರು ಸೇರಿ 20 ಇಡ್ಲಿಗಳನ್ನು ತಿಂದಿದ್ದಾರೆಂದುಕೊಳ್ಳಿ. ಆಗ 20 ಇಡ್ಲಿಗಳು ಸ್ಥೂಲವಾಗಿ ಹಾಗೆ ಕಾಣಿಸುತ್ತಿರುತ್ತವೆ. ಆದರೇ ಅವುಗಳಲ್ಲಿ ಸೂಕ್ಷ್ಮವಾಗಿರುವ ಪೋಷಕ ಪದಾರ್ಥಗಳು ಇಲ್ಲದಂತೆ ಹೋಗುತ್ತಿರುತ್ತವೆ. ಆ ಇಪ್ಪತ್ತು ಇಡ್ಲಿಗಳನ್ನು ಇತರರು ತಿಂದರೂ ಅವರಿಗೆ ಹೊಟ್ಟೆ ತುಂಬದಂತಿರುತ್ತದೆ. ಅವುಗಳಿಂದ ಶರೀರಕ್ಕೆ ಬಲ ಬರುವುದಿಲ್ಲ. ಇದೆಲ್ಲಾ ಕಾಣಿಸದಂತೆ ನಡೆಯುತ್ತಿರುತ್ತದೆ. ಕೆಲವು ಮನೆಗಳಲ್ಲಿ ದೆವ್ವಗಳು ತಿನ್ನುವುದೇ ಹೆಚ್ಚಾಗಿರುತ್ತದೆ. ಆದ್ದರಿಂದ ಆ ಮನೆಯಲ್ಲಿನವರು ಎಷ್ಟು ತಿಂದರೂ ಬಲಹೀನವಾಗಿಯೇ ಇರುತ್ತಾರೆ. ಸೂಕ್ಷ್ಮ ಶರೀರಗಳಾಗಿರುವ ವರಲ್ಲಿ ಕೆಲವರು ಸ್ಥೂಲವಾಗಿರುವ ಧಾನ್ಯವನ್ನು ಕೂಡಾ ಇಲ್ಲದಂತೆ ಮಾಡಬಲ್ಲರು. ಅವರು ದೇವತಾ ಸಂಬಂಧ ಸೂಕ್ಷ್ಮಗಳು. ದೇವತೆಗಳಾಗಿರುವವರು ಹೊಲ ದಲ್ಲಿರುವ ಬೆಳೆಯನ್ನು, ಕಣದಲ್ಲಿರುವ ಧಾನ್ಯವನ್ನು ಕಳ್ಳತನ ಮಾಡಬಲ್ಲರು. ಅಂದರೇ ಸ್ಥೂಲವಾಗಿ ಇಲ್ಲದಂತೆ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ. ಅವರಿಂದ ಬೆಳೆಯನ್ನು ಕಾಪಾಡಿಕೊಳ್ಳುವುದಕ್ಕೆ ಹೊಲದಲ್ಲಿ ರಾಶಿ ಪೂಜೆ ಮಾಡುತ್ತಾರೆ. ಕಣದಲ್ಲಿ ಪೊಲಿಗೆರೆ ಗೀಚುತ್ತಾರೆ. ರಾಶಿಮೇಲೆ ಕುಡುಗೋಲು ಅಥವಾ ಎಕ್ಕೆ ಕೊಂಬೆಯನ್ನು, ಇಲ್ಲವೇ ಭಗವದ್ಗೀತೆಯನ್ನು ಇಡುತ್ತಾರೆ. ರಾಶಿ ಸುತ್ತಾ ಗೆರೆಯನ್ನು ಗೀಚುತ್ತಿರುತ್ತಾರೆ. ಇದನ್ನನುಸರಿಸಿ ನೋಡಿದರೆ ದೇವತೆಗಳು ಸ್ಥೂಲವಾಗಿ, ದೆವ್ವಗಳು ಸೂಕ್ಷ್ಮವಾಗಿ ಅಪಹರಿಸುತ್ತಿವೆಯೆಂದು ತಿಳಿಯುತ್ತಿದೆ.

**103) ಪ್ರಶ್ನೆ :– ನೈವೇದ್ಯ ಎನ್ನುವುದಕ್ಕೆ ಅರ್ಥ ಇರುವಂತೆ ಪ್ರಸಾದಕ್ಕು ಕೂಡಾ ಅರ್ಥವಿದೆಯಾ?**

**ಉತ್ತರ :–** ನೈವೇದ್ಯ ದೇವತೆಗಳಿಗೆ ಪ್ರಸಾದ ಮನುಷ್ಯರಿಗೆ, ಆರಾಧನೆ ಫಲಿತದಲ್ಲಿನ ಶಕ್ತಿ ಪ್ರಸಾದದಲ್ಲಿ ಸೇರಿರುವುದು ಆದ್ದರಿಂದ ಅದನ್ನು ಪ್ರಸಾದ ಎಂದು ಕರೆಯುತ್ತಾರೆ. 'ಪ್ರ' ಎಂದರೇ ಮುಖ್ಯವಾದ ಎಂದು, 'ಸಾದ' ಎಂದರೇ

ತಿನ್ನುವುದೆಂದೂ, 'ಪ್ರಸಾದ' ಎಂದರೇ ಮುಖ್ಯವಾದ ಶಕ್ತಿಯಿಂದ ಕೂಡಿಕೊಂಡ ಆಹಾರವೆಂದೂ ಹೇಳಿಕೊಳ್ಳಬಹುದು.

**104) ಪ್ರಶ್ನೆ :– ಕೃಷ್ಣ ಪ್ರತಿಮೆಯಲ್ಲಿ ಎಂತಹ ಸೂಕ್ಷ್ಮ ಶಕ್ತಿ ಪ್ರವೇಶಿಸಲಿಲ್ಲ. ಆದ್ದರಿಂದ ನಾವು ಮಾಡುವ ಪೂಜೆಯನ್ನು ಪರಮಾತ್ಮನೇ ಸ್ವೀಕರಿಸುತ್ತಾನಾ?**

**ಉತ್ತರ :–** ವಾಸ್ತವವೇ ಕೃಷ್ಣಪ್ರತಿಮೆ ಹತ್ತಿರ ಮಾಡುವ ಪೂಜೆ ನೇರವಾಗಿ ದೇವರಿಗೇ ಸೇರುತ್ತದೆ. ಇನ್ನೊಂದು ರಹಸ್ಯವೇನೆಂದರೇ! ಭಗವದ್ಗೀತೆ ರಾಜವಿದ್ಯಾ ರಾಜಗುಹ್ಯ ಯೋಗದಲ್ಲಿ 23, 24 ಶ್ಲೋಕಗಳನ್ನು ನೋಡಿದರೆ ಹೀಗೆ ಇವೆ.

**ಶ್ಲೋ॥ 23. ಯೇಪ್ಯನ್ಯ ದೇವತಾ ಭಕ್ತಾ ಯಜನ್ತೇ ಶ್ರದ್ಧಯಾನ್ವಿತಾಃ।**
**ತೇಪಿ ಮಾಮೇವ ಕೌಂತೇಯ! ಯಜ್ಯನ್ತ್ಯ ವಿಧಿಪೂರ್ವಕಮ್॥**

**ಶ್ಲೋ॥ 24. ಅಹಂಹಿ ಸರ್ವ ಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ।**
**ನತುಮಾ ಮಭಿಜಾನಂತಿ ತತ್ತ್ವೇನಾ ತಶ್ಚ್ಯವನ್ತಿತೇ॥**

**ಭಾವಾರ್ಥ :– "ಯಾರು ಶ್ರದ್ಧೆಹೊಂದಿ ಅನ್ಯದೇವತಾರಾಧನೆ ಮಾಡಿದರೂ ಆತನು ಕೂಡಾ ನನ್ನನ್ನೇ ಆರಾಧಿಸುವವನಾಗಿ ಲೆಕ್ಕಿಸುತ್ತೇನೆ. ಆದರೇ ಅವನದ್ದು ದಾರಿತಪ್ಪಿದ ವಿಧಾನ. ಸರ್ವ ದೇವತೆಗಳಿಗೂ ಮಾಡುವ ಆರಾಧನೆಗಳಲ್ಲಿ, ಯಜ್ಞಗಳಲ್ಲಿ ಪ್ರಭುವು ನಾನೇ, ಅವರು ಕೊಡುವವುಗಳನ್ನು ಸ್ವೀಕರಿಸುವವನು ನಾನೇ, ನನ್ನನ್ನು ನಿಜವಾಗಿ ತಿಳಿಯದವರಿಗೆ ಫಲಿತವಿದ್ದರೂ ಅದನ್ನು ಅವರು ಹೊಂದಲಾರರು."** ಎಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ. ವಿಜ್ಞಾನಯೋಗದಲ್ಲಿ 21, 22, ಶ್ಲೋಕಗಳಲ್ಲಿ ಈ ವಿಧವಾಗಿ ಹೇಳಿದ್ದಾರೆ ನೋಡಿರಿ.

**ಶ್ಲೋ॥ 21. ಯೋಯೋ ಯಾಂ ಯಾಂ ತನುಂಭಕ್ತ ಶ್ರದ್ಧ ಯಾರ್ಚಿತು ಮಿಚ್ಛತಿ।**
**ತಸ್ಯ ತಸ್ಯಾ ಚಲಾಂ ಶ್ರದ್ಧಾಂ ತಾ ಮೇವ ವಿಧಧಾಮ್ಯಹಮ್॥**

**ಭಾವಾರ್ಥ :–** "ಯಾರು ಶ್ರದ್ಧೆಯಿಂದ ಯಾವ ದೇವತೆಯನ್ನು ಪೂಜಿಸಬೇಕೆಂದು ತಿಳಿಯುತ್ತಿದ್ದಾನೊ ಅವನಿಗೆ ಆ ದೇವತೆಯನ್ನು ಪೂಜಿಸುವ ಶ್ರದ್ಧೆಯನ್ನು ನಾನೇ ಕಲ್ಪಿಸುತ್ತಿದ್ದೇನೆ."

**ಶ್ಲೋ॥ 22. ಸತಯಾ ಶ್ರದ್ಧ ಯಾ ಯುಕ್ತಸ್ತ ಸ್ಯಾ ರಾಧನ ಮೀಹತೇ।**
**ಲಭತೇ ಚ ತತಃ ಕಾಮಾನ್ ಮಯ್ಯೈವಾ ವಿಹಿತಾನ್ ಹಿತಾನ್॥**

**ಭಾವಾರ್ಥ :– "ಅವನು ಆ ದೇವತೆಯನ್ನೇ ಶ್ರದ್ಧೆಯಿಂದ ಪೂಜೆ ಮಾಡಿದಾಗ ಅವನ ಒಳಿತನ್ನು ಕೋರಿ ಅವನ ಕೋರಿಕೆಯನ್ನು ನಾನೇ ನೇರವೇರಿಸುತ್ತಿದ್ದೇನೆ."** ಇದನ್ನನುಸರಿಸಿ ಯಾವ ದೇವತೆಯನ್ನು ಪೂಜಿಸಿದರೂ ಅಲ್ಲಿ ಆ ಪೂಜೆಯನ್ನು ಸ್ವೀಕರಿಸುವವನು ದೇವರೇಯೆಂದು, ಆ ದೇವತೆ ಏನು ಮಾಡದಿದ್ದರೂ ಅವನ ಕೋರಿಕೆಯನ್ನು ದೇವರೇ ನೇರವೇರಿಸುತ್ತಿದ್ದಾನೆಂದು ತಿಳಿಯುತ್ತಿದೆ.

**105) ಪ್ರಶ್ನೆ:– ಭಗವಂತನಾಗಿ ಬಂದ ಕೃಷ್ಣನು ಮೀರಾಬಾಯಿಗೆ ಸ್ಥೂಲವಾಗಿ ಕಾಣಿಸಿದ್ದಾನಾ? ಇಲ್ಲವೇ ಮಾತುಗಳೇ ಕೇಳಿಸಿವೆಯಾ?**

**ಉತ್ತರ :–** ಈ ವಿಷಯ ಬಹಳ ಜನರಿಗೆ ಸಂದಿಗ್ಧದಲ್ಲಿದ್ದರೂ ನನಗೆ ತಿಳಿದಿದೆಯಾದ್ದರಿಂದ ಹೇಳುತ್ತಿದ್ದೇನೆ. ಮೀರಾಬಾಯಿ ಸ್ಥೂಲವಾಗಿ ನೋಡಬೇಕೆಂದು ಆಸೆ ಪಟ್ಟಿದ್ದಾಳೆ ಸ್ಥೂಲವಾಗಿಯೇ ಕಾಣಿಸಿ ಮಾತನಾಡಿದ್ದಾನೆ. ಇತರರಿಗೆ ಆತನ ಮಾತುಗಳು ಕೇಳಿಸಿವೆ ಆದರೆ ರೂಪ ಕಾಣಿಸಲಿಲ್ಲ. ಕೃಷ್ಣನು ಭಗವಂತನು. ಭಗವಂತನು ಎಂದರೇ ದೇವರ ಪ್ರತಿನಿಧಿ. ಪ್ರತಿನಿಧಿ ಎಂದರೇ ದೇವರಿಗಿರುವಷ್ಟು ಶಕ್ತಿ ಆತನಿಗಿರುತ್ತದೆ. ಆದ್ದರಿಂದ ಆತನು ತನಗೆ ಇಷ್ಟವಾದರೆ ಸ್ಥೂಲವಾಗಿ ಕಾಣಿಸಿ ಮಾತನಾಡುತ್ತಾನೆ. ಅದೇ ಮೀರಾಬಾಯಿ ಜೀವನದಲ್ಲಿ ನಡೆದಿದೆ.

**106) ಪ್ರಶ್ನೆ :– ನಮ್ಮ ವಿವಾಹ ವ್ಯವಸ್ಥೆ ಯಾವಾಗ ಪ್ರಾರಂಭವಾಗಿದೆ.**

**ಉತ್ತರ :–** ಮನುಷ್ಯನಿಗೆ ಸ್ವಲ್ಪಮಟ್ಟಿಗೆ ದೈವಜ್ಞಾನ ತಿಳಿದ ನಂತರ ವಿವಾಹ ವ್ಯವಸ್ಥೆ ಪ್ರಾರಂಭವಾಗಿದೆ. ಇದೆಲ್ಲವೂ ಕೃತಯುಗದಲ್ಲಿಯೇ ನಡೆದಿದೆ.

**107) ಪ್ರಶ್ನೆ:– ಗಂಡ ಹೆಂಡತಿಯರಲ್ಲಿ ಪುರುಷನಿಗೆ ದೊಡ್ಡ ವಯಸ್ಸು ಏಕೆ?**

**ಉತ್ತರ :–** ಜೀವನದಲ್ಲಿ ಗಂಡನದ್ದೇ ಅಧಿಪತ್ಯ ಇರುವುದಕ್ಕೆ. ವಯಸ್ಸು ಸ್ವಲ್ಪ ಹೆಚ್ಚಾಗಿರುವುದರಿಂದ ಎಲ್ಲಾ ವಿಷಯಗಳಲ್ಲಿ ಹೆಂಡತಿಗಿಂತ ಅಧಿಪತ್ಯದಲ್ಲಿ ಮುಂದಿರಬೇಕೆನ್ನುವ ಉದ್ದೇಶದಿಂದ ದೊಡ್ಡವಯಸ್ಸು ಇರಬೇಕೆಂದಿದ್ದಾರೆ.

**108) ಪ್ರಶ್ನೆ :– ದೈವ ಪ್ರಾರ್ಥನೆಗಳಲ್ಲಿ ಶೃಂಗಾರ ಸಮಂಜಸವಾ?**

**ಉತ್ತರ :–** ಶೃಂಗಾರ ದೈವ ಪ್ರಾರ್ಥನೆಗಳಲ್ಲಿ ಇರಬಾರದೆನ್ನುವ ಉದ್ದೇಶದಿಂದಲೇ ಅವೆಲ್ಲವೂ ಗಾಳಿಗೋಪುರದ ಹತ್ತಿರವೇ ಬಿಟ್ಟು ಬರಬೇಕೆಂದು ಗುಡಿಮುಂದೆ ಇರುವ ದೊಡ್ಡ ಗೋಪುರದ ಮೇಲೆ ಎಲ್ಲಾ ರಂಗಗಳಿಗು ಸಂಬಂಧಿಸಿದ ಗೊಂಬೆಗಳನ್ನು ಇಟ್ಟಿರುತ್ತಾರೆ. ಅದರಲ್ಲಿ ಶೃಂಗಾರ ಗೊಂಬೆಗಳು ಕೂಡಾ ಇರುತ್ತವೆ. ದೊಡ್ಡ ಗೋಪುರದ ಹತ್ತಿರವೇ ಎಲ್ಲಾ ವಿಷಯಗಳು ಬಿಟ್ಟು ಗರ್ಭಗುಡಿ ಹತ್ತಿರಕ್ಕೆ ಸೇರಬೇಕೆನ್ನುವ ಸೂಚನೆಯಾಗಿ ಅವುಗಳನ್ನು ಭಾವಿಸಬೇಕು.

**109) ಪ್ರಶ್ನೆ :– ಸೃಷ್ಠಿ ಮೊದಲ ದಂಪತಿಗಳು ಯಾರು?**

**ಉತ್ತರ :–** ಸೃಷ್ಠಿ ಮೊದಲಿನಲ್ಲಿ ದಂಪತಿಗಳಿಲ್ಲ. ಸೃಷ್ಠಿ ನಡೆದ ನಂತರ ಸೃಷ್ಠಿಸಲ್ಪಟ್ಟವರೇ ದಂಪತಿಗಳಾಗಿ ತಯಾರಾಗಿದ್ದಾರೆ.

**110) ಪ್ರಶ್ನೆ :– ದೈವ ಬಲ ಇಲ್ಲದಿದ್ದರೇ ಮಾನವಶಕ್ತಿ ಸಹಕರಿಸುವುದಿಲ್ಲವಾ?**

**ಉತ್ತರ :–** ಮಾನವಶಕ್ತಿ ಎನ್ನುವುದೇ ಇಲ್ಲ. ನಡಯುವುದೆಲ್ಲವೂ ದೈವಶಕ್ತಿ (ಆತ್ಮಬಲ) ಯಿಂದಲೇ ನಡೆಯುತ್ತಿದೆ. ಎಲ್ಲಾಕಡೆ ಮಧ್ಯಾತ್ಮ ಶಕ್ತಿ ಹೊರತು ಮಾನವಶಕ್ತಿ ಎಲ್ಲಿಯೂ ಇಲ್ಲ.

**111) ಪ್ರಶ್ನೆ :– ಆದಿ ಮಾನವರು ಎಂದು ಹೇಳುವ ಕಾಲ ಕೃತಯುಗದ ಕಾಲವಾ ಅಥವಾ ಕಲಿಯುಗದ ಮೊದಲ ಕಾಲವಾ?**

**ಉತ್ತರ :–** ಕೃತಯುಗದ ಕಾಲವನ್ನೇ ಆದಿ ಮಾನವರ ಕಾಲವೆಂದು ಹೇಳಬಹುದು.

**112) ಪ್ರಶ್ನೆ:– "ಬ್ರೈನ್‌ಡೆಡ್" ನಲ್ಲಿ ಅಥವಾ ಕೋಮ ಸ್ಥಿತಿಯಲ್ಲಿ ಜೀವಿಯು ಯಾವ ಗುಣಭಾಗದಲ್ಲಿ ಇರುತ್ತಾನೆ. ಬುದ್ಧಿ, ಚಿತ್ತ, ಮೊದಲಾದವು ಏಕೆ ಕೆಲಸ ಮಾಡುವುದಿಲ್ಲ?**

**ಉತ್ತರ :–** ಯಾವ ಗುಣದಲ್ಲಾದರೂ ಇರಬಹುದು. ಆತ್ಮ ಬುದ್ಧಿಯನ್ನು,

ಮನಸ್ಸನ್ನು ಕೆಲಸ ಮಾಡದಹಾಗೆ ಇರುವಂತೆ ಮಾಡುತ್ತಿದೆ. ಆತ್ಮ ಶಕ್ತಿ ಕೊಟ್ಟು ಆಡಿಸಿದರೆ ಆಡುವವು ಬುದ್ಧಿ, ಮನಸ್ಸು. ಮನಸ್ಸು ಹೊರಗಿನ ಸಮಾಚಾರಗಳ ಪ್ರತಿನಿಧಿ. ಬುದ್ಧಿ ಒಳಗಿನ ಸಮಾಚಾರಗಳ ಪ್ರತಿನಿಧಿ. ಈ ಎರಡು ಆತ್ಮ ಚೈತನ್ಯದಿಂದ ಕೆಲಸ ಮಾಡುತ್ತಿರುತ್ತವೆ. ಈ ಎರಡು ಆತ್ಮ ಆಡಿಸಿದರೆ ಆಡುವವು. ಆತ್ಮ ಆಡಿಸಲಿಲ್ಲ. ಆದ್ದರಿಂದ ಒಳಗಿನ ಸಮಾಚಾರ ಹೊರಗೆ ಬರುವುದಿಲ್ಲ. ಹೊರಗಿನ ಸಮಾಚಾರ ಒಳಗೆ ಹೋಗುವುದಿಲ್ಲ. ಮನಸ್ಸು, ಬುದ್ಧಿಯೊಂದರ ಸಂಬಂಧವೇ ಕೋಮ ಅಥವಾ ಬ್ರೈಯಿನ್‌ಡೆಡ್ ಎಂದು ಕರೆಯುತ್ತಾರೆ. ಆ ಸ್ಥಿತಿಯಲ್ಲಿ ಜೀವಿಯು ಯಾವ ಗುಣದಲ್ಲಿಯಾದರೂ ಇರಬಹುದು. ಇದು ಜೀವಿಗೆ ಯಾವುದೇ ಸಂಬಂಧವಿಲ್ಲ.

**113) ಪ್ರಶ್ನೆ :– ಜೀವಿಗಳು ಇಲ್ಲದ ಸ್ಥಿತಿ ದೇವರ ಹಗಲು ಎಂದಿದ್ದಾರೆ. ಬ್ರಹ್ಮಚಕ್ರ ತಿರುಗಬೇಕೆಂದರೇ ಏನು ಕಾರಣ?**

**ಉತ್ತರ :–** ಜೀವಿಗಳು ಇರುವ ಸ್ಥಿತಿ ಹಗಲು ಎಂದು ಹೇಳಿದ್ದೇವೆ ಇಲ್ಲದ ಸ್ಥಿತಿ ಹಗಲು ಎಂದು ಹೇಳಲಿಲ್ಲ. ಜೀವಿಗಳು ಇಲ್ಲದ ಸ್ಥಿತಿ ಬ್ರಹ್ಮರಾತ್ರಿ ಆಗುವುದು ನಡೆಯುತ್ತಿದೆ. ಬ್ರಹ್ಮಚಕ್ರವು ನಿಂತರೆ ಅಲ್ಲವೆ! ಎಂದಿಗೂ ನಿಲ್ಲುವುದಿಲ್ಲ. ಬ್ರಹ್ಮಚಕ್ರ ತಿರುಗುವುದಕ್ಕೆ ಕೆಳಗಿನ ಮೂರು ಚಕ್ರಗಳು ಕಾರಣ. ಮೇಲಿನ ಚಕ್ರ ತಿರುಗುವುದರಿಂದ ಕೆಳಗಿನ ಚಕ್ರಗಳು ನಿಲ್ಲುವುದಿಲ್ಲ. ನಾಲ್ಕು ಚಕ್ರಗಳು ಒಂದರೊಂದಿಗೆ ಮತ್ತೊಂದು ಅವಿನಾಭಾವ ಸಂಬಂಧ ಹೊಂದಿವೆ.

**114) ಪ್ರಶ್ನೆ :– ಆರು ತಿಂಗಳು ಹಗಲು, ಆರು ತಿಂಗಳು ರಾತ್ರಿ ಹೊಂದಿದ ಕೆಲವು ದೇಶಗಳು ಇವೆ ಅಲ್ಲವೇ! ಅವರಿಗೆ ರಾತ್ರಿ ಹಗಲು ಎನ್ನುವ ನಿರ್ವಚನೆಗಳು ಪ್ರತಿ ದಿನ ನಮ್ಮಂತೆ ಸರಿಹೋಗುತ್ತಿಲ್ಲವಲ್ಲ!**

**ಉತ್ತರ :–** ಹಗಲು ರಾತ್ರಿ ಎನ್ನುವ ವಿಧಾನ ಒಳಗಿನ ಚಕ್ರಗಳ ಗಮನವನ್ನನುಸರಿಸಿ ಇರುತ್ತದೆ. ಅಷ್ಟೇ ಹೊರತು ಹೊರಗೆ ನಡೆಯುವುದನ್ನನುಸರಿಸಿ ಇರುವುದಿಲ್ಲ. ಆರು ತಿಂಗಳು ಹಗಲು, ಆರು ತಿಂಗಳು ರಾತ್ರಿ ಇರುವುದು ಕೂಡಾ

ಸರಿಹೋಗುತ್ತದೆ. ಹಗಲು ರಾತ್ರಿ ವಿಧಾನ, ಒಳಗಿನ ಚಕ್ರಗಳ ಗಮನವನ್ನನುಸರಿಸಿ ಹೇಳಬಹುದು. ಮನುಷ್ಯ ಯಾವಾಗ ಎಚ್ಚರಗೊಳ್ಳುತ್ತಾನೊ ಆಗ ಹಗಲು. ಯಾವಾಗ ನಿದ್ರೆಯೊಳಗೆ ಹೋಗುತ್ತಾನೊ ಆಗಲೇ ರಾತ್ರಿ ಯಾಗುತ್ತದೆ. ಮನುಷ್ಯನ ನಿದ್ರೆ ಎಚ್ಚರಗಳನ್ನೇ ಸಾವು ಹುಟ್ಟುಗಳಾಗಿ ಲೆಕ್ಕಿಸಿ, ಎಚ್ಚರವನ್ನು ಪ್ರಭವ ಎಂದೂ, ನಿದ್ರೆಯನ್ನು ಪ್ರಳಯ ಎಂದೂ ಹೇಳುವುದು ಆಧ್ಯಾತ್ಮಿಕದಲ್ಲಿರುವ ಪದ್ಧತಿ.

**115) ಪ್ರಶ್ನೆ :– ವರ್ಣಗಳು ಎನ್ನುವವು ಇಲ್ಲ ಎಂದು ಹೇಳಿ ಶ್ರೀಕೃಷ್ಣನು ಒಂದು ಶ್ಲೋಕದಲ್ಲಿ ಸ್ತ್ರೀಯರು, ವೈಶ್ಯರು, ಶೂದ್ರರು ಸಹಿತ 'ನನ್ನ ಜ್ಞಾನದ ಮೂಲಕ ಹೊರಬಿದ್ದಿದ್ದಾರೆ' ಎಂದು ಹೇಳಿದ್ದಾನೆ. ಕುಲದ ಹೆಸರು ಹೇಳಿ ಅವರನ್ನು ಕರುಣೆಯಿಂದ ನೋಡಿದಂತಾ, ಕೀಳಾಗಿ ಹೇಳಿದಂತಾ?**

**ಉತ್ತರ :–** ಕೃಷ್ಣನ ಲೆಕ್ಕದಲ್ಲಿ ಕುಲಗಳು ಇಲ್ಲ. ಪ್ರಜೆಗಳ ಲೆಕ್ಕದಲ್ಲಿ ಕುಲಗಳು ಇವೆ. ಇಂತಹವರು ಎಂದು ಹೇಳಬೇಕೆಂದರೆ ಇತರರಿಗೆ ಅಭ್ಯಾಸವಾದ ಭಾಷೆಯಲ್ಲಿಯೇ ಹೇಳಬೇಕು. ಇಲ್ಲದಿದ್ದರೆ ಯಾರನ್ನು ಕುರಿತು ಹೇಳುವುದು ತಿಳಿಯುವುದಿಲ್ಲ. ಆದ್ದರಿಂದ ಕುಲಗಳ ಹೆಸರಿನಿಂದ ಸಹ ಹೇಳಬೇಕಾಗಿ ಬಂದಿದೆ. ಅಷ್ಟೇ ಹೊರತು ಹಾಗೆ ಕುಲದ ಹೆಸರುಗಳು ಹೇಳುವುದರಲ್ಲಿ ಪ್ರೇಮವಿಲ್ಲ, ಅಸೂಯೆ ಇಲ್ಲ.

**116) ಪ್ರಶ್ನೆ :– ಪ್ರಹ್ಲಾದ್ ಜಾನಿಯವರ ಶರೀರದಲ್ಲಿರುವ ಆತ್ಮ, ಆತನ ಶರೀರದಲ್ಲಿರುವ ದುರ್ಗಾದೇವಿಯೇ ರಕ್ಷಿಸಿದ್ದಾಳೆ ಎಂದು ಏಕೆ ಹೇಳಿದೆ? ರಕ್ಷಿಸಿರುವುದು ದುರ್ಗಾದೇವಿಯಾ?**

**ಉತ್ತರ :–** ಪ್ರಹ್ಲಾದ್ ಜಾನಿ ಶರೀರದಲ್ಲಿ ಆತ್ಮವೇ ಎಲ್ಲಾ ಮಾಡುತ್ತಿದೆ. ದುರ್ಗಾ ದೇವಿಗು ಪ್ರಹ್ಲಾದ್ ಜಾನಿ ಶರೀರಕ್ಕು ಯಾವುದೇ ಸಂಬಂಧವಿಲ್ಲ. ಆದರೂ ಹಾಗೆ ಹೇಳುವುದರಲ್ಲಿ ಆತ್ಮ ಹೊರಗೆ ತಿಳಿಯದಂತೆ ಅಡಗಿ ಹೋಗುವುದಕ್ಕೇ ಹಾಗೆ ಹೇಳಿದ್ದಾರೆಂದು ತಿಳಿಯುತ್ತಿದೆ.

**117) ಪ್ರಶ್ನೆ :– ಒಬ್ಬ ಸ್ತ್ರೀ ಕೊನೆಯ ದಶೆಯಲ್ಲಿ ತನ್ನ ಗಂಡನನ್ನೇ ಮರು ಜನ್ಮದಲ್ಲಿ ಗಂಡನಾಗಿ ಬರಬೇಕೆಂದು ಕೋರಿಕೊಂಡು ಸತ್ತುಹೋಗಿದ್ದಾಳೆ. ಆದರೆ ಗಂಡ ಮಾತ್ರ ಮತ್ತೊಬ್ಬ ಸ್ತ್ರೀ ಹೆಂಡತಿಯಾಗಿ ಬರಬೇಕೆಂದು ಕೋರಿಕೊಳ್ಳುತ್ತಾ ಮರಣಿಸಿದ್ದಾನೆ. ಈಗ ಭಗವದ್ಗೀತೆ ಪ್ರಕಾರ ಇವರ ಕೋರಿಕೆ ಹೇಗೆ ನೇರವೇರುತ್ತದೆ. ಏಕೆಂದರೇ! ಕೊನೆಯಲ್ಲಿ ಏನು ಅಂದುಕೊಂಡರೆ ಅದೇ ನಡೆಯುತ್ತದೆ ಅಲ್ಲವೇ!**

**ಉತ್ತರ :–** ಕೊನೆಯಲ್ಲಿ ಅಂದುಕೊಂಡಿರುವುದನ್ನು ಅನುಸರಿಸಿ ನಂತರ ಜನ್ಮ ಬರುವುದು ನಡೆಯುತ್ತಿದೆ ಆದರೇ, ಅಂದುಕೊಂಡ ಕೋರಿಕೆಗಳು ನೇರವೇರುತ್ತವೆಂದು ಹೇಳಲಿಲ್ಲ. ಅವರವರ ಕರ್ಮದ ಪ್ರಕಾರ ಅವರಿಗೆ ಜೀವಿತ ಭಾಗಸ್ವಾಮಿ ದೊರೆಯುತ್ತಾರೆ. ಅಷ್ಟೇ ಹೊರತು ಅವರು ಕೋರಿಕೊಂಡಂತೆ ನಡೆಯುವುದಿಲ್ಲ. ಕರ್ಮವನ್ನನುಸರಿಸಿ ನಡೆಯುವುದು ಖಚಿತ. ಕೊನೆಯ ದಶೆಯಲ್ಲಿ ಅಂದುಕೊಂಡ ಕೋರಿಕೆಗಳು ನೇರವೇರುತ್ತವೆಂದು ಭಗವದ್ಗೀತೆಯಲ್ಲಿ ಹೇಳಲಿಲ್ಲ. ಕೊನೆಯದಾಗಿ ಅಂದುಕೊಂಡಿರುವುದನ್ನು ಅನುಸರಿಸಿ ಜನ್ಮ ಉಂಟಾಗುತ್ತದೆ. ಯಾವ ಭಾವನೆಯನ್ನು ಸ್ಮರಿಸುತ್ತಾ ಶರೀರವನ್ನು ಬಿಡುತ್ತಿದ್ದಾರೊ ಅದೇ ಭಾವನೆ ಪ್ರಕಾರ ನಂತರ ಜನ್ಮ ಉಂಟಾಗುತ್ತದೆ ಎಂದು ಹೇಳಿದ್ದಾರೆ ಹೊರತು ಅಂದುಕೊಂಡ ಕೋರಿಕೆಗಳು ನೇರವೇರುತ್ತವೆಂದು ಹೇಳಲಿಲ್ಲ. ಪ್ರಪಂಚ ಸಂಬಂಧ ಕೋರಿಕೆಗಳು ಕರ್ಮವನ್ನನುಸರಿಸಿ ಇರುತ್ತವೆ. ನಂತರದ ಜನ್ಮ ಜ್ಞಾನಿಯಾಗಿ ಹುಟ್ಟುವುದಕ್ಕೆ ನನ್ನನ್ನು ಸ್ಮರಿಸುತ್ತಾ ಮರಣಿಸೆಂದು ಅಕ್ಷರ ಪರಬ್ರಹ್ಮಯೋಗದಲ್ಲಿ ಹೇಳುವುದು ನಡೆದಿದೆ. ಜ್ಞಾನಿಯಾಗಿ ಹುಟ್ಟುವುದು ಕರ್ಮಕ್ಕೆ ಅತೀತವಾದ ವಿಷಯ.

**118) ಪ್ರಶ್ನೆ :– ಮೇಘವು ದೇವರ ಸೈನಿಕರು ಅಲ್ಲವೇ! ಮತ್ತೆ ಸತ್ಯಾನ್ವೇಷಿ ಕಥೆಯಲ್ಲಿ ತಪಸ್ವಿಬಾಬಾರವರ ಮಾತು ಕೇಳಿದಂತೆ ಇದೆ ಏಕೆ?**

**ಉತ್ತರ :–** 'ಮೇಘದಂತಹ ಮೇಘಗಳನ್ನು ತನ್ನ ಶಕ್ತಿಯಿಂದ ಸೃಷ್ಟಿಸುತ್ತದೆ' ಎಂದಿದ್ದೇವೆ ಹೊರತು ನಿಜವಾದ ಮೇಘಗಳೆಂದು ಹೇಳಲಿಲ್ಲ. ಮಂತ್ರ ಶಕ್ತಿಯಿಂದ ಅವು ಸೃಷ್ಟಿಸಲ್ಪಟ್ಟು ಸ್ವಲ್ಪ ಸಮಯವಿದ್ದು ಮಾಯವಾಗುವವೇ ಹೊರತು ಶಾಶ್ವತವಾಗಿ ಇರುವವಲ್ಲ. ನಿಜವಾದ ಮೇಘಗಳು ಅಲ್ಲ.

**119) ಪ್ರಶ್ನೆ :– ತತ್ತ್ವ ಎಂದರೇ ನಿನಗಿಂತ ಬೇರೆಯಾಗಿರುವುದು ಎಂದು ನೀವು ಹೇಳಿದ್ದೀರ. ಆದರೆ ಸಂಸ್ಕೃತದಲ್ಲಿ "ತ್ತ್ವ" ಎಂದರೇ ನಾನು ಎಂದು ಅರ್ಥ ಅಲ್ಲವೇ! ಆ ವಿಧವಾಗಿ ಅರ್ಥ ನೋಡಿದರೆ "ಅದು ನಾನು" ಎಂದು ಅರ್ಥವಲ್ಲವೆ!**

**ಉತ್ತರ :–** 'ಅದು ನಾನು' ಎಂದು ಹೇಳಿರುವುದು ಯಾರೊ ಅರ್ಥವಾಗಿದೆಯಾ ಜೀವಿಯಾ? ಆತ್ಮವಾ? 'ಅದು ನಾನು' ಎಂದು ಹೇಳಿರುವುದು ಆತ್ಮ ಆಗಿರುವುದರಿಂದ ನಿನಗಿಂತ ಬೇರೆಯಾಗಿರುವುದು ಆತ್ಮಯೆಂದು ಹೇಳಿದ್ದೇವೆ. ತತ್ತ್ವ ಎಂದರೇ ಆತ್ಮ ಎಂದು ಅರ್ಥ ಮಾಡಿಕೊಳ್ಳಬೇಕು ಹೊರತು ಆ ಪದವನ್ನು ಜೀವಿಗೆ ಹೇಳಿಕೊಂಡರೆ ಪೂರ್ತಿ ತಪ್ಪಾಗುತ್ತದೆ. ಭಾವನೆಗಳೆಲ್ಲ ಕೆಟ್ಟುಹೋಗುತ್ತವೆ.

**120) ಪ್ರಶ್ನೆ :– ಆದಿತ್ಯ ಎಂದರೇ ಎರಡನೆಯವನು ಅಲ್ಲದವನೆಂದು ಅರ್ಥ ಹೇಳಿ 'ದಿತ್ಯ' ಎಂದರೇ ಎರಡು ಎಂದು ಹೇಳಿದ್ದಾರೆ. ಆದರೆ ದಿತ್ಯ ಎಂದರೇ ಎರಡು ಅಲ್ಲ, ದ್ವಿತ್ಯ ಎಂದರೇ ಎರಡು ಎಂದು ಅರ್ಥ. ಅದೂ ಅಲ್ಲದೇ ಎರಡನೆ 'ಆ' ನನ್ನು ನೀವು ವಿರುದ್ಧಾರ್ಥ ಸೂಚಿಸುವಂತೆ ತೆಗೆದುಕೊಂಡಿದ್ದೀರಾ. ಮರ್ಯಾದೆ x ಅಮರ್ಯಾದೆ ಎಂದು ಒಂದನೆ 'ಅ' ಬಳಸುತ್ತಾರೆ. ಮತ್ತು ಆದಿತ್ಯ ಎಂದರೇ "ಅದಿತ್ಯ" ಅನ್ನಬೇಕು ಅಲ್ಲವೇ! ಆನಂದ ಎನ್ನುವ ಎರಡನೆ ಪದವನ್ನು ಹೇಳಿದಾಗ ಎರಡನೆ 'ಆ' ನನ್ನು ಇಲ್ಲಿ ವ್ಯತಿರೇಕವನ್ನು ಸೂಚಿಸುವಂತೆ ಹೇಳದೆ ಆನಂದ ಎಂದೇ ಯಾವಾಗಲೂ ವಿಶೇಷವಾಗಿ ಹೇಳಿದ್ದಾರೆ. ಹಾಗೇ 'ಆಲೋಚನೆ' ಎಂದು ಹೇಳಿದ್ದಾರೆ. 'ಆದಿತ್ಯ' ವಿಷಯದಲ್ಲಿ ಸಂದೇಹ ತೊಲಗಿಸುವ ಪ್ರಾರ್ಥನೆ ಆದಿ ಎಂದರೇ ಮೊದಲನೆಯದು ಎಂದು ಅರ್ಥವಿರುತ್ತದೆ. ಆದರೆ 'ಆದಿತ್ಯ' ಎನ್ನುವ ಪದದಲ್ಲಿ ದಿತ್ಯ ಎಂದರೇ ಎರಡು ಎನ್ನುವ ಅರ್ಥದ ಹತ್ತಿರವೇ ನನ್ನ ಸಂದೇಹ. ಭಾಷೆಯನ್ನು ಬಿಟ್ಟು ಭಾವವನ್ನು ನೋಡಬೇಕೆಂದಿದೆ. ಆದರೇ ಕೆಲವರು ನನ್ನನ್ನು ಇದನ್ನು ಕುರಿತು ಕೇಳಿದ್ದಾರೆ. ಅವರಿಗೆ ಸಮಾಧಾನಕ್ಕಾಗಿಯೇ ಈ ಪ್ರಶ್ನೆ.**

**ಉತ್ತರ :–** ಇಲ್ಲಿ ಸಂಶಯ ಏರ್ಪಟ್ಟಿದೆ ದಿತ್ಯಗು ದ್ವಿತ್ಯಗು ಎಷ್ಟೋ ವ್ಯತ್ಯಾಸ ಇದೆ ಅಲ್ಲವೇ! ದ್ವಿತ್ಯ ಎಂದರೇ ಎರಡು ಆಗಬಹುದು. ದಿತ್ಯ ಎಂದು

ಹೇಳುವುದರಿಂದ ದಿ ಪಕ್ಕದಲ್ಲಿ ವ ವತ್ತು ಇಲ್ಲದಿರುವುದರಿಂದ ಎರಡು ಎಂದು ಅರ್ಥ ಬರುವುದಿಲ್ಲ ಎನ್ನುವ ಪ್ರಶ್ನೆ ಒಂದಿದೆ. ಹಾಗೆ ಮೊದಲ 'ಅ' ಗು ಎರಡನೆ 'ಆ' ಗು ಎಷ್ಟೋ ಭೇದವಿದೆ. ಎರಡನೆ 'ಆ'ನನ್ನು ಉಪಯೋಗಿಸಿ ಆದಿತ್ಯ ಎನ್ನುವಕಡೆ 'ಅದಿತ್ಯ' ಎಂದು ನೀವು ಹೇಳಿದ್ದೀರೆಂದು ವಿರುದ್ಧಾರ್ಥವನ್ನು ಕೊಡಬಹುದು ಆದರೇ ಆ ಎನ್ನುವುದು ವಿರುದ್ಧಾರ್ಥ ಕೊಡುವುದಿಲ್ಲ ಅಲ್ಲವೇ! ಎನ್ನುವುದು ಎರಡನೆ ಪ್ರಶ್ನೆ. ಇವು ಎಲ್ಲರಿಗೂ ಬರುವ ಸಹಜವಾದ ಪ್ರಶ್ನೆಗಳೇ. ಮರ್ಯಾದೆ **X** ಅಮರ್ಯಾದೆ ಎಂದಾಗ ಅ ವಿರುದ್ಧಾರ್ಥವನ್ನು ಹೊಂದಿದೆ. ಅದೇ ವಿಧವಾಗಿ ರೋಗ್ಯ ಎಂದರೇ ರೋಗ, ಅಥವಾ ವ್ಯಾಧಿ ಎಂದು ಅರ್ಥ. ವ್ಯಾಧಿಯಿಲ್ಲ, ರೋಗವು ಇಲ್ಲ ಎಂದು ವಿರುದ್ಧಾರ್ಥವನ್ನು ತೋರಿಸುವಾಗ "ಅರೋಗ್ಯ" ಎಂದು ಬರೆಯುತ್ತಿಲ್ಲ. ರೋಗ್ಯ **X** ಆರೋಗ್ಯ ಎಂದು ಎರಡನೇ ದೀರ್ಘ ಆ ನನ್ನು ಉಪಯೋಗಿಸಿ ಹೇಳುತ್ತಿದ್ದೇವೆ. ಮೂರು ಎನ್ನುವ ಭಾವನೆಯನ್ನು ಹೇಳುವುದಕ್ಕೆ ತ್ರೈತ, ತ್ರಿತ್ವ, ತ್ರಯ ಎಂದು ಒಂದೇ ಅಕ್ಷರವನ್ನು ಮೂರು ನಾಲ್ಕು ವಿಧಗಳ ತ್ರ, ತ್ರಿ, ತ್ರೈ, ತ್ವಿ ಎಂದು ಹೇಳಿದರೂ ಮೂರು ಎಂದು ಅರ್ಥವನ್ನೇ ಸೂಚಿಸುತ್ತಿದೆ. ಹಾಗೆ ಅ ಮತ್ತು ಆ ಎರಡು ಸಂದರ್ಭಾನುಸಾರವಾಗಿ ಬಳಸಿದರೂ ವಿರುದ್ಧಾರ್ಥವನ್ನೇ ಸೂಚಿಸುತ್ತಿವೆ. ಹಾಗೆ 'ದ್ವಿ' ಬದಲು 'ದಿ' ಯನ್ನು ಬಳಸಿದರೂ ದ್ವಂದ್ವವನ್ನೇ ಸೂಚಿಸುತ್ತಿದೆ. ದ್ವ, ದ್ವಿ, ದೊ, ದ್ವೌ, ದಿ ಎನ್ನುವ ಅಕ್ಷರ ಎರಡನ್ನು ಸೂಚಿಸುತ್ತಿದೆ. ಮೊದಲನೆಯವನು ಸೂರ್ಯನು 'ಆದಿತ್ಯನು' ಎಂದು ಹೇಳುತ್ತಿದ್ದೇವೆ, ಗ್ರಹಗಳಲ್ಲಿ ಮೊದಲನೆಯವನು ಎಂದು ಅರ್ಥ. ಅ ನನ್ನು, ಆ ನನ್ನು ಸಂದರ್ಭಾನುಸಾರ ಬಳಸಿದಂತೇ ಉಳಿದ ಅಕ್ಷರಗಳನ್ನು ಕೂಡಾ ಸಂದರ್ಭಾನುಸಾರವಾಗಿ ಬಳಸುತ್ತಾರೆ. ಆರೋಗ್ಯದಲ್ಲಿ ಎರಡನೆ 'ಆ' ಬಳಸಲ್ಪಟ್ಟಿದೆ. ಆದಿತ್ಯದಲ್ಲಿ ಕೂಡಾ ಎರಡನೆ ಆ ನನ್ನೇ ಬಳಸಲ್ಪಟ್ಟಿದೆ. ಆರೋಗ್ಯ ಎಂದರೇ ರೋಗ ಇಲ್ಲದಿರುವುದು' ಎಂದು ಸಂದರ್ಭವನ್ನನುಸರಿಸಿ ಆ ನನ್ನು ಬಳಸಿದ್ದಾರೆ. ಸಂದರ್ಭವನ್ನನುಸರಿಸಿ ನೋಡದೆಹೋದರೆ ಭಾವನೆಗಳು ಬದಲಾಗಿ ಹೋಗುತ್ತವೆ. ಸೂರ್ಯನು ಗ್ರಹಗಳೆಲ್ಲವುಗಳಲ್ಲಿ ಮೊದಲನೆಯವನು ಎಂದು ಹೇಳುವುದಕ್ಕೆ "ಆದಿತ್ಯಾಯಚ"

ಎಂದು ಹೇಳಿದ್ದಾರೆ. ಇಲ್ಲಿ ಮೊದಲನೆಯವನೆಂಬ ಅರ್ಥ ನೀವು ಹೇಳಿದಂತಾದರೆ ಇಲ್ಲದಂತೆ ಹೋಗುತ್ತದೆ. ಆದಿತ್ಯನು ಎಂದರೇ ಸೂರ್ಯನು ಎಂದು ಎಲ್ಲರೂ ಹೇಳಬಲ್ಲರು.

**121) ಪ್ರಶ್ನೆ :– ಭಗವದ್ಗೀತೆ ಶ್ಲೋಕದಲ್ಲಿ 'ಮಶ್ವತ್ಥಂ' ಎಂದು ಇರುವುದನ್ನು 'ಅಶ್ವರ್ಥ'ವಾಗಿ ಬದಲಿಸಿಕೊಳ್ಳಬೇಕಾ? ಆಗಲೇ ನೀವು ಹೇಳುವ ಅರ್ಥ ಸರಿಹೋಗುತ್ತದಾ?**

**ಉತ್ತರ :–** ಸಂಸ್ಕೃತ ಶ್ಲೋಕದಲ್ಲಿನ ಪದ 'ಮಶ್ವತ್ಥ' ಎಂದು ಇರಬೇಕು. ತೆಲುಗು ಪದ ಬರೆಯುವಾಗ ಮಾತ್ರ 'ಅಶ್ವರ್ಥ' ಎಂದು ಬರೆಯಬೇಕು. ಭಾಷೆಯಲ್ಲಿ ಪದ ಬದಲಾಗುತ್ತಿದೆ. ಅಶ್ವ ಶಕ್ತಿ ಎಂದು ಯಂತ್ರಶಕ್ತಿಯನ್ನು ಅಳತೆಮಾಡುತ್ತಿರುತ್ತಾರೆ. ಅಶ್ವರ್ಥ ಎಂದರೇ ಅಶ್ವವೊಂದರ ಅರ್ಥ ಎಂದು ಅರ್ಥ. ಅಶ್ವವೊಂದರ ಅರ್ಥ ಎಂದರೇ ಧನ, ಬಲ. ಅಶ್ವವೊಂದರ ಬಲವನ್ನು ಇಂಗ್ಲೀಷ್‌ನಲ್ಲಿ ಹಾರ್ಸ್‌ಪವರ್ ಎಂದು ಕರೆಯುತ್ತಾರೆ. ತೆಲುಗಿನಲ್ಲಿ ಅಶ್ವರ್ಥ ಎಂದು ಕರೆಯುತ್ತೇವೆ. ಆಲದಮರದ ಸುತ್ತಲೂ ಒಂದು ಮೀಟರ್ ಪರಿಧಿಯವರೆಗು ಒಂದು ಹಾರ್ಸ್ ಪವರ್ ಶಕ್ತಿ ಇದೆಯೆಂದು ಹೇಳುತ್ತಾ ಅದಕ್ಕೆ ಅದೇ ಅರ್ಥದಿಂದ ಅಶ್ವರ್ಥ ಎಂದು ಹೇಳಿದ್ದಾರೆ. ನನ್ನ ಯಂತ್ರ ಹತ್ತು ಹಾರ್ಸ್‌ಪವರ್ ಇರುವುದು ಎಂದು ಹೇಳುವುದಕ್ಕೆ ತೆಲುಗು ಭಾಷೆಯಲ್ಲಿ ಹತ್ತು ಅಶ್ವರ್ಥಗಳು ಇರುವುದು ಎನ್ನುತ್ತಿದ್ದರು.

**122) ಪ್ರಶ್ನೆ :– ಸ್ಥೂಲವಾದ ತಾಂಭೂಲದಲ್ಲಿ ಇರುವ ಪೋಷಕವನ್ನು ಸ್ಥೂಲ ಶರೀರವನ್ನು ಆವರಿಸಿದ ಸೂಕ್ಷ್ಮ ಗ್ರಹಿಸಿದರೆ, ಸೂಕ್ಷ್ಮ ಬಟ್ಟು ಹೋದ ನಂತರ ಸ್ಥೂಲ ದೇಹದಲ್ಲಿ ಶರೀರಕ್ಕೆ ತಾಂಭೂಲದಿಂದ ಎಲರ್ಜಿ ಏಕೆ ಬಂದಿದೆ?**

**ಉತ್ತರ :–** ಶರೀರವನ್ನು ಆವರಿಸಿದ ಜೀವಿಯನ್ನನುಸರಿಸಿ ಶರೀರಕ್ಕೆ ಕೆಲವು ಪದಾರ್ಥಗಳು ಸರಿಹೋಗಬಹುದು. ಅದೇ ಇನ್ನೊಂದು ಶರೀರದಲ್ಲಿ ಜೀವಿಯನ್ನನುಸರಿಸಿ ಆತನಿಗೆ ಕೆಲವು ಪದಾರ್ಥಗಳು ಸರಿಹೋಗದೆ ಎಲರ್ಜಿ ಏರ್ಪಡಬಹುದು. ಕೆಲವರಿಗೆ ಮಾಂಸ ಬಹಳ ಪ್ರೀಯವಾದ ಆಹಾರ.

ಅಪರೂಪವಾಗಿ ಯಾರಿಗೋ ಒಬ್ಬರಿಗೆ ಮಾಂಸ ತಿಂದರೆ ಶರೀರವೆಲ್ಲ ದದ್ದೆಗಳು ಬರುವುದು, ಚರ್ಮ ಕೆಂಪಗೆ ಬದಲಾಗಿಹೋಗುವುದು, ತುರಿಕೆ ಬರುವುದು ನಡೆಯುತ್ತದೆ. ಆ ಜೀವಿಗೆ ಕರ್ಮವನ್ನನುಸರಿಸಿ ಹಾಗೆ ನಡೆಯುತ್ತಿರುತ್ತದೆ. ಸ್ಥೂಲ ಶರೀರದಲ್ಲಿ ಸೇರಿದ ಸೂಕ್ಷ್ಮಕ್ಕೆ ತಾಂಭೂಲ ಎಂದರೇ ಇಷ್ಟ ಆದ್ದರಿಂದ ತಾಂಭೂಲವನ್ನು ಕೇಳಿ ಇಸ್ಕೊಂಡು ಹಾಕಿಕೊಳ್ಳುವುದು ನಡೆದಿದೆ. ಸೂಕ್ಷ್ಮ ಶರೀರ ಸ್ಥೂಲದೇಹದಲ್ಲಿರುವ ಅರ್ಧಗಂಟೆ ಸಮಯ ಏನು ನಡೆಯಲಿಲ್ಲ. ನಂತರ ಸೂಕ್ಷ್ಮ ಆವರಿಸಿರುವ ಸ್ಥೂಲವನ್ನು ಬಿಟ್ಟುಹೋದ ನಂತರ ಆ ಶರೀರ ಮೊದಲಿನಿಂದಿರುವ ಜೀವಿಯ ಅಧೀನದೊಳಗೆ ಬರುತ್ತಿವೆ. ಆ ಜೀವಿಯ ಕರ್ಮ ಪ್ರಕಾರ ತಾಂಭೂಲ ಸರಿಹೋಗುವುದಿಲ್ಲ. ಆದ್ದರಿಂದ ಆ ಜೀವಿಯು ಮೇಲಕ್ಕೆ ಬರುತ್ತಲೇ ಕರ್ಮಪ್ರಕಾರ ಎಲರ್ಜಿ ಏರ್ಪಟ್ಟು ತಾಂಭೂಲ ವಾಂತಿಗೆ ಬರುವುದು ನಡೆದಿದೆ. ಶರೀರದಲ್ಲಿ ನಿವಾಸಿಸುವ ಜೀವಿಯ ಕರ್ಮವನ್ನನುಸರಿಸಿ ಆಹಾರ ಸರಿಹೋಗುವುದು, ಸರಿಹೋಗದಿರುವುದು ಇರುತ್ತದೆ. ಅಷ್ಟೇ ಹೊರತು ಶರೀರಗಳನ್ನನುಸರಿಸಿ ಎಲರ್ಜಿ ಇರುವುದಿಲ್ಲ.

**123) ಪ್ರಶ್ನೆ:– ಸತ್ಯಾನ್ವೇಷಿ ಕಥೆಯಲ್ಲಿ ಸತ್ಯಸಾಯಿಬಾಬಾ, ಸಾಯಿಬಾಬಾಗಳಿಗೆ ಸಮಾನ ಗುರುತು ಫೋಟೋಗಳಲ್ಲಿ ಏನು ಇರುವಂತೆ ಕಂಡುಕೊಂಡಿದ್ದಾರೆ?**

**ಉತ್ತರ :–** ತಲೆ ಭಾಗ ಮುಚ್ಚಿಟ್ಟಿರುವಂತೆ ತಿಳಿದಿದೆ. ಒಬ್ಬರು ಬಟ್ಟೆಯಿಂದ ಮುಚ್ಚಿದರೆ, ಮತ್ತೊಬ್ಬರು ಕೂದಲುಗಳಿಂದ ಮುಚ್ಚಿಹಾಕಿದ್ದಾರೆ.

**124) ಪ್ರಶ್ನೆ :– ಸಾಕಾರ ಭಗವಂತನನ್ನು ತೋರಿಸುವ ಪ್ರಯತ್ನದಲ್ಲಿ "ದೇವಾಲಯ ರಹಸ್ಯಗಳು" ಗ್ರಂಥದಲ್ಲಿ ನಾಲ್ಕು ಕೈಗಳು ಏಕೆ ತೋರಿಸಿದ್ದಾರೆ?**

**ಉತ್ತರ :–** ಭಗವಂತನು ಸಾಧಾರಣ ಮನುಷ್ಯನಾಗಿ ಬಂದರೂ ಮನುಷ್ಯರಿಗಿಂತ ದೊಡ್ಡವನೆಂದು ಅಜ್ಞಾನಿಗಳು ಕೂಡಾ ತಿಳಿಯುವುದಕ್ಕೆ ಸಾಧಾರಣ ಮನುಷ್ಯರಿಗೆ ಎರಡು ಕೈಗಳಿರುವಾಗ ಭಗವಂತನಿಗೆ ನಾಲ್ಕು ಕೈಗಳಿಟ್ಟು ತೋರಿಸುವುದು ನಡೆದಿದೆ.

**125) ಪ್ರಶ್ನೆ :– "ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಓದಿರಿ" ಎಂದು ಹೇಳಿ ಪಾಲಿಥಿನ್ ಕವರ್‌ಗಳಿಂದ ಪೊಲ್ಯೂಷನ್ ನಡೆಯುತ್ತದೆ ಅಲ್ಲವೇ! ಪೊಲ್ಯೂಷನ್ ಮಾಡುವುದರಲ್ಲಿ ನೀವು ಎಲ್ಲರಂತೆ ಭಾಗಸ್ವಾಮಿಗಳಾಗುತ್ತೀರಿ ಅಲ್ಲವೇ! ಮೇಲಾಗಿ ಆ ಕವರ್‌ಗಳು ಚರಂಡಿಯಲ್ಲಿ, ಕೊಳಚೆ ನೀರಿನಲ್ಲಿ ಬಿದ್ದರೆ ನಿಮ್ಮ ಗ್ರಂಥವನ್ನು ನೀವು ಅವಮಾನಿಸಿದಂತೆ ಅಲ್ಲವೆ?**

**ಉತ್ತರ :–** ಉದ್ದೇಶ ಒಳ್ಳೆಯದಾದಾಗ ಉಳಿದವುಗಳನ್ನು ಕುರಿತು ಆಲೋಚಿಸಬೇಕಾದ ಅವಶ್ಯಕತೆಯಿಲ್ಲ. ಉಳಿದ ಕೆಲಸಗಳೆಲ್ಲವೂ ಕರ್ಮವನ್ನನುಸರಿಸಿ ಕರ್ಮ ಪ್ರಕಾರವೇ ನಡೆಯುತ್ತಿರುತ್ತದೆ. ಪ್ರಜೆಗಳು ಜ್ಞಾನಿಗಳಾಗಬೇಕೆನ್ನುವುದೇ ನಮ್ಮ ಉದ್ದೇಶ. ಕವರ್‌ಗಳು ಕಾಲುವೆಯಲ್ಲಿ ಬೀಳುತ್ತವೆಯೆಂದು ನಮ್ಮ ಉದ್ದೇಶವನ್ನು ಬಿಡುವುದಿಲ್ಲ. ದೇವರ ದೃಷ್ಠಿಯಲ್ಲಿ ಎಲ್ಲಾ ಸಮಾನವೇಯೆಂದು ಮೊದಲು ಕೂಡಾ ಹೇಳಿದ್ದೇವೆ. ಮನುಷ್ಯರಾದ ನಮಗೆ ಒಳ್ಳೆಯ ಕೆಟ್ಟ, ಶುಭ್ರ ಅಶುಭ್ರ ಇರುತ್ತದೆ ಆದರೆ, ದೇವರಿಗೆ ಅವುಯಾವುವು ಇಲ್ಲ.

**126) ಪ್ರಶ್ನೆ :– ಆದಿತ್ಯ ಎಂದರೇ ಅದಿತಿ ಪುತ್ರನು ಆದಿತ್ಯನೆಂದು, ದಶರಥಪುತ್ರನು ದಾಶರಥ ಎಂದು ರಾಮನನ್ನು ಉದ್ದೇಶಿಸಿ ಹೇಳಿದಂತೆ ಹೇಳಿರಬಹುದು ಅಲ್ಲವೇ!**

**ಉತ್ತರ :–** ಅವು ಪುರಾಣ ಕಥೆಗಳು, ನಾನು ಹೇಳಿರುವುದು ಯಥಾರ್ಥ ವಿಷಯಗಳು. ಸೂರ್ಯನು ಸೃಷ್ಠಿ ಆದಿಯಲ್ಲಿ ಪ್ರಕೃತಿಯೊಂದಿಗೆ ಸಹ ದೇವರ ಸಂಕಲ್ಪದಿಂದ ಹುಟ್ಟಿದವನು. ಸೂರ್ಯನು ತಾಯಿ ತಂದೆಗೆ ಹುಟ್ಟಿದವನು ಅಲ್ಲ. ಬ್ರಹ್ಮಾಂಡದಿಂದ ನೇರವಾಗಿ ಹುಟ್ಟಿದವನು. ಸೂರ್ಯನಿಗಿಂತ ಮೊದಲು ಮನುಷ್ಯರು ಇಲ್ಲ. ಸೃಷ್ಠಿ ತಯಾರಾದ ನಂತರ ಸೂರ್ಯನನ್ನು ಕುರಿತು ಬರೆದುಕೊಂಡ ಪುರಾಣಗಳಲ್ಲಿ ಅದಿತಿ ಪುತ್ರನು ಅದಿತ್ಯನು ಎಂದು ಬರೆದು ಕೊಳ್ಳುವುದು ನಡೆದಿದೆ. ಪುಕ್ಕಟೆ ಪುರಾಣಗಳನ್ನು ನಂಬುತ್ತೀರಾ? ಯಥಾರ್ಥವನ್ನು ನಂಬುತ್ತೀರಾ? ನೀವೆ ನಿರ್ಣಯಿಸಿಕೊಳ್ಳಿ.

**127) ಪ್ರಶ್ನೆ:– ದಿತ್ಯ ಎಂದರೇ ರಾಕ್ಷಸನು ಎಂದು ಕೂಡಾ ಅರ್ಥ ವಿದೆ. ಹಾಗಾದರೂ**

**ಅದಿತಿ ಪುತ್ರನು ಅದಿತ್ಯನು ಎನ್ನುವುದು ಕೂಡಾ ತಪ್ಪೇಯಾಗುತ್ತದೆ. ಸರಿಯಾದ ಅರ್ಥವನ್ನು ವಿವರಿಸಿರೆಂದು ಪ್ರಾರ್ಥನೆ. ಈ ಪ್ರಶ್ನೆಗೆ ಉತ್ತರವನ್ನು, ಭಾವ ಪಂಡಿತರಿಗೆ ಅಲ್ಲದೇ ಭಾಷಾ ಪಂಡಿತರಿಗಾಗಿ ಹೇಳಬೇಕು.**

**ಉತ್ತರ :–** ಇದಕ್ಕು ಮೊದಲು 120 ನೇ ಪ್ರಶ್ನೆಯಲ್ಲಿ ಭಾಷಾ ಪಂಡಿತರಿಗೆ ವಿವರ ಹೇಳಿದ್ದೇವೆ ಅಲ್ಲಿ ನೋಡಿರಿ.

**128) ಪ್ರಶ್ನೆ :– ಒಂದು ಜೀವಿಯನ್ನು ನಿರ್ವೀರ್ಯ ಮಾಡಿ ಬೇರೊಂದು ಸೂಕ್ಷ್ಮಜೀವಿಯನ್ನು ಸಾಯಿಸುವುದೇ ಯಾಂಟಿಬಯಾಟಿಕ್ ಎಂದು ಕರೆಯುತ್ತಿದ್ದಾರೆ ಅಲ್ಲವೇ! ಎಂದರೇ ಪೆನ್ಸಿಲಿನ್ ನೋಟೇಟಮ್ ಎನ್ನುವ ಶಿಲೀಂದ್ರ ಜೀವಿಯನ್ನು ಸ್ಟ್ರೆಪ್ಟೊಕೋಕಸ್ ಎನ್ನುವ ಬಾಕ್ಟೀರಿಯವನ್ನು ಸಾಯಿಸುವುದಕ್ಕೆ ಉಪಯೋಗಿಸಿದ್ದೇವೆ. ಅದೇ ಪಿನ್ಸಿಲಿನ್ ಇಂಜಕ್ಷನ್ ಮತ್ತು ಈ ತರಹ ಚಿಕಿತ್ಸೆ ಹೋಮಿಯೊ ಪತಿಯಾ, ಅಲ್ಲೋಪತಿಯಾ, ಎಲ್ಲರಪತಿಯಾ ಎಂದು ನನ್ನ ಸಂದೇಹ.**

**ಉತ್ತರ :–** ತಂಗಳು ಅನ್ನ, ದಿನ ಕಳೆದ ಜೋಳದ ರೊಟ್ಟಿ, ಮೊಸರು ಇವುಗಳೆಲ್ಲವು ಗಳಲ್ಲಿ ಈಸ್ಟ್ ಬೆಳೆಯುವುದರಿಂದ ಈ ಆಹಾರಗಳು ಮನುಷ್ಯನಿಗೆ ತಿಳಿಯದೆಯೇ ಚಿಕಿತ್ಸೆ ಎನಿಸಿಕೊಳ್ಳದೆ ಮನುಷ್ಯನಿಗೆ ಒಳ್ಳೆಯದು ಮಾಡುತ್ತಿವೆ. ಇವುಗಳನ್ನು ಅಲ್ಲೋಪತಿ, ಹೋಮಿಯೋಪತಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಎಲ್ಲರಪತಿಯೆಂದು ಹೇಳುವುದೇ ಒಳ್ಳೆಯದು. ಹಾಗೇ ಅದೇ ಗುಂಪಿಗೆ ಪೆನ್ಸಿಲಿನ್ ಸೇರಿರುವುದರಿಂದ ಅದು ಚಿಕಿತ್ಸೆಯಾದರೂ ಅದನ್ನು ಎಲ್ಲರಪತಿಯೆಂದು ಹೇಳುವುದೇ ಉತ್ತಮ.

**129) ಪ್ರಶ್ನೆ :– ಎಂತವರಾದರೂ 'ಕಾಂತ ದಾಸರೇ' ಇದು ನೂರುಪಾಲು ವಾಸ್ತವ. ಸ್ತ್ರೀಯಲ್ಲಿ ಅಷ್ಟು ಆಕರ್ಷಣೆಗೆ ಕಾರಣವೇನು?**

**ಉತ್ತರ :–** ಸ್ತ್ರೀಯಲ್ಲಿ ಆಕರ್ಷಣೆ ಇದೆಯೆಂದುಕೊಳ್ಳುವುದು ತಪ್ಪು. ಪುರುಷನಲ್ಲಿಯೇ ಒಂದು ವಿಧವಾದ ಒತ್ತಡ, ಒಂದು ವಿಧವಾದ ಬಲಹೀನತೆ ಎರಡೂ ಜೊತೆಯಾದಾಗ ಎಂತವನಾದರೂ ಕಾಂತ ದಾಸನು ಆಗಬೇಕಾಗಿ

ಬರುತ್ತಿದೆ. ಶರೀರದಲ್ಲಿ ಆತ್ಮವೇ ಮನುಷ್ಯನನ್ನು ಹಾಗೆ ಅದೇ ಕೆಲಸವಾಗಿ ಬಲಹೀನನನ್ನು ಮಾಡುತ್ತಿದೆ. ಇದೆಲ್ಲಾ ಪುರುಷನಲ್ಲಿನ ಪ್ರಭಾವವೇ ಹೊರತು ಸ್ತ್ರೀಯಲ್ಲಿನ ಆಕರ್ಷಣೆ ಏನೂಯಿಲ್ಲ.

**130) ಪ್ರಶ್ನೆ :– ದೈವಜ್ಞಾನ ಎಷ್ಟೋ ಶ್ರೇಷ್ಠವಾದುದೆಂದು ತಿಳಿಸುವುದಕ್ಕಾಗಿಯೂ, ಅಜ್ಞಾನಿಗಳ ಕಣ್ಣುಗಳು ತೆರೆಸುವುದಕ್ಕಾಗಿಯೂ, ಜ್ಞಾನಿಗಳಲ್ಲಿ ಕೆಲವರಿಗಾದರೂ ದೂರ ಶ್ರವಣವೂ, ದೂರದರ್ಶನವೂ, ಗಾಳಿಯಲ್ಲಿ ನಡೆಯುವುದೂ, ಅಜ್ಞಾನಿಗಳು ಜ್ಞಾನಿಗಳನ್ನು ದೂಷಿಸಿದರೂ, ದಾಳಿಮಾಡಿದರೂ ಅವರಿಗೆ ಶಿಕ್ಷೆಹಾಕುವ ಶಕ್ತಿಯಂತವುಗಳನ್ನು ಜ್ಞಾನಿಗಳಿಗೆ ಆತ್ಮ ಪ್ರಸಾದಿಸಬಹುದು ಅಲ್ಲವೇ! ಆಗ ಜ್ಞಾನಶಕ್ತಿ ಪ್ರಭಾವ ತಿಳಿದು ಅಜ್ಞಾನಿಗಳು ಕೂಡಾ ಜ್ಞಾನಿಗಳಾಗಿ ಬದಲಾಗುವುದಕ್ಕೆ, ಬೇಗನೆ ಜ್ಞಾನ ಪ್ರಚಾರ ನಡೆಯುವುದಕ್ಕೆ ಅನುಕೂಲಿಸುತ್ತದೆ ಅಲ್ಲವೇ!**

**ಉತ್ತರ :–** ದೇವರು ಭಗವಂತನಾಗಿ ಬಂದು ತನ್ನ ಧರ್ಮಗಳನ್ನು ತಿಳಿಸಿ ಹೋದರೆ, ಶರೀರದಲ್ಲಿನ ಆತ್ಮ ಮನುಷ್ಯನನ್ನು ಕರ್ಮ ಪ್ರಕಾರ ನಡೆಸುವುದರಿಂದ ಮನುಷ್ಯನನ್ನು ಅಜ್ಞಾನದ ಕಡೆ ತೆಗೆದುಕೊಂಡು ಹೋಗುತ್ತಿದೆ. ಜ್ಞಾನವೊಂದರ ಬೆಲೆಯಾಗಲಿ, ತನ್ನ ಪ್ರಾಧಾನ್ಯತೆಯಾಗಲಿ ಹೊರಗೆ ತಿಳಿಯಬಾರದೆಂದು ಆತ್ಮ ತಿಳಿಯುತ್ತಿದೆ. ಆತ್ಮ ಕೋರಿಕೆ ಪ್ರಕಾರ ಜ್ಞಾನಶಕ್ತಿ, ಜ್ಞಾನಪ್ರಭಾವ ನೀನು ಕೇಳಿದ ಪ್ರಕ್ರಿಯೆಗಳಿಂದ ತಿಳಿಯುವುದಕ್ಕೆ ಅವಕಾಶವಿರುವುದರಿಂದ ಅವುಯಾವುವು ಇಲ್ಲದೇ ಕಾಣಿಸದಂತೆ ಮಾಡಿ ತನ್ನ ಪ್ರಭಾವವನ್ನು ಕೂಡಾ ಮುಚ್ಚಿಟ್ಟುಕೊಂಡು ಆತ್ಮ ಶರೀರದಲ್ಲಿದೆ. ವಾಸ್ತವ ಹೇಳಿದರೇ ದೇವರು ಜ್ಞಾನವನ್ನು ಧರ್ಮ ಯುಕ್ತವಾಗಿ ತಿಳಿಸಿದರೇ, ಆತ್ಮ ಅಜ್ಞಾನವನ್ನು ಅಧರ್ಮಯುಕ್ತವಾಗಿ ಹೊರಗೆ ತಿಳಿಯುವಂತೆ ಮಾಡುತ್ತಿದೆ. ಜ್ಞಾನವನ್ನು ತಾನು (ಆತ್ಮ) ಯಾರಿಗೂ ತಿಳಿಯದೆ ಮಾಡುವುದು. ಪೂರ್ತಿ ಶ್ರದ್ಧೆ ಇರುವವನಿಗೇ ಆತ್ಮ ತಿಳಿಸುವುದಕ್ಕೆ ಅವಕಾಶವಿದೆ. ಶರೀರದಲ್ಲಿ ಆಗಿರುವುದರಿಂದ ಆತ್ಮ ಅಂದುಕೊಂಡಿರುವವೇ ನಡೆಯುತ್ತದೆ.

**131) ಪ್ರಶ್ನೆ :– ಯಾವ ಕೆಲಸ ಮಾಡದವನು, ಯಾವ ಕೆಲಸ ಕೈಲಾಗದ ಜೀವಿ, ಗುಣಚಕ್ರದಲ್ಲಿ ಒಂದು ಗುಣ ಭಾಗದಿಂದ ಮತ್ತೊಂದು ಗುಣಭಾಗದೊಳಗೆ ಹೇಗೆ ಬದಲಾಗುತ್ತಿದ್ದಾನೆ?**

**ಉತ್ತರ :–** ಜೀವಿಯು ಏನು ಕೈಲಾಗದವನು ಎಂದು ಹೇಳುವುದು ವಾಸ್ತವ. ಗುಣಚಕ್ರದಲ್ಲಿ ಗುಣಭಾಗಗಳನ್ನು ಬದಲಾಗುವ ಸಾಮರ್ಥ್ಯ ಜೀವಿಗೆ ಇಲ್ಲ. ಜೀವಿಯು ಸ್ವತಃವಾಗಿ ತನ್ನಶಕ್ತಿಯಿಂದ ಗುಣ ಭಾಗಗಳನ್ನು ಬದಲಾಗುತ್ತಿಲ್ಲ. ಗುಣಚಕ್ರದಲ್ಲಿರುವ ಜೀವಿಯನ್ನು ಗುಣಚಕ್ರದ ಮೇಲಿರುವ ಕರ್ಮಚಕ್ರದಲ್ಲಿನ ಕರ್ಮ ಫೋಕಸ್ (ಕರ್ಮ ಕಿರಣಗಳು) ಜೀವಿಯ ಮೇಲೆ ಬಿದ್ದು ಯಾವ ಸಮಯದಲ್ಲಿ ಯಾವ ಗುಣದಲ್ಲಿ ಇರಬೇಕೊ ಕರ್ಮವೇ ನಿರ್ಣಯಿಸಿ ಜೀವಿಯನ್ನು ಆ ಗುಣಭಾಗದೊಳಗೆ ಬಲವಂತವಾಗಿ ತಳ್ಳಿ ಗುಣ ಭಾಗದಲ್ಲಿ ಪ್ರವೇಶಿಸುವಂತೆ ಮಾಡುತ್ತಿದೆ. ಕರ್ಮವೇ ಜೀವಿಯನ್ನು ಗುಣ ಭಾಗಗಳಲ್ಲಿ ನಡೆಸುತ್ತಿದೆ ಹೊರತು ಜೀವಿಯು ಸ್ವತಃವಾಗಿ ಎಲ್ಲಿಗೂ ಹೋಗಲಾರನು.

**132) ಪ್ರಶ್ನೆ :– 108 ಕೋಟಿ ವರ್ಷಗಳ ಸೃಷ್ಠಿಕಾಲ ಎಂದು ಹೇಳಿದ್ದೀರ. ಅದೂ 12 X 9=108 ಎಂದು ಹೇಳಿದ್ದೀರ. ಇಲ್ಲಿ ಒಂದು ಗುಣ ಒಂಭತ್ತು ಭಾಗಗಳಾಗಿ ಸೀಳಿದೆಯೆಂದು ಹೇಳಿದ್ದೀರ. ಇಲ್ಲಿ ಒಂಭತ್ತೇ ಏಕೆ ಹತ್ತು ಭಾಗಗಳಾಗಿ ಇರಬಹುದು ಅಲ್ಲವೇ! ಈ ಒಂಭತ್ತು ಭಾಗಗಳಿಗು ನವಗ್ರಹಗಳಿಗು ಸಂಬಂಧ ಇದೆಯಾ?**

**ಉತ್ತರ :–** ಸೃಷ್ಠಿಕಾಲ 108 ಕೋಟಿಗಳೆಂದು ಹೇಳಿದ ಮಾತು ನಿಜ. ಅದು ಮನುಷ್ಯನ ತಲೆಯಲ್ಲಿನ ಹನ್ನೆರಡು ಗುಣಗಳು ಒಂಭತ್ತು ಭಾಗಗಳಾಗಿ ಸೀಳಿ ಇರುವುದನ್ನು ಅನುಸರಿಸಿ 12 **X** 9=108 ಎಂದು ಹೇಳುವುದು ವಾಸ್ತವ. ಆದರೇ ಸಂಖ್ಯೆಯಲ್ಲಿ ದೊಡ್ಡದು (9) ಒಂಭತ್ತು ಮಾತ್ರವೇ. ಆ ಒಂಭತ್ತನ್ನೇ ಪರಮಾತ್ಮ ಗುರುತಾಗಿ ಹೇಳಿದ್ದೇವೆ. ಮೂರು (3) ಜೀವಾತ್ಮ ಗುರುತಾಗಿದ್ದು, ಆರು (6) ಆತ್ಮ ಗುರುತಾಗಿದ್ದು, ಒಂಭತ್ತು (9) ದೇವರ ಗುರುತೆಂದು ಹೇಳಿದ್ದೇವೆ. ದೇವರ ಗುರುತು ಒಂಭತ್ತು ಆದ್ದರಿಂದ, ಅದೇ ದೊಡ್ಡ ಸಂಖ್ಯೆ ಆಗುವುದರಿಂದ ಅದರ ಪ್ರಕಾರವೇ ಪ್ರತಿ ಗುಣ ಒಂಭತ್ತು ಭಾಗಗಳಾಗಿ ಸೀಳಿಹೋಗಿದೆ. ಒಂಭತ್ತು

ಭಾಗಗಳು ಸಮಾನವಾಗಿ ಸೀಳದೆ ದೊಡ್ಡ ಭಾಗದಿಂದ ಚಿಕ್ಕ ಭಾಗದವರೆಗು ಕ್ರಮೇಣ ಸೈಜು ಪ್ರಕಾರ ಇವೆ. ಹನ್ನೆರಡು ಗುಣಗಳು ಸೀಳುವುದರಿಂದ 108 ಸಂಖ್ಯೆ ಬಂದಿದೆ. 108 ಸಂಖ್ಯೆಯೇ ಪ್ರಪಂಚ ಆಯುಸ್ಸಾಗಿ ನಿಂತಿದೆ.

**133) ಪ್ರಶ್ನೆ :– ಚಿತ್ರ , ಮಿತ್ರ ಗ್ರಹಗಳ ಪ್ರಭಾವ ಜೀವಿಯ ಮಾನಸಿಕ ಕರ್ಮಕ್ಕೆ ಪರಿಮಿತವಾದರೆ, ಅದು ಬಾಹ್ಯ ಪ್ರಪಂಚ ಜೀವನಕ್ಕೆ ಸಂಬಂಧ ಇಲ್ಲದಿರುವಾಗ ಜ್ಯೋತಿಷ್ಯದಲ್ಲಿ ಅವುಗಳನ್ನು ಪರಿಗಣಿಸದೆಹೋದರೆ ನಷ್ಟವೇನು ಇಲ್ಲದಂತೆ ಅಲ್ಲವೇ?**

**ಉತ್ತರ :–** ಮನುಷ್ಯನ ಸುಖದುಃಖಗಳನ್ನು ತಿಳಿಸುವುದು ಜ್ಯೋತಿಷ್ಯ. ಮಾನಸಿಕ ಬಾಧೆಯಾದರೂ, ಶಾರೀರಕ ಬಾಧೆ ಆದರೂ ಮನುಷ್ಯನ ಸುಖ ದುಃಖ ದೊಳಗಿನವೇ ಅಲ್ಲವೇ! ಹಾಗಿರುವಾಗ ಎರಡೂ ಜ್ಯೋತಿಷ್ಯದೊಳಗೆ ಬರುತ್ತವೆ. ಮನುಷ್ಯನಿಗೆ ಹಣವಿಲ್ಲದ ಸ್ಥಿತಿಯನ್ನು ಕುರಿತು ತಿಳಿದುಕೊಳ್ಳುವುದು ಶಾರೀರಕ ಬಾಧೆಗೆ ಸಂಬಂಧಿಸಿರುವುದು ಅಲ್ಲವಲ್ಲ! ಅದು ಮಾನಸಿಕಕ್ಕೆ ಸಂಬಂಧಿಸಿದ ವಿಷಯವೇ ಅಲ್ಲವೇ! ಆದ್ದರಿಂದ ಮನುಷ್ಯ ಶಾರೀರಕ ಮಾನಸಿಕ ಸುಖ ದುಃಖಗಳನ್ನು ತಿಳಿಯುವುದೇ ಸಂಪೂರ್ಣ ಜ್ಯೋತಿಷ್ಯವಾಗುತ್ತದೆ.

**134) ಪ್ರಶ್ನೆ :– ಆನಂದ ಗುರುವಿಗೆ 'ರಾಮಧರ್ಮ ರಾಜು ಕನಕಾಭಿಷೇಕ ಮಾಡುವನಯ್ಯಾ' ಎಂದು ಬರೆದಿದ್ದಾರೆ. ಒಂದುವೇಳೆ ಆನಂದ ಗುರು ತಿಳಿದಲ್ಲಿ ರಾಮ ಧರ್ಮರಾಜು ಯಾರಾಗಿರಬಹುದು. ಇಷ್ಟಕ್ಕು ವೀರಬ್ರಹ್ಮಯ್ಯನವರು ಎಲ್ಲಿ ಹುಟ್ಟಿದಂತೆ?**

**ಉತ್ತರ :–** ಇವೆಲ್ಲ ದೈವ ರಹಸ್ಯಗಳು ಅವುಗಳನ್ನು ಖಚಿತವಾಗಿ ಯಾರೂ ಹೇಳಲಾರರು. ಬ್ರಹ್ಮಯ್ಯನವರು 1980 ರಲ್ಲಿ ಹುಟ್ಟಿದ್ದಾನೆಂದು ತಿಳಿದಿದೆ ಆದರೇ ಎಲ್ಲಿ ಎನ್ನುವ ವಿಷಯ ಯಾರಿಗೂ ತಿಳಿದಿಲ್ಲ. ಅವರು ಹುಟ್ಟಿದ್ದರೂ ಅವರು ಯಾರಾಗಿರುವುದು ಅವರಿಗೇ ತಿಳಿಯದ ಸ್ಥಿತಿಯಲ್ಲಿ ಇರುತ್ತಾರೆಂದು ಬ್ರಹ್ಮಯ್ಯ ನವರ ಕಾಲಜ್ಞಾನದಲ್ಲಿಯೇ ಬರೆದಿದ್ದಾರೆ. ಅವರಿಗೇ ಅವರ ಪರಿಸ್ಥಿತಿ ತಿಳಿಯದಿರುವಾಗ ನಮಗೆ ತಿಳಿಯುವುದು ಕಷ್ಟ.

**135) ಪ್ರಶ್ನೆ:– ಮೇಘವು ದೇವರ ಸೈನಿಕರಲ್ಲಿ ದೊಡ್ಡ ಭೂತ ಅಲ್ಲವೇ! ಮತ್ತು ಬಾಹ್ಯಯಜ್ಞಗಳು ಮಾಡಿದ ಅನಂತರ ಮಳೆ ಅವರು ಆಶಿಸಿದಂತೆಯೇ ಸುರಿಯುತ್ತದೆ ಅಲ್ಲವೇ! ಯೋಗಿಗಳ ಮಾತು ಮಾತ್ರ ಕೇಳುವ ಮೇಘಗಳು ವೇದಮಂತ್ರಗಳಿಗೆ ಶರಣಾಗುತ್ತವಾ? ಈ ವಿಧವಾಗಿ ಅವರು ಯಜ್ಞಗಳನ್ನು ಪ್ರೋತ್ಸಹಿಸಿ ಮತ್ತಷ್ಟು ಅಜ್ಞಾನದಲ್ಲಿ ಬಿದ್ದುಹೋಗುತ್ತಿದ್ದಾರೆ. ಇದಕ್ಕೆ ನಿಮ್ಮ ಸಮಾಧಾನವೇನು?**

**ಉತ್ತರ :–** ಮೇಘವು ಯಜ್ಞಗಳಿಗೆ ಸಂತೋಷಪಟ್ಟು ಮಳೆಸುರಿಸುತ್ತವೆ ಎನ್ನುವವಮಾತು ಅಸತ್ಯವೆಂದು ಹೇಳಬಹುದು. ಬಾಹ್ಯ ಯಜ್ಞಗಳು ಅಧರ್ಮಗಳೆಂದು ಮೇಘಗಳಿಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ಯಜ್ಞಗಳಿಂದ ಮಳೆ ಬರುತ್ತದೆ ಎನ್ನುವಮಾತು ಅಭೂತ ಕಲ್ಪನೆ. ಮಳೆಗಾಲದಲ್ಲಿ ಮೇಘಗಳಿಗೆ ಇಷ್ಟಬಂದಕಡೆ ಮಳೆಸುರಿಸುತ್ತವೆ. ಒಂದುವೇಳೆ ಕೇಳಿದರೆ ಯೋಗಿಗಳ ಮಾತನ್ನು ಕೇಳಬಹುದು. ಆದರೇ ಯೋಗಿಗಳು ಮೇಘಗಳಿಗೆ ಕೆಲಸ ಹೇಳುವುದಿಲ್ಲ.

**136) ಪ್ರಶ್ನೆ :– ಜ್ಞಾನದ ಮೂಲಕ ಕರ್ಮಗಳನ್ನು ನಾಶಮಾಡುವ ಸಾಮರ್ಥ್ಯ ಇರುವ ರಾವಣಬ್ರಹ್ಮಯ್ಯನವರು ಆರ್ಯನಾದ ರಾಮನ ಕೈಯಲ್ಲಿ ಮರಣಿಸುವ ಕರ್ಮವನ್ನು ಇಲ್ಲದಂತೆ ಮಾಡಿಕೊಂಡಿದ್ದರೆ ರಾಮನನ್ನು ದೇವರಾಗಿ ಬರೆಯಬೇಕಾದ ಅವಶ್ಯಕತೆ ವಾಲ್ಮೀಕಿಗೆ ಇಲ್ಲದಂತೆ ಇರುತ್ತಿತ್ತು. ಅದರಿಂದ ರಾಮನನ್ನು ಕೃಷ್ಣನನ್ನು ಏಕ ಮಾಡುವ ದೌರ್ಭಾಗ್ಯ ಇಲ್ಲದೇ ಚರಿತ್ರೆ ಇದ್ದರೆ ಈ ಗಾಲಾಟೆಗಳೆ ಇರದೆ ರಾವಣನು ಯಾರೋ ತಿಳಿಯುತ್ತಿತ್ತು.**

**ಉತ್ತರ :–** ಜ್ಞಾನದಿಂದ ಜೀವನದಲ್ಲಿ ನಡೆಯುವ ದುಃಖಗಳನ್ನು ಜಯಿಸಬಹುದು ಆದರೇ ಮರಣವನ್ನು ಯಾರೂ ದಾಟಲಾರರು. ಮರಣ ಯಾವಾಗ ಬರಬೇಕೋ ಆಗಲೇ ಬರುತ್ತದೆ. ಹೇಗೆ ಬರಬೇಕೊ ಹಾಗೆಯೇ ಬರುತ್ತದೆ. ಅದು ತಿಳಿದ ಯೋಗಿಗಳು ಮರಣವನ್ನು ಕುರಿತು ಆಲೋಚಿಸುವುದಿಲ್ಲ. ತಮ್ಮ ಜ್ಞಾನದಿಂದ ಮರಣವನ್ನು ದಾಟಬೇಕೆಂದು ಅಂದುಕೊಳ್ಳುವುದಿಲ್ಲ. ಜ್ಞಾನದಿಂದ ತಮ್ಮ ಕರ್ಮಗಳನ್ನು ಇಲ್ಲದಂತೆ ಮಾಡಬಹುದು. ಹಾಗೇ ಇತರರ ಕರ್ಮಗಳನ್ನು

ಇಲ್ಲದಂತೆ ಮಾಡಬಹುದು ಆದರೇ ತಮ್ಮ ಮರಣವನ್ನಾಗಲಿ, ಇತರರ ಮರಣವನ್ನಾಗಲಿ ಇಲ್ಲದಂತೆ ಮಾಡುವ ಪ್ರಯತ್ನ ಮಾಡುವುದಿಲ್ಲ.

**137) ಪ್ರಶ್ನೆ :– "ಓಂ" ಯಾವ ಭಾಷೆಯೊಳಗಿನದ್ದು?**

**ಉತ್ತರ :–** ಸ್ವಚ್ಛವಾದ ತೆಲುಗು ಭಾಷೆಯೊಳಗಿನದ್ದು. ಮೊದಲು ಹುಟ್ಟಿದ ಭಾಷೆ ತೆಲುಗು ಭಾಷೆ, ತೆಲುಗು ಭಾಷೆಯಲ್ಲಿ ಮೊದಲು ಹುಟ್ಟಿದ ಅಕ್ಷರ "ಓಂ". ಆದ್ದರಿಂದ "ಓಂ" ಎನ್ನುವ ಅಕ್ಷರವನ್ನು ಪ್ರಥಮ ಅಕ್ಷರವೆಂದೂ, ಪ್ರಣವ ಅಕ್ಷರವೆಂದೂ ಹೇಳುತ್ತಿರುತ್ತಾರೆ.

**138) ಪ್ರಶ್ನೆ :– ಉಂಗುರಗಳಲ್ಲಿ, ಹಾರಗಳಲ್ಲಿ ದೇವತಾಮೂರ್ತಿಗಳನ್ನು ಇಟ್ಟು, ಅವುಗಳನ್ನು ಧರಿಸಿದ ಮನುಷ್ಯರು ಅಜ್ಞಾನ ಕೆಲಸಗಳು, ನೀಚವಾದ ಕೆಲಸಗಳು ಮಾಡುವುದರಿಂದ ಪಾಪ ಬರುತ್ತದಾ? ಉಂಗುರಗಳಲ್ಲಿರುವ ಮೂರ್ತಿಗಳಲ್ಲಿ ಸೂಕ್ಷ್ಮಗಳು ಆವರಿಸುತ್ತವಾ?**

**ಉತ್ತರ :–** ಮೂರ್ತಿಗಳು ಎಲ್ಲಿದ್ದರೂ ಅವುಗಳಲ್ಲಿ ಸೂಕ್ಷ್ಮಗಳು ಆವರಿಸುವುದಕ್ಕೆ ಅವಕಾಶವಿದೆ. ಆದರೇ ಅವುಗಳನ್ನು ಧರಿಸಿ ಕೆಲಸಗಳು ಮಾಡುವುದರಿಂದ ಪ್ರತ್ಯೇಕಿಸಿ ಪಾಪ ಬರುತ್ತದೆ ಎನ್ನುವುದು ಏನೂ ಇಲ್ಲ. ಮನುಷ್ಯ ಮಾಡುವ ಕೆಲಸವನ್ನನುಸರಿಸಿ ಇರುವ ಭಾವವನ್ನನುಸರಿಸಿ ಕರ್ಮಗಳು ಬರುವುದು ನಡೆಯುತ್ತಿರುತ್ತದೆ.

**139) ಪ್ರಶ್ನೆ :– ಭಾರತದೇಶದಲ್ಲಿ ಒಟ್ಟಾರೆ ಹದಿನಾರು ಗೀತೆಗಳು ಇವೆ. ಮತ್ತು ಭಗವದ್ಗೀತೆಯನ್ನು ಬರೆಯದಮುನ್ನವೇ ಆ ಗೀತೆಗಳನ್ನು ವ್ಯಾಸನು ಬರೆದಿದ್ದಾನೆ. ಆದರೇ ಗೀತೆ ಎಂದರೇ ಹದ್ದು (ಎಲ್ಲೆ) ಎನ್ನುವ ಅರ್ಥದಿಂದ ಅವುಗಳನ್ನು ಬರೆಯಲಿಲ್ಲ. ಹಾಗೇ ಭಗವದ್ಗೀತೆಯನ್ನು ಕೂಡಾ ಹದ್ದು ಎಂದು ಬರೆದಿರುವುದಿಲ್ಲ. ಗೀತೆ ಎಂದರೇ ಹದ್ದುಯೆಂದು ವ್ಯಾಸನಿಗೆ ತಿಳಿದಿದೆಯಾ?**

**ಉತ್ತರ :–** ವ್ಯಾಸನಿಗೆ ತಿಳಿಯದಿದ್ದರೂ ತಿಳಿದೇ ಬರೆದಿದ್ದಾನೆ ಎಂದು ಹೇಳಬೇಕು.

ಆತನು ಬರೆದಿದ್ದಾನೆ, ಆತನು ಬರೆದಿರುವುದನ್ನನುಸರಿಸಿ ಈದಿನ ಆತನು ಹೇಳದಿದ್ದರೂ ಗೀತೆ ಎಂದರೇ ಹದ್ದು ಎಂದು ತಿಳಿದಿದೆ. ಆತನು ಬರೆದ ವಿಧಾನವನ್ನನುಸರಿಸಿ ಗೀತೆ ಎಂದರೇ ಹದ್ದು ಎಂದು ನಾವು ಹೇಳುತ್ತಿರುವಾಗ ಬಹುಶ ಆತನಿಗೆ ಈ ವಿಷಯ ತಿಳಿದೇ ಇರುತ್ತದೆ. ಆದರೇ ಕೃಷ್ಣನು ತನ್ನ ಗೀತೆಯನ್ನು **'ತೌರಾತು'** ಎನ್ನುವ ಹೆಸರಿನಿಂದ ಇತರರಿಗೆ ಹೇಳಿದ್ದಾನೆ. ತನ್ನ ಗ್ರಂಥಕ್ಕೆ ಭಗವದ್ಗೀತೆಯೆಂದು ವ್ಯಾಸನು ನಾಮಕರಣ ಮಾಡಿದರೂ ಕೃಷ್ಣನು ಭಗವದ್ಗೀತೆಯನ್ನು ಬೇರೆ ದೇಶದಲ್ಲಿ ಮೊಷೇಗೆ (ಮೂಸಾಗೆ) ಕೊಟ್ಟಾಗ ಭಗವದ್ಗೀತೆಯೆಂದು ಹೇಳದೆ ಮೂರು ರಾತ್ರಿಗಳು ಎನ್ನುವ ಅರ್ಥದಿಂದ 'ತೌರಾತ್' ಎಂದು ಹೇಳಿದ್ದಾನೆ.

**140) ಪ್ರಶ್ನೆ :– ಪ್ರಪಂಚ ಸೃಷ್ಠಿಗೆ ಕಾರಣ ಏನು?**

**ಉತ್ತರ :–** ದೇವರ ಸಂಕಲ್ಪ.

**141) ಪ್ರಶ್ನೆ :– ಸಾಲಗ್ರಾಮಗಳನ್ನು ಪರಮಾತ್ಮಗೆ ಚಿಹ್ನೆಯಾಗಿ ಭಾವಿಸಬಹುದಾ?**

**ಉತ್ತರ :–** ಸಂಖ್ಯೆಯಲ್ಲಿ ಒಂಭತ್ತನ್ನು (9), ಶಬ್ದದಲ್ಲಿ "ಓಂ" ನನ್ನು, ದೃಶ್ಯದಲ್ಲಿ ಲಿಂಗವನ್ನು, ಮುದ್ರೆಯಲ್ಲಿ ಕಾಲ ಕರ್ಮ ಚಕ್ರಗಳನ್ನು ಪರಮಾತ್ಮನಾಗಿ ಭಾವಿಸಬೇಕು ಹೊರತು ಉಳಿದ ಯಾವುದನ್ನು ಪರಮಾತ್ಮ ಚಿಹ್ನೆಯಾಗಿ ಭಾವಿಸಬಾರದು.

**142) ಪ್ರಶ್ನೆ :– ದೈವಜ್ಞಾನವನ್ನು ಗುರು ಹೇಳುತ್ತಿರುವಾಗ ಸೂಕ್ಷ್ಮಗ್ರಹಗಳು ಸೇರಿ ಜ್ಞಾನವನ್ನು ಕೇಳುತ್ತವೆ ಅಲ್ಲವೆ! ಅದೇ ವಿಧವಾಗಿ ಅದೇ ಜ್ಞಾನವನ್ನು ಒಬ್ಬ ಜ್ಞಾನಿ ಇತರರಿಗೆ ತಿಳಿಸುವಾಗ ದೇವತೆಗಳಾಗಲಿ ಸೂಕ್ಷ್ಮಗ್ರಹಗಳಾಗಲಿ ಅಲ್ಲಿ ಸೇರುತ್ತವಾ? ಆ ವಿಧಾನ ಗುರು ಹತ್ತಿರವೇ ನಡೆಯುತ್ತದಾ? ಅಥವಾ ಇತರರ ಹತ್ತಿರ ಕೂಡಾ ನಡೆಯುತ್ತದಾ?**

**ಉತ್ತರ :–** ಶ್ರದ್ಧೆ ಇರುವ ಸೂಕ್ಷ್ಮಶರೀರಗಳು ದೈವಜ್ಞಾನವನ್ನು ಯಾರು ಹೇಳಿದರೂ ಅಲ್ಲಿಗೆ ಹೋಗಿ ಕೇಳಬಲ್ಲರು. ಗುರು ಹತ್ತಿರವೇ ಕೇಳಬೇಕೆನ್ನುವ ನಿಯಮವಿಲ್ಲ.

**143) ಪ್ರಶ್ನೆ :– ವಿವಾಹದಲ್ಲಿ ಜೀರಿಗೆ, ಬೆಲ್ಲ ವೊಂದರ ವಿಶಿಷ್ಟತೆ ಏನು?**

**ಉತ್ತರ :–** ಆಧ್ಯಾತ್ಮಿಕ ಅರ್ಥಗಳಲ್ಲಿ ಯಾವುದಕ್ಕಾಗಲಿ ಜೀರಿಗೆ, ಬೆಲ್ಲ ಸರಿಹೋಗುವುದಿಲ್ಲ. ಆದರೇ ಜೀರಿಗೆ ಬೆಲ್ಲವನ್ನು ಸೇರಿಸಿ ತಲೆಮೇಲೆ ಇಡುವ ಸಂಪ್ರದಾಯ ಹಿಂದೂ ವಿವಾಹ ವೇದಿಕೆಗಳಲ್ಲಿ ಮೊದಲಿನಿಂದ ನಡೆಯುತ್ತಿದೆ. ಆ ವಿಷಯ ವಿವಾಹ ಮಾಡುವ ಹಿರಿಯರನ್ನೇ ಕೇಳುವುದು ಒಳ್ಳೆಯದು.

**144) ಪ್ರಶ್ನೆ :– 108 (ಮೂಲಕಗಳನ್ನೇ) 108 ಮಣಿಗಳಾಗಿ ಜಪಮಾಲೆಯಲ್ಲಿ ಇರುವಂತೆ ವಿವರಿಸಿದ್ದಾರೆ. ಮತ್ತು ಕೆಮಿಸ್ಟ್ರಿ ಚಾರ್ಟ್‌ನಲ್ಲಿ 112 ಮೂಲಕಗಳು ಕಂಡುಕೊಂಡಂತೆ ಇವೆ. ಇದಕ್ಕೆ ನಿಮ್ಮ ವಿವರಣೆ ಏನು?**

**ಉತ್ತರ :–** ಜಪಮಾಲೆಯಲ್ಲಿ 108 ಗುಣಗಳಿಗೆ ಗುರುತಾಗಿ 108 ಮಣಿಗಳನ್ನು ಇಟ್ಟ ಹಾಗೆ ಹೇಳಿದ್ದೇವೆ. ಉಳಿದ ಬೇರೆ ಸಂದರ್ಭದಲ್ಲಿ ಆಗ 105 ಮೂಲಕಗಳೇ ಇರುವಾಗ ಇನ್ನೂ ಮೂರನ್ನು ಕಂಡುಕೊಳ್ಳಬಹುದು 108 ಸಂಖ್ಯೆಗೆ ಸರಿಹೋಗುವ ಮೂಲಕಗಳು ಬರಬಹುದೆಂದು ಹೇಳಿದ್ದೇವೆ. ಆದರೇ ಅವು ಈಗ 112 ಆದಂತೆ ನಿಮ್ಮಿಂದಲೇ ನಾನು ಕೇಳುತ್ತಿದ್ದೇನೆ. ಮೂಲಕಗಳು ಒಟ್ಟಾರೆ ಆಧ್ಯಾತ್ಮಿಕ ಸಂಖ್ಯೆಯೊಂದಿಗೆ ಸಂಬಂಧಪಟ್ಟಿರುತ್ತದೆ. ಎನ್ನುವ ಉದ್ದೇಶದಿಂದ ಆ ದಿನ ಹಾಗೆ ಹೇಳಿದ್ದೇವೆ. ಈಗ 112 ಆಗಿರುವುದರಿಂದ ಇನ್ನೂ 8 ಬೆಳೆದು 120 ಸಂಖ್ಯೆಗೆ ಪೂರ್ತಿ ಆಗಬಹುದು ಎಂದು ಅಂದುಕೊಳ್ಳೋಣ.

**145) ಪ್ರಶ್ನೆ:– ಕರ್ಣನ ಜೀವನ ಶಾಪಗ್ರಸ್ಥವಾ?**

**ಉತ್ತರ :–** ಕರ್ಣನ ಜೀವನ ಶಾಪಗಳಿಂದ ತುಂಬಿಕೊಳ್ಳುವುದಕ್ಕೆ ಕಾರಣ ಆತನ ಹಿಂದಿನ ಜನ್ಮ ಕರ್ಮ ಫಲಿತ ಎಂದು ತಿಳಿಯುತ್ತಿದೆ. ಆದ್ದರಿಂದ ಆತನ ಜೀವನ ಕರ್ಮಗ್ರಸ್ಥವೇಯೆಂದು ಹೇಳಬಹುದು.

**146) ಪ್ರಶ್ನೆ :– 'ಬೀಬೀ ನಾಂಚರಮ್ಮ ಕಥೆ' ವೆಂಕಟೇಶ್ವರನ ವಿಷಯದಲ್ಲಿ ನಡೆದಿದೆಯಾ? ಅದಕ್ಕೇ ಮುಸ್ಲಿಮ್‌ರು ವೆಂಕಟೇಶ್ವರನನ್ನು ದರ್ಶಿಸುತ್ತಿದ್ದಾರಾ?**

**ಉತ್ತರ :–** ಮುಸ್ಲಿಮ್‌ರು ವೆಂಕಟೇಶ್ವರನನ್ನು ದರ್ಶಿಸುವುದು ನಾನು ಎಂದೂ ನೋಡಲಿಲ್ಲ. ವಿಗ್ರಹಾರಾಧನೆಗೆ ಅವರು ಬಹಳ ದೂರವಿರುತ್ತಾರೆ. ಇನ್ನು 'ಬೀಬೀ ನಾಂಚರಮ್ಮ ಕಥೆ' ಪೂರ್ತಿ ಕಲ್ಪಿತ ಅದನ್ನು ನಂಬಬಾರದು, ಅಸತ್ಯ.

**147) ಪ್ರಶ್ನೆ :– ಗೋವಿಂದ ನಾಮ ಯಾವಾಗಿನದು?**

**ಉತ್ತರ :–** ಮನುಷ್ಯನ ಹತ್ತಿರ ಏನೂ ಇಲ್ಲದೇ ಹೋದಾಗ ಹೊರಗಿನ ಅರ್ಥದಿಂದ ಹೇಳಬಹುದು. ಆಧ್ಯಾತ್ಮಿಕ ರೀತಿಯಲ್ಲಾದರೆ ಮನುಷ್ಯನಿಗಿರುವ ಕರ್ಮಗಳೆಲ್ಲ ಇಲ್ಲದೇ ಹೋದಾಗ ಗೋವಿಂದ ನಾಮವು ಉಚ್ಛರಿಸಲ್ಪಡುತ್ತದೆ. ಯಾವ ಕಡೆ ನೋಡಿದರೂ ಏನೂ ಇಲ್ಲದ ಸ್ಥಿತಿಯನ್ನು ತಿಳಿಸುವುದು ಗೋವಿಂದ ನಾಮವು.

**148) ಪ್ರಶ್ನೆ :– ದೇವತೆಗಳ ವಾಹನಗಳ ಮರ್ಮವೇನು?**

**ಉತ್ತರ :–** ಮಂತ್ರಗಳಿಂದ ನಡೆಯುವವು ದೇವತೆಗಳ ವಾಹನಗಳು. ಮಂತ್ರಸಿದ್ಧಿ ಯಿಂದ ದೇವತೆಗಳ ವಾಹನ ಗಾಳಿಯಲ್ಲಿ ತೇಲಿಹೋಗುವುದು.

**149) ಪ್ರಶ್ನೆ :– ವೇದಗಳಲ್ಲಿ ಸೈನ್ಸ್ ಎಲ್ಲಾ ಇದೆಯೆನ್ನುತ್ತಿದ್ದಾರೆ, ಅದು ನಿಜವಾ?**

**ಉತ್ತರ :–** ಶುದ್ಧ ಸುಳ್ಳು. 'ವೇದಗಳಲ್ಲಿ ಮಾಯೆ ಇದೆಯೆಂದು' ಭಗವದ್ಗೀತೆ ಹೇಳುತ್ತಿದೆ. ವೇದಗಳಲ್ಲಿ ಸೈನ್ಸು ಸ್ವಲ್ಪವಾದರೂ ಇಲ್ಲವೆಂದು ನಾವು ಹೇಳುತ್ತಿದ್ದೇವೆ. ಸೈನ್ಸು ಇದೆಯೆಂದು ಯಾರಾದರೂ ನಿರೂಪಿಸುತ್ತೀರಾ? ನಿರೂಪಿಸಲಾರರು. ವೇದಗಳಲ್ಲಿ ಮಂತ್ರಗಳಿವೆ. ಮಂತ್ರಸಿದ್ಧಿ ಇದೆ. ಮಂತ್ರಸಿದ್ಧಿ ಯಿಂದ ಕೆಲವು ಕೆಲಸಗಳು ನಡೆಯುತ್ತವೆ ಹೊರತು ಅದು ಯಾವ ಕೋನದಲ್ಲೂ ಸೈನ್ಸು ಅಲ್ಲ.

**150) ಪ್ರಶ್ನೆ :– ಸೃಷ್ಟಿ ಏಕೆ ನಡೆದಿದೆ?**

**ಉತ್ತರ :–** ದೇವರು ಸಂಕಲ್ಪಿಸಿದ ಜಗನ್ನಾಟಕ ನಡೆಯುವುದಕ್ಕೆ ಹೊರತು ಬೇರೆಯಲ್ಲ. ಆದರೇ ಎಲ್ಲರೂ ಪಾತ್ರಗಳನ್ನು ಮರೆತು ಆಡುತ್ತಿದ್ದಾರೆ, ಅಲ್ಲ ಆಡಿಸಲ್ಪಡುತ್ತಿದ್ದಾರೆ. ಜಗನ್ನಾಟಕ ನಿರ್ಮಾಪಕ ದೇವರಾದರೆ, ದರ್ಶಕನು ಆತ್ಮ,

ಪಾತ್ರಧಾರನು ಜೀವಿ. ಸನ್ನಿವೇಶಗಳು ಕಷ್ಟ ಸುಖಗಳು, ಮುಕ್ತಾಯ (ಶುಭಂ) ಮೋಕ್ಷ. ಮುಕ್ತಾಯವಾದರೂ ಮೋಕ್ಷ ಬರುವುದಿಲ್ಲ. ನಾಟಕ ಮುಗಿಯುವುದಿಲ್ಲ ಆಡಿಸುವ ದರ್ಶಕನು ಆಟವನ್ನು ನಿಲ್ಲಿಸುವುದಿಲ್ಲ, ಪ್ರಾತ್ರಧಾರನು ತನ್ನನ್ನು ತಾನು ಮರೆತುಹೋಗಿ ನಾಟಕದಲ್ಲಿ ಲಗ್ನವಾಗಿಹೋಗಿದ್ದಾನೆ. ಜೀವಿಯನ್ನು ಜ್ಞಾಪಕ ಮಾಡಬೇಕೆಂದು ಪಾತ್ರಧಾರಿಯಾಗಿಯೇ ಆಡಿರೆಂದು ಹೇಳುವ ಪ್ರಯತ್ನದಲ್ಲಿ ಆಗಾಗ ಜ್ಞಾಪಕ ಮಾಡುವ ಜ್ಞಾನವನ್ನು ಹೇಳಿದರೂ ಅವನು ಕೇಳುವ ಸ್ಥಿತಿಯಲಿಲ್ಲ. ನಿರ್ಮಾಪಕ ನೋಡುತ್ತಾ ಕುಳಿತಿದ್ದಾನೆ. ಈ ಜಗನ್ನಾಟಕ ಈಗಲೇ ಮುಗಿಯುವಂತಿಲ್ಲ.

**151) ಪ್ರಶ್ನೆ :– ಅಮೀಬ, ಮಾನವನು ಒಂದೇಬಾರಿ ಜನ್ಮಿಸಿದ್ದಾರಾ?**

**ಉತ್ತರ :–** ಜೀವ ಪರಿಣಾಮ ಸಿದ್ಧಾಂತವನ್ನು ಕಂಡುಕೊಂಡ ಶಾಸ್ತ್ರಜ್ಞರು ಮೊದಲು ಅಮೀಬ ಎನ್ನುವ ಏಕಕಣ ಜೀವಿ ಹುಟ್ಟಿದೆಯೆಂದು ಅದರ ನಂತರ ಪರಿಣಾಮ ಕ್ರಮದಲ್ಲಿ ಎಲ್ಲರೂ ಹುಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಶಾಸ್ತ್ರಜ್ಞರು ಎನ್ನುವ ಬಿರುದನ್ನನುಸರಿಸಿ ಎಲ್ಲರೂ ಅವರ ಮಾತನ್ನೇ ನಂಬುತ್ತಿದ್ದಾರೆ. ಮನುಷ್ಯನಿಗೆ ಎಂದರೆ ಜೀವಿಗೆ ಏನೂ ತಿಳಿದಿಲ್ಲ ಎಂದು ಮೊದಲೇ ಹೇಳಿಕೊಂಡಿದ್ದೇವೆ. ಮನುಷ್ಯನೊಳಗಿರುವ ಬುದ್ಧಿ ಏನು ಹೇಳಿದರೆ ಅದನ್ನು ಮನುಷ್ಯ ಹೊರಗೆ ಹೇಳುತ್ತಾನೆ. ಬುದ್ಧಿಗೆ ಆತ್ಮ ನೀಡುವ ವಿಷಯಗಳೇ ತಿಳಿಯುತ್ತವೆ. ಆತ್ಮ ನೀಡಿರುವುದೇ ಸಿದ್ಧಾಂತ. ಒಂದು ಹೊಸ ವಿಷಯವನ್ನು ಕಂಡುಕೊಳ್ಳ ಬೇಕೆಂದರೆ ಆತ್ಮ ಹೇಳಿದರೆ ಮನುಷ್ಯನಿಗೆ ತಿಳಿಯುತ್ತಿದೆ ಆದರೇ ಮನುಷ್ಯ ಕಂಡುಕೊಳ್ಳಲಾರನು. ಆತ್ಮ ನೀಡಿರುವುದನ್ನು ತನ್ನ ಬುದ್ಧಿ ಮೂಲಕ ತಿಳಿದಾಗ ಮನುಷ್ಯ ತಾನೇ ಸ್ವತಃವಾಗಿ ಕಂಡುಕೊಂಡಿದ್ದೇನೆಂದು ಹೇಳಿ ಕೊಳ್ಳುತ್ತಿದ್ದಾನೆ. ಮಾನವನಿಗೆ ಸುಖಗಳನ್ನು ನೀಡುವ ನಿಮಿತ್ತ ಹೊಲಿಗೆ ಮಿಷನ್‌ನಿಂದ ಹಿಡಿದು ಪ್ರತಿ ಯಂತ್ರ ನಮೂನೆಯನ್ನು ಒಳಗಿನ ಆತ್ಮ ತಿಳಿಸಿದಾಗ, ಅದರ ಪ್ರಕಾರ ಮಾಡಿ ಹೊರಗೆ ತಯಾರಾಗಿರುವುದನ್ನು ತಾನೇ ಕಂಡುಕೊಂಡಿದ್ದೇ ನೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ಈ ವಿಧವಾಗಿ ಕಂಪ್ಯೂಟರ್‌ಗಳವರೆಗು,

ಆಕಾಶದಲ್ಲಿ ವೇಗವಾಗಿ ಹೋಗುವ ರಾಕೆಟ್‌ಗಳವರೆಗು ಯುದ್ಧರಂಗದಲ್ಲಿ ಮಿಸೈಲ್ಸ್ ವರೆಗು ಕಂಡು ಕೊಂಡಿದ್ದೇವೆ. ಅವುಗಳನ್ನು ವಿನಿಯೋಗಿಸಿಕೊಂಡು ಬದುಕುತ್ತಿದ್ದೇವೆ. ಇಷ್ಟು ಯಂತ್ರಗಳನ್ನು ಅವುಗಳ ನಮೂನೆಯನ್ನು ಮನುಷ್ಯನ ಬುದ್ಧಿಗೆ ನೀಡಿದವನು ನಮ್ಮಲ್ಲಿನ ಆತ್ಮವೆಂದು ಯಾರೂ ಅಂದುಕೊಳ್ಳುತ್ತಿಲ್ಲ. ಹೊರಗಿನ ಯಂತ್ರಗಳನ್ನು ಎಷ್ಟೋ ಊಹೆಗೆ ತಿಳಿಯದಿರುವವನ್ನು ಒದಗಿಸಿದ ಆತ್ಮ ತನ್ನ ಆಧ್ಯಾತ್ಮಿಕ ವಿಷಯವನ್ನು ಸಕ್ರಮವಾಗಿ ನೀಡುತ್ತಿಲ್ಲ. ತಾನು ಎಲ್ಲಾ ಮಾಡುತ್ತಿದ್ದರೂ ತಾನು ಯಾರಿಗೂ ತಿಳಿಯಲ್ಪಡಬಾರದೆಂದು ಆತ್ಮದ ಅಭಿಪ್ರಾಯ.

ತನಗೆ ಸಂಬಂಧಿಸಿದ ವಿಷಯಗಳಲ್ಲಿ ಮೊದಲೇ ತಪ್ಪುದಾರಿ ಹಿಡಿಸಿ ಎಲ್ಲರ ದೃಷ್ಠಿ ಪಕ್ಕಕ್ಕೆ ತಿರುಗಿಸಬೇಕೆಂದು ಆತನ ಉದ್ದೇಶ. ಆದ್ದರಿಂದ ಮೊದಲೇ ಜೀವ ಪರಿಣಾಮ ಸಿದ್ಧಾಂತವನ್ನು ಮನುಷ್ಯನಿಗೆ ಕಲಿಸಿದವನು ಆತ್ಮ. ತನ್ನ ವಿಷಯದಲ್ಲಿ ತಪ್ಪುದಾರಿ ಹಿಡಿಸುತ್ತಾನೆಂದು ಹೇಳಿದಂತೆ ಮೊದಲು ಮನುಷ್ಯ ಹುಟ್ಟಲಿಲ್ಲವೆಂದು, ಅಮೀಬದಂತಹ ಏಕಕಣ ಜೀವಿಗಳು ಹುಟ್ಟಿವಿಯೆಂದು ಅವುಗಳಿಂದ ಪರಿಣಾಮ ಕ್ರಮದಲ್ಲಿ ಮನುಷ್ಯ ಹುಟ್ಟಿದ್ದಾನೆಂದು ಹೇಳುತ್ತಿರುತ್ತಾರೆ. ಜೀವ ಪರಿಣಾಮ ಸಿದ್ಧಾಂತ ಎನ್ನುವುದು ತಪ್ಪೆಂದು ನಾನು ಕಳೆದ 40 ವರ್ಷಗಳಿಂದ ಹೇಳುತ್ತಿದ್ದೇನೆ. ಮೊದಲು ಮನುಷ್ಯ ಸೃಷ್ಠಿಸಲ್ಪಟ್ಟಿದ್ದಾನೆ. ಮನುಷ್ಯನ ನಂತರ ಚಿಕ್ಕ ದೊಡ್ಡ ಜೀವಿಗಳೆಲ್ಲ ಹುಟ್ಟಿವೆ. ಆ ಕ್ರಮದಲ್ಲಿಯೇ ಮನುಷ್ಯ ಹುಟ್ಟಿದ ನಂತರ ಬಹಳ ದಿನಗಳಿಗೆ ಅಮೀಬ ಕ್ರೀಮಿ ಹುಟ್ಟಿದೆ. ಆದ್ದರಿಂದ ಅಮೀಬ ಮನುಷ್ಯ ಯಾರೂ ಮೊದಲು ಹುಟ್ಟಿದ್ದಾರೆ ಎಂದು ಕೇಳಿದರೆ ಮನುಷ್ಯ ಎಂದು ಹೇಳಬಹುದು.

**152) ಪ್ರಶ್ನೆ :– ದೇವರಿದ್ದಾನೆಂದು ತಿಳಿಸುವುದಕ್ಕೆ ಸೃಷ್ಠಿ ನಡೆದಿದೆಯಾ?**

**ಉತ್ತರ :–** ಅಲ್ಲ ದೇವರ ಸೃಷ್ಠಿ ಎಂದರೇ ಹೀಗೆ ಇರುತ್ತದೆ ಎಂದು ಎಲ್ಲರೂ ತಿಳಿಯುವುದಕ್ಕೆ ಸೃಷ್ಠಿ ನಡೆದಿದೆ. ಸೃಷ್ಠಿ ನಡೆದ ನಂತರ ಸೃಷ್ಠಿ ಎಷ್ಟು ವಿಚಿತ್ರವಾಗಿ ದೆಯೋ ಸ್ವಲ್ಪಸ್ವಲ್ಪ ಈಗೀಗಲೇ ಮನುಷ್ಯನಿಗೆ ಅರ್ಥವಾಗುತ್ತಿದೆ. ಕೆಲವರಿಗಾದರೆ ಸ್ವಲ್ಪವೂ ಅರ್ಥವಾಗಲಿಲ್ಲ.

**153) ಪ್ರಶ್ನೆ :– ಕರ್ಮದಿಂದ ಜನ್ಮಬಂದರೆ, ಯಾವ ಕರ್ಮವಿಲ್ಲದ ಸ್ಥಿತಿಯಲ್ಲಿ ಸೃಷ್ಠಿ ನಡೆಸಿ ಬಲವಂತವಾಗಿ ಕರ್ಮವನ್ನು ಅಂಟಿಸುವುದು ತಿಳುವಳಿಕೆ ಇಲ್ಲದ ಕೆಲಸವಲ್ಲವೇ?**

**ಉತ್ತರ :–** ಮೇಲ್ನೋಟಕ್ಕೆ ತಿಳುವಳಿಕೆ ಇಲ್ಲದ ಕೆಲಸದಂತೆ ಕಾಣಿಸುತ್ತಿದ್ದರೂ ಆಲೋಚಿಸಿದರೆ ಎಷ್ಟೋ ಪ್ರಣಾಳಿಕಾ ಬದ್ಧವಾಗಿ ಸೃಷ್ಠಿಯನ್ನು ದೇವರು ತಯಾರು ಮಾಡಿದ್ದಾನೆಂದು ತಿಳಿಯುತ್ತಿದೆ. ತಾನು ಕೆಲಸ ಮಾಡದಿರುವಾಗ ಮನುಷ್ಯರ ಸೃಷ್ಠಿ ನಡೆಯುವುದಕ್ಕೆ ಕರ್ಮವನ್ನು ಏರ್ಪಡಿಸಿದ್ದಾನೆ. ವಾಸ್ತವವಾಗಿ ಕರ್ಮವಿಲ್ಲದ ಸಮಯದಲ್ಲಿ ಮನುಷ್ಯನನ್ನು ತಯಾರು ಮಾಡುವುದು ದೊಡ್ಡ ಕೆಲಸವಾಗಿದೆ. ಸೃಷ್ಠಿ ನಂತರ ದೇವರು ತನ್ನ ಧರ್ಮದ ಪ್ರಕಾರ ಕೆಲಸ ಮಾಡದವನಾಗಿರುವುದರಿಂದ ಮನುಷ್ಯನನ್ನು ಹುಟ್ಟಿಸುವವನು ಯಾರೂ ಇಲ್ಲವೆಂದು, ಮನುಷ್ಯನನ್ನು ಸೃಷ್ಠಿಸುವುದಕ್ಕೆ ತನ್ನ ಬದಲು ಕರ್ಮವನ್ನು ಅಧಿಪತಿಯಾಗಿ ಇಟ್ಟಿದ್ದಾನೆ. ಜನ್ಮಗಳು ಪುನಃ ಪುನಃ ಉಂಟಾಗುವುದಕ್ಕೆ ಕರ್ಮವೇ ಕಾರಣ. ಕರ್ಮವನ್ನು ಅನುಸರಿಸಿ ಆತ್ಮ ಕೆಲಸ ಮಾಡುವಂತೆ ದೇವರೇ ತಯಾರು ಮಾಡಿದ್ದಾನೆ. ದೇವರು ಮನುಷ್ಯನನ್ನು ಸೃಷ್ಠಿಸಿದ ನಂತರ ದೇವರು ಸೃಷ್ಠಿಸುತ್ತಿಲ್ಲ. ಕರ್ಮವನ್ನನುಸರಿಸಿ ಆತ್ಮವೇ ಮನುಷ್ಯನನ್ನು ನಂತರದ ಜನ್ಮಗಳಿಗೆ ಕಳಿಸುತ್ತಿದೆ. ದೇವರು ಮನುಷ್ಯನನ್ನು ಸೃಷ್ಠಿಸಿರುವುದಕ್ಕೆ ಆಟದ ಪ್ರಕಾರ ಜೀವನ ಇದೆಯೆಂದು ತಿಳಿಸಿ ಆ ಕರ್ಮದಿಂದ ಹೊರಬೀಳುವುದಕ್ಕೆ ಬೇಕಾದ ಜ್ಞಾನವನ್ನು ಕೂಡಾ ನೀಡಿದ್ದಾನೆ. ಆದರೇ ದೇವರ ಜ್ಞಾನವನ್ನು ಮನುಷ್ಯ ತಿಳಿದುಕೊಳ್ಳಲಾರದೆ ಹೋಗಿದ್ದಾನೆ. ದೇವರು ಮಾಡಿರುವುದು ಒಂದು ವಿಧವಾಗಿ ಅನ್ಯಾಯದ ಕೆಲಸವೇ ಎಂದು ಹೇಳಬಹುದು. ಮನುಷ್ಯನಿಗೆ ತಿಳಿದ ವಿಧಾನದಲ್ಲಿ ಮನುಷ್ಯನನ್ನು ಸೃಷ್ಠಿಸುವುದು ದೇವರ ತಪ್ಪು ಎಂದು ತಿಳಿಯುತ್ತಿದ್ದರೂ, ದೇವರ ಕಡೆಯಿಂದ ನೋಡಿದರೆ, ದೇವರ ವಿಧಾನದ ಪ್ರಕಾರ ದೇವರು ಮಾಡಿರುವುದು ದೊಡ್ಡ ಕೆಲಸವೆಂದು, ದೇವರು ಸೃಷ್ಠಿಸದೆ ಹೋದರೆ ನೀನು ಎನ್ನುವವನು ಇಲ್ಲದಂತಿರುತ್ತಿದ್ದೆ ಅಲ್ಲವೇ! ಈದಿನ ನಾನಿದ್ದೇನೆಂದು ನಿನ್ನನ್ನು ನೀನು ತಿಳಿದು

ಕೊಳ್ಳುತ್ತಿದ್ದೀಯಾ. ನಿನ್ನ ಅಡ್ರಸ್ ಇದು ಎಂದು ತಿಳಿಯಲ್ಪಡುತ್ತಿದೆ. ನೀನು ಎನ್ನುವವನು ಒಬ್ಬನಿದ್ದೀಯಾ ಎಂದು ತಿಳಿಯುತ್ತಿದೆ. ಕಷ್ಟವೋ ಸುಖವೋ ನೀನು ಬದುಕಿದವನಾಗಿ ಇದ್ದೇನೆಂದು ತಿಳಿಯುವುದು ಒಳ್ಳೆಯದಾ? ಇಲ್ಲವೆಂದು ಸತ್ತವನಂತಿದ್ದು ನಿನ್ನ ಅಡ್ರಸ್ ನಿನಗೆ ತಿಳಿಯದೆ ಭೂಮಿಯಲ್ಲಿ ಕಲ್ಲಿನಂತೆ ಇರುವುದು ಒಳ್ಳೆಯದಾ ನೀವೇ ಆಲೋಚಿಸಿಕೊಳ್ಳಿ. ಸೃಷ್ಠಿ ಇದೆ ಆದ್ದರಿಂದ ಈ ದಿನ ನೀನು ಹೀರೊಹಾಗೆ ಇದ್ದೀಯಾ. ಸೃಷ್ಠಿ ಇಲ್ಲದಿದ್ದರೆ ನೀನು ಜೀರೋ ಹಾಗೆ ಇರುತ್ತಿದ್ದೆ. ನೀನು ಹುಟ್ಟಿರುವುದು ಒಳ್ಳೆಯದೇಯೆಂದು ಹುಟ್ಟಿದ ಹಬ್ಬವನ್ನು ಮಾಡಿಕೊಳ್ಳುತ್ತಿದ್ದೀಯಾ. ಒಂದುವೇಳೆ ಹುಟ್ಟದೆ ಹೋಗಿದ್ದರೆ ನಿನಗೆ ಹಬ್ಬವೇ ಇಲ್ಲವಲ್ಲ! ಒಳ್ಳೆಯದಾಗಿ ಬದುಕುವುದಕ್ಕೆ ದೇವರು ಪುಣ್ಯವನ್ನು ಕೂಡಾ ಕೊಟ್ಟಿದ್ದಾನೆ. ನೀನು ಪುಣ್ಯವೇ ಮಾಡು ಪುಣ್ಯದಿಂದ ಸುಖವನ್ನು ಅನುಭವಿಸು. ಇವೆಲ್ಲ ನೋಡಿದರೆ ಸೃಷ್ಠಿಸಿದ ದೇವರನ್ನು ಹೊಗಳದಂತೆ ಇರಲಾರೆವು. ಯಾವುದೊ ಒಂದು ಮಾತನಾಡಬೇ ಕೆಂದುಕೊಂಡರೆ, ದೇವರು ಬುದ್ಧಿ ಇಲ್ಲದವನೆಂದು ನಮಗೆ ಬುದ್ಧಿಯಿಲ್ಲದೆ ಹೇಳುತ್ತಿದ್ದೇವೆ. ದೇವರಿಗೆ ಮನುಷ್ಯನಂತೆ ಬುದ್ಧಿ ಇರುವುದಿಲ್ಲವೆಂದು ತಿಳಿದಿಲ್ಲ. ಆದ್ದರಿಂದ 'ದೇವರಿಗೆ ಬುದ್ಧಿ ಇದೆಯಾ' ಎಂದು ಅನ್ನುತ್ತಿರುತ್ತೇವೆ.

**154) ಪ್ರಶ್ನೆ :– ನೀವು ಹೇಳಿದ ಜ್ಞಾನ ಸರ್ವಜೀವರಾಶಿಗಳಿಗೆಂದು ಹೇಳಿದಾಗ ಅಮೀಬಾದಂತಹ ಜೀವಿಗಳು ಹೇಗೆ ಗ್ರಹಿಸುತ್ತವೆ?**


**ಉತ್ತರ :–** ನಾವು ಹೇಳುವ ಜ್ಞಾನ ಸರ್ವಜೀವರಾಶಿಗಳಿಗೆ ಅನ್ವಯಿಸುತ್ತದೆಂದು ಹೇಳಿದ ಮಾತು ವಾಸ್ತವ. ಅನ್ವಯಿಸುವುದು ವಾಸ್ತವವೇ ಆದರೂ ಎಲ್ಲರೂ ಗ್ರಹಿಸುತ್ತಾರೆಂದು ನಾವು ಕೂಡ ಹೇಳಲಿಲ್ಲ. ಜ್ಞಾನ ಎಲ್ಲರಿಗೂ ಸಮಾನವಾಗಿ ಅನ್ವಯಿಸುವುದಕ್ಕೇ ದೇವರು ಸೃಷ್ಠಿ ಆದಿಯಲ್ಲಿಯೇ ಜ್ಞಾನವನ್ನು ಹೇಳುವುದಾಗಿದೆ ಆದರೇ ಮನುಷ್ಯರು ಹೇಳುವುದು ಪ್ರಾಣಿಗಳು, ವೃಕ್ಷಗಳು, ಅಮಿಬಾದಂತಹ ಜೀವಿಗಳು ಗ್ರಹಿಸಲಾರವು.

**155) ಪ್ರಶ್ನೆ :– ನೀವು ಹೇಳಿದ ಗುಣವಿಕಾರ ಭಾಗಗಳು 108, ಏಕಕಣ ಜೀವಿಗಳ ತಲೆಯಲ್ಲಿ ಇರುತ್ತವಾ? ಅವುಗಳಿಗೆ ತಲೆ ಇಲ್ಲವಲ್ಲ! ಮತ್ತು ಅವುಗಳಲ್ಲಿ ಕಾಲ ಕರ್ಮ ಚಕ್ರಗಳ ಸ್ಥಾನ ಎಲ್ಲಿ ಇದೆ? ಗಿಡಗಳು, ವೃಕ್ಷಗಳಲ್ಲಿ ಏಳು ಚಕ್ರಗಳ ಸ್ಥಾನ ಯಾವುದು?**


**ಉತ್ತರ :–** ಜೀವರಾಶಿಗಳ ಶರೀರ ನಿರ್ಮಾಣಗಳನ್ನನುಸರಿಸಿ, ಅವುಗಳ ಗುಂಪುಗಳನ್ನನುಸರಿಸಿ ಹುಟ್ಟುವುದು ಅಂಡಜ, ಪಿಂಡಜ, ಉದ್ಭಿಜಗಳು ಎನ್ನುವ ಮೂರು ವಿಧಗಳಾಗಿ ವಿಭಜಿಸಬಹುದು. ಆದರೇ ಅವುಗಳಲ್ಲಿರುವ ಅನೇಕ ವಿಧಾನಗಳನ್ನು ಅನುಸರಿಸಿ 84 ಲಕ್ಷಗಳ ವಿಧಗಳಾಗಿ ಹಿರಿಯರು ವಿಭಜನೆ ಮಾಡಿದ್ದಾರೆ. 84 ಲಕ್ಷಗಳ ವಿಧಗಳಲ್ಲಿ ಎಲ್ಲದಕ್ಕು ಶರೀರ ನಿರ್ಮಾಣ ಒಂದೇ ವಿಧವಾಗಿಲ್ಲ. ಅವುಗಳೆಲ್ಲವುಗಳಲ್ಲಿ ಆತ್ಮಶಕ್ತಿ ನಾಲ್ಕು ವಿಧಗಳು ಪ್ರವಹಿಸುತ್ತಿದೆ. ಅವುಗಳನ್ನು ಕುರಿತು ಹೇಳಿಕೊಂಡರೆ ಕೆಲವು ಬೆನ್ನುಮೂಳೆ ಇಲ್ಲದಿರುವವು ಕೂಡಾ ಇವೆ. ಕೆಲವುಗಳಲ್ಲಿ ನಾಡಿವ್ಯವಸ್ಥೆ ಕಾಣಿಸುವುದಿಲ್ಲ. ಕೆಲವುಗಳ ನಿರ್ಮಾಣವನ್ನನುಸರಿಸಿ ಯಾವಕಡೆ ಹೇಳಲಾರೆವು. ಅವು ಹೇಗಿದ್ದರೂ ಅವುಗಳ ಶರೀರಗಳಲ್ಲಿ ಜೀವಿಯು ಇದ್ದರೆ, ಆತ್ಮ ಕೂಡಾ ಇರುತ್ತದೆ. ಆತ್ಮಯಿದ್ದರೆ ಪರಮಾತ್ಮ ಕೂಡಾ ಇರುತ್ತದೆ. ಆತ್ಮ ಪ್ರವಾಹಗಳು ನಾಲ್ಕು ವಿಧಗಳು ಹೇಗೆ ಇವೆಯೋ ಸೂಚನೆಪ್ರಾಯವಾಗಿ ತಿಳಿದರೆ ಹೀಗೆ ಕೆಳಗೆ ತೋರಿಸಿದ ವಿಧವಾಗಿದೆ.




ಈ ವಿಧವಾಗಿ ಕೆಳಗೆ ಆತ್ಮಶಕ್ತಿ ಪ್ರವಾಹವಾಗಿ ಹೋಗುವ ಜೀವಿಗಳಲ್ಲಿ ಮನುಷ್ಯರು ಒಬ್ಬರು ಮಾತ್ರ ಇದ್ದಾರೆ. ಮನುಷ್ಯರು ಮೇಲಿಂದ ಕೆಳಗೆ ಬೆಳೆಯುತ್ತಿದ್ದಾರೆ.



ಚಿತ್ರದಲ್ಲಿ ತೋರಿಸಿದಂತೆ ಶಕ್ತಿ ಪ್ರವಾಹ ಅಡ್ಡವಾಗಿ ಪ್ರವಹಿಸುತ್ತಿರುತ್ತದೆ. ಅಂತಹ ಜೀವಿಗಳು ಭೂಮಿ ಮೇಲೆ ಎಲ್ಲದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಪಶುಗಳು, ಪ್ರಾಣಿಗಳೇ ಅಲ್ಲದೇ, ಮೀನುಗಳು ಮೊದಲಾದವು ಇವೆ. ಈ ವಿಧದ ಜೀವಿಗಳು ಅಡ್ಡವಾಗಿ ಬೆಳೆಯುತ್ತಿರುತ್ತವೆ.



ಈ ವಿಧಗಳ ಪ್ರವಾಹವಿರುವ ಪ್ರಾಣಿಗಳು ವೃಕ್ಷಗಳು, ಗಿಡಗಳು, ಬಳ್ಳಿಗಳು ಮೊದಲಾದವು ಇವೆ. ಈ ವಿಧದ ಜೀವಿಗಳು ಕೆಳಗಿನಿಂದ ಮೇಲಕ್ಕೆ ಬೆಳೆಯುವವು ಇವೆ.



ಪಕ್ಷಿಗಳ ಜಾತಿಗಳಲ್ಲಿ ಯಾವಕಡೆ ವಾಲಿದರೂ ಶಕ್ತಿ ಪ್ರವಹಿಸುತ್ತಿರುತ್ತದೆ. ಇವೆಲ್ಲ ಪಕ್ಷಿ ಜಾತಿಗಳೇ ಆಗಿರುತ್ತವೆ. ಈ ವಿಧದ ಜೀವಿಗಳು ಬೆಳೆಯುವುದು ಮೇಲಿಂದ ಕೆಳಕ್ಕೇ ಆದರೂ ಮನುಷ್ಯರಂತೆ ಅಲ್ಲದೇ ಯಾವಕಡೆ ವಾಲಿದರೂ ಬೆಳೆಯುತ್ತಿರುತ್ತಾರೆ.

ಈ ವಿಧವಾಗಿ ಬೆಳೆಯುವುದರಲ್ಲಿ ನಾಲ್ಕು ವಿಧಗಳಾಗಿರುವ ಜೀವರಾಶಿಗಳಲ್ಲಿ ಜ್ಞಾನ ಎಲ್ಲವುದಕ್ಕು ಸಮಾನ. ನಮ್ಮ ಶರೀರ ವಿಷಯವೇ ನಮಗೆ ಸಂಪೂರ್ಣವಾಗಿ ತಿಳಿಯದಿರುವಾಗ ಅವುಗಳ ವಿಷಯ ತಿಳಿದಿಲ್ಲವೆಂದೇ ಹೇಳಬಹುದು. ದೇವರು ಹೇಳಿದ ಜ್ಞಾನ ಜೀವವಿರುವ ಎಲ್ಲವುಗಳಿಗು ಅನ್ವಯಿಸುತ್ತದೆ. ದೇವರು ಜೀವಿಯನ್ನು ಆತ್ಮವನ್ನು ಕುರಿತು ಹೇಳುವುದರಿಂದ

ಜೀವಾತ್ಮ, ಆತ್ಮಗಳು ಎಲ್ಲಾ ಶರೀರಗಳಲ್ಲಿ ಇರುವುದರಿಂದ, ಶರೀರ ನಿರ್ಮಾಣಗಳನ್ನು ಅನುಸರಿಸಿ ಹೇಳದೇ ಹೋಗುವುದರಿಂದ ದೇವರ ಜ್ಞಾನ ಎಲ್ಲಾ ಜೀವಿಗಳಿಗು ಅನ್ವಯಿಸುತ್ತದೆಂದು ತಿಳಿಯುತ್ತಿದೆ. ಕಾಲ ಕರ್ಮ ಚಕ್ರಗಳು, ಗುಣ ಭಾಗಗಳು ಇಂತಹ ಕಡೆ ಇವೆಯೆಂದು ತೋರಿಸಲಾರೆವು. ಹಾಗೇ ಗುಣ ವಿಭಾಗಗಳು ಎಲ್ಲಿವೆಯೆಂದು ಕೂಡಾ ಹೇಳಲಾರೆವು. ನಾವು ಹೇಳಿದರೂ, ಹೇಳದಿದ್ದರೂ ಅವುಗಳಲ್ಲಿ ನಮಗಿರುವವೇ ಇರುತ್ತವೆ. ನಮಗೆ ಹೇಳಿದ ಜ್ಞಾನವೇ ಅವುಗಳಿಗೆ ಸರಿಹೋಗುತ್ತದೆ.

**156) ಪ್ರಶ್ನೆ :– ಏಳು ಗ್ರಂಥಿಗಳು, ಏಳು ನಾಡಿಕೇಂದ್ರಗಳ ಜ್ಞಾನ ಮಾನವರಿಗೇ ವರ್ತಿಸಿದರೇ ಸರ್ವಜೀವಿಗಳಿಗೆ ಭಗವದ್ಗೀತೆ ಹೇಗೆ ವರ್ತಿಸುತ್ತದೆ?**

**ಉತ್ತರ :–** ಇತರೆ ಜೀವರಾಶಿಗಳ ಶರೀರಗಳಲ್ಲಿ ಏಳು ನಾಡಿಕೇಂದ್ರಗಳು ಇಲ್ಲದಿದ್ದರೂ, ಏಳು ಗ್ರಂಥಿಗಳು ಇಲ್ಲದಿದ್ದರೂ ಅವುಗಳಿಗೆ ತಕ್ಕ ವಿಧವಾಗಿ ನಿರ್ಮಾಣ ಮಾಡಲ್ಪಟ್ಟಿರುತ್ತದೆ. ಆಧ್ಯಾತ್ಮಿಕ ಜ್ಞಾನವೆಲ್ಲವೂ **ಜೀವಾತ್ಮ, ಆತ್ಮ, ದೇವರು** ಎನ್ನುವ ಮೂವರ ಪುರುಷರ ಮೇಲೆ ಆಧಾರಪಟ್ಟಿರುವುದರಿಂದ ಭಗವದ್ಗೀತೆ ಜ್ಞಾನ ಎಲ್ಲರಿಗೂ ಅರ್ಥವಾಗುತ್ತದೆ, ಎಲ್ಲರಿಗೂ ಅನ್ವಯಿಸುತ್ತದೆ.

**157) ವೃಕ್ಷಗಳಲ್ಲಿ ಕ್ರೆಸ್ಕೋಗ್ರಾಫ್ ಎನ್ನುವ ಪರಿಕರದ ಮೂಲಕ ಗಿಡಗಳ ಭಾವನೆಗಳನ್ನು ದಾಖಲೆ ಮಾಡುತ್ತಿದ್ದಾರೆ. ನೋವನ್ನು ಜೀವಿಯು ಅನುಭವಿಸುವಂತೆ ಮಾಡುವ ಆತ್ಮ ಹೊರಗೆ ಗುರು ಹೇಳುವ ಜ್ಞಾನವನ್ನು ಗಿಡದಲ್ಲಿರುವ ಜೀವಿಗೆ ಒದಗಿಸುತ್ತದಾ? ಅಥವಾ ಗಿಡಗಳೇ ಸ್ವತಃವಾಗಿ ಗ್ರಹಿಸುತ್ತಿವೆಯಾ? ಏಕಕಣ ಜೀವಿಯಲ್ಲಿ ಕೂಡಾ ಆತ್ಮೇ ಜ್ಞಾನವನ್ನು ಒದಗಿಸುತ್ತದಾ? ಅಥವಾ ಸ್ವತಃವಾಗಿ ಅವುಗಳೆ ತಿಳಿಯುತ್ತವಾ?**

**ಉತ್ತರ :–** ಗಿಡಗಳಿಗೆ ಸುಖಗಳು, ಕಷ್ಟಗಳು, ಬಾಧೆಗಳು, ಸಂತೋಷಗಳು ಇರುವುದು ವಾಸ್ತವವೇ. ಅವುಗಳನ್ನು ಆತ್ಮವೇ ನೀಡುತ್ತಿದೆ. ಆತ್ಮ ಇಲ್ಲದ್ದು ಯಾವುದು ಯಾವ ಜೀವರಾಶಿಗು ಸಿಗುವುದಿಲ್ಲ, ಯಾವ ಶರೀರದಲ್ಲಿ

ಜೀವಿಗಾದರೂ ಸುಖದುಃಖಗಳನ್ನಾದರೂ, ಜ್ಞಾನವನ್ನಾದರೂ ಆತ್ಮವೇ ನೀಡಬೇಕೆಂದು, ಹಾಗೆ ಆಗದೆಹೋದರೆ ಯಾವ ಜೀವಿಗು ಏನೂ ಸಿಗುವುದಿಲ್ಲವೆಂದು ತಿಳಿಯುತ್ತಿದೆ. ಏಕಕಣ ಜೀವಿಗಾದರೂ, ಬಹುಕಣ ಜೀವಿಗಾದರೂ ಆತ್ಮದಿಂದಲೇ ಎಲ್ಲಾ ನಡೆಯುತ್ತವೆ.

**158) ಪ್ರಶ್ನೆ :– ಪ್ರಾಣಿಗಳಲ್ಲಿ ಏನು ಲೋಪವಿರುವುದರಿಂದ ಮಾತನಾಡಲಾರದೆ ಹೋಗುತ್ತಿವೆ?**

**ಉತ್ತರ :–** ಮನುಷ್ಯ ಮಾತನಾಡುತ್ತಿದ್ದಾನೆ, ಪ್ರಾಣಿಗಳು ಮಾತನಾಡಲಿಲ್ಲ. ಆದರೂ ಮನುಷ್ಯನಿಗೆ ಬಂದಿರುವ ಲಾಭವಿಲ್ಲ. ಪ್ರಾಣಿಗೆ ಬಂದಿರುವ ನಷ್ಟವು ಇಲ್ಲ. ಮನುಷ್ಯ ಪ್ರಾಣಿಗಳಿಗಿಂತ ಹೆಚ್ಚಾಗಿ ಪಾಪ ಮಾಡಿಕೊಂಡಿರುವುದರಿಂದ ಮನುಷ್ಯ ಮಾತನಾಡುತ್ತಿದ್ದಾನೆ. ಮಾತನಾಡುವುದರಿಂದ ಪುನಃ ಪಾಪವನ್ನೇ ಸಂಪಾದಿಸಿಕೊಳ್ಳುತ್ತಿದ್ದಾನೆ. ಇನ್ನೂ ಕೆಲವರು ಗತ ಪಾಪಕ್ಕಿಂತ ಪ್ರಸ್ತುತ ಪಾಪವನ್ನೇ ಹೆಚ್ಚಾಗಿ ಸಂಪಾದಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಹೇಳಿದರೆ ಗತದಲ್ಲಿನ ಒಂದು ರೂಪಾಯಿ ಪಾಪವನ್ನು ಮಾತುಗಳ ರೂಪದಲ್ಲಿ ಮಾತನಾಡಿದರೂ ಕೆಲವರು ಅದಕ್ಕೆ ತಕ್ಕ ರೂಪಾಯಿ ಪಾಪವನ್ನೇ ಪಡೆಯಬಹುದು. ಇಲ್ಲದಿದ್ದರೆ ಅದಕ್ಕಿಂತ ಹೆಚ್ಚು ಬೆಲೆಯುಳ್ಳ ಪುಣ್ಯವನ್ನು ಕೂಡಾ ಪಡೆಯಬಹುದು. ರೂಪಾಯಿ ಪಾಪವನ್ನು ಮಾತುಗಳ ರೂಪದಲ್ಲಿ ಹತ್ತು ನಿಮಿಷಗಳು ಮಾತನಾಡಬೇಕಾಗಿರುವಾಗ ಆ ಮಾತುಗಳು ಒಳ್ಳೆಯವಾದರೆ ಪುಣ್ಯ ಬರಬಹುದು. ಅದೂ ರೂಪಾಯಿ ಪುಣ್ಯದಿಂದ ಹತ್ತುಸಾವಿರ ರೂಪಾಯಿಗಳಷ್ಟು ಪುಣ್ಯ ಬರಬಹುದು. ಹಾಗಲ್ಲದೆ ಹೋದರೆ ಪಾಪ ಕೂಡಾ ಬರಬಹುದು. ಪಾಪ ಒಂದು ರೂಪಾಯಿಯಿಂದ ಹತ್ತು ಸಾವಿರ ರೂಪಾಯಿಗಳಷ್ಟು ಬರಬಹುದು. ಇಲ್ಲಿ ಅಳತೆಗಳು ತಿಳಿಯುವುದಕ್ಕೆ 'ರೂಪಾಯಿ' ಪದವನ್ನು ಬಳಸಿದ್ದೇವೆ ಎಂದು ತಿಳಿಯಬೇಕು. ಇನ್ನೊಂದು ವಿಷಯವೇನೆಂದರೇ! ದೇವರ ವಿಷಯವಾಗಲಿ, ದೇವರ ಜ್ಞಾನ ವಿಷಯವಾಗಲಿ ಚರ್ಚೆಗೆ ಬಂದು ವಿರುದ್ಧವಾಗಿ ಮಾತನಾಡಿದರೆ, ಕೆಲವು ಲಕ್ಷಗಳ ರೂಪಾಯಿಗಳ ಬೆಲೆಯುಳ್ಳ ಪಾಪ ಸಂಭವಿಸಬಹುದು. ಕೆಲವರು ಗುರುಗಳನ್ನು ಮಾತುಗಳಿಂದಲೇ

ದೂಷಿಸುತ್ತಿದ್ದಾರೆ. ಕೆಲವರು ದೇವರನ್ನು ಕೂಡಾ ಮಾತುಗಳಿಂದಲೇ ಅವಹೇಳನವಾಗಿ ಅಗೌರವವಾಗಿ ಮಾತನಾಡುತ್ತಿದ್ದಾರೆ. ಅದರಿಂದ ಕೆಲವು ಜನ್ಮಗಳಿಗೆ ಸರಿಹೋಗುವ ಕರ್ಮವನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ. ಈಗ ಹೇಳಿರಿ ಮಾತುಗಳು ಬರುವ ಮನುಷ್ಯರು ದೊಡ್ಡವರಾ, ಮಾತುಗಳು ಬಾರದೆ ಯಾವ ಪಾಪ ಸಂಪಾದಿಸಿಕೊಳ್ಳದ ಪಶುಗಳು ದೊಡ್ಡವಾ?

**159) ಪ್ರಶ್ನೆ :– ದೇವರ ಜ್ಞಾನ ಗ್ರಹಿಸಲಾರದ ಪ್ರಾಣಿಗಳನ್ನು ಉತ್ತಮ ಜೀವಿಗಳಾಗಿ ಹೇಳಿದ್ದೀರ. ಮೋಕ್ಷ ಹೊಂದಬೇಕೆಂದರೆ ಮಾನವಜನ್ಮವೇ ಸುಲಭವೆಂದು ಕೆಲವರು ಹೇಳಿದ್ದಾರೆ. ಕರ್ಮಗಳು ಪಾಪ ಹೆಚ್ಚಾಗುವುದರಿಂದ ದೇವರ ಜ್ಞಾನ ಗ್ರಹಿಸಲಾರದ ಪ್ರಾಣಿ, ವೃಕ್ಷ, ಕ್ರಿಮಿಗಳ ಜನ್ಮ ಬರುತ್ತದಾ? ಪುಣ್ಯ ಹೆಚ್ಚಾಗುವುದರಿಂದ ಮಾನವ ಜನ್ಮ ಬರುತ್ತದಾ? ಈ ಕೋನದಲ್ಲಿ ಪ್ರಾಣಿಗಳು ದೇವರಿಗೆ ಹತ್ತಿರವಾಗಿ ಎಲ್ಲಿವೆಯೋ ವಿವರಿಸುತ್ತೀರಾ?**

**ಉತ್ತರ :–** ಪ್ರಾಣಿಗಳಾಗಲಿ, ವೃಕ್ಷಗಳಾಗಲಿ ದೇವರ ಜ್ಞಾನ ಗ್ರಹಿಸುವುದಿಲ್ಲವೆಂದು ನಾನು ಎಂದಿಗೂ ಹೇಳಲಿಲ್ಲ. ಹಾಗೆ ಮಾನವ ಜನ್ಮದಲ್ಲಿಯೇ ಮೋಕ್ಷ ಹೊಂದುವುದಕ್ಕೆ ಸುಲಭವೆಂದು ಕೂಡಾ ಹೇಳಲಿಲ್ಲ. ಬಹಳಸಲ ಮಾನವರಿಗಿಂತ ಉತ್ತಮ ಜನ್ಮಗಳು ಪ್ರಾಣಿಗಳು, ಅವುಗಳಿಗಿಂತ ಉತ್ತಮರು ಪಕ್ಷಿಗಳು, ಆ ಎರಡಕ್ಕಿಂತ ಉತ್ತಮರು ವೃಕ್ಷಗಳೆಂದು ಹೇಳುವುದು ನಡೆದಿದೆ. ಹೆಚ್ಚು ಪಾಪ ಮಾಡಿದವರೇ ಮನುಷ್ಯನಾಗಿ ಹುಟ್ಟುತ್ತಾನೆಂದು ಕೂಡಾ ಹೇಳಿದ್ದೇವೆ. ಪಾಪವನ್ನು ಅನುಭವಿಸುವುದರಲ್ಲಿ ಪಶು, ಪಕ್ಷಿ, ವೃಕ್ಷ, ಲತಾದಿಗಳಿಗಿಂತ ಮನುಷ್ಯನೇ ಮುಂದಿದ್ದಾನೆಂದು, ಪಾಪಗಳ ಅನುಭವವನ್ನನುಸರಿಸಿ ಮನುಷ್ಯರಿಗಿಂತ ಉಳಿದ ಪ್ರಾಣಿವೃಕ್ಷಗಳೇ ದೇವರಿಗೆ ಹತ್ತಿರವಾಗಿವೆಯೆಂದು ಹೇಳಿದ್ದೇವೆ. ದೇವರಿಗೆ ಹತ್ತಿರ ಎಂದರೇ ಅದು ಕಾಣಿಸುವ ವಿಷಯ ಅಲ್ಲವಲ್ಲ! ದೇವರ ಜ್ಞಾನ ಗ್ರಹಿಸುವುದರಲ್ಲಿ ಪ್ರಾಣಿ, ವೃಕ್ಷಗಳಿಗೆ ಕೈಲಾಗುವುದಿಲ್ಲವೆಂದು, ಗ್ರಹಿಸಿಕೊಳ್ಳಲಾರವೆಂದು ಕೂಡಾ ನಾವು ಹೇಳಲಿಲ್ಲ. ಮನುಷ್ಯರು ಜ್ಞಾನ ಹೇಳಿದರೆ ಮನುಷ್ಯರೇ ಗ್ರಹಿಸಬಹುದು ಆದರೆ, ಪ್ರಾಣಿಗಳು ಗ್ರಹಿಸಲಾರವು ಎನ್ನುವಮಾತು ವಾಸ್ತವ. ಆದರೇ ಪ್ರಾಣಿಗಳು

ಗ್ರಹಿಸಿದಂತೆ ದೈವ ಜ್ಞಾನವನ್ನು ಅವುಗಳ ಭಾಷೆಯಲ್ಲಿಯೇ ಹೇಳುವ ಗ್ರಹಗಳು ಪ್ರತ್ಯೇಕವಾಗಿ ಇವೆ. ಮನುಷ್ಯರ ಭಾಷೆಯಲ್ಲಿ ಸೂರ್ಯನು ಹೇಳಿದಂತೆ ಪ್ರಾಣಿಗಳ ಭಾಷೆಯಲ್ಲಿ ಕುಜ ಗ್ರಹ ಹೇಳಬಲ್ಲದೆಂದು ನಮ್ಮ ಭಾವನೆ.

**160) ಪ್ರಶ್ನೆ :– ಸೇವಂತಿಗೆ, ಮಲ್ಲಿಗೆಯಂತಹ ಗಿಡಗಳಿಗೆ ಅಂಟುಕಟ್ಟುವಾಗ ಕೊಂಬೆಯನ್ನು ಭೂಮಿಯೊಳಗೆ ಹೂತಿಟ್ಟ ನಂತರ ತಾಯಿಗಿಡದಿಂದ ಸ್ವಲ್ಪ ಸ್ವಲ್ಪವಾಗಿ ಖಂಡಿಸುತ್ತಾ ಬೇರೆ ಮಾಡುತ್ತಾರೆ. ಆಗ ಹೊಸ ಅಂಟಿಗೆ ಬೇರುಗಳು ಬಂದು ಕೊಂಬೆ ಬದುಕುತ್ತದೆ. ಹಾಗೆ ಬದುಕಿದ ಕೊಂಬೆಯೊಳಗೆ ಇನ್ನೊಬ್ಬ ಜೀವಿಯು ಸೇರಿದಂತೆಯಾ ಅಥವಾ ಮೊದಲ ತಾಯಿಗಿಡದಲ್ಲಿನ ಆತ್ಮವೇ ಹೊಸ ಗಿಡದಲ್ಲಿ ಹೂಗಳು, ಕಾಯಿಗಳು ಬರುವಂತೆ ಮಾಡುತ್ತಿದೆಯಾ?**

**ಉತ್ತರ :–** ಅಂಟು ಹೂತಿಟ್ಟ ಹೊಸ ಗಿಡದೊಳಗೆ ಹೊಸ ಜೀವಿಯು ಬಂದು ಸೇರಬೇಕಾಗಿದ್ದೆ. ಆತ್ಮ ಎಲ್ಲರಲ್ಲಿ, ಎಲ್ಲಾ ಗಿಡಗಳಲ್ಲಿ ಒಂದೇ ಇರುವುದರಿಂದ ತಾಯಿ ಗಿಡದಲ್ಲಿನ ಆತ್ಮವೇ ಹೊಸ ಗಿಡದೊಳಗೆ ಕೂಡಾ ಬಂದಿದೆಯೆಂದು ಹೇಳಬಹುದು. ಆಗ ಗಿಡದಲ್ಲಿ ಜೀವಾತ್ಮ, ಆತ್ಮ ಎರಡು ಇದ್ದಂತಾಗುತ್ತದೆ.

**161) ಪ್ರಶ್ನೆ :– ದಾಸವಾಳದಂತಹ ಗಿಡಗಳ ಕಾಂಡದಿಂದ ಬಂದಿರುವ ಕೊಂಬೆಯನ್ನು ಕತ್ತರಿಸಿ ಭೂಮಿಯೊಳಗೆ ಹೂತಿಟ್ಟರೆ ತಕ್ಷಣವೇ ಗಿಡ ಬಾಡಿಹೋಗುವುದಿಲ್ಲ. ನಂತರ ಬಾಡಿಹೋಗಿ ಪುನಃ ಚಿಗುರುತ್ತದೆ. ಕೆಲವು ಕೊಂಬೆಗಳು ಚಿಗುರುವುದಿಲ್ಲ. ಅದರಲ್ಲಿ ಜೀವಿಯು ಸೇರದೆ ಹೋಗುವುದರಿಂದ ಹಾಗೆ ನಡೆದಿದೆಯಾ?**

**ಉತ್ತರ :–** ಜೀವಿಯು ಸೇರದಿರುವುದರಿಂದಲೇ ಹಾಗೆ ನಡೆದಿದೆ.

**162) ಪ್ರಶ್ನೆ :– ಮಹಾ ಅವತಾರ್ ಬಾಬಾಜೀಯವರು ಜ್ಞಾನಿಯಾ, ಯೋಗಿಯಾ? ಆತನಿಗೆ ತ್ರೈತ ಸಿದ್ಧಾಂತ ಜ್ಞಾನ ತಿಳಿದಿದೆಯಾ?**

**ಉತ್ತರ :–** ಅವತಾರ್ ಬಾಬಾಜೀಯವರು ಜ್ಞಾನಿಯೂ, ಯೋಗಿಯೂ

ಆಗಬಹುದು. ಆದರೇ ತ್ರೈತ ಸಿದ್ಧಾಂತ ಜ್ಞಾನ ಇಲ್ಲಿಂದಲೇ ಪ್ರಾರಂಭವಾಗುವು ದರಿಂದ ಮಧ್ಯಾತ್ಮ ವಿಷಯ ಆತನಿಗೆ ತಿಳಿದಿಲ್ಲವೆಂದೇ ಹೇಳಬಹುದು.

**163) ಪ್ರಶ್ನೆ :– ರಾವಣಬ್ರಹ್ಮ ಫೋಟೋದಲ್ಲಿ ನೀವೆ ಕಾಣಿಸುತ್ತಿದ್ದೀರ. ಆದರೇ ನೀವೇ ರಾವಣಬ್ರಹ್ಮ ಎಂದು ಅಂದುಕೊಳ್ಳಬೇಕಾ?**

**ಉತ್ತರ :–** ಹಾಗೆ ಏಕೆ ಅಂದುಕೊಳ್ಳಬೇಕು. ರಾವಣಬ್ರಹ್ಮ ಚಿತ್ರಕ್ಕಾಗಿ ನನ್ನ ಫೋಟೋಗೆ ಕಂಪ್ಯೂಟರ್‌ನಲ್ಲಿ ಆಭರಣಗಳು ಹಾಕಿ ತಯಾರು ಮಾಡಿದ ಚಿತ್ರ. ವೇಷಧಾರಣೆ ನನ್ನ ಫೋಟೋದ್ದೇ ಆದಷ್ಟು ಮಾತ್ರಕ್ಕೆ ನಾನೇ ರಾವಣ ಬ್ರಹ್ಮನು ಎಂದು ನಾನು ಹೇಳಬಾರದು. ನೀವು ಹಾಗೆ ಅಂದುಕೊಳ್ಳಬಾರದು. ರಾವಣ ಬ್ರಹ್ಮ ಎಲ್ಲಾ ವಿಧಗಳಲ್ಲಿ ದೊಡ್ಡ ವ್ಯಕ್ತಿ ಆತನೊಂದಿಗೆ ಹೋಲಿಸಿಕೊಂಡರೆ ನಮ್ಮದೇ ತಪ್ಪಾಗುತ್ತದೆ.

**164) ಪ್ರಶ್ನೆ :– ಎಲ್ಲರ ಸ್ವಾಮೀಜಿಗಳಂತೆ ನೀವೇಕೆ ಟೀವಿಗಳಲ್ಲಿ ಕಾಣಿಸುವುದಿಲ್ಲ?**

**ಉತ್ತರ :–** ಕತ್ತೆ ಹೋಗಿ ಕುದುರೆಗಳ ಗುಂಪಿನಲ್ಲಿ ಸೇರಬಾರದು. ಹಾಗೆಯೇ ಕುದುರೆ ಹೋಗಿ ಕತ್ತೆಗಳ ಗುಂಪಿನಲ್ಲಿ ಸೇರಬಾರದು. ಎರಡೂ ತಪ್ಪೇ ಆದ್ದರಿಂದ ನಾನು ಯಾವ ಟೀವಿಗಳಲ್ಲಿ ಕಾಣಿಸುವುದಿಲ್ಲ.

**165) "ದೆವ್ವಗಳ – ಭೂತಗಳ ಯಥಾರ್ಥ ಸಂಘಟನೆಗಳು" ಎನ್ನುವ ಗ್ರಂಥದಲ್ಲಿ ನಿಮ್ಮ ಮುಖವನ್ನು ನೋಡಿದ ಸೂಕ್ಷ್ಮಗ್ರಹಗಳು ತಲೆತಗ್ಗಿಸಿಕೊಂಡಂತೆ ಇದೆ. ದಯೆಮಾಡಿ ನಿಮ್ಮ ಕಣ್ಣುಗಳಲ್ಲಿ ಏನು ಕಾಣಿಸಿರಬಹುದು. ಹೇತುವಾದ ಆದ ನಮ್ಮ ಪ್ರಶ್ನೆಗೆ ಉತ್ತರ ಹೇಳಬಲ್ಲಿರಾ?**

**ಉತ್ತರ :–** ಸೂಕ್ಷ್ಮಗ್ರಹಗಳು ನನ್ನೊಂದಿಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಿದವರನ್ನು ನನ್ನ ಕಡೆ ನೋಡಿರೆಂದು ಹೇಳಿರುವುದು ನಿಜ. ಅವರು ನೋಡಲಾರದೆ ತಲೆತಗ್ಗಿಸಿಕೊಂಡಿರುವುದು ವಾಸ್ತವ. ಆದರೇ ಅವರಿಗೆ ಏನು ಕಾಣಿಸಿರುವುದು ನನಗು ಕೂಡಾ ತಿಳಿದಿಲ್ಲ. ನಾನು ಕೂಡಾ ಅವರು ಏಕೆ ನೋಡಲಾರದೆ

ತಲೆತಗ್ಗಿಸಿಕೊಳ್ಳುತ್ತಿದ್ದಾರೆನ್ನುವ ಪ್ರಶ್ನೆ ಬಂದು ಅವರನ್ನೇ ನಾನು ಕೇಳುವುದು ನಡೆದಿದೆ. ಆಗ ಅವರು ಐದು ಸೆಲ್‌ಗಳ ಟಾರ್ಚ್‌ಲೈಟ್ ಕಣ್ಣಿನೊಳಗೆ ಬಿಟ್ಟರೆ ಹೇಗೆ ನೋಡಲಾರೆವೊ ಹಾಗೆ ಆಗಿದೆಯೆಂದು, ಎರಡು ಕಣ್ಣುಗಳು ಅಗ್ನಿಗೋಳ ದಂತೆ ನೋಡಲು ಸಾಧ್ಯವಾಗದಂತೆ ಕಾಣಿಸಿವೆ ಎಂದು ಹೇಳಿದ್ದಾರೆ. ಅವರ ಅನುಭವವನ್ನು ಅವರು ಹೇಳಿದ್ದಾರೆ. ಆಗ ಇದೆಲ್ಲವೂ ಆತ್ಮದಿಂದಲೇ ನಡೆದ ಕೆಲಸವೆಂದು ನಾನು ಅಂದುಕೊಂಡಿದ್ದೇನೆ.

**166) ಪ್ರಶ್ನೆ :– ಮೂರನೆ ಸಲ ಬಂದಿರುವ ಭಗವಂತನನ್ನು ಯಾರಾದರೂ ಗುರುತಿಸಬಹುದಾ?**

**ಉತ್ತರ :–** ಬಾರದ ಮುನ್ನವೇ ಬಂದಿದ್ದಾನೆಂದು ಏಕೆ ಅಂದುಕೊಳ್ಳಬೇಕು? ಹಾಗೆ ಮೂರನೆಸಲ ಭಗವಂತನು ಬಂದರೆ ಆತನನ್ನು ನೇರವಾಗಿ ಯಾರೂ ಗುರುತಿಸಲಾರರು.

**167) ಪ್ರಶ್ನೆ :– ನೂರು ತಪ್ಪುಗಳು ಮಾಡಿದ ಶಿಶುಪಾಲನನ್ನು ಕೃಷ್ಣನು ಸಂಹರಿಸಿದನು. ಹಾಗೆ ಸಾಯಿಸುವುದು ದುಷ್ಟ ಶಿಕ್ಷಣ ಎಂದು ಕೆಲವರು ಅನ್ನುತ್ತಿದ್ದಾರೆ. ಮತ್ತು ಯಾವ ಗುಣದಲ್ಲಿರುವವರು ಮರಣಿಸಿದ ನಂತರ ಆ ಗುಣದಲ್ಲಿಯೇ ಜನ್ಮಿಸುತ್ತಾರೆ ಎಂದು ತಿಳಿಸಿದ ಕೃಷ್ಣನು ದುಷ್ಟಶಿಕ್ಷಣವಾಗಿ ಅವರನ್ನು ಏಕೆ ಸಾಯಿಸಿದ್ದಾನೆ?**

**ಉತ್ತರ :–** ಯಾವ ಗುಣದಲ್ಲಿ ಮರಣಿಸಿದವನು ಅದೇ ಗುಣದಲ್ಲಿ ಹುಟ್ಟುತ್ತಾನೆ. ಆದ್ದರಿಂದ ದುರ್ಮಾರ್ಗನನ್ನು ಸಾಯಿಸಿದರೆ ದುಷ್ಟ ಶಿಕ್ಷಣ ನಡೆಯುವುದಿಲ್ಲ. ದುರ್ಮಾರ್ಗರನ್ನು ಸನ್ಮಾರ್ಗರನ್ನಾಗಿ ಬದಲಾಯಿಸುವುದಕ್ಕೆ ಅವರಿಗೆ ಜ್ಞಾನವನ್ನು ಬೋಧಿಸಿ ಒಳ್ಳೆಯ ಮಾರ್ಗದೊಳಗೆ ಬದಲಾಯಿಸಬೇಕು. ದುಷ್ಟರಿಗೆ ಜ್ಞಾನವನ್ನು ಬೋಧಿಸುವ ಶಿಕ್ಷಣ ಕೊಡುವುದನ್ನು ದುಷ್ಟ ಶಿಕ್ಷಣ ಎನ್ನುತ್ತಾರೆ. ಶಿಕ್ಷಣ ಎಂದರೇ ಕಲಿಸುವುದು (ಟ್ರೆಯಿನಿಂಗ್) ಎಂದು ಹೇಳಬಹುದು. ಪೋಲೀಸ್ ಶಿಕ್ಷಣ ಎಂದರೇ ಸಾಧಾರಣ ಮನುಷ್ಯರನ್ನು ಪೋಲೀಸರನ್ನಾಗಿ ತರಭೇತಿ ಮಾಡುವುದು. ಶಿಕ್ಷಣ ಎಂದರೇ ಕಲಿಸುವುದು. ದುಷ್ಟರನ್ನು ಸನ್ಮಾರ್ಗರನ್ನಾಗಿ ಮಾರ್ಪಡಿಸುವ ಶಿಕ್ಷಣವನ್ನು

ದುಷ್ಟ ಶಿಕ್ಷಣ ಎಂದು ಕರೆಯುತ್ತಿದ್ದಾರೆ. ನಿಜಕ್ಕೆ "ಸನ್ಮಾರ್ಗ ಶಿಕ್ಷಣ" ಎಂದು ಹೇಳಬೇಕಾಗಿದೆ. ಆದರೂ ಅಭ್ಯಾಸದ ಪ್ರಕಾರ ದುಷ್ಟಶಿಕ್ಷಣ ಎಂದು ಕರೆಯುತ್ತಾರೆ. ಹಾಗೆ ಹೇಳುವುದನ್ನು ದುಷ್ಟರನ್ನು ಶಿಕ್ಷಿಸುವುದೆಂದು ಅಂದುಕೊಳ್ಳುತ್ತಿದ್ದಾರೆ. ಇನ್ನೂ ದುಷ್ಟರನ್ನು ಸಾಯಿಸಿ ಇಲ್ಲದಂತೆ ಮಾಡುವುದು ಎಂದು ಕೂಡಾ ಹೇಳುತ್ತಿದ್ದಾರೆ. ಅದು ಅಸತ್ಯ. ಹಾಗೆ ಮಾಡುವುದರಿಂದ ಭಗವದ್ಗೀತೆಯಲ್ಲಿ ಹೇಳಿದಂತೆ ಮರಣಿಸಿದವನು ಪುನಃ ಅದೇ ಗುಣಗಳಲ್ಲಿ ಹುಟ್ಟುತ್ತಾನೆ. ಆದ್ದರಿಂದ ದುಷ್ಟರನ್ನು ಸಾಯಿಸಿದರೂ ಏನೂ ಪ್ರಯೋಜನವಿಲ್ಲ. ಅವರಿಂದ ಸಮಾಜ ತೊಂದರೆ ಗೊಳಗಾಗುತ್ತಿದೆ. ಆದ್ದರಿಂದ ದುರ್ಮಾರ್ಗರನ್ನು ಸಾಯಿಸುವುದಕ್ಕಿಂತ ಅವರನ್ನು ಸಂಸ್ಕರಿಸುವುದು ಒಳ್ಳೆಯದು. ಆದರೇ ಶಿಶುಪಾಲನನ್ನು ಕೃಷ್ಣನು ಸಾಯಿಸುವುದು ನಿಜವೇ. ಆದರೇ ಅದೆಲ್ಲವೂ ಪ್ರಪಂಚ ಸಂಬಂಧವಾಗಿ ನಡೆದ ವ್ಯವಹಾರ. ಶಿಶುಪಾಲನು ಮೊದಲಾದವರು ಜ್ಞಾನವನ್ನು ಹೇಳಿದರೂ ಕೇಳುವುದಿಲ್ಲ ಎನ್ನುವ ಉದ್ದೇಶದಿಂದಲೇ ಸಾಯಿಸಬೇಕಾಗಿ ಬಂದಿದೆಯೆಂದು ಅಂದು ಕೊಳ್ಳುತ್ತೇನೆ.

**168) ಪ್ರಶ್ನೆ :– ದೆವ್ವವಾಗಿ ಬದಲಾದ ಮನುಷ್ಯ ಅವರ ಪುತ್ರರು ಮಾಡುವ ಶ್ರಾದ್ಧಾದಿ ಕರ್ಮಗಳನ್ನು ಸ್ವೀಕರಿಸುತ್ತಾನಾ? ಶ್ರಾದ್ಧಾದಿ ಕರ್ಮಗಳು ಮಾಡದವರ ಮೇಲೆ ದೆವ್ವಗಳಾಗಿ ಇರುವ ಅವರ ಹಿರಿಯರು ಕೋಪಮಾಡಿಕೊಳ್ಳುತ್ತಾರಾ? ಅಥವಾ ಅವರ ದಾರಿಯಲ್ಲಿ ಅವರು ಹೋಗುತ್ತಾರಾ?**

**ಉತ್ತರ :–** ಪಿತ್ರರು ದೆವ್ವಗಳಾಗಿ ಬದಲಾದವರು ಅವರ ಮಕ್ಕಳು ಮಾಡುವ ಶ್ರದ್ಧಾದಿ ಕರ್ಮಗಳನ್ನು ಸ್ವೀಕರಿಸುತ್ತಿರುವರು. ಆದರೇ ಕೆಲವರು ಪುತ್ರರು ಶ್ರಾದ್ಧ ಕರ್ಮಗಳು ಮಾಡದೆ ಹೋದರೆ ಏಕೆ ಮಾಡಲಿಲ್ಲವೆಂದು ಕೇಳುವವರು ಸಹ ಇದ್ದಾರೆ. ನಾವು ಸಂಪಾದಿಸಿದ ಆಸ್ತಿಯನ್ನು ನೀವು ತಿನ್ನುತ್ತಾ ನಮಗೆ ಬಟ್ಟೆಗಳು, ಆಹಾರ ಏಕೆ ಇಡುವುದಿಲ್ಲವೆಂದು ವಾದಿಸುವ ಪಿತ್ರರು ಸಹ ಇದ್ದಾರೆ. ಕೆಲವರು ತಮ್ಮ ಪುತ್ರರನ್ನು ಏನೂ ಅನ್ನದೇ ಮೌನವಾಗಿ ಇದ್ದಾರೆ.

**169) ಪ್ರಶ್ನೆ :– "ಮತ್ತಃ, ಸ್ಮೃತಿ, ಜ್ಞಾನ ಮಪೋಹನಂಚ" ಎನ್ನುವ ಪುರುಷೋತ್ತಮ ಪ್ರಾಪ್ತಿಯೋಗದಲ್ಲಿನ ಶ್ಲೋಕದಲ್ಲಿ ಜ್ಞಾನವೂ ಸಹ ತನ್ನಿಂದಲೇ ಉಂಟಾಗುತ್ತಿದೆ ಎಂದು ಹೇಳಿದಾಗ, ಜ್ಞಾನವನ್ನು ಕೆಲವರಿಗೇ ಕೊಡುತ್ತೇನೆ ಎನ್ನುವಂತಿದೆ. ಮತ್ತೆ ನೀವೇನೋ "ಶ್ರದ್ಧಾವಾನ್ ಲಭತೇ ಜ್ಞಾನಮ್" ಶ್ರದ್ಧೆಯಿಂದಲೇ ಜ್ಞಾನ ಲಭಿಸುತ್ತದೆ ಎಂದು ಹೇಳುತ್ತಿದ್ದೀರಿ. ಎರಡರಲ್ಲಿ ಯಾವುದು ವಾಸ್ತವ?**

**ಉತ್ತರ :–** ಎರಡೂ ವಾಸ್ತವವೇ. ನನ್ನಿಂದ ಜ್ಞಾನ ಉಂಟಾಗುತ್ತದೆ ಎನ್ನುವ ಮಾತು ನಿಜ. ಆತ್ಮದಿಂದಲೇ ಬುದ್ಧಿಗೆ ಜ್ಞಾನ ಗ್ರಹಿಸುವ ಶಕ್ತಿ ಬರುತ್ತದೆ. ಆದರೇ ಶ್ರದ್ಧೆ ಇರುವವನಿಗೇ ಆತ್ಮ ಜ್ಞಾನವನ್ನು ಗ್ರಹಿಸುವ ಶಕ್ತಿ ಕೊಡುತ್ತದೆ. ಶ್ರದ್ಧೆ ಇಲ್ಲದವನಿಗೆ ಆತ್ಮ ಬುದ್ಧಿಗೆ ಜ್ಞಾನ ಕೊಡುವುದಿಲ್ಲ. ಜ್ಞಾನವನ್ನು ಗ್ರಹಿಸುವ ಶಕ್ತಿ ಸಹ ಕೊಡುವುದಿಲ್ಲ.

**170) ಪ್ರಶ್ನೆ :– 250 ಬಾರಿ 4 ಯುಗಗಳು ಕಳೆದರೆ 1000 ಯುಗಗಳು ಮುಗಿದುಹೋಗಿ ಪ್ರಪಂಚ ಅಂತ್ಯವಾಗುತ್ತದೆ ಅಲ್ಲವೇ! ಮತ್ತು ಇಂದಿನ ಕಲಿಯುಗ ಒಂದನೆಯದಾ ಅಥವಾ 230ನೇಯದಾ ಅಥವಾ 1ನೇ ಸಲ ಮಾತ್ರವೇ ಕಳೆಯುತ್ತಿದೆಯಾ? ಬಹಳ ಕಲಿಯುಗಗಳು ಕಳೆದರೆ ಇಲ್ಲಿಗೆ ಭಗವಂತನು ಎಷ್ಟೋಸಲ ಬಂದಿರಬೇಕು ಅಲ್ಲವೇ! ಹಾಗಾದರೆ ಇಲ್ಲಿಗೆ ನಡೆದ 250 ದ್ವಾಪರಯುಗಗಳಲ್ಲಿ 250 ಮಂದಿ ಕೃಷ್ಣರು ಜನ್ಮಿಸಿದಂತಾ? ಈ ಸಂದಿಗ್ದತೆಯನ್ನು ವಿವರಿಸಬಲ್ಲಿರಾ?**

**ಉತ್ತರ :–** ನಾಲ್ಕು ಯುಗಗಳು 250 ಸಲ ಕಳೆದರೆ ಒಂದು ಬ್ರಹ್ಮಹಗಲು ಎಂದು ಅರ್ಥ. ಹಾಗೇ ಸಾವಿರ ಯುಗಗಳು ಕಳೆದರೆ ದೇವರಿಗೆ ಒಂದು ರಾತ್ರಿ ಕಳೆದಂತಾಗುತ್ತದೆ. ಆದರೆ ಕಲಿಯುಗ ಇಲ್ಲಿಗೆ ಎಷ್ಟುಸಲ ಕಳೆದಿದೆಯೆಂದು ಯಾರೂ ಆಧಾರಪೂರ್ವಕವಾಗಿ ಹೇಳುತ್ತಿಲ್ಲ. ಕೆಲವರು 17ಸಲ ಕಳೆದಿದೆಯೆಂದು 17ನೇ ಕಲಿಯುಗವೆಂದು ಹೇಳುತ್ತಿದ್ದಾರೆ. ಹಾಗೆ ಹೇಳುವುದಕ್ಕೆ ಪೂರ್ತಿ ಸಾಕ್ಷ್ಯವು ಏನೂ ಇಲ್ಲ. ಒಂದು ಕಲಿಯುಗದಲ್ಲಿ ಕೃಷ್ಣನು ಬಂದು ಭಗವದ್ಗೀತೆ ಹೇಳಿದರೆ ಉಳಿದ ಕಲಿಯುಗಗಳಲ್ಲಿ ಕೃಷ್ಣನು ಬರುತ್ತಾನೆ ಎಂದುಕೊಳ್ಳುವುದು ತಪ್ಪು. ಕಾಲಗಮನವನ್ನನುಸರಿಸಿ ಒಂದು ಶುಕ್ರವಾರ ಗಡಿಯಾರ ಕೊಂಡಿದ್ದೇವೆಂದುಕೊಳ್ಳಿ.

ನಂತರ ಶುಕ್ರವಾರ ಗಡಿಯಾರ ಕೊಂಡುಕೊಳ್ಳುವುದಿಲ್ಲ ಅಲ್ಲವೇ! ಹಾಗೆಯೇ ಒಂದು ಕಲಿಯುಗದಲ್ಲಿ ದೇವರು ಭಗವಂತನಾಗಿ ಹುಟ್ಟಿ ಭಗವದ್ಗೀತೆಯನ್ನು ಹೇಳಿದರೆ ನಂತರ ಕಲಿಯುಗದಲ್ಲಿ ಭಗವಂತನು ಹುಟ್ಟಬೇಕೆಂದಾಗಲಿ, ಭಗವದ್ಗೀತೆ ಯನ್ನು ಹೇಳಬೇಕೆಂದಾಗಲಿ ಏನು ಇರುವುದಿಲ್ಲ. ನನ್ನ ಉದ್ದೇಶದ ಪ್ರಕಾರ ಇದೇ ಮೊದಲ ಬಾರಿಯೆಂದು ಹೇಳುತ್ತಿದ್ದೇವೆ. ಆದ್ದರಿಂದ ಜ್ಞಾನ ಕೂಡಾ ಈಗಲೇ ತಿಳಿದಿದೆ. ನಂತರ ಮುಂಬರುವಂತಹ ಯುಗ ಎರಡನೆಸಲ ಬರುವ ಕೃತಯುಗವೆಂದು ಹೇಳಬಹುದು.

**171) ಪ್ರಶ್ನೆ :– ಪರಕಾಯ ಪ್ರವೇಶ ವಿದ್ಯೆಯಲ್ಲಿ ಜೀವಿಯು, ಆತ್ಮ ಎರಡೂ ಶರೀರವನ್ನು ಬಿಟ್ಟು ಹಾಕಿದಂತೆ ಇದೆ. ಯಾವ ಮಾನವನು ತನ್ನ ಶರೀರವನ್ನು ಬಿಟ್ಟು ಹೊರಗೆಹೋಗಿ ನಂತರ ಪುನಃ ಬಂದು ಅದೇ ಶರೀರದೊಳಗೆ ಸೇರುವುದಕ್ಕೆ ಅವಕಾಶವೇ ಇಲ್ಲವಲ್ಲ! ಆ ಅವಕಾಶ ವಿಗ್ರಹಗಳಲ್ಲಿ ಇರುವವರಿಗೆ ಮಾತ್ರವೇ ಇದೆಯೆಂದು ಹೇಳಿದ್ದೀರಿ. ಮತ್ತೆ ಪರಕಾಯ ವಿದ್ಯೆಯಲ್ಲಿ ಜೀವಿಯು, ಆತ್ಮ ಇಬ್ಬರೂ ಬಿಟ್ಟುಹೋದ ಶರೀರದೊಳಗೆ ಹೇಗೆ ಸೇರುತ್ತಿದ್ದಾರೆ? ಅದು ಸಾಧ್ಯವಾಗುವ ಕೆಲಸವೇನಾ?**

**ಉತ್ತರ :–** ಪರಕಾಯ ಪ್ರವೇಶ ವಿದ್ಯೆಯನ್ನು ಕಲಿಯುವುದಕ್ಕೆ ಹನ್ನೆರಡು (12) ವರ್ಷಗಳ ಕಾಲ ಹಿಡಿಯುತ್ತದೆ. ಹಾಗೆ ಕಲಿತವನು ತನ್ನ ಶರೀರವನ್ನು ಬಿಟ್ಟು ಆತ್ಮ ಜೀವಾತ್ಮ ಹೊರಗೆ ಬಂದು ಬೇರೆ ಶರೀರದಲ್ಲಿ ಸೇರುವುದನ್ನು ಅಭ್ಯಾಸ ಮಾಡಿರುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ ವಿಷಯ ಒಂದು ಇದೆ. ಒಂದುಸಲ ಜೀವಿಯು ಶರೀರವನ್ನು ಬಿಟ್ಟು ಹೊರಗೆ ಬಂದ ನಂತರ ಬಿಟ್ಟಿರುವ ಶರೀರದೊಳಗೆ ಪುನಃ ಪ್ರವೇಶಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಿರುವಾಗ ಈ ಅಭ್ಯಾಸ ಏಕೆ? ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು. ಶರೀರದಲ್ಲಿ ಐದು ಉಪವಾಯುಗಳನ್ನು ಬಿಟ್ಟು ಶರೀರವನ್ನು ಬಿಟ್ಟುಹೋದರೆ ಪೂರ್ತಿಯಾಗಿ ಬಿಟ್ಟಂತಲ್ಲ. ಆದ್ದರಿಂದ ಪರಕಾಯ ಪ್ರವೇಶ ವಿದ್ಯೆಯಲ್ಲಿ ಉಪ ವಾಯುಗಳನ್ನು ಶರೀರದಲ್ಲಿ ಬಿಟ್ಟು ಹೊರಗೆ ಬರುವುದು,

ಪುನಃ ಅದೇ ಶರೀರದೊಳಗೆ ಸೇರುವುದು ನಡೆಯುತ್ತಿದೆ. ಈ ಸಾಧನೆ ಹನ್ನೆರಡು (12) ವರ್ಷಗಳು ಮಾಡಿದ ನಂತರ ಧೈರ್ಯವಾಗಿ ಪರಕಾಯ ಪ್ರವೇಶ ವಿದ್ಯೆಯನ್ನು ಕಲಿತಿದ್ದೇವೆಂದು ಹೇಳಬಹುದು. ಉಪವಾಯುಗಳನ್ನು ಬಿಡದಂತೆ ಜೀವಿಯು ಹೊರಗೆ ಬಂದರೆ ಪುನಃ ಆ ಶರೀರದೊಳಗೆ ಪ್ರವೇಶಿಸುವುದಕ್ಕೆ ಸಾಧ್ಯವಾಗುವುದಿಲ್ಲ.

**172) ಪ್ರಶ್ನೆ :– ಸೂರ್ಯ ಚಂದ್ರ ಗ್ರಹಣ ಸಮಯದಲ್ಲಿ ದರ್ಭೆ ಹುಲ್ಲನ್ನು ಆಹಾರ ಪದಾರ್ಥಗಳಲ್ಲಿ ಹಾಕುತ್ತಾರೆ. ಬಹುಶಃ ಗ್ರಹಣ ಸಮಯದಲ್ಲಿ ಬರುವ ಸೂರ್ಯ, ಚಂದ್ರ ಕಿರಣಗಳಲ್ಲಿ ಇರುವ ದೋಷ ಕಿರಣಗಳನ್ನು ನಿರ್ವೀರ್ಯ ಮಾಡುವ ಗುಣ ಮೂಲಿಕೆಗೆ (ದರ್ಭೆಹುಲ್ಲಿಗೆ) ಇದೆಯಾ?**

**ಉತ್ತರ :–** ದರ್ಭೆಗಳಿಗೆ ಸ್ವಲ್ಪ ಪ್ರತ್ಯೇಕ ನಿರೋಧಕ ಶಕ್ತಿ ಇದೆ. ಆದ್ದರಿಂದ ಗ್ರಹಣ ಸಮಯದಲ್ಲಿ ದರ್ಭೆಯನ್ನು ಬಳಸಬಹುದು.

**173) ಪ್ರಶ್ನೆ:– ಮದುವೆ ವಾಹನಗಳು, ತೀರ್ಥಯಾತ್ರೆಗಳಿಗೆ ಹೊರಟು ಹೋದ ಬಸ್ಸುಗಳ ಪ್ರಮಾದಗಳ ಹಿಂದೆ ದೇವರ ಸೈನಿಕರಂತೆ ಕೆಲಸ ಮಾಡುತ್ತಿರುವ ಭೂತಗಳ, ಗ್ರಹಗಳ ಪ್ರಭಾವ ಇದೆಯೆಂದು ನೀವು ಹೇಳಿದ್ದೀರ. ನಾವು ಅಜ್ಞಾನಿಗಳೆಂದು ಅವರಿಗೇ ತಿಳಿಯದವರನ್ನು ಜ್ಞಾನ ತಿಳಿಯದ ಮುನ್ನವೇ ಸಾಯಿಸಿದ ಗ್ರಹಗಳ ಕಾರ್ಯ ಆತುರ ಪಟ್ಟಂತೆ ಆಗುತ್ತದಲ್ಲವೇ! 'ಅಜ್ಞಾನಿಗಳಾಗಿ ಮರಣಿಸಿದವನು, ಮತ್ತೆ ಅಜ್ಞಾನಿಗಳಾಗಿ ಹುಟ್ಟುತ್ತಾರೆನ್ನುವ' ಸೂತ್ರವನ್ನು ಹೇಳಿ ದೇವರು ಅವರನ್ನು ಏಕೆ ತಡೆಯಲಿಲ್ಲ. ಅವರ ಮರಣಕ್ಕೆ ಕಾರಣ ಜ್ಞಾನಿಗಳಿಗೆ ತಿಳಿದಿದೆ, ಆದರೆ ಅವರನ್ನುಹಾಗೆ ಸಾಯಿಸುವುದಕ್ಕೆ ಕಾರಣವನ್ನು ಅವರಿಗೆ ತಿಳಿಸದೆ ಸಾಯಿಸಿಹಾಕುವುದು ಎಷ್ಟರಮಟ್ಟಿಗೆ ಸಮಂಜಸ?**

**ಉತ್ತರ :–** ಸಮಂಜಸವೊ, ಅಸಮಂಜಸವೊ ಗ್ರಹಗಳು, ಭೂತಗಳು ಆಲೋಚಿಸುವುದಿಲ್ಲ. ತಪ್ಪಿಗೆ ತಕ್ಕ ಶಿಕ್ಷೆ ತಕ್ಷಣ ತೋರಿಸಬೇಕೆನ್ನುವುದು ಅವರ ಭಾವನೆ. ಅತ್ಯಾಚಾರ ಮಾಡುವವನನ್ನು ದೊರೆತ ಕೂಡಲೇ ಹೊಡೆಯುತ್ತಾರೆ.

ಆಗ ಅವನನ್ನು ಏಕೆ ಹೊಡೆಯಬೇಕು, ಅವನಿಗೆ ತಿಳಿಯದೆ ಅತ್ಯಾಚಾರ ಮಾಡಿದ್ದಾನೆಂದು ಅಂದುಕೊಳ್ಳುವುದಿಲ್ಲ. ಹಾಗೆಯೇ ಸಾಂಪ್ರದಾಯ ರಹಿತವಾಗಿ, ಜ್ಞಾನ ಇಲ್ಲದೇ ಮದುವೆ ಮಾಡುವವರನ್ನು ದೇವರನ್ನು ಸ್ವಲ್ಪವೂ ನೆನಪಿಸಿಕೊಳ್ಳದೆ ದೇವತೆಗಳನ್ನು ಆರಾಧಿಸುವುದಕ್ಕೆ ತೀರ್ಥಯಾತ್ರೆಗಳಿಗೆ ಹೋಗುವವರು ಭೂತಗಳ ಗ್ರಹಗಳ ಲೆಕ್ಕದಲ್ಲಿ ಹೊರಗೆ ಅತ್ಯಾಚಾರ ಮಾಡುವವರಿಗಿಂತ ಮದುವೆ, ದೇವತೆಗಳ ದರ್ಶನಾರ್ಥ ಹೋಗುವವರು ಇನ್ನೂ ದುರ್ಮಾರ್ಗರಾಗಿ ಕಾಣಿಸಿರುತ್ತಾರೆ. ಆದ್ದರಿಂದ ಕೂಡಲೇ ಅವರಮೇಲೆ ಕಾರ್ಯವಾಗಿ ರಸ್ತೆ ಅಪಘಾತಗಳನ್ನು ಉಂಟುಮಾಡುತ್ತಿದ್ದಾರೆ.

**174) ಪ್ರಶ್ನೆ :– ಆಹಾರವನ್ನು ತೆಗೆದುಕೊಳ್ಳದೇ ಹೋದರೂ ಪ್ರಹ್ಲಾದ್ ಜಾನಿ ಶರೀರದಲ್ಲಿ ಶಕ್ತಿಯನ್ನು ಕೊಟ್ಟ ಆತ್ಮ ಮತ್ತಿನ ಪದಾರ್ಥಗಳು ತೆಗೆದುಕೊಂಡ ವ್ಯಕ್ತಿಯಲ್ಲಿ ಪ್ರಭಾವಿತವಾಗುವುದು, ಅದರಿಂದ ಬಲಹೀನನಾಗಿ ಹೋಗುವುದು ವಿಚಿತ್ರವಾಗಿದೆ.**

**ಉತ್ತರ :–** ಆತ್ಮ ಶಕ್ತಿಯಿಂದ ಕೂಡಿಕೊಂಡವನು. ಆತ್ಮ ಚೈತನ್ಯವಾಗಿದೆ. ಅಂತಹ ಆತ್ಮ ಬಲಹೀನ ಆಗುತ್ತಿಲ್ಲ ಆದರೇ, ಮತ್ತಿನ ಪಾನೀಯಗಳನ್ನು ಸ್ವೀಕರಿಸಿದವರಿಗೆ ತನ್ನ ಶಕ್ತಿಯನ್ನು ಕೊಡುವುದಿಲ್ಲ ಎಂದು ಹೇಳುತ್ತಿದೆ. ತಾನೇ ಬಲವಾಗಿದ್ದರೂ, ನನ್ನ ಆತ್ಮ ತನ್ನ ಬಲವನ್ನು ಕುಡಿದವನಿಗೆ ಕೊಡುವುದಿಲ್ಲ ಎಂದು ಹೇಳುವುದಕ್ಕೆ ಕಾರಣ ಮತ್ತಿನ ಪಾನೀಯಗಳೆಂದರೇ ಆತ್ಮಗೆ ಸರಿಹೋಗುವುದಿಲ್ಲವೆಂದು ತಿಳಿಯುತ್ತಿದೆ. ಕುಡಿದವನಿಗೆ ನಶೆ ಮೆದುಳಿನಲ್ಲಿ ಸೇರುವುದರಿಂದ ಮೆದುಳಿನಿಂದ ಪ್ರಾರಂಭವಾಗುವ ಆತ್ಮಗೆ ನಶೆ ಮೆದುಳನ್ನು ಸೇರಿರುವುದರಿಂದ ತನ್ನ ಗೌರವಕ್ಕೆ ಭಂಗ ಏರ್ಪಡುತ್ತಿದೆ. ತಾನು ಅನುಭವಕ್ಕೆ ತರುವ ಕರ್ಮಗಳನ್ನು ಕರ್ಮಗಳನ್ನು ಜೀವಿಯು ಪೂರ್ತಿಯಾಗಿ ಅನುಭವಿಸದೇ ಮತ್ತಿನೊಳಗೆ ಸೇರಿಹೋಗುವುದರಿಂದ ಜೀವಿಯು ಅನುಭವಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ಕರ್ಮ ಜಾರಿ ಮಾಡುವ ಆತ್ಮಗೆ ಆತಂಕವಾಗಿ ಇರುವುದರಿಂದ ಕುಡಿದವನಿಗೆ ತನ್ನ ಚೈತನ್ಯವನ್ನು ಕೊಡುವುದಿಲ್ಲ ಎಂದಿದ್ದಾನೆ. ಆದ್ದರಿಂದ ಕುಡಿದವನಿಗೆ ಬಲ ಇಲ್ಲದಂತೆ ಇರುತ್ತದೆ.

ಕುಡಿದ ಮನುಷ್ಯನಿಗೆ ಬಲ ಇಲ್ಲದಂತಿರುವುದರಿಂದ ಅವನನ್ನು ಚಿಕ್ಕಹುಡುಗನು ಕೂಡಾ ಹೊಡೆಯುತ್ತಾನೆ. ಮತ್ತನ್ನು ಕುಡಿದವನಿಗೆ ಆತ್ಮ ಚೈತನ್ಯವನ್ನು (ಬಲವನ್ನು) ಕೊಡದಿರುವುದರಿಂದ ಕುಡಿದವನು ನಡೆಯಲಾರದೆ ಕೆಳಗೆ ಬಿದ್ದುಹೋಗುತ್ತಾನೆ. ಈ ವಿಷಯ ಎಲ್ಲರಿಗೂ ತಿಳಿದಿರುವುದೇ.

**175) ಪ್ರಶ್ನೆ :– ಪಶು, ಪಕ್ಷಿ, ವೃಕ್ಷ, ಲತಾದಿಗಳಲ್ಲಿ ಬುದ್ಧಿ, ಚಿತ್ತ, ಅಹಂ, ಮನಸ್ಸು ಮನುಷ್ಯರೊಳಗೆ ನಿರ್ವಹಿಸಿದಂತೆ ವಿಧಿಗಳನ್ನು ನಿರ್ವಹಿಸುತ್ತವಾ?**

**ಉತ್ತರ :–** ಬೇರೆ ಬೇರೆ ಜಾತಿಗಳ ಜೀವರಾಶಿಗಳಲ್ಲಿ ಅವುಗಳ ನಿರ್ಮಾಣ ಬೇರೆ ಇರುತ್ತದೆ ಆದರೇ ಕೆಲಸಗಳು ಮಾತ್ರ ಎಲ್ಲಾ ಮನುಷ್ಯರಂತೆ ಮಾಡುತ್ತವೆ.

**176) ಪ್ರಶ್ನೆ :– ಮೂಲಿಕಾ ಚಿಕಿತ್ಸೆಯಲ್ಲಿ ಗುಣ ಪ್ರೇರಣೆ ಮಾಡುವ ಆಹಾರವನ್ನು ಕುರಿತು ಬರೆಯಲ್ಪಟ್ಟಿದೆ. ಆದರೆ ಆಹಾರದಿಂದ ಕಾಮಪ್ರಕೋಪ ನಡೆಯುವುದಿಲ್ಲ ಎಂದು ನೀವು ಹೇಳುತ್ತಿದ್ದೀರ. ಆಹಾರ ಮಾನಸಿಕ ಸ್ಥಿತಿಮೇಲೆ ಪ್ರಭಾವ ತೋರಿಸುವುದಿಲ್ಲವಾ?**

**ಉತ್ತರ :–** ಮೂಲಿಕಾ ಚಿಕಿತ್ಸೆಯಲ್ಲಿ ಆಹಾರದಿಂದ ಗುಣ ಪ್ರೇರಣೆ ನಡೆಯುತ್ತದೆ ಎಂದು ಬರೆದಿರುವುದು ನಾನು ಕೂಡಾ ನೋಡಿದ್ದೇನೆ. "ವಸ್ತು ಗುಣದೀಪಿಕ" ಎನ್ನುವ ಗ್ರಂಥದಲ್ಲಿ ಬದನೆಕಾಯನ್ನು ತಿಂದರೆ ಈ ಫಲಿತ ಇರುತ್ತದೆ, ತೊಂಡೆಕಾಯನ್ನು ತಿಂದರೇ ಈ ಫಲಿತ, ಹುಣಸೆಕಾಯನ್ನು ತಿಂದರೇ ಈ ಫಲಿತ ಎಂದು ಸಾಧಾರಣವಾಗಿ ಬರೆದಿದ್ದಾರೆ. ಬದನೆಕಾಯನ್ನು ತಿಂದರೇ ನೋವುಗಳು ಬರುತ್ತವೆ ಎಂದು ಇದೆಯೆಂದುಕೊಳ್ಳಿ ಅದು ಎಲ್ಲರಲ್ಲಿ ನೋವುಗಳು ಬರುತ್ತಿಲ್ಲ. ಬರೆದಂತೆ ಕೆಲವರಲ್ಲಿ ಮಾತ್ರ ವಾಯು ನೋವುಗಳು ಬರುತ್ತಿವೆ. ಹಾಗೆಯೇ ಎಂದು ಔಷಧಿಗಳು ಹೇಳಿರುವವು ಹೇಳಿದಂತೆ ಕೆಲಸ ಮಾಡುತ್ತಿಲ್ಲ. ಆದರೇ ಔಷಧಿಗಳು ಕೆಲವರಲ್ಲಿ ಕೆಲಸ ಮಾಡುವುದು ಕೆಲವರಲ್ಲಿ ಮಾಡದಿರುವುದು ಏನು? ಎಂದು ಆಲೋಚಿಸಿದರೆ ಮೂಲಿಕೆಗಳು, ಔಷಧಿಗಳು, ಆಹಾರಗಳು ಅವುಅವುಗಳ ಕೆಲಸವನ್ನು ಅವು ಮಾಡುತ್ತಿವೆ. ಆದರೂ ಶರೀರದಲ್ಲಿ ಇರುವ

ಆತ್ಮ ಅವುಗಳನ್ನು ಎಲ್ಲಿಯತನಕ ಅನುಮತಿಸಬೇಕೊ ಅಲ್ಲಿಯವರೆಗೇ ಅನುಮತಿಸುವುದರಿಂದ, ಅಲ್ಲಿಯವರಗೆ ಅವು ಶರೀರದಲ್ಲಿ ಉಪಯೋಗಪಡುತ್ತಿವೆ. ಜೀವಿಗಳ ಕರ್ಮವನ್ನನುಸರಿಸಿ ಆತ್ಮ ಅನುಮತಿ ಇರುವುದರಿಂದ ಅನುಮತಿ ಪ್ರಕಾರವೇ ಶರೀರದಲ್ಲಿ ಕೆಲವರಲ್ಲಿ ಹೆಚ್ಚಾಗಿ, ಕೆಲವರಲ್ಲಿ ಕಡಿಮೆಯಗಿ ಉಪಯೋಗಪಡುತ್ತಿವೆ. ಮನುಷ್ಯನಲ್ಲಿ ಆತ್ಮ ನೀಡುವ ನಿರೋಧಕ ಶಕ್ತಿಯಿಂದ ಆಹಾರಗಳಾಗಲಿ ಔಷಧಿಗಳಾಗಲಿ ಕೆಲಸ ಮಾಡುವುದು ನಡೆಯುತ್ತಿದೆ. ಉದಾಹರಣೆಗೆ ಸಾರಾಯಿ ಮತ್ತನ್ನುಂಟುಮಾಡಿ ಮನುಷ್ಯನನ್ನು ಮಾನಸಿಕವಾಗಿ ಬದಲಾಯಿಸಬಲ್ಲದು. ಮಾತನಾಡದವನನ್ನು ಕೂಡಾ ಹೆಚ್ಚಾಗಿ ಮಾತನಾಡುವಂತೆ ಮಾಡುತ್ತದೆ. ಆದರೇ ಒಬ್ಬ ಮನುಷ್ಯ ಚಿಕ್ಕ ಗ್ಲಾಸು ಸಾರಾಯಿಕುಡಿದರೂ ಅವನಲ್ಲಿ ಅದು ಚೆನ್ನಾಗಿ ಕೆಲಸಮಾಡಿ ಆ ಮನುಷ್ಯನನ್ನು ಹೆಚ್ಚಾಗಿ ಮಾತನಾಡುವಂತೆ ಮಾಡುತ್ತದೆ. ಅದೇ ಸಾರಾಯಿಯನ್ನು ಮತ್ತೊಬ್ಬ ಮನುಷ್ಯ ಕುಡಿದರೂ ಕುಡಿಯದಂತೇ ಇರುತ್ತಾನೆ. ಆತನಲ್ಲಿ ಯಾವ ಬದಲಾವಣೆ ಬರುವುದಿಲ್ಲ. ಆತನು ಒಂದು ದೊಡ್ಡ ಸಾರಾಯಿ ಕುಡಿದರೂ ಆತನಲ್ಲಿ ಯಾವ ಬದಲಾವಣೆ ಬರುವುದಿಲ್ಲ. ಆತನು ಮಾತನಾಡುವುದಿಲ್ಲ. ಹಾಗೆ ಕೆಲವರಲ್ಲಿ ಆಹಾರಗಳು, ಔಷಧಿಗಳು ಆತ್ಮ ಆಜ್ಞೆಯನ್ನು ಅನುಸರಿಸಿ ಕೆಲಸ ಮಾಡುತ್ತವೆ. ಅಷ್ಟೇ ಹೊರತು ಯಾವ ಪದಾರ್ಥವಾಗಲಿ ಸ್ವತಃವಾಗಿ ಕೆಲಸ ಮಾಡುವುದಿಲ್ಲ. ಎಲ್ಲಾ ವಿಷಯಗಳಲ್ಲಿ ಹೆಚ್ಚುಕಡಿಮೆಯಾಗಿ ಆತ್ಮ ಆಡಿಸುವ ಆಟದ್ದೇ ಹೊರತು ಆಹಾರದಿಂದ ಏನೂ ನಡೆಯುವುದು ಇಲ್ಲವೆಂದು ಗ್ರಹಿಸಬೇಕು.

**177) ಪ್ರಶ್ನೆ :– ಗರ್ಭಿಣಿ ಸ್ತ್ರೀ ಇರುವ ವಾತಾವರಣ ಹಿಂಸಾಪೂರಿತ ಚರ್ಯೆ ಯಲ್ಲಿದ್ದು ಮಾನಸಿಕ ಕ್ಷೋಭೆ ಅನುಭವಿಸುತ್ತಾ ಇದ್ದರೇ, ಗರ್ಭದಲ್ಲಿ ಬೆಳೆಯುವ ಮಗುವಿನ ಮೇಲೆ ಕೆಟ್ಟ ಬದಲಾವಣೆಗಳು ಬರುತ್ತವಾ?**

**ಉತ್ತರ :–** ಹೊರಗಿನ ವಾತಾವರಣಕ್ಕು ಗರ್ಭದಲ್ಲಿ ಬೆಳೆಯುವ ಮಗುವಿಗು ಯಾವ ಸಂಬಂಧವಿರುವುದಿಲ್ಲ.

**178) ಪ್ರಶ್ನೆ :– ಭಗವದ್ಗೀತೆಯಲ್ಲಿ ಕಲ್ಪಿತ ಶ್ಲೋಕಗಳನ್ನು ಸೇರಿಸಿದವರು ವೇದ ನಿಂದನೆ ಹೊಂದಿದ "ತ್ರೈಗುಣ್ಯ ವಿಷಯಾ ವೇದ" ವಂತಹ ಶ್ಲೋಕಗಳನ್ನು ಏಕೆ ತೆಗೆದುಹಾಕಲಾರದೆ ಹೋಗಿದ್ದಾರೆ?**

**ಉತ್ತರ :–** ಅವುಗಳನ್ನು ಮುಟ್ಟಿಕೊಂಡರೆ ಏನು ಆಗುತ್ತದೋ ಎನ್ನುವ ಭಯದಿಂದ ಆ ಶ್ಲೋಕಗಳನ್ನು ಮುಟ್ಟಿಕೊಳ್ಳುವ ಸಾಹಸ ಮಾಡಲಾರದೆ ಹೋಗಿದ್ದಾರೆ.

**179) ಪ್ರಶ್ನೆ :– ಭಗವದ್ಗೀತಾ ರಚನೆ ನಡೆದಾಗ ಶ್ರೀಕೃಷ್ಣನು ಬದುಕಿದ್ದಾನೆ ಅಲ್ಲವೆ! ಆತನ ಜ್ಞಾನ ಗ್ರಂಥವಾಗಿರುವುದಕ್ಕೆ ಸಂತೋಷಿಸಿದ್ದಾನಾ?**

**ಉತ್ತರ :–** ವ್ಯಾಸನಿಂದ ಬರೆಯಲ್ಪಡಬೇಕೆನ್ನುವ ಉದ್ದೇಶದಿಂದಲೇ ಭಗವದ್ಗೀತೆಯನ್ನು ಅರ್ಜುನನಿಗೆ ಹೇಳಿದ್ದಾನೆ. ಆತನು ಅಂದುಕೊಂಡಂತೇ ವ್ಯಾಸನಿಂದ **'ಭಗವದ್ಗೀತೆ'** ಎನ್ನುವ ಹೆಸರಿಂದ ತನ್ನ ಬೋಧನೆ ಗ್ರಂಥರೂಪವಾಗಿದೆ. ತನ್ನ ಗ್ರಂಥವನ್ನು 'ಭಗವದ್ಗೀತೆ' ಎನ್ನುವ ಹೆಸರು ಇಡುವುದು ಕೃಷ್ಣನಿಗೆ ಸರಿಹೋಗಲಿಲ್ಲವೆಂದು, ಅಸಂತೃಪ್ತಿಯಾಗಿ ಇತ್ತೆಂದು ತಿಳಿದಿದೆ. ಗ್ರಂಥ ತಯಾರಾದ ನಂತರ ಇಜ್ರಾಯೇಲ್ ದೇಶದಲ್ಲಿ ಮೋಷೇ ಪ್ರವಕ್ತಗೆ ಭಗವದ್ಗೀತೆಯನ್ನು ಕೃಷ್ಣನು ಸ್ವತಃವಾಗಿ ಕೊಟ್ಟು ಗ್ರಂಥದ ಹೆಸರು **"ತೌರಾತ್"** ಎಂದು ಹೇಳಿದ್ದಾನೆ. ತೌರಾತ್ ಗ್ರಂಥವೆಂದು ಹೆಸರು ಇಟ್ಟ ನಂತರ ಸ್ವಲ್ಪ ಸಂತೋಷಉಂಟಾಗಿದೆ. ಆಕಾಶ ಶಬ್ದದಿಂದ ಬಂದಿರುವ ಜ್ಞಾನವೇ ಭಗವದ್ಗೀತೆ ಆದರೂ ಅದು ಭಗವಂತನು ಹೇಳಿದಂತೆ ಇರಬಾರದೆಂದು, ಆಕಾಶದಿಂದ ಬಂದಹಾಗೆ ತಿಳಿಯಬೇಕೆನ್ನುವ ಭಾವನೆ ಆತನಲ್ಲಿ ಇತ್ತು.

**180) ಪ್ರಶ್ನೆ :– ನಿನ್ನೆಯ (03–09–2016) ವಾರ್ತಾ ಪತ್ರಿಕೆಯಲ್ಲಿ 147 ವರ್ಷಗಳು ಒಬ್ಬ ವ್ಯಕ್ತಿ ಬದುಕಿದಂತೆ ತೋರಿಸಿದ್ದಾರೆ. ಮಾನವನ ಆಯುಷ್ಷು 120 ವರ್ಷಗಳೇ ಅಲ್ಲವೆ! ಮತ್ತೆ 147 ವರ್ಷಗಳು ಆ ಮನುಷ್ಯ ಹೇಗೆ ಬದುಕಿದ್ದಾನೆ?**

ಉತ್ತರ :– ಹನ್ನೆರಡು ನವಗ್ರಹಗಳ ದಶ ಸಂವತ್ಸರಗಳು ಪೂರ್ತಿಯಾಗಿ ಕಳೆಯುವುದಕ್ಕೆ 120 ವರ್ಷಗಳು ಹಿಡಿಸುತ್ತದೆ. ಅಷ್ಟೇ ಹೊರತು ಅದು ಮನುಷ್ಯನ

ಆಯುಸ್ಸು ಅಲ್ಲ. ಮನುಷ್ಯನ ಆಯುಸ್ಸು ಸಾವಿರ ವರ್ಷಗಳವರೆಗಾದರೂ ಇರಬಹುದು. 120 ವರ್ಷಗಳು ಗ್ರಹಗಳ ದಶಾಚಾರ ವರ್ಷಗಳು ಮಾತ್ರವೇ.

**181) ಪ್ರಶ್ನೆ :– ವೃಕ್ಷಗಳಲ್ಲಿ ವೃಕ್ಷವೆಲ್ಲಾ ಆವರಿಸಿರುವ ಆತ್ಮ ಅವುಗಳ ಹಣ್ಣುಗಳಲ್ಲಿ ಸಹ ವ್ಯಾಪಿಸಿರುತ್ತದೆ ಅಲ್ಲವೆ? ಹಣ್ಣು ಉದುರಿದರೂ ನಾವು ಕಿತ್ತರೂ ಆತ್ಮವನ್ನು ಖಂಡಿಸಿದಂತಾಗುತ್ತದಾ? ಹಣ್ಣನ್ನು ತಿಂದರೇ ಆತ್ಮವನ್ನು ತಂದಂತೆ ಆಗುತ್ತದಾ?**

**ಉತ್ತರ :–** ವೃಕ್ಷವೆಲ್ಲಾ ಆತ್ಮ ವ್ಯಾಪಿಸಿರುವುದು ನಿಜ. ಅವುಗಳ ಕಾಯಿಯಲ್ಲಿ ಕೂಡಾ ವ್ಯಾಪಿಸಿರುತ್ತದೆ. ಕಾಯಿ ಹಣ್ಣಾಗಿ ಬದಲಾದಾಗ ಅದರಲ್ಲಿ ಆತ್ಮ ಪ್ರವೇಶಿಸುವುದಿಲ್ಲ. ಆಗ ತನ್ನಷ್ಟಕ್ಕೆ ಅದೇ ಕೊಂಬೆಯಿಂದ ಉದುರಿಬೀಳುತ್ತದೆ. ಹಣ್ಣಿನಲ್ಲಿ ಆತ್ಮಶಕ್ತಿ ಇರುವುದಿಲ್ಲ. ಕಾಯಲ್ಲಿ ಆತ್ಮಶಕ್ತಿ ಇರುತ್ತದೆ. ಹಸಿ ಕಾಯನ್ನು ಕಿತ್ತರೆ ಆತ್ಮವನ್ನು ಕಿತ್ತಂತಾಗುತ್ತದೆ. ಆಗ ಕಾಯಿಯಲ್ಲಿ ಆತ್ಮ ಇದ್ದರೂ ಅದು ಎರಡು ನಿಮಿಷಗಳಲ್ಲಿ ಇಲ್ಲದಂತೆ ಹೋಗುತ್ತಿದೆ. ನಂತರ ಕಾಯನ್ನು ತಿಂದರೂ ಆತ್ಮದೊಂದಿಗೆ ಯಾವ ಸಂಬಂಧವೂ ಇಲ್ಲ. ತುಂಡಾದ ಹಲ್ಲಿ ಬಾಲದಲ್ಲಿ ಶಕ್ತಿ ಎರಡು ನಿಮಿಷಗಳಲ್ಲಿ ಅಡಗಿ ಹೋಗುವಂತೆ ಕಾಯಿಯಲ್ಲಿ ಕೂಡಾ ಇಲ್ಲದಂತೆ ಹೋಗುತ್ತದೆ.

**182) ಪ್ರಶ್ನೆ :– ತಾಯಿ ಗರ್ಭದಲ್ಲಿ ಜೀವಿಯು ಇಲ್ಲದಿರುವಾಗ ಆ ದೇಹಕ್ಕೆ ಕರ್ಮ ಇಲ್ಲದಂತೆ ಅಲ್ಲವೆ! ಆದರೆ ಕೆಲವರ ಗರ್ಭಗಳಲ್ಲಿ ಅಂಗವೈಕಲ್ಯ ಶರೀರಗಳು ಬೆಳೆಯುತ್ತಿವೆ. ಇಲ್ಲ ತಾಯಿ ತಂದೆಯರ ಕರ್ಮದಿಂದ ಹಾಗೆ ಬೆಳೆಯುತ್ತಿವೆಯೆಂದರೇ, ಯಾರ ಕರ್ಮವನ್ನು ಅವರೇ ಅನುಭವಿಸಬೇಕಲ್ಲವೆ? ಇದಕ್ಕೆ ನೀವೇನನ್ನುತ್ತೀರಾ?**

**ಉತ್ತರ :–** ಮನುಷ್ಯನಿಗೇ ಅಲ್ಲದೆ ಪ್ರತಿ ಜೀವಿಗೂ ಕರ್ಮಪತ್ರ ಬರೆಯಲ್ಪಟ್ಟಿದೆ. ಒಬ್ಬ ಮನುಷ್ಯನನ್ನು ತೆಗೆದುಕೊಂಡು ನೋಡಿದರೇ ಆತನ ಆಯುಸ್ಸು ಮೊದಲು ಹುಟ್ಟಿದಾಗಿನಿಂದ ಪ್ರತಿ 69 ವರ್ಷಗಳ, ಐದು (5) ತಿಂಗಳ, ಹತ್ತು (10) ದಿನಗಳಿಗೆ ಒಂದು ಬಾರಿ ನಡೆದ ಕರ್ಮವೆಲ್ಲವೂ ಸೇರಿ ಮುಂಬರುವ ಜನ್ಮ ಹೇಗೆ ಇರಬೇಕೋ ನಿರ್ಣಯ ಮಾಡಿ ಬರೆಯಲ್ಪಟ್ಟಿರುತ್ತದೆ. ಮನುಷ್ಯ ಎಷ್ಟು

ಕಾಲ ಬದುಕಿದರೂ 69 ವರ್ಷಗಳ 5 ತಿಂಗಳ, 10 ದಿನಗಳಿಗೆ ಒಂದು ಸಲ ಕರ್ಮಪತ್ರ ಅಥವಾ ಕರ್ಮಗ್ರಂಥ ಬರೆಯಲ್ಪಡುತ್ತಿದೆ. ಒಬ್ಬ ವ್ಯಕ್ತಿ 80 ವರ್ಷಗಳಿಗೆ ಸತ್ತುಹೋಗಿದ್ದಾನೆಂದುಕೊಳ್ಳಿ. ಆಗ ಅವರು ಎಲ್ಲಿ ಹುಟ್ಟಬೇಕೆಂದು ಹೇಗೆ ಹುಟ್ಟಬೇಕೆಂದು ಎಲ್ಲ ವಿವರಗಳ ಕರ್ಮ 69 ವರ್ಷ 5 ತಿಂಗಳ, 10 ದಿನಗಳಿಗೇ ನಿರ್ಣಯಿಸಲ್ಪಟ್ಟಿರುತ್ತದೆ. ಆದ್ದರಿಂದ ಆ ಮನುಷ್ಯ ನಂತರ ಕುಂಟನ ಜನ್ಮ ಎತ್ತಬೇಕಾಗಿದ್ದರೇ ಆತನಿಗೆ ಸಂಬಂಧಿಸಿದ ಗರ್ಭದಲ್ಲಿನ ಶಿಶು ಕುಂಟನಾಗಿ ತಯಾರಾಗುತ್ತದೆ. ಆ ಶಿಶು ಜನ್ಮಿಸಿದ ನಂತರ ಅದರಲ್ಲಿ ಸೇರಬೇಕಾದವನು ಹೋಗಿ ಸೇರುತ್ತಾನೆ. ಆದರೇ ಮೊದಲೇ ಕರ್ಮ ನಿರ್ಣಯ ನಡೆದಿರುತ್ತದೆನ್ನುವ ವಿಷಯಬಹಳ ಜನರಿಗೆ ತಿಳಿದಿಲ್ಲ. ಈ ವಿಷಯ "ಕಲಿಯುಗ ಎಂದಿಗೂ ಯುಗಾಂತವಾಗದು" ಎನ್ನುವ ಗ್ರಂಥದಲ್ಲಿ ಬರೆದಿದ್ದೇವೆ. ಮನುಷ್ಯ ಮರಣಿಸಿದಾಗ ಕರ್ಮ ನಿರ್ಣಯ ನಡೆಯುತ್ತದೆ ಎಂದು ಸಹ ಕೆಲವು ಕಡೆ ಹೇಳಿದ್ದೇವೆ. ಮರಣಿಸಿದಾಗ ಆತ್ಮ ಮುದ್ರೆ (ಆತ್ಮ ಅನುಮತಿ) ಹೊಂದಿ ಎರಡನೆ ಜನ್ಮಕ್ಕೆ ಬರಬೇಕಾಗಿದೆ. ಕರ್ಮ ನಿರ್ಣಯ ಮೊದಲೇ ನಡೆದಿರುತ್ತದೆ.

**183) ಪ್ರಶ್ನೆ :– ಸೃಷ್ಠಿ ಆದಿಯಲ್ಲಿ ಕರ್ಮ ಇಲ್ಲದಿರುವಾಗ ಮಾನವರೇ ಅಲ್ಲದೆ ಎಲ್ಲ ಜೀವರಾಶಿಗಳನ್ನು ಸೃಷ್ಠಿಸಿದ್ದರೇ ಅಂಡಜ, ಪಿಂಡಜ, ಉದ್ಭಿಜಗಳು ಎಷ್ಟು ಇದ್ದವು?**

**ಉತ್ತರ :–** ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿ ವಿಭೂತಿ ಯೋಗದಲ್ಲಿ ಜೀವರಾಶಿಗಳ ಸೃಷ್ಠಿಯನ್ನು ಕುರಿತು ಸಂಪೂರ್ಣವಾಗಿ ಹೇಳಿದ್ದೇವೆ. ಅದರಲ್ಲಿ ಮನುಷ್ಯರು 108 ಹುಟ್ಟಿರುವಾಗ ಅದರಲ್ಲಿ ಪುರುಷರು 54 ಮಂದಿ, ಸ್ತ್ರೀಯರು 54 ಮಂದಿ. ಅವರಲ್ಲಿ ಪುರುಷರಲ್ಲಿ 27 ಮಂದಿ ಒಳ್ಳೆಯವರು, 27 ಮಂದಿ ಕೆಟ್ಟವರಾಗಿ (ಒಳ್ಳೆಯ ಕೆಟ್ಟ) ಗುಣಗಳಲ್ಲಿ ಹುಟ್ಟುವಂತೆ ಮಾಡಿದ್ದಾನೆ. ಹಾಗೆಯೇ ಅಂಡಜಗಳು, ಪಿಂಡಜ, ಉದ್ಭಿಜಗಳು 108, 108, 108 ಹುಟ್ಟುವಂತೆ ಮಾಡಲ್ಪಟ್ಟಿವೆ. ಮೊದಲು ಪ್ರಾಣಿಗಳು ಇಲ್ಲ. ನಂತರ ನಡೆಯುವ ಕಾಲದಲ್ಲಿ ಮನುಷ್ಯರ ಸಂಖ್ಯೆ ಕಡಿಮೆಯಾಗಿ ಪ್ರಾಣಿಗಳ ಸಂಖ್ಯೆ ಬೆಳೆದಿದೆ. ಭೂಮಿಮೇಲೆ

ಸ್ವಲ್ಪ ಕಾಲಕ್ಕೆ ಎಲ್ಲ ಸಂಖ್ಯೆಗಳು ಸಮಾನವಾಗಿವೆ. ನಂತರ ಕಾಲಕ್ರಮೇಣ ಜೀವರಾಶಿಗಳ ಸಂಖ್ಯೆ ಬೆಳೆಯುತ್ತಾ ಬಂದಿದೆ.

**184) ಪ್ರಶ್ನೆ :– ಪಿಂಡ ದಶೆಯಿಂದ ಎಲ್ಲ ಅವಯವಗಳು ಬೆಳೆದರೂ ಮೂತ್ರವನ್ನು ತಯಾರು ಮಾಡುವ ಕಿಡ್ನೀಗಳನ್ನು ಮೂತ್ರಪಿಂಡಗಳೆಂದು ಕರೆಯುತ್ತಲೇ ಇದ್ದಾರೆ? ಏಕೆ?**

**ಉತ್ತರ :–** ಗರ್ಭದಲ್ಲಿನ ಶಿಶು ಆಕೃತಿಯಲ್ಲಿ ಮೂತ್ರವನ್ನು ತಯಾರು ಮಾಡುವವು ಇರುವುದರಿಂದ ಅವುಗಳನ್ನು ಮೂತ್ರಪಿಂಡಗಳೆಂದು ಕರೆಯುತ್ತಿದ್ದಾರೆ. ಅವನ ಆಕೃತಿಯನ್ನು ಅನುಸರಿಸಿ ಆ ಹೆಸರು ಬರುವುದು ನಡೆದಿದೆ.

**185) ಪ್ರಶ್ನೆ :– ಜೀವಿಗೆ ಜ್ಞಾನದ ಮೇಲೆ ಶ್ರದ್ಧೆ ಪೂರ್ವ ಜನ್ಮದ ಸುಕೃತದಿಂದ ಲಭ್ಯವಾಗುತ್ತದೆ ಎಂದಿದ್ದೀರಲ್ಲವೆ! ಆದರೇ ಪೂರ್ವಜನ್ಮ ಇಲ್ಲದಂತೆ ಅದೇ ಮೊದಲ ಜನ್ಮವಾದರೇ ಆ ಜೀವಿಗೆ ಶ್ರದ್ಧೆ ಹೇಗೆ ಉಂಟಾಗುತ್ತದೆ. ಸೃಷ್ಠಿ ಮೊದಲ ಜನ್ಮ ಉಂಟಾದ ಎಷ್ಟೋ ಜೀವಿಗಳಲ್ಲಿ ಎಲ್ಲರಿಗೂ ಆ ಶ್ರದ್ಧೆ ಏಕೆ ಉಂಟಾಗುತ್ತಿಲ್ಲ? ಮೊದಲ ಶ್ರದ್ಧೆ ಮೊದಲ ಜೀವಿಗೆ ಹೇಗೆ ಉಂಟಾಗುತ್ತದೆ?**

**ಉತ್ತರ :–** ಅರ್ಜುನನಿಗೆ ಜ್ಞಾನದ ಮೇಲೆ ಸ್ವಲ್ಪವೂ ಶ್ರದ್ಧೆ ಇಲ್ಲದಿದ್ದರೂ ತನ್ನ ಜ್ಞಾನ ಹೊರಗೆ ಬರುವುದಕ್ಕೆ ಶ್ರದ್ಧೆ ಇಲ್ಲದ ಅರ್ಜುನನಿಗೆ ಜ್ಞಾನವನ್ನು ಹೇಳಿದಂತೆ ಮೊದಲು ಯಾವ ಶ್ರದ್ಧೆ ಇಲ್ಲದ ಮನುಷ್ಯನಿಗೆ ದೇವರ ಜ್ಞಾನ ಹೊರಗೆ ಬರುವುದಕ್ಕೆ ಮಾನವನಿಗೆ ಶ್ರದ್ಧೆ ಇಲ್ಲದಿದ್ದರೂ ದೇವರೇ ಅವನಿಗೆ ಜ್ಞಾನವನ್ನು ಹೇಳಿದ್ದಾನೆ. ಜ್ಞಾನವನ್ನು ಕೇಳಿದ ನಂತರ ಕೆಲವರಿಗೆ ಜ್ಞಾನದ ಮೇಲೆ ಶ್ರದ್ಧೆ ಉಂಟಾಗಿದೆ. ಕೆಲವರಿಗೆ ಪ್ರಪಂಚ ಶ್ರದ್ಧೆಯಿಂದ ಜ್ಞಾನದ ಮೇಲೆ ಶ್ರದ್ಧೆ ಇಲ್ಲದಂತೆ ಹೋಗಿದೆ. ಮೊದಲು ಮನುಷ್ಯನಿಗೆ ಶ್ರದ್ಧೆ ಇಲ್ಲದಿದ್ದರೂ ದೇವರೇ ಜ್ಞಾನ ಹೇಳಿದ್ದಾನೆಂದು ತಿಳಿಯುತ್ತಿದೆ. ಆದರೂ ಮನುಷ್ಯರಲ್ಲಿ ಕೆಲವರು ಜ್ಞಾನವೊಂದರ ರುಚಿಯನ್ನು ನೋಡಿದ ನಂತರ ಅದರ ಮೇಲೆ ಶ್ರದ್ಧೆ ಹೊಂದಿದ್ದಾರೆ. ಕೆಲವರಿಗೆ ಜ್ಞಾನವೊಂದರ ರುಚಿಯೇ ತಿಳಿದಿಲ್ಲ. ಜ್ಞಾನದ ರುಚಿ ತಿಳಿದವರನ್ನು ಜ್ಞಾನಿಗಳೆಂದು, ರುಚಿ ತಿಳಿಯದವರನ್ನು ಅಜ್ಞಾನಿಗಳೆಂದು ಕರೆಯುತ್ತಿದ್ದೇವೆ.

**186) ಪ್ರಶ್ನೆ :– ಶ್ರೀ ಕೃಷ್ಣನ ಎಡ ಕಾಲಿನ ಮೇಲೆ ಹಾವು ಕಚ್ಚಿದ ನಮೂನೆ ಪ್ರಭು ಕಾಲಿಗೆ ಸೇವೆ ಮಾಡುತ್ತಿರುವಾಗ ಭಕ್ತಳು ಗುರುತಿಸಿ ಇದೇನು ಎಂದು ಕೇಳಿದಾಗ, ಅದು ಗತ ಜನ್ಮದಲ್ಲಿ ಏರ್ಪಟ್ಟ ಗುರುತುಯೆಂದು ಪ್ರಭು ಹೇಳುವ ಸನ್ನಿವೇಶ ಬೈಬಲ್ ಗ್ರಂಥದಲ್ಲಿ ಯಾವ ಸುವಾರ್ತೆಯಲ್ಲಿ ಇದೆಯೋ ಹೇಳಬೇಕೆಂದು ಮನವಿ?**

**ಉತ್ತರ :–** ಈ ವಿಷಯವನ್ನು ನಾನು ಬೈಬಲ್‌ನಲ್ಲಿ ಇರುವಂತೆ ಹೇಳಲಿಲ್ಲ. ಅಷ್ಟೇ ಅಲ್ಲದೆ ಪ್ರಭುವು ಆ ಮಾತು ಹೇಳಿದ ವಿಷಯ ನಾನು ಹೇಳಿದ್ದೀನಾ ಅಥವಾ ಯಾರಾದರೂ ನಿಮಗೆ ಹೇಳಿದ್ದಾರಾ? ಈ ವಿಷಯ ನನ್ನ ಜ್ಞಾಪಕದಲ್ಲಿ ಪೂರ್ತಿಯಾಗಿ ಇಲ್ಲ. ಆದರೇ ಕೇಳಿದ್ದೀಯ ಆದ್ದರಿಂದ ನಿನಗೆ ಸತ್ಯ ಹೇಳಬೇ ಕೆಂದರೇ ಆ ಹಾವು ಕಡಿತವನ್ನು ಹೋಲಿದ ಗುರುತುಗಳು ನನ್ನ ಎಡ ಮೊಣಕಾಲಿನ ಕೆಳಗೆ ಪಿಕ್ಕ ಕಂಡಕ್ಕೆ ಇರುವ ಮಾತು ವಾಸ್ತವವೇ. ಅಷ್ಟೇ ಹೊರತು ಈ ವಿಷಯದಲ್ಲಿ ನನಗೆ ಏನೂ ನೆನಪಿಲ್ಲ.

**187) ಪ್ರಶ್ನೆ :– "ಈ ಜನ್ಮದಲ್ಲಿ ಮಾಡಿದ ತಪ್ಪುಗಳಿಗೆ ಶಿಕ್ಷಗಳು ಮರುಜನ್ಮದಲ್ಲಿ" ಎನ್ನುವ ಸೂತ್ರದಿಂದ ಹೇತುವಾದಿಗಳು, ನಾಸ್ತಿಕವಾದಿಗಳು ಹೆಚ್ಚಾಗಿ ಹೋಗಿ ಆಸ್ತಿಕವಾದಿ ಗಳೆಂದರೇ ಭಯ ಇಲ್ಲದಂತೆ ಹೋಗಿದೆ. ಮತ್ತೆ ಈ ಜನ್ಮದಲ್ಲಿ ಎಲ್ಲ ತಪ್ಪುಗಳಿಗು ಅಲ್ಲದೆ ಕೆಲವು ತಪ್ಪುಗಳಿಗಾದರೂ ಶಿಕ್ಷೆಗಳು ಇದ್ದರೇ, ಜ್ಞಾನ ದೂಷಣೆ, ಜ್ಞಾನಿಗಳ ಮೇಲೆದಾಳಿ ನಡೆದಿರುವುದಕ್ಕಾದರೂ ಶಿಕ್ಷೆ ಬಿದ್ದರೆ ಜ್ಞಾನ ಪ್ರಭಾವ ತಿಳಿದಂತಾಗುತ್ತದೆ. ಉಳಿದವರು ದೇವರ ಜ್ಞಾನದ ಬಗ್ಗೆ ಭಯಭಕ್ತಿಗಳು ಹೊಂದಿರುತ್ತಾರಲ್ಲವೆ! ಮತ್ತೆ ಹಾಗೆ ಏಕೆ ನಡೆಯುವುದಿಲ್ಲ?**

**ಉತ್ತರ :–** ಪಾಪ ಮಾಡಿದರೇ ಆ ಪಾಪಕ್ಕೆ ಶಿಕ್ಷೆ ಮರುಜನ್ಮ ಜೀವನದಲ್ಲಿ ನಡೆಯುತ್ತದೆಂದು ಅದನ್ನೇ ಕರ್ಮಫಲವನ್ನು ಮರುಜನ್ಮದಲ್ಲಿ ಅನುಭವಿಸುವು ದೆಂದು ಹೇಳುತ್ತಿರುವರು. ಅದು ವಾಸ್ತವವೇ ಆದರೂ ಕೆಲವು ತಪ್ಪುಗಳಿಗೆ ಶಿಕ್ಷೆಗಳು ಆಗಲೇಯಾಗಲೀ ಅಥವಾ ಸ್ವಲ್ಪ ತಡವಾಗಿಯಾಗಲೀ ಜಾರಿಯಾಗುವುದು ಕೂಡಾ ಇದೆ. ಈ ಜನ್ಮದಲ್ಲಿ ಮಾಡಿದ ತಪ್ಪುಗಳಿಗೆ ಈ ಜನ್ಮದಲ್ಲಿಯೇ ಶಿಕ್ಷೆಗಳು ಜಾರಿಯಾದ ಸಂಘಟನೆಗಳನ್ನು ನೋಡಿದರೇ ಇದು ವಾಸ್ತವವೇನಾ ಎನ್ನುವ

ಅನುಮಾನ ಬರುವುದು ತಪ್ಪುವುದಿಲ್ಲ. ದೇವರು, ಜ್ಞಾನ ಎನ್ನುವ ಈ ಎರಡು ವಿಷಯಗಳಲ್ಲಿಯೇ ಬಹಳ ಜನರಿಗೆ ತಕ್ಷಣವೇಯಾಗಲಿ, ಸ್ವಲ್ಪ ತಡವಾಗಾಗಲಿ ಶಿಕ್ಷೆಗಳು ಜಾರಿಯಾಗುವುದು ನಾವು ಬಹಳ ನೋಡಿದ್ದೇವೆ. ಬಹಳ ಮಂದಿ ಮರಣಿಸಿದವರು ಇದ್ದಾರೆ. ಕೆಲವು ಮಂದಿ ಅಂಗಹೀನರಾಗಿ (ಅಂಗವಿಕಲರಾಗಿ) ಜೀವನವೆಲ್ಲಾ ಕಷ್ಟವಾಗಿ ಕಳೆಯುವವರು ಕೂಡಾ ಇದ್ದಾರೆ. ಜ್ಞಾನ ವಿಷಯದಲ್ಲಿ ಅನವಶ್ಯಕವಾಗಿ ಮಾತನಾಡಿ ತಪ್ಪು ಮಾಡಿದವರು ಹೀನವಾಗಿ ಕೆಲವರು ಬದುಕುತ್ತಿರುವಾಗ ಕೆಲವರು ಕಾರಣ ತಿಳಿಯದಂತೆ ಮರಣಿಸಿದ್ದಾರೆ. ಅವರು ಮನುಷ್ಯರಿಂದ ಹಿಂಸಿಸಲ್ಪಡಲಿಲ್ಲ, ಮನುಷ್ಯರಿಂದ ಸಾಯಿಸಲ್ಪಡಲಿಲ್ಲ. ಇದೆಲ್ಲದಕ್ಕೂ ಕಾರಣ ಆಕಾಶದಿಂದ ಭೂಮಿ ಮೇಲೆಗೆ ಬಂದು ಹೋಗುವ ಗ್ರಹಗಳಿಂದ, ಭೂತಗಳಿಂದ ನಡೆದಿದೆಯೆಂದು ಅಂದುಕೊಳ್ಳುತ್ತೇನೆ. ಜ್ಞಾನವನ್ನಾಗಲೀ, ಜ್ಞಾನಿಯನ್ನಾಗಲೀ, ದೇವರನ್ನಾಗಲೀ ಅಜ್ಞಾನಿಗಳು ಅಗೌರವವಾಗಿ ಮಾತನಾಡಿದರೂ, ನಿಂದಿಸಿದರೂ ಆ ಸಮಯದಲ್ಲಿ ಅಲ್ಲಿ ಆಕಾಶ ಭೂತಗಳಾಗಲೀ, ಗ್ರಹಗಳಾಗಲೀ ಸೂಕ್ಷ್ಮವಾಗಿ ಅಲ್ಲಿಗೆ ಬಂದಿದ್ದರೇ, ಒಂದುವೇಳೆ ಅವರು ದೇವರನ್ನು, ದೇವರ ಜ್ಞಾನವನ್ನು, ಜ್ಞಾನಿಯನ್ನು ನಿಂದಿಸುವುದು ನೋಡಿದರೇ ಅವನನ್ನು ಕೆಲವು ದಿನಗಳಲ್ಲಾಗಲೀ, ಕೆಲವು ತಿಂಗಳುಗಳಲ್ಲಾಗಲೀ ಸಾಯಿಸುವುದೋ, ಅಂಗವೈಕಲ್ಯ ಮಾಡುವುದೋ ಮಾಡುತ್ತಾರೆ. ಅಷ್ಟು ನಡೆದರೂ ಯಾಕೋ ನಡೆಯಬಾರದ್ದು ನಡೆದಿದೆಯೆಂದು ಯಾರೂ ಆಲೋಚಿಸುತ್ತಿಲ್ಲ. ದೇವರ ಸೈನ್ಯದಲ್ಲಿ ಭೂತಗಳು, ಗ್ರಹಗಳು ಕೆಲಸ ಮಾಡುತ್ತಿವೆ. ಅವುಗಳಿಗೆ ದೇವರೆಂದರೇ ಎಷ್ಟೋ ಇಷ್ಟ. ತಮಗೆ ಇಷ್ಟವಾದ ದೇವರನ್ನು, ದೇವರ ಜ್ಞಾನವನ್ನು ನಿಂದಿಸುವವನನ್ನು ಆ ಸಮಯಕ್ಕೆ ಅಲ್ಲೇ ಇದ್ದು ನೋಡಿದರೆ ಅವನನ್ನು ಸುಲಭವಾಗಿ ಬಿಡುವುದಿಲ್ಲ. ಗ್ರಹಗಳು ಭೂತಗಳು ಎಷ್ಟೋ ಜನರನ್ನು ಶಿಕ್ಷಿಸಿದರೂ ಇಂತಹ ತಪ್ಪಿನಿಂದ ಇದು ನಡೆದಿದೆಯೆಂದು ಮನುಷ್ಯ ಅಂದುಕೊಳ್ಳುತ್ತಿಲ್ಲ. ಒಂದು ವೇಳೇ ನಾವು "ಇದು ಒಳ್ಳೆಯದಲ್ಲ ದೇವರ ಶಿಕ್ಷೆಗೆ ನೀವು ಗುರಿಯಾಗಬಹುದು" ಎಂದು ಹೇಳಿ ಎಚ್ಚರಿಸಿದರೂ ನಡೆದಾಗ ನೋಡೋಣ ಎಂದು ಕೆಲವರಂದುಕೊಂಡಾಗ, ನಮ್ಮದು ತಪ್ಪೇ ಇಲ್ಲ ನಮ್ಮನ್ನು ಯಾರೂ ಏನೂ ಮಾಡುವುದಿಲ್ಲವೆನ್ನುವ ಧಿಮಾಕಿನಿಂದ ಕೆಲವರು ವ್ಯಕ್ತ ಪಡಿಸುತ್ತಿದ್ದಾರೆ.

**188) ಪ್ರಶ್ನೆ :– ಭೀಷ್ಮನು ಭಗವದ್ಗೀತೆಯನ್ನು ಕೇಳದ ಮುನ್ನವೇ ಜ್ಞಾನಿ ಹೇಗೆ ಆದನು? ಆತನು ಕೃಷ್ಣನನ್ನು ಭಗವಂತನೆಂದು ಹೇಗೆ ತಿಳಿದಿದ್ದಾನೆ?**

**ಉತ್ತರ :–** ಈಗ ನಾನು ಹೇಳುವ ವಿಷಯಕ್ಕೆ ಯಾವ ಆಧಾರ ಇರುವುದಿಲ್ಲ. ಆದರೂ ನಾನು ಹೇಳುವುದು ಸತ್ಯ. ಇತರರು ನಂಬಬಹುದು ಇಲ್ಲದಿದ್ದರೆ ಇಲ್ಲ. ಸೃಷ್ಠಿ ಆದಿಯಲ್ಲಿ ಹೇಳಲ್ಪಟ್ಟ ಜ್ಞಾನವನ್ನು ಮನುಷ್ಯರು ಅರ್ಥ ಮಾಡಿಕೊಳ್ಳುವುದಕ್ಕೆ ಸೂರ್ಯನು ಭೂಮಿಮೇಲಿರುವ 'ಮನುವು' ಎನ್ನುವ ವ್ಯಕ್ತಿಗೆ ತಿಳಿಸಿದಾಗ, ಮನುವಿನಿಂದ ಇತರರಿಗೆ ರಾಜನಿಂದ ಬಡವನವರೆಗು ತಿಳಿದಿದೆ. ಮನುವು ಜ್ಞಾನವನ್ನು ಸೂರ್ಯನು ಹೇಳಿದಾಗ ಕೇಳಿರುವುದರಿಂದ ಜ್ಞಾನಿಯಾಗಿ ಬದಲಾದ ಮನುವು ಎಷ್ಟೋ ಜನ್ಮಗಳು ಎತ್ತುತ್ತಾ ಸೂರ್ಯನು ಹೇಳಿದ ಜ್ಞಾನವನ್ನು ಮೆಲುಕು ಹಾಕುತ್ತಾ ಸಾಯುತ್ತಾ ಹುಟ್ಟುತ್ತಾ ಕೊನೆಗೆ ಸ್ವಲ್ಪ ಕರ್ಮ ಶೇಷದಿಂದ ಭಾರತದೇಶದಲ್ಲಿ ಉತ್ತರದಲ್ಲಿ 'ಭೀಷ್ಮ' ಎನ್ನುವ ಹೆಸರಿನಿಂದ ಹುಟ್ಟಿದ್ದಾನೆ. ಹಿಂದಿನ ಜನ್ಮಗಳಲ್ಲಿಯೇ ಜ್ಞಾನ ಸಂಪೂರ್ಣವಾಗಿ ತಿಳಿದ ಮನುವು ಕುರುವಂಶದಲ್ಲಿ ಭೀಷ್ಮನಾಗಿ ಹುಟ್ಟಿದರೂ ಆತನು ಜ್ಞಾನ ಇರುವ ವ್ಯಕ್ತಿ ಎಂದು ಸಹ ಯಾರಿಗೂ ತಿಳಿದಿಲ್ಲ. ಭೀಷ್ಮನು ಭಗವದ್ಗೀತೆಯನ್ನು ಹೇಳುವುದಕ್ಕಿಂತ ಮೊದಲಿನಿಂದ ಕರ್ಮಯೋಗವನ್ನು ಆಚರಿಸುತ್ತಿದ್ದಾನೆ. ಸಂಪೂರ್ಣ ಜ್ಞಾನಿ, ಸಂಪೂರ್ಣ ಯೋಗಿ ಆಗಿರುವುದರಿಂದ ಕೃಷ್ಣನ ಜನ್ಮವನ್ನು ಸುಲಭವಾಗಿ ಗುರುತಿಸಿದ್ದಾನೆ. ಕೃಷ್ಣನ ವಿಷಯದಲ್ಲಿ ಅನೇಕ ಸಲ ಕೌರವರನ್ನು ಎಚ್ಚರಿಸಿದ್ದಾನೆ. ಆದರೂ ಆತನ ಮಾತನ್ನು ಯಾರೂ ಕೇಳಲಿಲ್ಲ. ಆ ಕಾಲದಲ್ಲಿ ಕೃಷ್ಣನು ಸಾಧಾರಣ ಮನುಷ್ಯನಲ್ಲ ಸಾಕ್ಷ್ಯಾತ್ತು ದೇವರಾದ ಭಗವಂತನೆಂದು ತಿಳಿದವನು ಒಬ್ಬನೇ ಒಬ್ಬ ಭೀಷ್ಮನು ಹೊರತು ಯಾರೂ ಇಲ್ಲ. ಯುದ್ಧ ರಂಗದಲ್ಲಿ ಕೃಷ್ಣನು ತನ್ನ ಮೇಲೆ ಕೋಪದಿಂದ ಬಂದಾಗ ಕೈಗಳು ಜೋಡಿಸಿ ವಿನಯದಿಂದ ರಥ ಇಳಿದು ನಿಂತಿದ್ದನು. ಕೃಷ್ಣನ ಕೈಯ್ಯಲ್ಲಿ ಮರಣಿಸಿದರೇ ಎಷ್ಟೋ ಭಾಗ್ಯವಾಗಿ ತಿಳಿದಿದ್ದನು. ಯುದ್ಧರಂಗದಲ್ಲಿ ಕೆಳಗೆ ಬಿದ್ದಾಗ ಕೂಡಾ ಕೃಷ್ಣನನ್ನೇ ಕರೆದು ಕೃಷ್ಣನೊಂದಿಗೇ ಮಾತನಾಡಿದ್ದಾನೆ. ನೇರವಾಗಿ ಕೃಷ್ಣನನ್ನು ತನ್ನನ್ನು ನಿನ್ನಲ್ಲಿ ಬೆರೆಸಿಕೋಯೆಂದು ಕೇಳಿದವನು ಭೀಷ್ಮನು ಒಬ್ಬನೇ. ಕೊನೆಗೆ

ಕೃಷ್ಣನು ಹೇಳಿದ ಮಾತಿನ ಪ್ರಕಾರ ಉತ್ತರಾಯಣ ಕಾಲ ಬರುತ್ತಲೇ ಭೀಷ್ಮನು ಮರಣಿಸುವುದು ನಡೆದಿದೆ. ಅದೇ ಆತನಿಗೆ ಕೊನೆಯ ಮರಣ. ಆತನು ಪುನಃ ಹುಟ್ಟಲಿಲ್ಲ. ದೇವರಲ್ಲಿ ಐಕ್ಯವಾಗಿ ದೇವರಲ್ಲಿಯೇ ನಿಂತುಹೋಗಿದ್ದಾನೆ.

**189) ಪ್ರಶ್ನೆ :– ಬುದ್ಧನು ಹೇಳಿದ ಸೂತ್ರಗಳನ್ನು, ಉಪನಿಷತ್ತುಗಳಲ್ಲಿ ಕೆಲವು ವಾಕ್ಯಗಳನ್ನು ಜೊತೆಮಾಡಿ ಬರೆದಿರುವುದೇ ಭಗವದ್ಗೀತೆಯೆಂದು ಹೇತುವಾದಿಗಳಾಗಿ ನಾವು ಅನ್ನುತ್ತಿದ್ದೇವೆ. ಅಷ್ಟೇ ಹೊರತು ಭಗವದ್ಗೀತೆ ದ್ವಾಪರಯುಗದ ಕಾಲದ್ದು ಅಲ್ಲ.**

**ಉತ್ತರ :–** ಹಾಗೆಂದು ಅಂದುಕೊಳ್ಳುವವನಿಗೆ ಬುದ್ಧನ ಸೂತ್ರಗಳೊಂದಿಗೆ ಭಗವದ್ಗೀತೆ ಏಕೀಭವಿಸುವುದಿಲ್ಲ. ಬುದ್ಧನ ಸೂತ್ರಗಳು ಬೇರೆ, ಭಗವದ್ಗೀತೆ ಬೇರೆ. ಆದ್ದರಿಂದ ನಿಮ್ಮ ಮಾತಿನಲ್ಲಿ ಸತ್ಯ ಯಾವ ಸ್ವಲ್ಪವೂ ಸಹ ಇಲ್ಲವೆಂದೇ ಹೇಳಬಹುದು.

**190) ಪ್ರಶ್ನೆ :– ಪುಷ್ಕರ ಸಮಯದಲ್ಲಿ ಇರುವ ನೀರಿನಲ್ಲಿ ವಾಸ್ತವವಾಗಿ ಯಾವ ಶಕ್ತಿ ಕಿರಣಗಳಾದರೂ ಪ್ರಸಾರವಾಗುತ್ತವಾ?**

**ಉತ್ತರ :–** ಯಾವ ಶಕ್ತಿ ಕಿರಣಗಳು ಪುಷ್ಕರ ಸಮಯದಲ್ಲಿ ನದಿಗಳಲ್ಲಿ ಪ್ರಸಾರವಾಗುವುದಿಲ್ಲ. ಆಧ್ಯಾತ್ಮಿಕ ವಿಧಾನದಲ್ಲಿ ಇದೂ ಸಹ ಸ್ವಲ್ಪ ಅಜ್ಞಾನವೇ ಆಗುತ್ತದೆ.

**191) ಪ್ರಶ್ನೆ :– ನಮಗೆ ಕಹಿಯಾಗಿರುವ ಬೇವಿನ ಎಲೆಗಳು ಮೇಕೆಗಳಿಗೆ ಕಹಿ ಎನಿಸುವುದಿಲ್ಲವಾ? ನಮಗೆ ತಿಳಿಯುವ ರುಚಿಗಳು ಬೇರೆ ಜೀವಿಗಳಿಗೆ ಮತ್ತೊಂದು ರುಚಿಯಾಗಿ ಇರುತ್ತವಾ?**

**ಉತ್ತರ :–** 'ಜಿಹ್ವೆಗೆ (ನಾಲಿಗೆಗೆ) ಒಂದು ರುಚಿ' ಎಂದು ನಮ್ಮ ಹಿರಿಯರು ಹೇಳಿದಂತೆ ಮನುಷ್ಯರ ರುಚಿ ಪ್ರಾಣಿಗಳಿಗೆ ಬೇರೆಯಾಗಿರುತ್ತದೆ. ನಮಗೆ ಕಹಿಯಾಗಿರುವ ಬೇವಿನ ಎಲೆ ಮೇಕೆಗಳಿಗೆ ರುಚಿಯಾಗಿ ಇರುತ್ತದೆ. ನಮಗೆ

ಕಹಿ ಇಲ್ಲದ ಮೇಕೆ ಮೇಯದ ಎಲೆ ಮೇಕೆಗೆ ಕಹಿಯಾಗಿರುತ್ತದೆ. ಆದ್ದರಿಂದ ಎಲ್ಲ ಎಲೆಗಳನ್ನು ತಿನ್ನುವ ಮೇಕೆ ಒಂದು ಎಲೆಯನ್ನು ಮಾತ್ರ ತಿನ್ನುವುದಿಲ್ಲ. ಅದೇ ಮೇಕೆ ಮೇಯದ ಎಲೆ ಎಂದು ಹೇಳಲ್ಪಡುತ್ತಿದೆ. ಮೇಕೆ ನಾಲಿಗೆ ಮೇಲೆ ಇರುವ ರುಚಿ ಕಣಗಳ ಸಂಖ್ಯೆಯನ್ನನುಸರಿಸಿ, ಪರಿಮಾಣವನ್ನನುಸರಿಸಿ ಅವುಗಳಿಗೆ ರುಚಿ ತಿಳಿಯುತ್ತಿರುತ್ತದೆ. ಒಂದೇ ಪದಾರ್ಥವೇ ಬೇರೆ ಬೇರೆ ಜೀವರಾಶಿಗಳಿಗೆ ಬೇರೆಬೇರೆ ರುಚಿಗಳಾಗಿ ತಿಳಿಯುತ್ತದೆ.

**192) ಪ್ರಶ್ನೆ :– ಒಂದು ದಿನ ಹುಟ್ಟಿ ಒಂದೇ ದಿನ ಬದುಕಿ ಸಾಯುವ ಜೀವಿಗಳು ಎಷ್ಟೋ ಇವೆ. ಒಂದೇ ದಿನ ಹುಟ್ಟುವುದಕ್ಕೆ ತಕ್ಕ ಕರ್ಮ ಇರುತ್ತದಾ?**

**ಉತ್ತರ :–** ಹುಟ್ಟಿದ ದಿನವೇ ಒಂದು ಗಂಟೆ ಬದುಕಿ ಮರಣಿಸುವವರು, ಎರಡನೆ ದಿನ ಮರಣಿಸಿದವರು ಎಷ್ಟೋ ಇದ್ದಾರೆ. ಅವರು ಬದುಕಿದ ಕಾಲ ಕಡಿಮೆಯಾಗಿರುವುದರಿಂದ ಆ ಜನ್ಮಕ್ಕೆ ಅಷ್ಟೇ ಕರ್ಮ ನಿರ್ಣಯಿಸಲ್ಪಟ್ಟಿದೆಯೆಂದು ತಿಳಿಯುತ್ತಿದೆ. ಒಂದು ಗಂಟೆ ಸಮಯ ಮಾತ್ರವೇ ಬದುಕಿ ಮರಣಿಸುವ ಜೀವಿಗಳು ಬಹಳ ಇವೆ. ಕರ್ಮವನ್ನನುಸರಿಸಿ ಜನ್ಮಗಳಿರುತ್ತವೆಂದು ತಿಳಿಯಬೇಕು.

**193) ಪ್ರಶ್ನೆ :– ಕೊಡಲಿ ಹಿಡಿದುಕೊಂಡು ಬರುತ್ತಿರುವ ವ್ಯಕ್ತಿಯನ್ನು ನೋಡಿ ತನ್ನನ್ನು ಕಡಿದುಹಾಕುವನೆಂದು ತಿಳಿದ ವೃಕ್ಷದಲ್ಲಿನ ಜೀವಿಯು ಮತ್ತು ಆತ್ಮ ಇಬ್ಬರೂ ಸೂಕ್ಷ್ಮವಾಗಿ ಹೊರಗೆ ಹೋಗುತ್ತಾರಾ?**

**ಉತ್ತರ :–** ಆ ವಿಧವಾಗಿ ಹೋಗುವ ಅವಕಾಶ ವಿಗ್ರಹಗಳಲ್ಲಿ ಜೀವಿಗಳಿಗೆ ಮಾತ್ರ ಇದೆ. ವೃಕ್ಷದಲ್ಲಿನ ಜೀವಿಯು, ಆತ್ಮ ಹೊರಗೆ ಹೋಗುವುದಿಲ್ಲ. ಹೋಗುವ ಅವಕಾಶ ಇಲ್ಲ. ಮರದ ಕೊಂಬೆಗಳು ಕಡಿದರೂ, ತುದಿಗಳನ್ನು ಕಡಿದರೂ ಜೀವಿಯು ಬೇರುಗಳಲ್ಲಿರುವುದರಿಂದ ವೃಕ್ಷಕ್ಕೆ ಪ್ರಾಣ ಹೋಗುವುದಿಲ್ಲ. ಕೊಂಬೆಗಳು ಕಡಿದಾಗ ಮನುಷ್ಯನ ಶರೀರದಲ್ಲಿ ಅವಯವಗಳನ್ನು ಕಡಿಯುವಾಗ ಮನುಷ್ಯನಿಗೆ ಉಂಟಾಗುವ ನೋವಿನ ಹಾಗೆ ಮರಕ್ಕೆ ನೋವು ಇರುವುದಿಲ್ಲ. ನೋವು ಪೂರ್ತಿ ಇಲ್ಲ ಎಂದು ಹೇಳಲಾರೆವು ಆದರೇ, ಮನುಷ್ಯ ಶರೀರದಲ್ಲಿ ಹೊಂದುವ

ನೋವಿನಲ್ಲಿ ಕೇವಲ ಶೇಕಡ ಐದರಿಂದ ಹತ್ತರಷ್ಟರವರೆಗು ನೋವು ಇರಬಹುದು. ಮನುಷ್ಯನಿಗಿರುವ ನೋವಿನಲ್ಲಿ ಬಹಳ ಕಡಿಮೆಯಷ್ಟು ಅನುಭವಿಸುವ ಜೀವಿಗಳಲ್ಲಿ ವೃಕ್ಷಗಳು ಮೊದಲ ಸ್ಥಾನದಲ್ಲಿ ಇವೆ. ಪಕ್ಷಿಗಳು, ಶೇ. ಹತ್ತರಿಂದ ಹದಿನೈದರಷ್ಟು ಅನುಭವಿಸುತ್ತಾ ಎರಡನೆಯ ಸ್ಥಾನದಲ್ಲಿ ಇವೆ. ಜಲಚರಗಳಾದ ಕಪ್ಪೆಗಳು, ಆಮೆಗಳು, ಮೀನುಗಳು ಶೇ. 15 ರಿಂದ 20 ರಷ್ಟು ನೋವನ್ನು ಅನುಭವಿಸುತ್ತಾ ಮೂರನೆಯ ಸ್ಥಾನದಲ್ಲಿವೆ. ಪ್ರಾಣಿಗಳು ಶೇ.ಇಪ್ಪತ್ತರಿಂದ ಮೂವತ್ತ (20 ರಿಂದ 30) ರವರೆಗು ಅನುಭವಿಸುತ್ತಾ ನಾಲ್ಕನೆ ಸ್ಥಾನದಲ್ಲಿ ಇವೆ.

**194) ಪ್ರಶ್ನೆ :– ಶಾರೀರಕ ವ್ಯಾಯಾಮದಿಂದ ಆತ್ಮಶಕ್ತಿ ಬೆಳೆಯುತ್ತದಾ?**

**ಉತ್ತರ :–** ಮನುಷ್ಯ ತನ್ನ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಶರೀರ ವ್ಯಾಯಾಮ ಮಾಡುತ್ತಿದ್ದಾನೆ. ಶರೀರಕ್ಕೆ ಶಕ್ತಿ ಕೊಡುವುದು ಆತ್ಮವೇಯೆಂದು ಬಹಳ ಜನರಿಗೆ ತಿಳಿದಿಲ್ಲ. ಶರೀರ ವ್ಯಾಯಾಮದಿಂದ ಶಕ್ತಿ ಬೆಳೆಯುತ್ತದೆಂದು ಬಹಳ ಮಂದಿ ಕಠೋರ ವ್ಯಾಯಾಮ ಮಾಡುತ್ತಿದ್ದಾರೆ. ಶರೀರ ವ್ಯಾಯಾಮ ಮಾಡುವುದರಿಂದ ಶರೀರ ಶಕ್ತಿ ಬೆಳೆದಂತೆ ಮನುಷ್ಯನಿಗೆ ತಿಳಿಯುತ್ತಿದ್ದರೂ, ಅದು ವ್ಯಾಯಾಮದಿಂದ ಬಂದಿರುವುದೆಯೆಂದು ನಂಬಿಕೆ ಇದ್ದರೂ ಆತ್ಮ ತನ್ನ ಚೈತನ್ಯವನ್ನು ಕೊಟ್ಟಾಗಲೇ ಶರೀರ ಬಲ ಕೆಲಸ ಮಾಡುತ್ತದೆ. ಶರೀರಕ್ಕೆ ಬಲವನ್ನು ನಿರ್ಣಯಿಸಿ ಕೊಡುವವನು ಆತ್ಮ. ಮನುಷ್ಯ ಶರೀರವನ್ನು ನಂಬಿಕೊಂಡು ವ್ಯಾಯಾಮ ಮಾಡುವುದಕ್ಕಿಂತ ಆತ್ಮವನ್ನು ಕುರಿತು ತಿಳಿದುಕೊಂಡರೇ ಎಂತಹ ಶಕ್ತಿಯನ್ನಾದರೂ ಹೊಂದ ಬಹುದು. ರಾವಣ ಬ್ರಹ್ಮ ಶರೀರ ವ್ಯಾಯಾಮ ಮಾಡಲಿಲ್ಲ. ಆತ್ಮವನ್ನು ವಿಶ್ವಾಸಿಸಿ ಆತ್ಮವನ್ನು ತಿಳಿಯುವುದರಿಂದ ಆತ್ಮವನ್ನು ಅರ್ಥಿಸಿ ಶಕ್ತಿಯನ್ನು ಹೊಂದಿ ಕೈಲಾಸಗಿರಿಯನ್ನು ಮೇಲಕ್ಕೆ ಎತ್ತಿದ್ದಾನೆ. ವಾಲಿ ಮಹಾ ಬಲಾಢ್ಯನಾದವನು. ಆಂಜನೇಯನು ಮೂಲಿಕಾ ಶಕ್ತಿಯಿಂದಲೇ (ಆತ್ಮ ಶಕ್ತಿಯಿಂದಲೇ) ಮಹಾ ಬಲಶಾಲಿ ಎಂದು ಹೆಸರು ಪಡೆದಿದ್ದಾನೆ. ಆದ್ದರಿಂದ ವ್ಯಾಯಾಮದಿಂದ ಆತ್ಮಕ್ಕೆ ಶಕ್ತಿ ಬರುವುದಿಲ್ಲ, ಆದರೆ ಆತ್ಮದಿಂದಲೇ ಶರೀರಕ್ಕೆ ಶಕ್ತಿ ಬರುತ್ತಿದೆ.

**195) ಪ್ರಶ್ನೆ :– ದೆವ್ವಗಳನ್ನು ತೋರಿಸುವ ಯಂತ್ರಗಳನ್ನು ಭವಿಷ್ಯತ್ತಿನಲ್ಲಿ ನಾವು ಕಂಡುಹಿಡಿದರೇ ನಿಮ್ಮ ಸ್ಪಂದನೆ ಹೇಗಿರುತ್ತದೆ?**

**ಉತ್ತರ :–** ದೆವ್ವಗಳು ಇಲ್ಲ ಎನ್ನುವ ನೀವು (ಹೇತುವಾದಿಗಳು) ದೆವ್ವಗಳಿವೆಯೆಂದು ನಂಬಿ, ಅವುಗಳನ್ನು ತೋರಿಸುವ ಯಂತ್ರಗಳನ್ನು ಕಂಡುಕೊಂಡರೆ ನೀವು ನಮ್ಮ ದಾರಿಯೊಳಗೆ ಬಂದಿರುವುದಕ್ಕೆ ಸಂತೋಷಿಸುತ್ತೇವೆ. ದೆವ್ವ ಇದೆಯೆಂದು ವಿಶ್ವಾಸಿಸಿದರೆ ನಂತರ ದೇವರಿದ್ದಾನೆಂದು ಪರೋಕ್ಷವಾಗಿ ವಿಶ್ವಾಸಿಸಿದಂತೆಯೇ ಆಗುತ್ತದೆ. ದೆವ್ವ ವಿಕೃತಿ ಪದ, ದೇವರು ಪ್ರಕೃತಿ ಪದ ಎಂದು ಹೇಳುತ್ತಿರುವರು. ಅಂದರೆ ಪ್ರಕೃತಿಯಿಂದ ತಯಾರಾಗಿರುವುದು ವಿಕೃತಿಯೆಂದು ಹೇಳಬಹುದು. ದೇವರು ಎನ್ನುವ ಶಬ್ದದಿಂದ ಹುಟ್ಟಿರುವುದು ದೆವ್ವ. ಆದ್ದರಿಂದ ದೆವ್ವವನ್ನು ನಂಬಿದರೆ ದೇವರನ್ನು ಕೂಡಾ ನಂಬಿದಂತೆಯೇ ಆಗುತ್ತದೆ. ಬ್ರಾಹ್ಮಣನು ಪ್ರಕೃತಿ ಪದವಾದಾಗ ಅದರಿಂದ ಹುಟ್ಟಿರುವುದು ವಿಕೃತಿ ಪದ ಬಾಪನು. ಬಾಪನು ಎನ್ನುವವನನ್ನು ನಂಬಿದರೇ ಬ್ರಾಹ್ಮಣನು ಎನ್ನುವವನನ್ನು ನಂಬಿದಂತೆಯೇ ಅಲ್ಲವೆ! ಪಂಚಭೂತಗಳು ಪ್ರಕೃತಿಯಾದಾಗ ಸರ್ವಭೂತಗಳು ವಿಕೃತಿಯಾಗಿ ಇವೆ. ಕಾಣಿಸದ ದೇವರಿಂದ ಕಾಣಿಸುವ ದೆವ್ವಗಳು ಬಂದಿವೆಯೆಂದು, ದೆವ್ವಗಳನ್ನು ನೋಡಿದರೆ ಎಂದಿಗಾದರೂ ಮೋಕ್ಷಹೊಂದಿ ದೇವರನ್ನು ನೋಡಬಹುದೆಂದು ಹೇಳುತ್ತಿದ್ದೇವೆ.

**196) ಪ್ರಶ್ನೆ :– ಆತ್ಮವನ್ನು ನೀರಿನೊಂದಿಗೆ ಹೋಲಿಸುತ್ತೇವೆ ಅಲ್ಲವೆ! ಆದರೇ 'ನೀರು' ಎನ್ನುವ ಹೆಸರಿನಲ್ಲಾಗಲೀ 'ಜಲ' ಎನ್ನುವ ಹೆಸರಿನಲ್ಲಾಗಲೀ ಜ್ಞಾನಾರ್ಥ ಏನಾದರೂ ಇದೆಯಾ?**

**ಉತ್ತರ :–** ಆತ್ಮವನ್ನು ನೀರಿನೊಂದಿಗೆ ಹೋಲಿಸಬಾರದು. ಆತ್ಮಶಕ್ತಿಯನ್ನು ನೀರಿನೊಂದಿಗೆ ಹೋಲಿಸಬೇಕು. ಆತ್ಮವನ್ನು ಅಗ್ನಿಯೊಂದಿಗೆ ಹೋಲಿಸಬೇಕು. ಭಗವದ್ಗೀತೆಯಲ್ಲಾಗಲೀ, ಬೈಬಲ್‌ನಲ್ಲಾಗಲೀ ಆತ್ಮವನ್ನು ಅಗ್ನಿಯೊಂದಿಗೆ ಹೋಲಿಸಿದ್ದಾರೆ. ಆತ್ಮಶಕ್ತಿ ಸರ್ವ ಅವಯವಗಳಿಗೂ ಪ್ರವಹಿಸುವುದರಿಂದ ಅರ್ಥವಾಗುವುದಕ್ಕೆ ನೀರಿನ ಪ್ರವಾಹದೊಂದಿಗೆ ಹೋಲಿಸಿ ಹೇಳುವುದಾಗಿದೆ. ಅರ್ಥವಾಗುವ ನಿಮಿತ್ತ ಶಕ್ತಿ ಪ್ರವಾಹವಂತಹುದೆಂದು ನೀರಿಗೆ ಹೋಲಿಸಿ ಹೇಳಿದ್ದಾರೆ. ಕರ್ಮವನ್ನು ದಹಿಸುವ ಶಕ್ತಿ ಆತ್ಮಕ್ಕಿರುವುದರಿಂದ ಆತ್ಮವನ್ನು

ಅಗ್ನಿಯೊಂದಿಗೆ ಸಮಾನವಾಗಿ ಹೋಲಿಸಿದ್ದಾರೆ. ಆತ್ಮ ಯಾವಾಗಲೂ ಶರೀರದ ಒಳಗೇ ಇರುತ್ತದೆ ಆದ್ದರಿಂದ ಆತ್ಮವನ್ನು ಅಗ್ನಿಯಾಗಿ ಕೂಡಾ ಹೇಳಿದ್ದಾರೆ.

**197) ಪ್ರಶ್ನೆ :– ಕರ್ಮಾನುಸಾರ ಶರೀರ ಬರುತ್ತದೆ ಎಂದರೇ ಶಾರೀರಕವಾಗಿ, ಮಾನಸಿಕವಾಗಿ, ತಾಯಿ ತಂದೆಯರ ಬಾಹ್ಯ ಶರೀರ ಹೋಲಿಕೆಗಳೊಂದಿಗೆ ಮಾನಸಿಕ ಹೋಲಿಕೆಗಳು ಸಹ ಮಕ್ಕಳಿಗೆ ಬರುತ್ತಿವೆ. ಅದು ಹೇಗೆ ಎಂದರೇ ಆತ್ಮಹತ್ಯೆಗಳು (ಹತ್ಯೆಗಳು) ಮಾಡುವ ಗುಣ ಇರುವ ತಾಯಿತಂದೆಯರಿಗೆ ಹುಟ್ಟಿದ ಮಕ್ಕಳಿಗು ಕೂಡಾ ಅದೇ ಗುಣಗಳೊಂದಿಗೆ ಕೆಲಸ ಮಾಡುವ ಕ್ರೂರತ್ವ ಹೊಂದಿ ಅವರೂ ಸಹ ಹತ್ಯೆಗಳು ಮಾಡಬೇಕೆನ್ನುವ ಚಿಂತೆ ಹೊಂದಿರುತ್ತಾರೆ. ಮತ್ತೆ ಇವು ಇವುಗಳಿಗೆ ಜನ್ಯಗಳೇ ಕಾರಣವೆನ್ನುವ ನವೀನ ಸಿದ್ಧಾಂತದಲ್ಲಿ ನಿಮ್ಮ ಕರ್ಮ ಸಿದ್ಧಾಂತ ಕೆಲಸ ಮಾಡದಂತೇ ಅಲ್ಲವೆ?**

**ಉತ್ತರ :–** ಮನುಷ್ಯರು ತಮ್ಮ ಸಂತತಿಗೆ ತಾವೇ ಕಾರಣವೆಂದು ಅಂದು ಕೊಳ್ಳುವುದು ನಡೆಯುತ್ತಿದೆ. ವಾಸ್ತವವಾಗಿ ಅವರ ಮಕ್ಕಳಿಗೆ ಅವರು ಕಾರಣವಲ್ಲ. ತಂದೆ ವೀರ್ಯಕಣದಿಂದ ಸಂಬಂಧ ಇಲ್ಲದಂತೆ ಎಲ್ಲರೂ ಹುಟ್ಟುತ್ತಿದ್ದಾರೆ. ಮೊದಲಿನಿಂದ ಇದೇ ನಡೆಯುತ್ತಿದೆ ಆದರೂ ಯಾರಿಗೂ ತಿಳಿದಿಲ್ಲ. ಆದರೇ ಹುಟ್ಟಿದ ಮಗುವಿಗೆ ತಾಯಿ ತಂದೆಯರ ಹೋಲಿಕೆಗಳು ಬರುವುದರಿಂದ ತಮ್ಮ ಮಕ್ಕಳು ತಮಗೆ ಹುಟ್ಟಿದ್ದಾರೆಂದು ಸಂತೋಷಪಡುತ್ತಾರೆ. ಕೆಲವು ಹೋಲಿಕೆಗಳು ತಾಯಿ ತಂದೆಯರವು ಇರುವುದೇ ಅಲ್ಲದೆ ಅವರಿಗಿರುವ ಬುದ್ಧಿ ಸ್ವಭಾವಗಳು, ಗುಣ ಸ್ವಭಾವಗಳು ಬರುವುದರಿಂದ ತಾಯಿ ತಂದೆಯರು ಅವರಲ್ಲವೆಂದು ಯಾರೂ ಹೇಳುವುದಿಲ್ಲ. ಆತ್ಮವೇ ಎಲ್ಲರಿಗೂ ಬೀಜದಾತ ಯೆಂದೂ, ಆತ್ಮವೇ ಎಲ್ಲರಿಗು ಬಾಹ್ಯ ತಾಯಿ ತಂದೆಯರನ್ನು ನಂಬಿಸುವುದಕ್ಕೆ ಹೋಲಿಕೆಗಳನ್ನು ಕೊಡುವುದೇ ಅಲ್ಲದೆ ತಾಯಿ ತಂದೆಯರು ಯಾವುವು ಇಷ್ಟವಾಗಿ ಮಾಡುತ್ತಿರುವರೋ ಅವೇ ಕೆಲಸಗಳು ಇಷ್ಟವಾಗಿ ಮಾಡುವುದರಿಂದ ಅವರಿಗೆ ತಾಯಿತಂದೆ ಗುಣಗಳು ಬಂದಂತೆ ಕಾಣಿಸುವುದಕ್ಕೆ ಆತ್ಮವೇ ಹಾಗೆ ತಯಾರು ಮಾಡುತ್ತಿದೆ. ಅದರಿಂದ ಕಾಣಿಸುವ ತಾಯಿ ತಂದೆಯರೇ ನಿಜವಾದ

ತಾಯಿತಂದೆಯರಾಗಿ ಹೇಳುತ್ತಿದ್ದಾರೆ. ಶಿಶು ಯಾವ ಶರೀರದಿಂದ ಹುಟ್ಟುತ್ತಿದ್ದಾನೋ ಆ ಶರೀರದಲ್ಲಿನ ಆತ್ಮವೇ ಆ ಶರೀರವೊಂದರ ಜನ್ಯುಕಣಗಳನ್ನು ಶಿಶು ಶರೀರದಲ್ಲಿ ಇರುವಂತೆ ಮಾಡುವುದರಿಂದ ಶಿಶು ಬೆಳೆದು ದೊಡ್ಡದಾದಾಗ ತಾಯಿತಂದೆಯರ ಜೀನ್ಸ್ ಮಕ್ಕಳ ಶರೀರದಲ್ಲಿ ಕಾಣಿಸುವುದರಿಂದ ತಮ್ಮ ಜನ್ಮಕ್ಕೆ ಆತ್ಮ ಕಾರಣವೆಂದು, ಆತ್ಮವೇ ತಂದೆಯೆಂದು ಯಾರಿಗೂ ತಿಳಿಯದಂತೆ ಹೋಗಿದೆ.

**198) "ಶುಚೀನಾಂ ಶ್ರೀಮತಾಂ ಗೇಹೇ" ಎನ್ನುವ ಶ್ಲೋಕಾನುಸಾರ ಯೋಗೀಶ್ವರ ನಾಗಿ ಬಂದಿರುವ ಶ್ರೀಕೃಷ್ಣನ ಪುತ್ರರು ಜ್ಞಾನಿಗಳಾಗಿದ್ದಾರಾ? ಇಲ್ಲವಾ?**

**ಉತ್ತರ :–** ಭಗವದ್ಗೀತೆ ಆತ್ಮ ಸಂಯಮ ಯೋಗದಲ್ಲಿ 41ನೇ ಶ್ಲೋಕದಲ್ಲಿ **"ಶುಚೀನಾಂ ಶ್ರೀಮತಾಂ ಗೇಹೇ ಯೋಗ ಭ್ರಷ್ಟೋಭಿ ಜಾಯತೇ"** ಎಂದು ಇದೆ. ಅಲ್ಲಿ ಹೇಳಿದಹಾಗೆ **"ಯೋಗಭ್ರಷ್ಟರಾದವರು ಒಳ್ಳೆಯ ಜ್ಞಾನಿಗಳ ಮನೆಗಳಲ್ಲಾಗಲಿ, ಯೋಗಿಗಳ ಮನೆಗಳಲ್ಲಾಗಲೀ ಜನ್ಮಿಸುತ್ತಾರೆ"** ಎಂದು ಇದೆ. ಆದರೇ ಕೃಷ್ಣನು ಇರುವ ಸಮಯಗಳಲ್ಲಿ ಯೋಗಭ್ರಷ್ಟರು ಯಾರೂ ಇಲ್ಲ ಎಂದುಕೊಂಡರೆ ಆಗ ಅವರು ಬಂದು ಯೋಗಿಗಳ ಮನೆಗಳಲ್ಲಿ ಹುಟ್ಟುವ ಅವಕಾಶವೇ ಇಲ್ಲ ಅಲ್ಲವೇ! ಆಗ ಭೂಮಿಮೇಲೆ ಯೋಗ ವಿಧಾನ ಇಲ್ಲವೆಂದು ಕೃಷ್ಣನು ತನ್ನ ಬೋಧನೆಯಲ್ಲಿ ಮೂರು ಯೋಗ ವಿಧಾನಗಳನ್ನು ತಿಳಿಸಿದ್ದಾನೆ. ಕೃಷ್ಣನು ಹೇಳಿದಾಗ ಯೋಗಿಗಳ ವಿಷಯ ಹೊರಗೆ ತಿಳಿದಿದೆ. ಅಲ್ಲಿಯವರೆಗು ಯೋಗ ಎಂದರೆ ಏನೋ, ಯೋಗಗಳು ಎಷ್ಟು ಎನ್ನುವ ವಿಷಯ ಯಾರಿಗೂ ತಿಳಿದಿಲ್ಲ. ಆದ್ದರಿಂದ ಆಗ ಯೋಗಭ್ರಷ್ಟರು ಇಲ್ಲ. ಕೃಷ್ಣನ ಮನೆಯಲ್ಲಿ ಹುಟ್ಟಿದವರು ಸಾಧಾರಣ ಮನುಷ್ಯರೇ ಆಗಿರುತ್ತಾರೆ ಹೊರತು ಯೋಗ ಭ್ರಷ್ಟರು ಯಾರೂ ಇರುವುದಿಲ್ಲ.

**199) ಪ್ರಶ್ನೆ :– ಭೂಮಿ ಹುಟ್ಟುವಿಕೆ 450 ಕೋಟಿ ವರ್ಷಗಳ ಕೆಳಗೆ ಎಂದು ನಾವು ಹೇಳುತ್ತಿದ್ದೇವೆ. ಇಲ್ಲಿಗೆ 200 ಕೋಟಿ ವರ್ಷಗಳವರೆಗು ಭೂಮಿ ಮೇಲೆ ಯಾವ ಪ್ರಾಣೀ ಇಲ್ಲವೆನ್ನುವುದು ವಾಸ್ತವ. ನಿಮ್ಮ ಸಿದ್ಧಾಂತದ ಪ್ರಕಾರ ಭೂಮಿ**

**ಹುಟ್ಟುವಿಕೆ ಕೂಡಲೆ ಜೀವಿಗಳು ತಯಾರಾಗಿವೆಯಾ? ಅಥವಾ ಸ್ವಲ್ಪ ಅವಧಿ ಬೇಕಾಗಿದೆಯಾ? ಮಾನವ ಪರಿಣಾಮ ಇಲ್ಲಿಗೆ 70 ಲಕ್ಷಗಳ ವರ್ಷಗಳ ಕೆಳಗೆ ಆಫ್ರಿಕಾದಲ್ಲಿ ಏರ್ಪಟ್ಟಿದೆಯೆಂದು ನಮ್ಮ ವಾದನೆ. ಇದಕ್ಕೆ ನೀವೇನನ್ನುತ್ತೀರಾ?**

**ಉತ್ತರ :–** ನಮಗೆ ತಿಳಿದಿರುವುದರ ಪ್ರಕಾರ ಪ್ರಕೃತಿ ಮೊದಲು ಹುಟ್ಟಿದೆ. ಪ್ರಕೃತಿಯಲ್ಲಿ ಭೂಮಿ ಕೂಡಾ ಒಂದು ಭಾಗವೇ. ನಂತರ ಸ್ವಲ್ಪ ಅವಧಿಯಲ್ಲಿ ಜೀವಿಗಳ ಸೃಷ್ಠಿ ನಡೆದಿದೆ. ಜೀವಿಗಳಿಗಿಂತ ಮೊದಲು ಭೂಮಿ ಪ್ರಕೃತಿ ಹುಟ್ಟುವುದು ವಾಸ್ತವವೇ. ಆದರೇ ಭೂಮಿ ಹುಟ್ಟುವಿಕೆಗೆ ಜೀವಿಗಳ ಹುಟ್ಟುವಿಕೆಗು ಸ್ವಲ್ಪ ಅವಧಿ ಇರುವುದು ವಾಸ್ತವವೇ ಆದರೂ ಅದು ಎಷ್ಟು ಎನ್ನುವುದು ನಮಗು ಕೂಡಾ ತಿಳಿದಿಲ್ಲ. ಪ್ರಕೃತಿ ಪೂರ್ತಿ ರೂಪು ರೇಖೆಗಳು ತಿದ್ದುಕೊಳ್ಳುವುದಕ್ಕೆ ಸ್ವಲ್ಪ ಕಾಲ ನಡೆದಿರುವುದು ವಾಸ್ತವವೇಯೆಂದು ನಾವು ಸಹ ಹೇಳುತ್ತಿದ್ದೇವೆ. ಆದರೇ ಜೀವಿಗಳ ಪರಿಣಾಮದಲ್ಲಿ ಮೊದಲು ಮನುಷ್ಯರೇ ಹುಟ್ಟಿದ್ದಾರೆಂದು ನಂತರ ಜೀವರಾಶಿಗಳ ಸೃಷ್ಠಿ ನಡೆದಿದೆಯೆಂದು ನಾವು ಹೇಳುತ್ತಿದ್ದೇವೆ. ಇಲ್ಲ ಮೊದಲು ಜೀವರಾಶಿಗಳು ಹುಟ್ಟಿವೆಯೆಂದು ನೀವು ಹೇಳುತ್ತಿದ್ದೀರ. ಪರಿಣಾಮ ಸಿದ್ಧಾಂತ ವಾಸ್ತವವಲ್ಲ. ಭಗವದ್ಗೀತೆ ಬ್ರಹ್ಮವಿದ್ಯಾ ಶಾಸ್ತ್ರವಾಗುತ್ತದೆ. ಅದರ ಪ್ರಕಾರ ನೋಡಿದರೇ ಮನುಷ್ಯರು ಮೊದಲು ಜೀವರಾಶಿಗಳು ಹಿಂದೆ ತಯಾರಾಗಿವೆಯೆಂದು ಹೇಳಬಹುದು. ಮನುಷ್ಯರು ಯಾವಾಗ ಸೃಷ್ಠಿಸಲ್ಪಟ್ಟಿದ್ದಾರೆಂದು ನಾವು ಖಚಿತವಾಗಿ ಹೇಳಲಾರೆವು. ಯಾವಾಗ ತಯಾರಾಗಿದ್ದರೂ 'ಮನುಷ್ಯರು ಮೊದಲು ಜೀವರಾಶಿಗಳು ಹಿಂದೆ' ಹುಟ್ಟಿದ್ದಾರೆಂದು ಹೇಳುತ್ತಿದ್ದೇವೆ.

**200) ಪ್ರಶ್ನೆ :– ಸ್ತ್ರೀ, ಪುರುಷರ ಸೇರುವಿಕೆಯಿಂದಲೇ ಸಂತತಿ ಅಭಿವೃದ್ಧಿ ಹೊಂದುತ್ತಿದೆಯೆಂದು ಅದು ಪ್ರಕೃತಿ ಪರಮಾತ್ಮರಿಗೆ ನಮೂನೆಯೆಂದು ನೀವು ಹೇಳಿದ್ದೀರ. ಪುರುಷನ ಶುಕ್ರಕಣ ಅಲ್ಲಿ ಇಲ್ಲದಂತೆಯೇ 'ಡಾಲಿ' ಎನ್ನುವ ಕುರಿಮರಿಯನ್ನು ಸೃಷ್ಠಿಸಿ (ಕ್ಲೋನಿಂಗ್‌ಯಿಂದ) ಪುರುಷನ ನಮೂನೆಯೇ ಇಲ್ಲದಂತೆ ಮಾಡಿದ್ದಾರೆ. ನಂತರ ಮಾನವರೊಳಗೆ ಪ್ರವೇಶಿಸಿ, ಗಂಡಸರು ಅಲ್ಲಿ ಇಲ್ಲದಂತೆ ಹೆಂಗಸರು ಮಕ್ಕಳನ್ನು ಪ್ರಸವಿಸುವ ದಿನಗಳು ಬರುತ್ತವೆ. ಮತ್ತು ನಿಮ್ಮ ಪ್ರಕೃತಿ ಪರಮಾತ್ಮರ ಸಿದ್ಧಾಂತ ಭವಿಷ್ಯತ್ತಿನಲ್ಲಿ ಅಡ್ರಸ್ ಇಲ್ಲದಂತಾಗುತ್ತದೇನೋ?**

**ಉತ್ತರ :–** ಪುರುಷ ಶುಕ್ರಕಣ ಇಲ್ಲದಂತೆ ಮಕ್ಕಳನ್ನು ಪ್ರಸವಿಸುತ್ತಿದ್ದಾರೆಂದು ಇದಕ್ಕೂ ಮೊದಲು ಹೇಳಿದ್ದೇವೆ. ದೇವರ ಸೃಷ್ಠಿಯಲ್ಲಿಯೇ ಪುರುಷಕಣ ಇಲ್ಲದಂತೆ ದೇವರೇ ಜೀವಿಗಳನ್ನು ಸೃಷ್ಠಿಸುತ್ತಿದ್ದಾನೆ. ಮನುಷ್ಯರು ಆ ಪ್ರಯತ್ನದಲ್ಲಿ ಕ್ಲೋನಿಂಗ್ ಮೂಲಕ ಕುರಿಮರಿಗಳನ್ನು ಹುಟ್ಟಿಸಿದರೂ ಅದು ಹೆಚ್ಚಿನ ಕಾಲ ಬದುಕಲಿಲ್ಲ. ಅಷ್ಟೇ ಅಲ್ಲದೆ ಉಳಿದ ಕುರಿಗಳ ಹಾಗೆ ಅದರಲ್ಲಿ ರೋಗ ನಿರೋಧಕ ಶಕ್ತಿ ಇಲ್ಲ. ಅದಕ್ಕೆ ಕೀಲು ನೋವುಗಳು ಮುಂತಾದವು ಬರುವುದು ನಡೆದಿದೆ. ಅದರಿಂದ ಕುರಿ ಮರಿವರೆಗೇ ಮಾಡಿ ನೋಡಿದರೂ ಶಾಸ್ತ್ರಜ್ಞರು ಅಲ್ಲಿಗೆ ಅವರ ಪರಿಶೋಧನೆ ನಿಲ್ಲಿಸಿ, ಮನುಷ್ಯರ ತನಕ ಬರಲಿಲ್ಲ. ಗಂಡಸರು ಇಲ್ಲದಂತೆ ಮಕ್ಕಳು ಹುಟ್ಟುತ್ತಿದ್ದಾರೆಂದು ಇದಕ್ಕೂ ಮೊದಲೇ ತಿಳಿದುಹೋಗಿದೆ. ಅದಕ್ಕೆ ಕಾರಣವೂ ಸಹ ತಿಳಿದಿದೆ. ಪ್ರಕೃತಿ, ಪರಮಾತ್ಮರ ಸೃಷ್ಠಿ ಸಿದ್ಧಾಂತ ಗಂಡಸರು ಇಲ್ಲದಿದ್ದರೂ ಇರುತ್ತದೆಂದು ತಿಳಿದುಹೋಗಿದೆ. ಆದ್ದರಿಂದ ಆ ಸಿದ್ಧಾಂತ ಎಲ್ಲಿಗೂ ಹೋಗುವುದಿಲ್ಲ.

**201) ಪ್ರಶ್ನೆ :– ವಿನಾಯಕನ ಮೆರವಣಿಗೆಗಳು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿರುವ ಸಮಯದಲ್ಲಿ ಲೋಕಮಾನ್ಯ ಬಾಲಗಂಗಾಧರ್ ತಿಲಕ್‌ರವರು ಮಹಾರಾಷ್ಟ್ರದಲ್ಲಿ ಪ್ರಾರಂಭಿಸಿದ್ದಾರೆ. ನಂತರ ವಿನಾಯಕ ಮೆರವಣಿಗೆಗಳು ವ್ಯಾಪಿಸಿವೆಯೆಂದು ನಿನ್ನೆಯ (03–09–2016) ವಾರ್ತಾ ಪತ್ರಿಕೆಯಲ್ಲಿ ಬಂದಿದೆ. ನೀವೇನೋ ಕಲಿಯುಗ ಮೊದಲ ಕಾಲದಲ್ಲಿಯೇ ಬಲವಂತನಿಂದ ಬಲಹೀನರು ಅಡಗಿಸಲ್ಪಡುತ್ತಿದ್ದಾರೆಂದು, ಅದರ ನಮೂನೆಯನ್ನು ಇಲಿ ಆನೆ ಗುರುತಾಗಿ ತೋರಿಸುತ್ತಾ ವಿನಾಯಕ ಮೆರವಣಿಗೆಗಳು ಪ್ರಾರಂಭವಾಗಿವೆಯೆಂದು ಹೇಳಿದ್ದೀರ. ಅದು ಒಳ್ಳೆಯ ಪದ್ಧತಿ ಅಲ್ಲ ಎನ್ನುವಂತೆ ಆನೆ ಗೊಂಬೆಯನ್ನು ಮುರಿದು ನಾಮ ರೂಪಗಳು ಇಲ್ಲದೆ ಹೋಗುವಂತೆ ನೀರಿನಲ್ಲಿ ಬೆರೆಸುವವರೆಂದಿದ್ದೀರ. ಆದರೇ ಚರಿತ್ರೆಯಲ್ಲಿ 1750 ವರ್ಷಗಳಿಂದಲೇ ವಿನಾಯಕನನ್ನು ದೇವರಾಗಿ ಮೆರವಣಿಗೆ ಮಾಡುವುದು ಇದೆ. ಇದಕ್ಕೆ ನೀವೇನು ಹೇಳುತ್ತೀರ?**

**ಉತ್ತರ :–** ನಾನು ಹೇಳಿರುವುದು ಕೃತಯುಗದ ಮಾತು. ಆಗ ಅದು ನಡೆಯುತ್ತಿತ್ತು.

ನಂತರ ಇಲ್ಲದಂತೆ ಹೋಗಿದೆ. ನಂತರ 1750 ವರ್ಷಗಳ ಸಮಯದಲ್ಲಿ ಪ್ರಾರಂಭವಾಗಿದೆ. ಆದರೇ ಅಂದಿನ ಆಚರಣೆಗಳು ಎಲ್ಲ ಇವೆ. ಆದರೇ ಅದು ಭಕ್ತಿಯಾಗಿ ಬದಲಾಗಿಹೋಗಿದೆ. ಆದಿನ ಸಾಮಾಜಿಕ ನ್ಯಾಯವೆಂದು ಮಾಡಿದ ಕೆಲಸದಲ್ಲಿ ಆನೆಯನ್ನು ಧನಿಕನಾಗಿ ಇಲಿಯನ್ನು ಬಡವನಾಗಿ ಭಾವಿಸಿ 'ಇಲಿ ಮೇಲೆ ಆನೆ ಸವಾರಿ ಮಾಡುವುದು" ಅಂದರೆ 'ಧನಿಕನ ದೊಡ್ಡಸ್ತಿಕೆ ಬಡವನ ಮೇಲೆ ಇರುವುದು ಒಳ್ಳೆಯದಲ್ಲವೆಂದು" ಊರೆಲ್ಲಾ ತಿಳಿಸಿ ಅದನ್ನು ಇಲ್ಲದಂತೆ ಮಾಡುವುದಕ್ಕೆ ನೀರಿನಲ್ಲಿ ಬೆರೆಸುತ್ತಿದ್ದರು. ಈ ದಿನ ಅದೇ ಇದೆ ಆದರೇ ಭಾವನೆಯಲ್ಲಿ ಭಕ್ತಿ ಏರ್ಪಟ್ಟಿದೆ. ಮೊದಲನೆಯದು ಮಾಸಿಹೋಗಿದೆ.

ಇಲ್ಲಿಯವರೆಗು ಎರಡು ನೂರಾ ಒಂದು (201) ಪ್ರಶ್ನೆಗಳನ್ನು ಒಬ್ಬನೇ ವ್ಯಕ್ತಿ ಕೇಳುವುದು ನಡೆದಿದೆ. ಆ ಪ್ರಶ್ನೆಗಳೆಲ್ಲವುಗಳಿಗೂ ಉತ್ತರಗಳು ಕೊಟ್ಟಿದ್ದೇವೆ. ಆದರೇ ಅವು ಅವರಿಗೆ ಎಲ್ಲಿಯವರೆಗು ಸಂತೃಪ್ತಿಯನ್ನು ಕೊಡುತ್ತವೋ ಇಲ್ಲವೋ ಆದರೆ ಪ್ರಜೆಗಳಿಗೆ ಅನೇಕ ರುಚಿಗಳ ಆಹಾರವನ್ನು ಕೊಟ್ಟಂತಾಗಿದೆ. ನಮ್ಮ ಕಡೆಯಿಂದ ನಾವು ಹೇಳುವುದೇ ಅಲ್ಲದೆ ಇತರರ ಕಡೆಯಿಂದ ಬರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವುದರಿಂದ ಓದುವವರಿಗೆ ಅನೇಕ ರುಚಿಗಳನ್ನು ಒದಗಿಸಿದಂತಾಗುತ್ತದೆನ್ನುವ ಉದ್ದೇಶದಿಂದ ಹೇತುವಾದ ಪ್ರಶ್ನೆಗಳನ್ನು ತೆಗೆದು ಕೊಂಡಿದ್ದೇವೆ. ಕೇಳಿದವರು ಹೇತುವಾದಿಗಳು ಅಲ್ಲದಿದ್ದರೂ ಹೇತುವಾದ ದಿಂದ ಅವರಿಗೆ ಬಂದಿರುವ ಪ್ರಶ್ನೆಗಳನ್ನು ನಮಗೆ ಕಳುಹಿಸುವುದು ನಡೆದಿದೆ. ಕೊನೆಗೆ ಪ್ರಶ್ನೆಗಳೆಲ್ಲವೂ ಹೇತುವಾದಿಗಳ ಕಡೆಯಿಂದ ಬಂದಿರುವವೇಯೆಂದು ತಿಳಿಸುತ್ತಿದ್ದೇವೆ. ಇಲ್ಲಿಯತನಕ ಹೇಳಿದ ಎರಡು ನೂರ ಒಂದು (201) ಪ್ರಶ್ನೆಗಳು ಹೇತುವಾದಿಗಳವೇ. ಈಗ ಇಲ್ಲಿಂದ ಬರುವ ಪ್ರಶ್ನೆಗಳು ಪೂರ್ತಿ ಹೇತುವಾದಕ್ಕೆ ಸಂಬಂಧಿಸಿರುವವು ಆಗದಿರಬಹುದು. ಈ ಪ್ರಶ್ನೆಗಳಲ್ಲಿ ಯೇಸನ್ನು ಕುರಿತು ಬೈಬಲ್‌ನ್ನು ಕುರಿತಾದ ಪ್ರಶ್ನೆಗಳು ಹೆಚ್ಚಾಗಿ ಇವೆ. ಇದರಲ್ಲಿ ಹೇತುವಾದದ ಬಗ್ಗೆ ಹೆಚ್ಚಾಗಿ ಇಲ್ಲದಿರುವುದರಿಂದ ಸರ್ವಸಾಧಾರಣ ಪ್ರಶ್ನೆಗಳಾಗಿಯೇ ನಾವು ತಿಳಿಯುತ್ತಿದ್ದೇವೆ. ಕೇಳಿದವರು ಕ್ರೈಸ್ಥವದಲ್ಲಿ ಎಷ್ಟೋ ವರ್ಷಗಳಿಂದ ಬೋಧಕರಾಗಿ

ಕೆಲಸ ಮಾಡುತ್ತಿರುವವರು. ಇಲ್ಲಿ ಮೂರು ಮತದವರಿಗೂ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಗಳು ಕೊಡುವುದು ನಡೆಯುತ್ತದೆ. ಆದ್ದರಿಂದ ಕ್ರೈಸ್ಥರು ಕೇಳಿದ ಪ್ರಶ್ನೆಗಳಿಗೆ, ಹಾಗೆಯೇ ಮುಸ್ಲಿಮ್‌ರು ಕೇಳಿದ ಪ್ರಶ್ನೆಗಳಿಗೆ ನಾವು ಉತ್ತರಗಳು ಕೊಡಬೇಕೆಂದುಕೊಂಡಿದ್ದೇವೆ. "ಸರ್ವ ಮತಗಳಿಗು ಒಬ್ಬನೇ ದೇವರು, ಒಂದೇ ಜ್ಞಾನ" ಎನ್ನುವುದು ನಮ್ಮ ಸೂತ್ರ. ಆದ್ದರಿಂದ ಯಾವ ಮತ ಪ್ರಶ್ನೆಗಾದರೂ ಉತ್ತರ ಕೊಡುವುದು ನಮ್ಮ ಜವಾಬ್ದಾರಿ.

**1) ಪ್ರಶ್ನೆ :– ದೇವರು ಕೊಟ್ಟಿರುವ ಮೂರು ಗ್ರಂಥಗಳಲ್ಲಿ ಮನುಷ್ಯರ ಜ್ಞಾನ ಸೇರಿಸಲ್ಪಡುತ್ತಾ ಪ್ರಜೆಗಳು ಜ್ಞಾನಹೀನರಾಗಿ ಬದಲಾಗುತ್ತಿದ್ದರೆ ದೇವರಿಗೆ ಇಷ್ಟವಾ?**

**ಉತ್ತರ :–** ಪ್ರಜೆಗಳು ಜ್ಞಾನವಂತರಾಗಬೇಕೆಂದು ದೇವರು ಭಗವಂತನಾಗಿ ಆಗಾಗ ಬಂದು ತನ್ನ ಜ್ಞಾನವನ್ನು ತಿಳಿಸಿ ಹೋಗುತ್ತಿದ್ದಾನೆ. ದೇವರು ತಂದ ಮೂರು ವಿಧಾನಗಳಲ್ಲಿ ಸ್ವಚ್ಛವಾದ ಜ್ಞಾನವಿದ್ದರೂ ಮನುಷ್ಯರಲ್ಲಿ ಕೆಲವರು ಸ್ವಾರ್ಥರು ತಮ್ಮ ಹಿರೆತನವನ್ನು ಚಲಾಯಿಸುವುದಕ್ಕೆ ತಮ್ಮ ಜ್ಞಾನವನ್ನು ದೇವರ ಜ್ಞಾನದೊಂದಿಗೆ ಜೋಡಿಸುತ್ತಿದ್ದಾರೆ. ಹಾಗೆ ಮೂರು ಗ್ರಂಥಗಳಲ್ಲಿ ಸ್ವಲ್ಪ ಕಲುಷಿತ ಏರ್ಪಟ್ಟಿದೆ. ದೇವರು ಹೇಳದ ವಿಷಯಗಳು, ಜ್ಞಾನಕ್ಕೆ ಸಂಬಂಧವಿಲ್ಲದ ವಿಷಯಗಳನ್ನು ಸಹ ಕೆಲವು ಗ್ರಂಥದಲ್ಲಿ ಸೇರಿಸಿ ಇದು ದೇವರು ಹೇಳಿದ್ದಾನೆಂದು ಪ್ರಜೆಗಳನ್ನು ಮೋಸಗೊಳಿಸಿ ಅವರ ಮತ ವಿಧಾನದಲ್ಲಿ ನಡೆಸುತ್ತಿದ್ದಾರೆ. ದೇವರು ಹೇಳಿದ ಜ್ಞಾನದಲ್ಲಿ ಮತ ವಿಧಾನ ಏನೂ ಇರುವುದಿಲ್ಲ. ಆದರೂ ದೈವಗ್ರಂಥದಲ್ಲಿ ಅದು ಕಾಣಿಸುತ್ತಿದೆಯೆಂದರೇ ದೈವಗ್ರಂಥದೊಳಗೆ ಕೂಡಾ ಮನುಷ್ಯರ ಮತ ಸಂಬಂಧ ಅಜ್ಞಾನ ಬೋಧನೆಗಳು ಸೇರಿವೆಯೆಂದು ಅರ್ಥವಾಗುತ್ತಿದೆ. ಅದರಿಂದ ಪ್ರಜೆಗಳು ಅಜ್ಞಾನಿಗಳಾಗಿ ಬದಲಾಗುವುದಕ್ಕೆ ಅವಕಾಶವಿದೆ. ದೇವರ ಜ್ಞಾನವನ್ನು ಪಕ್ಕದಲ್ಲಿಟ್ಟು ಮನುಷ್ಯರ ಜ್ಞಾನವನ್ನೇ ಆಚರಿಸುತ್ತಿದ್ದಾರೆ. ದೇವರು ಜ್ಞಾನವನ್ನು ತಿಳಿಸಿದರೆ ದೇವರ ಶ್ರಮವನ್ನು ಅಲ್ಲಗಳೆದು ತಮ್ಮ ಜ್ಞಾನವನ್ನು ಅಡ್ಡ ಇಡುವುದು ದೇವರಿಗೆ ಇಷ್ಟವಿಲ್ಲ. ಆದ್ದರಿಂದ ಇದು ತಪ್ಪು, ಇದು ಸರಿ ಎಂದು ಸತ್ಯಾಸತ್ಯವನ್ನು ತೀರ್ಮಾನಿಸಿ ಹೇಳುವ ಒರೆಕಲ್ಲಿನಂತಹವರನ್ನು ಪುನಃ ಭೂಮಿ ಮೇಲೆಗೆ

ಕಳುಹಿಸುವನೆಂದು ಅಂದು ಕೊಳ್ಳುತ್ತಿದ್ದೇವೆ. ಹಾಗೆ ಬಂದವನು ಯಾವ ಮತದಲ್ಲಿ ಅಜ್ಞಾನವಿದ್ದರೂ ಅದನ್ನು ಹೊರಗೆ ತೆಗೆದು ತೋರಿಸುವುದೇ ತಮ್ಮ ಕೆಲಸವಾಗಿ ಇಟ್ಟುಕೊಂಡು ಸ್ವಚ್ಛವಾದ ದೇವರ ಜ್ಞಾನವನ್ನು ಮನುಷ್ಯರಿಗೆ ಸೇರುವಂತೆ ನೋಡಬಲ್ಲನು. ದೇವರ ಜ್ಞಾನವನ್ನು ಪ್ರಜ್ವಲಿಸುವಂತೆ ಮಾಡುವ ಕೆಲಸದಲ್ಲಿ ಮನುಷ್ಯನ ಜ್ಞಾನ ತೆಗೆದುಹಾಕಲ್ಪಡುತ್ತದೆ. ಹಾಗೆ ನಡೆಯುವುದು ಮತಛಾಂದಸವಾದಿಗಳಿಗೆ ಆತಂಕವಾಗಿ ಕಾಣಿಸಿದರೂ ದೇವರು ಕಳುಹಿಸಿದವನ ಮೇಲೆ ಕುಚೇಷ್ಟೆ, ಕುತಂತ್ರಗಳು ಮಾಡಿದರೂ ದೈವದ ಕಡೆಯಿಂದ ಬಂದವನು ಸ್ವಲ್ಪವೂ ಭಯಪಡುವುದಿಲ್ಲ. ತಾನು ಏನು ಮಾಡಬೇಕೋ ಅದನ್ನೇ ಹೇಳುತ್ತಾ ಹೋಗುವನು.

**2) ಪ್ರಶ್ನೆ :– ಯೇಸು ಮರಣಿಸಿದ 50 ದಿನಗಳಿಗೆ ಆದರಣಕರ್ತ ಅಂದರೆ ಪರಿಶುದ್ಧಾತ್ಮ ಭೂಮಿಮೇಲೆಗೆ ಬಂದನೆಂದು ಯಾವತ್ ಕ್ರೈಸ್ಥವ ಲೋಕ ನಂಬುತ್ತಿದೆ. ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ಯೇಸು ಮರಣಿಸುವುದಕ್ಕಿಂತ ಮೊದಲೇ ಆದರಣಕರ್ತ ಬರುತ್ತಾನೆಂದು ಯೇಸೇ ಹೇಳಿದ್ದಾನೆ. ಆದರಣಕರ್ತ ಪರಿಶುದ್ಧಾತ್ಮವೇಯೆಂದು ಕೂಡಾ ಹೇಳಿದ್ದಾನೆ. ಯೋಹಾನ್ ಸುವಾರ್ತೆ 16ನೇ ಅಧ್ಯಾಯದಲ್ಲಿ ಏಳನೆ ವಚನದಲ್ಲಿ "ನಾನು ಹೋದರೇನೆ ಆದರಣಕರ್ತ ನಿಮ್ಮ ಹತ್ತಿರಕ್ಕೆ ಬರುತ್ತಾನೆ. ನಾನು ಹೋಗದೇ ಆತನು ನಿಮ್ಮ ಹತ್ತಿರಕ್ಕೆ ಬರುವುದಿಲ್ಲವೆಂದು ಇದೆ." ನೋಡಿರಿ. **(ಯೋಹಾನ್ 16–7) "ನಾನು ಹೊರಟು ಹೋಗುವುದರಿಂದ ನಿಮಗೆ ಪ್ರಯೋಜನೆ, ನಾನು ಹೋಗದಿದ್ದರೆ ಆದರಣಕರ್ತ ನಿಮ್ಮ ಹತ್ತಿರಕ್ಕೆ ಬರುವುದಿಲ್ಲ. ನಾನು ಹೋದ್ರೇನೆ ಆತನನ್ನು ನಿಮ್ಮ ಹತ್ತಿರಕ್ಕೆ ಕಳುಹಿಸುತ್ತೇನೆ"**. ಇದನ್ನನುಸರಿಸಿ ಯೇಸು ಹೋಗದ ಪಕ್ಷದಲ್ಲಿ ಆದರಣ ಕರ್ತ ನಮ್ಮ ಹತ್ತಿರಕ್ಕೆ ಬರುವುದಿಲ್ಲ. ಅಷ್ಟೇ ಅಲ್ಲದೆ ನಾನು ಹೋದ ಪಕ್ಷದಲ್ಲಿ ಆತನನ್ನು ನಿಮ್ಮ ಹತ್ತಿರಕ್ಕೆ ಕಳುಹಿಸುತ್ತೇನೆ. ಇದನ್ನನುಸರಿಸಿ ಯೇಸು ಹೋಗಿ ಯೇಸೇ ಆದರಣಕರ್ತನನ್ನು ಕಳುಹಿಸಬೇಕಾಗಿದೆ. ಈ ಮಾತುಗಳಿಂದ ಯೇಸು ಹೋಗದೆ ಆದರಣಕರ್ತ ಬರುವದಿಲ್ಲ

ವೆಂದು ತಿಳಿದುಹೋಗುತ್ತಿದೆ. ಮುಖ್ಯವಾಗಿ ಯೇಸು ಹೋಗುವುದು ಆದರಣಕರ್ತ ಬರುವುದಕ್ಕೆ ಮೂಲವಾಗಿದೆ. ಆದರೇ ಯೇಸು ಯಾವಾಗ ಹೋಗುತ್ತೇನೆಂದು ಯಾರೊಂದಿಗಾದರೂ ಹೇಳಿದ್ದಾನಾ? ಹೋಗುತ್ತೇನೆನ್ನುವ ಮಾತು ವಾಸ್ತವ! **'ಯಾವಾಗ?'** ಎನ್ನುವುದು ಸಂದಿಗ್ದ. ಯಾವಾಗಾದರೂ ಯೇಸು ಹೋದಾಗ ಆದರಣ ಕರ್ತ ಬರುತ್ತಾನೆ. ಯೇಸು ಯಾವಾಗ ಹೋಗಿದ್ದಾನೆನ್ನುವ ವಿಷಯದಲ್ಲಿ ಆತನು ತೀರ್ಮಾನಿಸಿ ಹೇಳಲಿಲ್ಲ. ನಾವು ನೋಡಲಿಲ್ಲ.

ಒಂದುವೇಳೆ ಯಾವಾಗಲೋ ಒಂದು ಬಾರಿ ಯೇಸು ಹೋಗಿದ್ದಾನೆಂದು ಕೊಳ್ಳೋಣ. ಯೇಸು ಹೋಗಿರುವುದರಿಂದ ಆದರಣಕರ್ತ ಇರುತ್ತಾನೆ. ಆದರೇ ಯಾರು ಆದರಣ ಕರ್ತ? ಯಾರಾದರೂ ಇಲ್ಲಿಯವರೆಗು ನಾನು ಆದರಣಕರ್ತ ಎಂದು ಹೇಳಿದ್ದಾರಾ? ಯಾರೂ ಹೇಳಲಿಲ್ಲ. ಮನುಷ್ಯರು ತಮ್ಮಷ್ಟಕ್ಕೆ ತಾವು ಊಹಿಸಿಕೊಂಡು ಯಾವ ಆಧಾರ ಇಲ್ಲದಂತೆ ಮಾತನಾಡಿಕೊಳ್ಳುತ್ತಿದ್ದಾರೆ. ಯೇಸು ಮರಣಿಸಿದ 50 ದಿನಗಳಿಗೆ ಆದರಣಕರ್ತ ಬಂದಿದ್ದಾನೆಂದು ಕೆಲವರು ಅನ್ನುತ್ತಿದ್ದಾರೆ. ಯೇಸು ಯಾವಾಗ ಮರಣಿಸಿದ್ದಾನೋ ಖಚಿತವಾಗಿ ಯಾರಾದರೂ ಹೇಳಬಲ್ಲಿರಾ? ಒಂದು ವೇಳೆ ಮರಣದಿಂದ ಎದ್ದು ಬಂದ ನಂತರ, ಸಮಾಧಿಯಿಂದ ಹೊರಗೆ ಮರಣವನ್ನು ಜಯಿಸಿ ಬಂದ ನಂತರ ಮರಣ ಇಲ್ಲ ಅಲ್ಲವೆ! ಅಂತಹವನು 50 ದಿನಗಳಿಗೇ ಮರಣಿಸಿದ್ದಾನಾ? ಹೀಗೆ ಅನೇಕ ಸಂಶಯಗಳು ಬರುತ್ತವೆ. ಎಲ್ಲದಕ್ಕೂ ಯಾವುದೋ ಒಂದು ಸಮಾಧಾನ ಹೇಳಿ ಆದರಣಕರ್ತ ಬಂದಿದ್ದಾನೆ ಎಂದುಕೊಳ್ಳೋಣ. ಬಂದಿರುವ ಆದರಣಕರ್ತ ಯಾರೆಂದು ತಿಳಿಯಬಲ್ಲದು. ಬಂದಿರುವವನು ನಾನು ಆದರಣಕರ್ತಯೆಂದು ಹೇಳುವುದಿಲ್ಲ. ಆದ್ದರಿಂದ ಬಂದಿರುವವನನ್ನು ತಿಳಿಯುವುದಕ್ಕೆ ಅವಕಾಶವಿಲ್ಲ. ಈ ವಿಷಯವಾಗಿ ಯೋಹಾನ್ ಸುವಾರ್ತೆ 14ನೇ ಅಧ್ಯಾಯ, 17ನೇ ವಚನವನ್ನು ನೋಡಿದರೇ ಹೀಗೆ ಇದೆ. **(ಯೋಹಾನ್ 14–17) "ಲೋಕ ಆತನನ್ನು ನೋಡುವುದಿಲ್ಲ, ಆತನನ್ನು ತಿಳಿಯುವುದಿಲ್ಲ. ಆದ್ದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ತಿಳಿಯುತ್ತೀರಾ. ಆತನು ನಿಮ್ಮೊಂದಿಗೆ ಕೂಡಾ ನಿವಾಸಿಸುವನು ನಿಮ್ಮಲ್ಲಿ**

**ಇರುವನು"** ಎಂದು ಇದೆ. ಇದರ ಪ್ರಕಾರ ಪ್ರಪಂಚದ ಪ್ರಜೆಗಳಿಗೆ ಆದರಣಕರ್ತ ಬಂದಿದ್ದಾನೆನ್ನುವ ವಿಷಯ ಯಾವಮಾತ್ರ ತಿಳಿದಿಲ್ಲ. ಯೇಸು ತನ್ನ ಜನ್ಮವನ್ನು ಮುಗಿಸಿ ಹೋದ ನಂತರ ಎಷ್ಟೋ ಸ್ವಲ್ಪ ಕಾಲಕ್ಕೆ ಆದರಣಕರ್ತನಾಗಿ ಯೇಸೇ ಬರಬೇಕಾಗಿದೆ. ಬರುವ ಆದರಣಕರ್ತ ಯಾರೋ ಅಲ್ಲ ಯೇಸೇ. ಆದ್ದರಿಂದ ತನ್ನ ಶಿಷ್ಯರನ್ನು 'ನೀವು ತಿಳಿದಿರುತ್ತೀರಾ' ಎಂದು ಹೇಳುವುದೇ ಅಲ್ಲದೆ ಪಕ್ಕದಲ್ಲೇ 18, 19ನೇ ವಚನಗಳಲ್ಲಿ ಹೀಗೆ ಇದೆ ನೋಡಿರಿ. **(ಯೋಹಾನ್ 14–18, 19) "ನಿಮ್ಮನ್ನು ಅನಾಥರನ್ನಾಗಿ ಬಿಡುವುದಿಲ್ಲ. ನಿಮ್ಮ ಬಳಿಗೆ ನಾನು ಬರುವೆನು. ಸ್ವಲ್ಪ ಕಾಲ ಕಳೆದ ನಂತರ ಲೋಕವು ನನ್ನನ್ನು ಮತ್ತೆ ಎಂದಿಗೂ ನೋಡುವುದಿಲ್ಲ. ಆದರೇ ನೀವು ನನ್ನನ್ನು ನೋಡುತ್ತೀರಾ. ನಾನು ಜೀವಿಸುತ್ತಿದ್ದೇನೆ ಆದ್ದರಿಂದ ನೀವು ಸಹ ಜೀವಿಸುತ್ತೀರಾ."** ಯೇಸು ಶರೀರದೊಂದಿಗೆ ಇರುವಾಗ ಹೇಳಿದ ಮಾತುಗಳಿವು. ಸ್ವಲ್ಪ ಕಾಲ ಕಳೆದ ನಂತರ ಲೋಕ ನನ್ನನ್ನು ನೋಡುವುದಿಲ್ಲ. ಈ ಮಾತಿನ ಪ್ರಕಾರ ಶರೀರದೊಂದಿಗೆ ಇರುವ ಯೇಸನ್ನು ಸ್ವಲ್ಪ ಕಾಲದವರೆಗು ಈ ಲೋಕ ಪ್ರಜೆಗಳು ನೋಡುತ್ತಾರೆಂದು ನಂತರ ಮತ್ತು ಎಂದಿಗೂ ತನ್ನನ್ನು ನೋಡುವುದಿಲ್ಲವೆಂದು ಹೇಳಿದ್ದಾನೆ. ಅಂದರೇ ಆಗ ಶರೀರವನ್ನು ಬಿಟ್ಟು ಹೋದ ನಂತರ ಯೇಸು ಭೌತಿಕವಾಗಿ ಕಾಣಿಸುವುದಿಲ್ಲ. ಆದ್ದರಿಂದ ಎಂದಿಗೂ ಲೋಕ ಆತನನ್ನು ನೋಡಲಿಲ್ಲ. ಹಾಗಿರುವಾಗ ಬೇರೆ ಶರೀರ ಧರಿಸಿ ಆದರಣಕರ್ತನಾಗಿ ಬಂದಿರುವ ಆತನನ್ನು ತಿಳಿಯಲಾರರೆಂದು ಅರ್ಥ. ಆದ್ದರಿಂದ **"ಲೋಕ ಆತನನ್ನು ನೋಡುವುದಿಲ್ಲ, ತಿಳಿಯುವುದಿಲ್ಲ"** ಎಂದು ವಾಕ್ಯದಲ್ಲಿ ಹೇಳಿದ್ದಾರೆ.

ಇಷ್ಟು ವಿಷಯಗಳು ಅರ್ಥವಾಗದಿದ್ದರೂ ಹಿಂದೆ ನಡೆದಿರುವ ಸಂಘಟನೆಯಲ್ಲಿ ಮತ್ತೊಂದು ವಿಷಯವನ್ನು ಜ್ಞಾಪಕ ಮಾಡಿಕೊಂಡು ನೋಡಿದರೇ ಹೀಗೆ ಇದೆ. ಲೂಕಾ, 23ನೇ ಅಧ್ಯಾಯ 39 ರಿಂದ 43ರವರೆಗು ನೋಡಿರಿ. **(ಲೂಕಾ–23–39, 40, 41, 42, 43) "ನೇತಾಕಲ್ಪಟ್ಟ ಆ ಅಪರಾದಿಗಳಲ್ಲಿ ಒಬ್ಬನು ಆತನನ್ನು ದೂಷಿಸುತ್ತಾ ನೀನು ಕ್ರಿಸ್ತನು ಅಲ್ಲವೆ! ನಿನ್ನನ್ನು ನೀನು ರಕ್ಷಿಸಿಕೊ. ನಮ್ಮನ್ನು ಕೂಡಾ ರಕ್ಷಿಸು ಎಂದನು. ಆದರೇ ಎರಡನೆಯವನು**

**ಅವನನ್ನು ಗದರಿಸಿ ನೀನು ಅದೇ ಶಿಕ್ಷೆಯವಿಧಿಯಲ್ಲಿದ್ದೀಯ ಆದ್ದರಿಂದ ದೇವರಿಗೆ ಹೆದರುವುದಿಲ್ಲವಾ? ನಮಗಾದರೇ ಇದು ನ್ಯಾಯವೇ. ನಾವು ಮಾಡಿರುವುದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಿದ್ದೇವೆ ಆದರೆ ಈತನು ಯಾವ ತಪ್ಪು ಮಾಡಲಿಲ್ಲ ವೆಂದು ಹೇಳಿ ಆತನನ್ನು ನೋಡಿ ಯೇಸೂ, ನೀನು ನಿನ್ನ ರಾಜ್ಯದೊಳಗೆ ಬರುವಾಗ ನನ್ನನ್ನು ಜ್ಞಾಪಕ ಮಾಡಿಕೊ ಎಂದನು. ಅದಕ್ಕೆ ಆತನು ಅವನೊಂದಿಗೆ ಈ ದಿನ ನೀನು ನನ್ನೊಂದಿಗೆ ಸಹ ಪರದೈಸುವಿನಲ್ಲಿ (ಪರದೇಶದಲ್ಲಿ) ಇರುಯೆಂದು ನಿಶ್ಚಯವಾಗಿ ನಿನ್ನೊಂದಿಗೆ ಹೇಳುತ್ತಿದ್ದೇನೆಂದನು."** ಆಗ ಯೇಸು ಅಪರಾಧಿಗೆ ಕೊಟ್ಟಿರುವ ಮಾತಿನ ಪ್ರಕಾರ ಪರದೇಶದಲ್ಲಿ ಸ್ವಲ್ಪ ಕಾಲ ಇರಬೇಕಾಗಿ ಬಂದಿದೆ. ಎಷ್ಟು ಕಾಲವಿದ್ದಾನೆ, ಯಾವ ದೇಶದಲ್ಲಿದ್ದಾನೆ ಎನ್ನುವುದಕ್ಕೆ ವಿವರ **"ಯೇಸು ಮರಣಿಸಿದ್ದಾನಾ? ಮರಣಿಸಲ್ಪಟ್ಟಿದ್ದಾನಾ?"** ಎನ್ನುವ ನಾವು ಬರೆದ ಗ್ರಂಥವನ್ನು ನೋಡಿರಿ. ಇದರ ಪ್ರಕಾರ ಯೇಸು ಮರಣಿಸಿದ ನಂತರ 50 ದಿನಗಳಿಗೇ ಆದರಣಕರ್ತ ಬಂದಿದ್ದಾನೆನ್ನುವುದು ಅವಾಸ್ತವ. ಆದರಣಕರ್ತನಾಗಿ ಬರುವವನು ಯಾರೋ ಅಲ್ಲ ಯೇಸೇ ಆದ್ದರಿಂದ ಆತನ ಎರಡನೆಯ ಆಗಮನಕ್ಕಾಗಿ ಕೆಲವು ವರ್ಷಗಳ ಮೊದಲೇ ಪ್ರಣಾಳಿಕೆಯನ್ನು ಏರ್ಪಡಿಸಿಕೊಳ್ಳಬೇಕಾದ ಅವಶ್ಯವಿದೆ. ಆದ್ದರಿಂದ ಕೆಲವು ವರ್ಷಗಳು ತನ್ನ ಪ್ರಣಾಳಿಕೆಯನ್ನು ರಚಿಸಿಕೊಂಡ ನಂತರ ಯೇಸು ಆದರಣಕರ್ತನಾಗಿ ಬರಬೇಕಾಗಿದೆ. ಈ ವಿಷಯಗಳೆಲ್ಲವೂ ಆಲೋಚಿಸದೇ ಯೇಸು ಶಿಲುಬೆಗೆ ಹಾಕಲ್ಪಟ್ಟ ನಂತರ 50 ದಿನಗಳಿಗೇ ಆದರಣ ಕರ್ತ ಬಂದಿದ್ದಾನೆಂದಾಗಲೀ, ಯೇಸು ಮರಣಿಸಿದ ನಂತರ 50 ದಿನಗಳಿಗೆ ಆದರಣ ಕರ್ತ ಬಂದಿದ್ದಾನೆಂದಾಗಲೀ ಹೇಳುವುದು ಅಸತ್ಯವಾಗುತ್ತದೆ.

**3) ಪ್ರಶ್ನೆ :– ಮೋಷೇಗೆ ಕಾಣಿಸಿದ 'ತೌರಾತ್' ಗ್ರಂಥವನ್ನು ಎಲ್ಲಿಯವರೆಗು ತಿಳಿಸಿದ್ದಾನೆ. ಕೆಲವರು ಆದಿಕಾಂಡ, ನಿರ್ಗಮಕಾಂಡ, ದ್ವಿತೀಯೋಪದೇಶ ಕಾಂಡ, ಸಂಖ್ಯಾ ಕಾಂಡ, ಧರ್ಮಶಾಸ್ತ್ರ ಎಂದು ಕರೆಯುತ್ತಿದ್ದಾರೆ ನಿಜವೇನಾ?**

**ಉತ್ತರ :–** ಮೋಷೇಗೆ ಕಾಣಿಸಿದ ತೌರಾತ್ ಗ್ರಂಥದಲ್ಲಿನ ಜ್ಞಾನವೆಲ್ಲವನ್ನೂ ಮೋಷೇ ಧರ್ಮಶಾಸ್ತ್ರ ಎನ್ನುವ ಹೆಸರೊಂದಿಗೆ ಹೇಳಿದ್ದಾನೆ. ಮೋಷೇ ಹೇಳಿದ

ಧರ್ಮಶಾಸ್ತ್ರದಿಂದ ಅಂದಿನ ಪ್ರಜೆಗಳು ಸಂಪೂರ್ಣ ಜ್ಞಾನಿಗಳಾಗಿ ತಯಾರಾಗಿದ್ದಾರೆ. ಆ ಕಾಲದಲ್ಲಿ ಮೋಷೇ ಹೇಳಿದ ಧರ್ಮಶಾಸ್ತ್ರ ಒಳ್ಳೆಯ ಹೆಸರು ಪಡೆದಿದೆ. ಮೋಷೇ ಹೇಳಿದರೇ ಕೇಳಿದ ಜ್ಞಾನವೇ ಹೊರತು, ಮೋಷೇ ಹೇಳುವ ಧರ್ಮಶಾಸ್ತ್ರ ಯಾವ ಗ್ರಂಥದೊಳಗಿನದೋ ಯಾರಿಗೂ ತಿಳಿದಿಲ್ಲ. ಮೋಷೇ ನೋಡಿ ಹೇಳುತ್ತಿರುವ ತೌರಾತ್ ಗ್ರಂಥ ಮೋಷೇಗೆ ಒಬ್ಬನಿಗೇ ಪ್ರತಿ ದಿನ ಕಾಣಿಸುತ್ತಿತ್ತು. ಅದರಲ್ಲಿ ನೋಡಿದ ಜ್ಞಾನ ವಿಷಯಗಳನ್ನೇ ಮೋಷೇ ಪ್ರಜೆಗಳಿಗೆ ಹೇಳುತ್ತಿದ್ದನು. ಮೋಷೇ ಹೇಳಿರುವುದು ಧರ್ಮಶಾಸ್ತ್ರವೆನ್ನುವುದು ನಿಜ.

**4) ಪ್ರಶ್ನೆ :– ತಂದೆ (ದೇವರು) ತನಗಿಷ್ಟವಾದವರನ್ನು ತನ್ನ ಕಡೆ ಆಕರ್ಷಿಸಿಕೊಳ್ಳುವುದಕ್ಕೆ ದೇವರು ಪಕ್ಷಪಾತಿಯಾ?**

**ಉತ್ತರ :–** ಮನುಷ್ಯರಿಗೆ ದೇವರು ಇಷ್ಟವಾದರೇ ದೇವರಿಗೆ ಮನುಷ್ಯರು ಕೂಡಾ ಇಷ್ಟರಾಗುತ್ತಾರೆ. ಮನುಷ್ಯರು ದೇವರನ್ನು ಶತ್ರುವಾಗಿ ನೋಡಿದರೇ ದೇವರು ಸಹ ಮನುಷ್ಯರನ್ನು ಶತ್ರುಗಳಾಗಿ ನೋಡುತ್ತಾನೆ. ಮನುಷ್ಯರ ವಿಧಾನವನ್ನನುಸರಿಸಿ ದೇವರಿರುತ್ತಾನೆ. ದೇವರಿಗೆ ಇಷ್ಟವಾದವರಿದ್ದಾರೆಂದರೆ ಮೊದಲು ಮನುಷ್ಯರಿಗೆ ದೇವರು ಇಷ್ಟನಾಗಿ ಇರುತ್ತಾನೆ ಎಂದು ಅರ್ಥ. ಮನುಷ್ಯರನ್ನನುಸರಿಸಿ ದೇವರಿರುತ್ತಾನೆ ಆದ್ದರಿಂದ ದೇವರು ತನಗಿಷ್ಟವಾದವರನ್ನು ತನ್ನ ಕಡೆ ಬರುವುದಕ್ಕೆ ಯಾವ ಆತಂಕ ಇಲ್ಲದೆ ಮಾಡುತ್ತಾನೆ. ದೇವರ ಕಡೆಗೆ ಹೋಗುವುದಕ್ಕೆ ಮಾಯೆ ಒಪ್ಪಿಕೊಳ್ಳುವುದಿಲ್ಲ. ದೇವರು ಮನುಷ್ಯನನ್ನು ಒಪ್ಪಿಕೊಂಡರೆ ಮಾಯೆ ಕೂಡಾ ಒಪ್ಪಿಕೊಳ್ಳುತ್ತದೆ. ದೇವರಿಗೆ ಇಷ್ಟವಾಗದವನನ್ನು ದೇವರ ಮಾರ್ಗದಲ್ಲಿ ಮುಂದಕ್ಕೆ ಹೋಗಲು ಬಿಡದೆ ಆತಂಕಪಡಿಸುತ್ತದೆ. ದೇವರೆಂದರೆ ಪೂರ್ತಿ ಭಕ್ತಿ ವಿಶ್ವಾಸಗಳು ಹೊಂದಿ, ದೇವರ ಮೇಲೆಯೇ ತನ್ನ ಧ್ಯಾಸವನ್ನು ಇಟ್ಟುಕೊಂಡವನಿಗೆ ದೇವರು ಕೂಡಾ ಆತನನ್ನು ಇಷ್ಟಪಡುವುದರಿಂದ ಮಾಯೆ ಆತನಿಗೆ ಯಾವ ಆತಂಕ ಉಂಟಾಗದಂತೆ ಮಾಡಬಲ್ಲದು. ಆಗ ಅವನು ದೇವರ ಕಡೆ ಹೋಗುವುದಕ್ಕೆ ಒಳ್ಳೆಯ ಅವಕಾಶ ಲಭಿಸುತ್ತದೆ.

**5) ಪ್ರಶ್ನೆ :– ಯೇಸು ಗುಜರಾತ್‌ನಲ್ಲಿ 30 ವರ್ಷಗಳು ಏನು ಮಾಡಿದನು?**

**ಉತ್ತರ :–** ಮುಂಬರುವ ತನ್ನ ಎರಡನೆಯ ಜನ್ಮವನ್ನು ಕುರಿತು ಪ್ರಣಾಳಿಕೆಯನ್ನು ಸಿದ್ಧಮಾಡಿಕೊಂಡಿದ್ದಾನೆ. 30 ವರ್ಷಗಳ ಪ್ರಣಾಳಿಕೆಯಲ್ಲಿ ಜನ್ಮದಿಂದ ಮರಣದವರೆಗು ಪ್ರತಿ ವಿಷಯ ಬರೆದಿಟ್ಟಿದ್ದಾನೆ.

**6) ಪ್ರಶ್ನೆ :– ರಕ್ತ ಎಂದರೆ ಪ್ರಾಣವಾ? ರಕ್ತ ದೇವರ ಮೊರೆ ಇಡುತ್ತದಾ?**

**ಉತ್ತರ :–** ರಕ್ತ ಎಂದರೆ ಜ್ಞಾನ ಎಂದು ಭಾವಿಸಬೇಕು. ಸುವಾರ್ತೆಗಳಲ್ಲಿ ಜ್ಞಾನವನ್ನು **"ನಿಬಂಧನ ರಕ್ತ"** ಎಂದು ಹೇಳಿದ್ದಾರೆ. ಜ್ಞಾನದಿಂದ ದೇವರನ್ನು ಬೇಡಿಕೊಳ್ಳಬಹುದು. ಹಾಗೆ ಮಾಡುವುದೇ ಸರಿಯಾದ ದಾರಿ, ಅಥವಾ ಸರಿಯಾದ ಪದ್ಧತಿ.

**7) ಪ್ರಶ್ನೆ :– ಶರೀರದಲ್ಲಿ ಇರುವ ಆತ್ಮಕ್ಕೆ ಮನುಷ್ಯ ಎಷ್ಟು ಜನ್ಮಗಳು ಎತ್ತಿರುವುದು ತಿಳಿದಿದೆ ಎಂದಿದ್ದೀರ. ಆದರೇ ಕೆಲವರಿಗೇ ಏಕೆ ಆತ್ಮ ಪುನರ್ಜನ್ಮಗಳನ್ನು ಕುರಿತು ತಿಳಿಸುತ್ತಿದೆ. ಎಲ್ಲರಿಗೂ ಏಕೆ ತಿಳಿಸುವುದಿಲ್ಲ?**

**ಉತ್ತರ :–** ಪುನರ್ಜನ್ಮಗಳು ಇರುವುದು ಸತ್ಯವೇ ಆದರೂ ಯಾವ ಆಧಾರ ಇಲ್ಲದೆ ಹೋದರೆ ಯಾರೂ ನಂಬುವುದಿಲ್ಲವೆನ್ನುವ ಉದ್ದೇಶದಿಂದ ಅಲ್ಲಲ್ಲಿ ಯಾರಿಗೋ ಒಬ್ಬರಿಗೆ ಹಿಂದಿನ ಜನ್ಮ ಜ್ಞಾಪಕ ಬರುವಂತೆ ಆತ್ಮ ಮಾಡುತ್ತಿದೆ. ಆಧಾರಕ್ಕಾಗಿ ತೋರಿಸಬೇಕಾಗಿರುವುದೇ ಆದ್ದರಿಂದ 20 ಅಥವಾ 30 ವರ್ಷಗಳಿಗೆ ಒಂದು ಸಲ ವಿವಿಧ ಪ್ರಾಂತಗಳಲ್ಲಿ ಹಿಂದಿನ ಜನ್ಮ ಜ್ಞಾಪಕ ಬಂದು ಹೇಳುವುದರಿಂದ, ಆ ಜ್ಞಾಪಕಗಳೆಲ್ಲವೂ ಸತ್ಯವಾದವುಗಳಾಗಿ ನಿರೂಪಣೆಗೆ ಬರುವುದರಿಂದ ಯಾರಾದರೂ ಪುನರ್ಜನ್ಮಗಳನ್ನು ನಂಬಬೇಕಾಗಿ ಬರುತ್ತದೆ. ಒಂದು ಆಧಾರ ಆ ಪ್ರಾಂತದಲ್ಲಿ ವ್ಯಾಪಿಸುವುದರಿಂದ ಎಲ್ಲರಿಗೂ ತಿಳಿಯುತ್ತದೆ. ಆದ್ದರಿಂದ ಎಲ್ಲರಿಗೂ ಪುನರ್ಜನ್ಮ ಜ್ಞಾಪಕಗಳು ಅವಶ್ಯಕವಿಲ್ಲ.

**8) ಪ್ರಶ್ನೆ :– ಕರ್ಮಾನುಸಾರವೇ ಪ್ರತಿ ಮನುಷ್ಯ ದಿನಚರಿ ನಡೆಯುತ್ತದೆ ಎಂದಿದ್ದೀರ.**

**ಇದನ್ನು ಪ್ರಜೆಗಳು ಏಕೆ ಗುರುತಿಸುವುದಿಲ್ಲ. ನಡೆದ ಕೆಲಸಗಳೆಲ್ಲವನ್ನೂ ನನ್ನ ಹಿರೆತನ, ನಾನೇ ಮಾಡಿದ್ದೇನೆ ಎಂದು ಏಕೆ ಅನ್ನುತ್ತಿದ್ದಾನೆ?**

**ಉತ್ತರ :–** ಪ್ರತಿ ಚಿಕ್ಕ ಕೆಲಸ, ದೊಡ್ಡ ಕೆಲಸ ಎಲ್ಲಾ ಕರ್ಮಾನುಸಾರ ಆತ್ಮ ಮಾಡುತ್ತಿರುವಾಗ, ಮನುಷ್ಯ ತನ್ನ ಅಜ್ಞಾನದಿಂದ ತನ್ನ ಶರೀರದಲ್ಲಿ ನಡೆಯುವ ವಿಧಾನ ತಿಳಿಯದೆ 'ನಾನು' ಎನ್ನುವ ಅಹಮ್‌ನಿಂದ ನಡೆಯುವ ಕೆಲಸವನ್ನೆಲ್ಲಾ ನಾನೇ ಮಾಡುತ್ತಿದ್ದೇನೆಂದು ಭ್ರಮಿಸುತ್ತಿದ್ದಾನೆ. ಮಾಡದಿರುವುದನ್ನು ಮಾಡಿದ್ದೇನೆಂದು, ನೋಡದಿರುವುದನ್ನು ನೋಡಿದ್ದೇನೆಂದು ಹೇಳುತ್ತಿರುವುದರಿಂದ ಕರ್ಮದಿಂದ ಆತ್ಮ ಮಾಡಿದ ಪಾಪಪುಣ್ಯಗಳು ಜೀವಿಗೇ ಅಂಟಿಕೊಳ್ಳುತ್ತಿವೆ. ಮನುಷ್ಯ ಅನವಶ್ಯಕವಾಗಿ ಮಾಡದ ಪಾಪವನ್ನು ತನ್ನ ನೆತ್ತಿಯ ಮೇಲೆ ಹಾಕಿಕೊಳ್ಳುತ್ತಿದ್ದಾನೆ. ಈ ವಿಷಯವಾಗಿ ಯೋಹಾನ್ ಸುವಾರ್ತೆ 9 ನೇ ಅಧ್ಯಾಯ, 41ನೇ ವಾಕ್ಯದಲ್ಲಿ ಯೇಸು ಅವರು ಈ ವಿಧವಾಗಿ ಹೇಳುತ್ತಿದ್ದಾರೆ ನೋಡಿರಿ. **(ಯೋಹಾನ್ 9–41) "ಅದಕ್ಕೆ ಯೇಸು ನೀವು ಕುರುಡರಾದರೆ ನಿಮಗೆ ಪಾಪ ಇಲ್ಲದೆ ಹೋಗುತ್ತದೆ ಆದರೆ, ನೋಡುತ್ತಿದ್ದೇವೆಂದು ನೀವು ಈಗ ಹೇಳಿಕೊಳ್ಳುತ್ತಿದ್ದೀರಿ ಆದ್ದರಿಂದ ನಿಮ್ಮ ಪಾಪ ನಿಂತಿದೆಯೆಂದು ಹೇಳಿದ್ದಾನೆ"** ಈ ಮಾತಿನ ಪ್ರಕಾರ ವಾಸ್ತವವಾಗಿ ಜೀವಿಯು ಕುರುಡನು, ಏನೂ ಕೈಲಾಗದವನು, ಕಿವುಡನು ಮತ್ತು ಅಂಗವಿಕಲನು. ವಾಸ್ತವವಾಗಿ ಯಾವ ಕಾರ್ಯವನ್ನೂ ಜೀವಿಯು ಮಾಡುತ್ತಿಲ್ಲ. ಶರೀರದಲ್ಲಿನ ಯಾವ ಅವಯವವೂ ಜೀವಿಯ ಅಧೀನದಲ್ಲಿ ಇಲ್ಲ. ಅವಯವಗಳೆಲ್ಲವೂ ಆತ್ಮ ಅಧೀನದಲ್ಲಿದ್ದು ಕೆಲಸ ಮಾಡುತ್ತಿವೆ. ಕರ್ಮ ಪ್ರಕಾರ ಆತ್ಮ ಶರೀರ ಅವಯವಗಳಿಗೆ ಶಕ್ತಿಯನ್ನು ಕೊಟ್ಟು ಕೆಲಸ ಮಾಡಿಸುತ್ತಿರುವಾಗ ನಡೆಯುವ ಕೆಲಸದಲ್ಲಿ ಯಾವ ಸಂಬಂಧವಿಲ್ಲದ ಜೀವಿಯು ಕೆಲಸಗಳನ್ನು ನಾನೇ ಮಾಡಿದ್ದೇನೆಂದು ಅಹಮ್‌ನಿಂದ ಅಂದುಕೊಳ್ಳುತ್ತಿದ್ದಾನೆ. ಹಾಗೆ ಅಂದುಕೊಳ್ಳುವುದು ಮನುಷ್ಯನಲ್ಲಿನ ಅಜ್ಞಾನವೇಯೆಂದು ಹೇಳಬಹುದು.

**9) ಪ್ರಶ್ನೆ :– ಇಂಡಿಯಾದಲ್ಲಿ ಎಷ್ಟೋ ಹೆಸರುವಾಸಿಯಾದ ದೊಡ್ಡ ಪ್ರದೇಶಗಳಿರುವಾಗ, ನೀವು ತಾಡಿಪತ್ರಿಯಲ್ಲಿ ಚಿನ್ನಪೊಡಮಲವನ್ನು ದೈವಜ್ಞಾನ ತಿಳಿಸುವ ಕೇಂದ್ರವಾಗಿ ಆಯ್ಕೆ ಮಾಡಿಕೊಂಡಿದ್ದೀರಿ ಏಕೆ?**

**ಉತ್ತರ :–** ಮನುಷ್ಯ ಸ್ವತಃವಾಗಿ ಯಾವುದನ್ನೂ ಆಯ್ಕೆ ಮಾಡಿಕೊಳ್ಳುವುದಿಲ್ಲ. ಎಲ್ಲಾ ದೈವ ನಿರ್ಣಯದ ಪ್ರಕಾರ ನಡೆಯುತ್ತಿರುತ್ತದೆ. ಅದರಲ್ಲಿನ ಭಾಗವೇ ನಾವು ಒಂದು ಪ್ರಾಂತದಲ್ಲಿದ್ದು ಜ್ಞಾನವನ್ನು ತಿಳಿಸುತ್ತಿದ್ದೇವೆ.

**10) ಪ್ರಶ್ನೆ :– ಬೈಬಲ್‌ನಲ್ಲಿ ಪ್ರತಿ ರಚಯಿತ ಪರಿಶುದ್ಧಾತ್ಮ ಹೆಸರಿನಿಂದ ಬರೆದಿದ್ದಾರೆ. ಅದರಲ್ಲಿ ಒಂದು ಅಕ್ಷರವನ್ನು ಸೇರಿಸಿದರೂ, ಒಂದು ಅಕ್ಷರವನ್ನು ತೆಗೆದುಹಾಕಿದರೂ ಗ್ರಂಥದಲ್ಲಿ ಬರೆಯಲ್ಪಟ್ಟಿರುವ ವರ್ಗಗಳು ನಿಮಗೆ ಬರುತ್ತವೆ ಎಂದು ಎಚ್ಚರಿಸುವುದು ನಡೆದಿದೆ. ಇದನ್ನು ನೀವು ಸಮರ್ಥಿಸುತ್ತೀರಾ? 66 ಪುಸ್ತಕಗಳನ್ನು ನಂಬುತ್ತಿರುವ ಕ್ರೈಸ್ತರು ನೀವು ಹೇಳುತ್ತಿರುವ ಯೇಸುಕ್ರಿಸ್ತರವರು 63 ವರ್ಷಗಳು ಬದುಕಿದ್ದಾರೆ ಎನ್ನುವ ಮಾತನ್ನು ಜೀರ್ಣಿಸಿಕೊಳ್ಳಲಾರದಂತಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ನಾನು "ಯೇಸು 63 ವರ್ಷಗಳು ಬದುಕಿದ್ದಾರೆ" ಎಂದು ಹೇಳಿರುವುದು ನಾಲ್ಕು ಸುವಾರ್ತೆಗಳಿಗೆ ಸಂಬಂಧಿಸಿದ ಪಾಠಗಳಲ್ಲಿ ಎಲ್ಲಿಯೂ ಸೇರಿಸಲಿಲ್ಲ. ನಾಲ್ಕು ಸುವಾರ್ತೆಗಳಿಗೂ ಅತೀತವಾಗಿರುವ ಮಾತನ್ನು ಹೇಳಿದ್ದೇನೆ. ನನ್ನ ಮಾತು ಬೈಬಲ್‌ನಲ್ಲಿನ ಭಾಗವಲ್ಲ. ನಾನು ಹೇಳಿದ ಮಾತು ಎಲ್ಲರೂ ಕೇಳಬೇಕೆಂದಾಗಲೀ ವಿಶ್ವಾಸಿಸಬೇಕೆಂದಾಗಲೀ ಹೇಳುತ್ತಿಲ್ಲ. ನನಗೆ ತಿಳಿದ ಸತ್ಯವನ್ನು, ಚರಿತ್ರೆಯಲ್ಲಿ ನಡೆದ ಸತ್ಯವನ್ನು ಹೇಳಿದ್ದೇನೆ. ಅಷ್ಟೇ ಹೊರತು ಕೇಳಬೇಕೆಂದು ಯಾರನ್ನೂ ಬಲವಂತ ಮಾಡಲಿಲ್ಲ. ಅದು ಅವರ ಇಷ್ಟಾಯಿಷ್ಟಗಳ ಮೇಲೆ ಆಧಾರಪಟ್ಟಿರುತ್ತದೆ. ಬೈಬಲ್ ಗ್ರಂಥವೆಂದರೆ ಒಟ್ಟಾರೆ 66 ಪುಸ್ತಕಗಳ ಸೇರುವಿಕೆ. ಅದರಲ್ಲಿ ಸಾಕ್ಷಾತ್ತು ದೇವರು ಮಾರುವೇಷದಲ್ಲಿದ್ದು ಮಾತನಾಡಿದ ಮಾತುಗಳನ್ನು ಬರೆದ ಪುಸ್ತಕಗಳು ನಾಲ್ಕು ವಿಧಗಳಾಗಿ ಇವೆ. ಅವೇ ನಾಲ್ಕು ಸುವಾರ್ತೆಗಳು. ನಾಲ್ಕು ಸುವಾರ್ತೆಗಳಲ್ಲಿ ಒಂದು ಅಕ್ಷರವನ್ನು ಸಹ ಕದಲಿಸುವುದಕ್ಕೆ ಅವಕಾಶವಿಲ್ಲ. ನಾಲ್ಕು ಸುವಾರ್ತೆಗಳು ಸತ್ಯ ಸಮೇತವಾಗಿ ಇವೆ. ಉಳಿದ ಪುಸ್ತಕಗಳನ್ನು ಕುರಿತು ನಾವು ತಲೆ ಕೆಡಿಸಿಕೊಳ್ಳುತ್ತಿಲ್ಲ. ಅದರಲ್ಲೂ ಸಹ ಜ್ಞಾನವೇ ಇದ್ದರೂ 62 ಪುಸ್ತಕಗಳಿಗಿಂತ ಹತ್ತಿರವಾಗಿರುವವು ನಾಲ್ಕು ಸುವಾರ್ತೆಗಳೆನ್ನುವವು.

ದೈವಗ್ರಂಥಗಳು ಪ್ರಪಂಚದಲ್ಲಿ ಮೂರೇ ಇವೆ. ಅವು ಭಗವದ್ಗೀತೆ (ತೌರಾತ್), ಇಂಜೀಲ್ (ಬೈಬಲ್), ಖುರಾನ್ ಎನ್ನುವವು. ಈ ಮೂರು ಗ್ರಂಥಗಳಲ್ಲಿ ಮಾನವ ಕಲುಷಿತ ವಾಕ್ಯಗಳು ಸೇರಬಾರದು. ಒಂದು ವಾಕ್ಯಕ್ಕೆ ಭಾವನೆಯನ್ನು ತಪ್ಪು ಹೇಳಿದರೂ ಶಿಕ್ಷೆ ತಪ್ಪುವುದಿಲ್ಲವೆಂದು ಖುರಾನ್ ಗ್ರಂಥದಲ್ಲಿ ದೇವರು ಎಚ್ಚರಿಸಿದರೂ ದೈವಗ್ರಂಥಗಳಲ್ಲಿ ಕಲುಷಿತ ವಾಕ್ಯಗಳು ಅಲ್ಲಲ್ಲಿ ಕಾಣಿಸುತ್ತಲೇ ಇವೆ. ದೇವರೆಂದರೆ ಭಯವಿಲ್ಲದವರು ಮಾಡಿರುವ ಕೆಲಸವೆಂದು ನಮಗೆ ಅರ್ಥವಾಗುತ್ತಿದೆ. ಆದ್ದರಿಂದ ಮೂರು ಗ್ರಂಥಗಳನ್ನು ಪರಿಶೀಲಿಸಿ ಓದಿಕೊಳ್ಳಬೇಕು.

**11) ಪ್ರಶ್ನೆ :– ನೀವು ಒಂದು ಸಂದರ್ಭದಲ್ಲಿ ಬಾಪ್ತಿಸ್ಮ ಕೊಡುವ ಯೋಹಾನ್‌ನನ್ನು ಕ್ರಿಸ್ತನಿಗೆ ಗುರುವು ಎಂದಿದ್ದೀರ. ಕ್ರಿಸ್ತನಿಗೆ ಗುರುಗಳಿರುತ್ತಾರಾ? ಜಗದ್ಗುರುವು ಒಬ್ಬನೇ ಅಲ್ಲವೆ!**

**ಉತ್ತರ :–** ಪ್ರಪಂಚದಲ್ಲಿ ಗುರುಗಳು ಎರಡು ವಿಧಗಳು. ಕಾಣಿಸುವ ಗುರುವು ಕಾಣಿಸದ ಗುರುವು ಎಂದು ಎರಡು ವಿಧಗಳು ಇದ್ದಾರೆ. ಅವರಲ್ಲಿ ಯೋಹಾನ್ ಕಾಣಿಸುವ ಗುರುವು ಮಾತ್ರ. ಹೊರಗೆ ಗುರು ಸಾಂಪ್ರದಾಯದ ಪ್ರಕಾರ ಗುರು ಬೋಧನೆ ಅಥವಾ ಗುರು ಉಪದೇಶ ಅಥವಾ ಬಾಪ್ತಿಸ್ಮ ತೆಗೆದುಕೊಳ್ಳಬೇಕಾಗಿರುತ್ತದೆ. ಲೋಕ ಸಾಂಪ್ರದಾಯದ ಪ್ರಕಾರ ಯೇಸು ಯೋಹಾನ್ ಹತ್ತಿರ ಬಾಪ್ತಿಸ್ಮವನ್ನು ತೆಗೆದುಕೊಂಡಿದ್ದಾನೆ. ಆದರೆ ಕಾಣಿಸದ ಗುರು ಜಗದ್ಗುರು ಪ್ರಪಂಚವೆಲ್ಲದಕ್ಕೂ ಗುರುವಾಗಿ ಇರುತ್ತಾನೆ. ಯಾರಾದರೆ ಜಗದ್ಗುರುವೋ ಆತನೇ ಯೇಸು. ಯೇಸು ಜಗದ್ಗುರು ಆದರೂ ಬಾಹ್ಯ ಸಾಂಪ್ರದಾಯದ ಪ್ರಕಾರ ಯೋಹಾನ ಹತ್ತಿರ ಉಪದೇಶವನ್ನು ಪಡೆದಿದ್ದಾನೆ. ಯೇಸುಗೆ ಬಾಪ್ತಿಸ್ಮ ಕೊಟ್ಟಿರುವ ಯೋಹಾನ್ ಯೇಸು ಬಾಪ್ತಿಸ್ಮ ಹೊಂದುವುದಕ್ಕೆ ತನ್ನ ಹತ್ತಿರಕ್ಕೆ ಬರುವುದಕ್ಕಿಂತ ಮೊದಲೇ ಈ ವಾಕ್ಯವನ್ನು ಹೇಳಿದ್ದಾನೆ ನೋಡಿರಿ. **(ಮತ್ತಾಯ 3–11) "ಬದಲಾಗುವ ಮನಸ್ಸು ನಿಮಿತ್ತ ನಾನು ನೀರಿನೊಂದಿಗೆ ನಿಮಗೆ ಬಾಪ್ತಿಸ್ಮವನ್ನು ಕೊಡುತ್ತಿದ್ದೇನೆ. ಆದರೇ ನನ್ನ ಹಿಂದೆ ಬರುತ್ತಿರುವವನು ನನಗಿಂತ ಶಕ್ತಿವಂತನು. ಆತನ ಚಪ್ಪಲಿ ಹೊರುವುದಕ್ಕಾದರೂ ನಾನು ಪಾತ್ರನಲ್ಲ. ಆತನು**

**ಪರಿಶುದ್ಧಾತ್ಮದೊಂದಿಗೂ, ಅಗ್ನಿಯೊಂದಿಗೂ ನಿಮಗೆ ಬಾಪ್ತಿಸ್ಮಕೊಡುತ್ತಾನೆ."** ಲೋಕ ಸಾಂಪ್ರದಾಯಕ್ಕಾಗಿ ಯೇಸುಗೆ ಯೋಹಾನನು ಬಾಪ್ತಿಸ್ಮ ಕೊಟ್ಟಿದ್ದಾನೆಂದು ಈ ವಾಕ್ಯವನ್ನನುಸರಿಸಿ ತಿಳಿಯುತ್ತಿದೆ.

**12) ಪ್ರಶ್ನೆ :– ಕ್ರಿಸ್ಟ್‌ಮಸ್ ಡಿಸೆಂಬರ್ 25 ರಂದು ಎಂದು ಎಲ್ಲಾ ಕ್ರೈಸ್ತರು ಮಾಡುತ್ತಾರೆ. ಕ್ರಿಸ್ತನ ಜನನ ಡಿಸೆಂಬರ್ 25 ಅಲ್ಲ ಅಲ್ಲವೆ?**

**ಉತ್ತರ :–** ಡಿಸೆಂಬರ್ 25ನೇ ದಿನಾಂಕದಂದು ಯೇಸು ಹುಟ್ಟದೆ ಹೋದರೂ, ಹುಟ್ಟಿದರೂ ಎರಡರಿಂದಲೂ ಯಾರಿಗೂ ಏನೂ ಪ್ರಯೋಜನವಿಲ್ಲ. ಆತನು ಹುಟ್ಟಿದ ದಿನವನ್ನು ಗೌರವಿಸುವ ನಿಮಿತ್ತ ಡಿಸೆಂಬರ್ 25ನೇ ದಿನಾಂಕದಂದು ಯೇಸು ಹುಟ್ಟಿದ ದಿನ ಹಬ್ಬವನ್ನು ಮಾಡುತ್ತಿದ್ದೇವೆ. ಮಾಡುತ್ತಿರುವ ಕೆಲಸದಲ್ಲಿನ ಭಾವನೆಯೇ ಮುಖ್ಯವಾಗಿರುವುದರಿಂದ ಹಬ್ಬ ಯಾವಾಗ ಮಾಡಿದರೂ ಒಂದೇ.

**13) ಪ್ರಶ್ನೆ :– ಪ್ರತಿಮೆ ಆರಾಧನೆ ಮಾಡುವ ನೀವು ಕ್ರಿಸ್ತು ಅವರ ಪ್ರತಿಮೆಯನ್ನು ಇಡುವ ಧೈರ್ಯ ಏಕೆ ಮಾಡಲಾರದೆ ಹೋಗಿದ್ದೀರ?**

**ಉತ್ತರ :–** ನಾನಿಲ್ಲಿಯವರೆಗು ಪ್ರತಿಮೆಯನ್ನು ಆರಾಧಿಸಲಿಲ್ಲ. ಚಿಕ್ಕ ವಯಸ್ಸಿನಲ್ಲಿ ನಮ್ಮ ಹಿರಿಯರು ಗ್ರಾಮ ದೇವತೆಗಳಾದ ಸುಂಕುಲಮ್ಮ, ದೊಡ್ಡಮ್ಮ ದೇವತೆಗಳಿಗೆ ಬಲಿ ಕೊಟ್ಟು ಆರಾಧಿಸುತ್ತಿದ್ದರು. ಅವರ ಹಿಂದೆ ಹೋಗಿ ಅವರು ಮಾಡುವ ಪೂಜೆಗಳನ್ನು ನೋಡಿದ್ದೇನೆ ಹೊರತು ಸ್ವತಃವಾಗಿ ಎಂದೂ ಯಾರನ್ನೂ ಆರಾಧಿಸಲಿಲ್ಲ. ನಮ್ಮ ಆಶ್ರಮದಲ್ಲಿ ಕೃಷ್ಣ ಪ್ರತಿಮೆ ಇದೆ. ಇಲ್ಲಿಗೆ ಬರುವ ಭಕ್ತರು ಕೃಷ್ಣ ಪ್ರತಿಮೆಗೆ ಪೂಜೆಗಳು ಮಾಡುತ್ತಿರುವರು ಆದರೆ ನಾನು ಎಂದಿಗೂ ಕೈ ಎತ್ತಿ ಸಹ ನಮಸ್ಕಾರ ಮಾಡಲಿಲ್ಲ. ನನ್ನ ಚಿಕ್ಕಂದಿನಲ್ಲಿಯೇ ನಮ್ಮ ಹಿರಿಯರು ಸತ್ಯನಾರಾಯಣ ವ್ರತ ಮಾಡಬೇಕೆಂದು ಹೇಳಿದರೇ ಪೂರ್ತಿ ವಿರೋಧಿಸಿ ಆ ವ್ರತವನ್ನು ನಿಲ್ಲಿಸಿದ್ದೇನೆ. ನಂತರ ಮನೆಯಲ್ಲಿ ನಮ್ಮ ತಂದೆಯವರು ಮರಣಿಸಿದರೆ ಆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಲ್ಲ. ದಿವಸಗಳು ಮುಂತಾದವು ಯಾವುವು ಮಾಡಲಿಲ್ಲ. ಮೊದಲು ನನ್ನನ್ನು ನಾಸ್ತಿಕನು ಎಂದು ಎಲ್ಲರೂ ಕರೆದಿದ್ದಾರೆ.

ಈಗಲೂ ಸಹ ಕೆಲವರು ನನ್ನ ಬೋಧನೆಗಳು ಅರ್ಥವಾಗದವರು ನಾನು ನಾಸ್ತಿಕತ್ವವನ್ನು ಬೋಧಿಸುತ್ತಿದ್ದೇನೆಂದು ಅನ್ನುವವರು ಸಹ ಇದ್ದಾರೆ. ಪ್ರತಿಮೆಯನ್ನು ನಾನು ಆರಾಧಿಸದಷ್ಟು ಮಾತ್ರಕ್ಕೆ ಎಲ್ಲರನ್ನೂ ಹಾಗೆಯೇ ಇರಬೇಕೆಂದು ಹೇಳಲಿಲ್ಲ. ಕೃಷ್ಣ ಪ್ರತಿಮೆಯನ್ನು ಗೌರವಾರ್ಥ ಆರಾಧಿಸಿರೆಂದು ಹೇಳುತ್ತಿದ್ದೇವೆ. ಹಾಗೆಯೇ ಯೇಸು ಪ್ರಭು ಚಿತ್ರವನ್ನು ಇಟ್ಟು ನಮಸ್ಕರಿಸಿರೆಂದು ಹೇಳಿದ್ದೇವೆ. ನಮ್ಮ ಸಲಹೆ ಮೇರೆಗೆ ವೈಜಾಗ್ ಹತ್ತಿರ ಮಜ್ಜಿವಲಸ ಆಶ್ರಮದಲ್ಲಿ ಯೇಸು ಪ್ರತಿಮೆಯನ್ನು ಇಡಲಾಗಿದೆ. ಕೃಷ್ಣನೇ ಯೇಸು ಎಂದು ಹೇಳುವ ನಾನು ಇಬ್ಬರನ್ನೂ ಒಂದೇ ಗೌರವದಿಂದ ನಮಸ್ಕರಿಸಿರೆಂದು ಹೇಳಿದ್ದೇನೆ.

**14) ಪ್ರಶ್ನೆ :– ಇಂಜೀಲ್ ಎನ್ನಲ್ಪಟ್ಟ ನಾಲ್ಕು ಸುವಾರ್ತೆಗಳಲ್ಲಿ ಮಾನವರ ಜ್ಞಾನ ಸೇರಿದೆಯಾ? ಅದರಲ್ಲಿಂದ ತೆಗೆದುಹಾಕಬೇಕಾಗಿರುವುದು ಏನಾದರೂ ಇದೆಯಾ?**

**ಉತ್ತರ :–** ನಾಲ್ಕು ಸುವಾರ್ತೆಗಳಲ್ಲಿ ಮಾನವ ಕಲ್ಪಿತಗಳು ಯಾವುವೂ ಇಲ್ಲ. ಎಲ್ಲಾ ದೇವರ ಜ್ಞಾನವೇ ಇದೆ.

**15) ಪ್ರಶ್ನೆ :– ನೀವು ಕೆಲವು ವಿಷಯಗಳನ್ನು ಹೇಳಿದವುಗಳನ್ನೇ ಮತ್ತೆ ಮತ್ತೆ ಜ್ಞಾಪಕ ಮಾಡುತ್ತೀರ ಏಕೆ?**

**ಉತ್ತರ :–** ಮರೆತು ಹೋಗುವುದಕ್ಕೆ ಅವಕಾಶವಿರುವ ವಿಷಯಗಳನ್ನು, ಮುಖ್ಯವಾದ ವಿಷಯಗಳನ್ನು ಪುನಃ ಪುನಃ ಜ್ಞಾಪಕ ಮಾಡುತ್ತಿರುತ್ತೇವೆ.

**16) ಪ್ರಶ್ನೆ :– ಶ್ರೀ ಕೃಷ್ಣನು ಎದುರು ಕಾಲುಗಳಿಂದ ಜನ್ಮಿಸಿದ್ದಾನೆ ಎಂದಿದ್ದೀರ. ಮತ್ತೆ ಯೇಸುರವರು ಹೇಗೆ ಜನ್ಮಿಸಿದ್ದಾರೆ. ಸಾಮಾನ್ಯವಾದ ಮನುಷ್ಯರು ಸಹ ಆಗಾಗ ಹಾಗೆಯೇ ಎದುರು ಕಾಲುಗಳೊಂದಿಗೆ ಹುಟ್ಟುತ್ತಿರುವರು. ಅವರೇನಾದರೂ ಪ್ರತ್ಯೇಕವಾದವರಾ?**

**ಉತ್ತರ :–** ಕೃಷ್ಣನು ಎದುರು ಕಾಲುಗಳೊಂದಿಗೆ ಜನ್ಮಿಸಿರುವುದು ವಾಸ್ತವ. ಕೃಷ್ಣನ ಶರೀರಕ್ಕೆ ತಾಯಿ ಗರ್ಭದಲ್ಲಿಯೇ ಪ್ರಾಣವಿದೆಯೆಂದು ನಿರೂಪಿಸುವುದಕ್ಕೆ

ಹಾಗೆ ಹುಟ್ಟಬೇಕಾಗಿ ಬಂದಿದೆ. ಕಾಲು ಗರ್ಭದಿಂದ ಹೊರಬಿದ್ದ ಕೂಡಲೇ ಒಂದು ಕಾಲನ್ನು ಕದಲಿಸುವುದರಿಂದ ಶಿಶುವಿಗೆ ಗರ್ಭದೊಳಗೇ ಪ್ರಾಣವಿದೆ ಯೆಂದು ಅರ್ಥವಾಗುವುದಕ್ಕೆ ಸಾಕ್ಷ್ಯವಾಗಿ ಕಾಲುಗಳಿಂದ ಹುಟ್ಟುವುದು, ಕಾಲು ಕದಲಿಸುವುದು ನಡೆದಿದೆ. ಒಂದು ವಿಷಯವೊಂದರ ನಿರೂಪಣೆಗಾಗಿ ಒಂದು ಸಲ ನಡೆದರೂ ಸರಿಹೋಗುತ್ತದೆ. ಎರಡನೆ ಸಲ ನಡೆಯಬೇಕಾದ ಅವಶ್ಯವಿಲ್ಲ. ಆದ್ದರಿಂದ ಯೇಸು ವಿಷಯದಲ್ಲಿ ಹಾಗೆ ನಡೆಯಲಿಲ್ಲ. ಕೃಷ್ಣನು ಯೇಸು ಇಬ್ಬರೂ ಒಬ್ಬರೇ ಆಗಿರುವುದರಿಂದ ಯೇಸು ಜನನದಲ್ಲಿ ಎದುರು ಕಾಲುಗಳೊಂದಿಗೆ ಹುಟ್ಟುವುದು ನಡೆಯಲಿಲ್ಲ. ನಂತರ ಕಾಲದಲ್ಲಿ ಬಹಳ ಮಂದಿ ಎದುರು ಕಾಲುಗಳೊಂದಿಗೆ ಹುಟ್ಟುವುದು ನಡೆದಿದೆ. ಅವರಲ್ಲಿ ಯಾವ ಪ್ರತ್ಯೇಕತೆ ಇಲ್ಲದಿದ್ದರೂ ಅವರನ್ನು ದೇವರು ಹಾಗೆಯೇ ಹುಟ್ಟಿಸಿದ್ದಾನೆ. ಅದರಿಂದ ಕೃಷ್ಣನ ಜನ್ಮವನ್ನು ಎಲ್ಲರೂ ಗುರುತಿಸುವುದಕ್ಕೆ ಅವಕಾಶ ಇಲ್ಲದಂತೆ ಹೋಗಬಲ್ಲದೆಂದು, ಕೃಷ್ಣನನ್ನು ಸಾಮಾನ್ಯ ಮನುಷ್ಯನಾಗಿಯೇ ಲೆಕ್ಕಿಸಿಕೊಳ್ಳಬೇ ಕೆಂದು ಹಾಗೆ ಉಳಿದವರನ್ನು ಹುಟ್ಟಿಸುವುದು ನಡೆದಿದೆ. ಉಳಿದವರು ಹಾಗೆ ಹುಟ್ಟುವುದರಿಂದ ಕೃಷ್ಣನ ವಿಷಯವೂ ಸಹ ಸರ್ವ ಸಾಧಾರಣವಾಗಿ ಹೋಗಬಲ್ಲದು. ಮನುಷ್ಯರೆಲ್ಲರಿಗೂ ಕೃಷ್ಣನ ವಿಷಯ, ಕೃಷ್ಣನ ಪ್ರತ್ಯೇಕತೆ ತಿಳಿಯ ಬಾರದೆನ್ನುವ ಉದ್ದೇಶದಿಂದಲೇ ದೇವರು ಕೆಲವರನ್ನು ಹಾಗೆ ಹುಟ್ಟಿಸಿದ್ದಾನೆ. ಭಗವಂತನಾದ ಕೃಷ್ಣನನ್ನು ಭಕ್ತಿ, ಶ್ರದ್ಧೆ ಇರುವವರು ಮಾತ್ರ ಗುರುತಿಸುವಂತೆ, ಭಕ್ತಿ ಶ್ರದ್ಧೆ ಇಲ್ಲದವರು ಗುರುತಿಸದಂತೆ ದೇವರು ಉಳಿದವರನ್ನು ಸಹ ಕೃಷ್ಣನು ಹುಟ್ಟಿದ ಹಾಗೆ ಎದುರು ಕಾಲುಗಳೊಂದಿಗೆ ಹುಟ್ಟಿಸುವುದು ನಡೆದಿದೆ.

**17) ಪ್ರಶ್ನೆ :– ಸೃಷ್ಟಿ ಆದಿಯಿಂದ ಮೂರು ಯುಗಗಳಲ್ಲಿ ಒಂದೇ ಜ್ಞಾನವಿದ್ದರೂ ಒಂದು ಕಲಿಯುಗದಲ್ಲಿ ಮಾತ್ರ ಜ್ಞಾನ ಮನುಷ್ಯರ ಮಧ್ಯದಲ್ಲಿ ಅನೇಕ ಮತಗಳಾಗಿ ಕಾಣಿಸುತ್ತಿದೆ. ಎಲ್ಲ ಮತಗಳಿಗು ನಿಮ್ಮ ಜ್ಞಾನ ಒಂದೇ ಉತ್ತರವಾಗಿ ನಿಂತರೂ ಕೆಲವರು ಅವರ ಅಜ್ಞಾನವನ್ನು ಬಿಟ್ಟು ನಿಮ್ಮ ಜ್ಞಾನವನ್ನು ತಿಳಿಯದೆ ಒಬ್ಬೊಬ್ಬರು ಒಂದೊಂದು ದಾರಿಯಲ್ಲಿ ಹೋಗುತ್ತಾ ಅಜ್ಞಾನದಲ್ಲಿ ಜೀರ್ಣಿಸಿಕೊಂಡು ಹೋಗಿದ್ದಾರೆ. ಅದು ಅವರ ಕರ್ಮನಾ? ಅಥವಾ ಅಜ್ಞಾನವಾ?**

**ಉತ್ತರ :–** ಸೃಷ್ಠಿ ಆದಿಯಿಂದ ಯಾವ ಮತಗಳು ಇಲ್ಲದಿದ್ದರೂ ಒಂದೇ ಹಿಂದೂ (ಇಂದೂ) ಸಮಾಜವೇ ಇದ್ದರೂ ಮನುಷ್ಯರಲ್ಲಿ ಆಗಲೂ ಕೂಡಾ ಜ್ಞಾನ ಅಜ್ಞಾನ ಎರಡೂ ಇರುತ್ತಿದ್ದವು. ಜ್ಞಾನದೊಂದಿಗೆ ಕೂಡಿಕೊಂಡಿರುವವು ಧರ್ಮಗಳು. ಅಜ್ಞಾನದಿಂದ ಕೂಡಿಕೊಂಡಿರುವವು ಅಧರ್ಮಗಳು. ಮೂರು ಯುಗಗಳಲ್ಲಿ ಧರ್ಮಗಳು ಅಧರ್ಮಗಳು ಎರಡೂ ಇದ್ದವೆಂದು ತಿಳಿಯುತ್ತಿದೆ. ಪ್ರಸ್ತುತ ಕಲಿಯುಗದಲ್ಲಿ ಕಳೆದ ಯುಗಗಳಿಗಿಂತ ಅಧರ್ಮಗಳ ಸಂಖ್ಯೆ ಸ್ವಲ್ಪ ಬೆಳೆದಿದೆ. ಧರ್ಮಗಳ ಸಂಖ್ಯೆ ಹೇಗಿರುವುದು ಹಾಗೆಯೇ ಇರುತ್ತದೆ. ಸೃಷ್ಠಿ ಆದಿಯಿಂದ ಮೂರು ಧರ್ಮಗಳು, ನಾಲ್ಕು ಅಧರ್ಮಗಳು ಇರುವಾಗ, ಕಲಿಯುಗದಲ್ಲಿ ಮತ ಎನ್ನುವ ಅಧರ್ಮ ಹೊಸದಾಗಿ ಹುಟ್ಟಿ ಬಂದಿದೆ. ಮತ ಎನ್ನುವ ಅಧರ್ಮ ಗತದಲ್ಲಿರುವ ನಾಲ್ಕು ಅಧರ್ಮಗಳಿಗಿಂತ ಹೆಚ್ಚಿನ ಬಲವಾಗಿ ಇದೆ. ಮೂರು ಯುಗಗಳವರೆಗು ಇರುವ ಅಧರ್ಮಗಳನ್ನು ದೃಷ್ಠಿಯಲ್ಲಿಟ್ಟು ಕೊಂಡು ಭಗವದ್ಗೀತೆ ಅವನನ್ನು ಅಡಗಿಸುವ ಜ್ಞಾನದೊಂದಿಗೆ ಹೊರಗೆ ಬಂದಿದೆ. ನಂತರ ಬಂದಿರುವ ಇಂಜೀಲು ಗ್ರಂಥ ಬಂದಾಗಲೂ ಕೂಡಾ 'ಮತ' ಎನ್ನುವ ಅಧರ್ಮ ಇಲ್ಲದಂತಿತ್ತು. ನಂತರ ತಯಾರಾದ ಖುರಾನ್ ಗ್ರಂಥದಲ್ಲಿ ಮತವೆನ್ನುವ ಅಧರ್ಮವನ್ನು ಕುರಿತು ದೊಡ್ಡದಾಗಿ ಬರೆಯದಿದ್ದರೂ ಅಲ್ಲಲ್ಲಿ ಕೆಲವು ಮತ ವಿರೋಧ ವಾಕ್ಯಗಳು ಹೇಳಿದ್ದರೂ ಅವುಗಳಿಗಿಂತ ಹೆಚ್ಚಿನಮತ ಪ್ರಭಾವ ಅದರಲ್ಲಿ ಬೆರೆತುಹೋಗಿದೆ. ಆದ್ದರಿಂದ ಆ ಗ್ರಂಥವನ್ನು ಅಡ್ಡ ಇಟ್ಟುಕೊಂಡು ಮತವನ್ನು ಅಭಿವೃದ್ಧಿ ಮಾಡುವವರು ಕೂಡಾ ತಯಾರಾಗಿದ್ದಾರೆ. ಅದರಲ್ಲಿನ ಜ್ಞಾನವೆಲ್ಲಾ ಮತಕ್ಕೆ ಅತೀತವೆಂದು ಹೇಳದಂತೆ ಮತಕ್ಕೆ ಸಂಬಂಧಿಸಿರುವುದೇಯೆಂದು ಮುಸ್ಲಿಮ್‌ರು ಪ್ರಚಾರ ಮಾಡುತ್ತಿದ್ದಾರೆ. ಆದ್ದರಿಂದ ಮತ ವಿರುದ್ಧ ಭಾವನೆ ಗಳಿದ್ದರೂ ಅವು ಎಲ್ಲೂ ಕಾಣಿಸದ ಸ್ಥಿತಿಯಲ್ಲಿ ಉಳಿದುಹೋಗಿವೆ. ಮುಸ್ಲಿಮ್ ಮತಕ್ಕಾಗಿಯೇ ಖುರಾನ್ ಗ್ರಂಥವೆಂದು ಪ್ರಚಾರವಾಗಿದೆ. ಉಳಿದ ಎಲ್ಲರೂ ಹಾಗೆಯೇ ಖುರಾನ್ ಮುಸ್ಲಿಮ್‌ರದೇಯೆಂದು ಅಂದುಕೊಳ್ಳುವುದು ನಡೆಯುತ್ತಿದೆ. ಹಾಗೆ ಅಂದುಕೊಳ್ಳುವುದರಿಂದ ಅದನ್ನು ಮತಗ್ರಂಥವಾಗಿ ತಿಳಿದು ಉಳಿದ ಮತಸ್ಥರು ಖುರಾನ್ ಗ್ರಂಥವನ್ನು ಓದುತ್ತಿಲ್ಲ. ಆದರೇ ಖುರಾನ್ ಗ್ರಂಥ

ಸರ್ವ ಮಾನವರ ಜ್ಞಾನವೆಂದು ತಿಳಿಯದಂತೆ ಹೋಗುವುದರಿಂದ, ಮುಸ್ಲಿಮ್‌ರದ್ದೇ ಅಂದುಕೊಳ್ಳುವುದರಿಂದ ಮತವೆನ್ನುವ ಅಧರ್ಮಕ್ಕೆ ಕೊಂಬುಗಳು ಬೆಳೆದುಹೋಗಿವೆ. ಎಂದಿಗಾದರೂ ಮತವೆನ್ನುವ ಅಧರ್ಮ ದೇವರ ಜ್ಞಾನದಿಂದಲೇ ಅಡಗಿಹೋಗಬೇಕಾಗಿದೆ. ಆದರೂ ನಮ್ಮ ಜ್ಞಾನದಲ್ಲಿ ಹೆಚ್ಚಾಗಿ ಮೂರು ದೈವಗ್ರಂಥಗಳನ್ನು ಸಮಾನ ಗೌರವದೊಂದಿಗೆ ಹೇಳಿದರೂ ಕೆಲವರು ಅಜ್ಞಾನಿಗಳು ನಮ್ಮ ಜ್ಞಾನವನ್ನು ಕೂಡಾ ಮತಗಳೊಳಗೆ ಸೇರಿಸುತ್ತಿದ್ದಾರೆ. ಮತ ಕರ್ಮಕ್ಕೆ ಸಂಬಂಧಿಸಿರುವುದು ಅಲ್ಲ. ಅಜ್ಞಾನಕ್ಕೆ ಸಂಬಂಧಿಸಿರುವುದೆಂದು ತಿಳಿಯಬೇಕು.

**18. ಪ್ರಶ್ನೆ :– ಮೋಷೇಯಿಂದ ಕರ್ಮ ಸಿದ್ಧಾಂತ ಯೂದರೊಳಗೆ ಪ್ರವೇಶಿಸಿದೆ. ಕ್ರಿಸ್ತರವರು ಕರ್ಮ ಸಿದ್ಧಾಂತವನ್ನು ಕೋಪವಾಗಿ ಹೇಳಲಿಲ್ಲ. ಕೃಪೆಯನ್ನು ಕುರಿತು ರಕ್ಷಣೆ ಕುರಿತು ತಿಳಿಸಿದರು. ಆದರೇ ಪೌಲು ಕರ್ಮ ಸಿದ್ಧಾಂತವನ್ನು ಪೂರ್ತಿಯಾಗಿ ನಿರ್ಮೂಲಿಸುವ ಬೋಧನೆಯನ್ನು ಮಾಡಿ, ಧರ್ಮಶಾಸ್ತ್ರ ನಿಷ್ಪ್ರಯೋಜನವೆಂದು ಬೋಧಿಸಿ ಕಳೆದ 2000 ವರ್ಷಗಳಿಂದ ವಿಸ್ತರಿಸುವಂತೆ ಬೋಧಿಸಿದ್ದಾರೆ. ಈ ಕೆಂಡವನ್ನು ನಂದಿಸಲಾರದೆ ಹೋಗುತ್ತದಲ್ಲವೆ?**

**ಉತ್ತರ :–** ಮೋಷೇಯಿಂದ ಕರ್ಮಸಿದ್ಧಾಂತ ಬಂದಿದೆ ಎಂದಿದ್ದೀರ. ಅದೇ ಕರ್ಮ ಸಿದ್ಧಾಂತವನ್ನೇ ಯೇಸು ಕೃಪೆ, ರಕ್ಷಣೆಯನ್ನು ಕುರಿತು ಹೇಳಿದ್ದಾನೆ. ಕರ್ಮ ಸಿದ್ಧಾಂತ ಕರ್ಮವನ್ನು ದಹಿಸುವುದಾಗಿ ಇದೆ. ಆದ್ದರಿಂದ ಅದನ್ನು ಅಗ್ನಿಯೊಂದಿಗೆ ಸಮಾನವಾಗಿ ಹೋಲಿಸಿ ಪೌಲು ಮಾಡಿದ ಪ್ರಚಾರ ಅಗ್ನಿಯನ್ನು ನಂದಿಸುತ್ತದಾ ಎಂದು ಕೇಳಿದಂತಿದೆ. ಪೌಲು ಏನು ಹೇಳಿದ್ದಾನೋ ನನಗೆ ತಿಳಿದಿಲ್ಲ. ನನಗೆ ತಿಳಿದಿರುವುದು ಯೇಸು ಹೇಳಿರುವುದು ಅಗ್ನಿಯೆಂದು ಮಾತ್ರವೇ ತಿಳಿದಿದೆ. ಅಗ್ನಿ ಎಲ್ಲವನ್ನೂ ಸುಡುತ್ತದೆ ಆದರೆ ಅದು ಎಂದಿಗೂ ಆರಿಹೋಗುವುದಿಲ್ಲ. ಕಟ್ಟಿಗೆಯೊಂದಿಗೆ ಉರಿದ ಅಗ್ನಿ ನೀರಿನಿಂದ ಆರಿಹೋಗಬಹುದು ಆದರೆ, ಮನುಷ್ಯನಲ್ಲಿ ಉರಿಯುವ ಜ್ಞಾನಾಗ್ನಿಯನ್ನು ಯಾವುದೂ ನಂದಿಸಲಾರದು. ಆದ್ದರಿಂದ ಯೇಸು ಕೊಟ್ಟಿರುವುದು "ಆರದ ಅಗ್ನಿ"ಯೆಂದು ತಿಳಿಯಬೇಕು.

**19) ಪ್ರಶ್ನೆ :– ಕೆಲವರು ಪರಿಶೋಧಕರು ತಮ್ಮ ಪರಿಶೋಧನೆಗಳಿಂದ ದೈವ ಕಣವನ್ನು ಸಂಪಾದಿಸಿ ದೇವರನ್ನು ಸಾಧಿಸಿ ಮೃತ್ಯುವನ್ನು ಜಯಿಸಿ ಪ್ರಯತ್ನಿಸುತ್ತಿದ್ದಾರೆ. ಸಾಧಿಸುವ ದಿನಗಳು ಹತ್ತಿರವೇ ಇವೆ ಎನ್ನುತ್ತಿದ್ದಾರೆ. ಅವರ ಮಾತು ನಿಜವಾಗುತ್ತದಾ? ಮಾನವನು ಮೃತ್ಯುವನ್ನು ಜಯಿಸಬಲ್ಲನಾ?**

**ಉತ್ತರ :–** ಎಷ್ಟೋ ಜನ ಪರಿಶೋಧಕರು ಏನೇನೋ ಸಾಧಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅಷ್ಟು ಮಾತ್ರಕ್ಕೆ ಎಲ್ಲರೂ ಎಲ್ಲಾ ಸಾಧಿಸಲಾರದೆ ಹೋಗಿದ್ದಾರೆ. ಎಷ್ಟೋ ಜನ ಪರಿಶೋಧನೆಗಳು ಎಷ್ಟೋ ವಿಷಯಗಳ ಮೇಲೆ ನಡೆಸಿದಾಗ, ಅದರಲ್ಲಿ ಕೆಲವು ಮಾತ್ರ ಸಿದ್ಧಾಂತಪರವಾಗಿ ಸಾಧಿಸಿದ್ದಾರೆ. ನೀವು ಹೇಳಿದ ಪರಿಶೋಧಕರು ನೇರವಾಗಿ ದೈವ ಕಣವನ್ನು ಕಂಡುಹಿಡಿಯಬೇ ಕೆಂದುಕೊಂಡಿದ್ದಾರೆ. ದೇವರಾಗಲೀ, ದೈವಕಣವಾಗಲೀ ಕಾಣಿಸುವುದಲ್ಲ. ಹಾಗೆಯೇ ಯಾರಿಗೂ ಸಾಧ್ಯವಾಗುವುದು ಅಲ್ಲ, ಸಿಗುವುದೂ ಅಲ್ಲ. ಅದು ಅಗಮ್ಯಗೋಚರವಾದುದು. ಅದನ್ನು ತಿಳಿಯುವುದಕ್ಕೆ ಬದುಕಿರುವವರಿಗೆ ಯಾವೊಂದು ಆಧಾರವೂ ಇಲ್ಲ. ಆದ್ದರಿಂದ ಯಾವ ಪರಿಶೋಧಕನು ದೇವರನ್ನಾಗಲೀ, ದೈವಕಣವನ್ನಾಗಲೀ ತಿಳಿಯಲಾರನು. ಹಾಗೆಯೇ ಮೃತ್ಯುವನ್ನು ಜಯಿಸಲಾರರು. ಮನುಷ್ಯ ಯಾವಾಗ ಹುಟ್ಟಿದ್ದಾನೋ ಆಗಲೇ ಮೃತ್ಯುವು ಅವನ ಜನ್ಮ ಹಕ್ಕಾಗಿ ಇದೆ. ಜನ್ಮಹಕ್ಕು ಜನ್ಮ ಹೊಂದಿದವನಿಗೆ ತಪ್ಪದೆ ಲಭಿಸುತ್ತದೆ. ಹಕ್ಕಿನಿಂದ ನಿನಗೆ ತಿಳಿದರೂ, ತಿಳಿಯದಿದ್ದರೂ ಸಂಕ್ರಮಿಸುವ ಆಸ್ತಿಯಂಥಾದ್ದು ಮೃತ್ಯು. ಅದನ್ನು ನೀನು ಬೇಡವೆಂದರೂ ಬಾರದಂತೆ ಬಿಡುವುದಲ್ಲ. ನಿನ್ನ ಮೇಲೆ ನಿನ್ನ ಹೆಂಡತಿ ಮಕ್ಕಳಿಗೆ ಇಲ್ಲದ ಹಕ್ಕು ನಿನ್ನ ಮೃತ್ಯುವಿಗಿದೆ. ಆದ್ದರಿಂದ ನಿನ್ನ ಹೆಂಡತಿ ಮಕ್ಕಳು ನಿನ್ನ ಹತ್ತಿರಕ್ಕೆ ಬರಲಾರದೆ ಹೋದರೂ ನಿನ್ನ ಮೃತ್ಯುವು ಮಾತ್ರ ನಿನ್ನ ಹತ್ತಿರಕ್ಕೆ ಬಂದು ತೀರುತ್ತದೆ. ಅದನ್ನು ಜಯಿಸುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ.

**20) ಪ್ರಶ್ನೆ :– ಭೂಮಿಮೇಲೆ ಜನ್ಮಿಸಿದ ಪ್ರತಿಯೊಬ್ಬನು ಸಮಾಜಕ್ಕೆ ತಿಳಿಯದ ಹೊಸ ಸಂಗತಿಗಳು ಬೋಧಿಸಿದಷ್ಟು ಮಾತ್ರಕ್ಕೆ ಭಗವಂತರಾಗುತ್ತಾರಾ? ಗುರುಗಳು**

**ಆಗುತ್ತಾರಾ? ಯಾವ ಕೋನದಲ್ಲಿ ಆಲೋಚಿಸಿದರೇ ಆ ಕೋನದಲ್ಲಿ ಅನೇಕವಾದ ಜ್ಞಾನ ತಿಳಿಸಬಹುದಲ್ಲವೆ! ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ಭೂಮಿಮೇಲೆ ಎಷ್ಟೋ ಜನ ಎಷ್ಟೋ ಪರಿಶೋಧನೆಗಳಿಂದ ಎಷ್ಟೋ ಹೊಸ ವಿಷಯಗಳನ್ನು ಕಂಡುಹಿಡಿದಿದ್ದಾರೆ. ಅವುಗಳಿಂದ ಎಷ್ಟೋಜನ ಸುಖಗಳು ಅನುಭವಿಸುತ್ತಿದ್ದಾರೆ. ಅಷ್ಟು ಮಾತ್ರಕ್ಕೆ ಯಾರೂ ಗುರುಗಳು ಅಲ್ಲ. ದೇವರು ಒಬ್ಬನೇ ಭೂಮಿಮೇಲೆ ಭಗವಂತನಾಗಿ ಹುಟ್ಟುವನು. ಆತನು ಒಬ್ಬನೇ ಎಂದಿಗಾದರೂ ಗುರುವಾಗಿ ಬರಬಲ್ಲನು. ಆತನು ಹೊರತು ಯಾರನ್ನೂ ಗುರುಗಳಾಗಿ ಹೇಳಿಕೊಂಡರೂ ಅವರು ಗುರುಗಳು ಆಗಲಾರರು. ಮನುಷ್ಯರಲ್ಲಿ ನಮ್ಮಂತಹ ಕೆಲವರು ಬೋಧಕರಿದ್ದರೂ ಬೋಧಕನು ಗುರುವು ಆಗಲಾರನು. ಒಟ್ಟಾರೆ ಮನುಷ್ಯರು ಯಾರೂ ಗುರುವು ಅಲ್ಲ. ಭಗವಂತನು ಒಬ್ಬನೇ ಗುರುವಾಗುತ್ತಾನೆ. ಹೊರಗಿನ ಪ್ರಪಂಚದಲ್ಲಿ ಯಾರಾದರೂ ಗುರುವು ಎಂದು ಹೆಸರು ಇಟ್ಟುಕೊಂಡರೇ ಆತನು ಗುರುವೊಂದರ ನಮೂನೆಯನ್ನು ಗುರುತು ಮಾಡುವವನೇ ಹೊರತು ನಿಜವಾದ ಗುರು ಅಲ್ಲ.

ಇಲ್ಲಿಗೆ ಕ್ರೈಸ್ತವ ಬೋಧಕರಾದ ಪಾಸ್ಟರ್‌ರವರ ಪ್ರಶ್ನೆಗಳು ಮುಗಿದು ಹೋಗಿವೆ. ಈಗ ಶಂಕರರಾವು ಎನ್ನುವ ಒಬ್ಬ ಮಾಸ್ಟರ್‌ರವರು ಕೇಳಿದ ಮೂರು ಪ್ರಶ್ನೆಗಳಿಗೆ ಉತ್ತರ ಹೇಳಿಕೊಳ್ಳೋಣ. ನಂತರ ನೆಲ್ಲೂರು ಜಿಲ್ಲೆಯಿಂದ ವೀರ ನಾರಾಯಣ ರೆಡ್ಡಿಯವರು ಕೇಳಿದ ಐದು ಪ್ರಶ್ನೆಗಳಿಗೆ ಉತ್ತರ ಹೇಳಿಕೊಳ್ಳೋಣ. ನಂತರ ಮುರಳೀಕೃಷ್ಣರವರ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಹೇಳಿಕೊಳ್ಳೋಣ.

**1) ಪ್ರಶ್ನೆ :– ಮನುಷ್ಯ ಶರೀರದಲ್ಲಿನ ಆತ್ಮ, ಭಗವಂತನ ಶರೀರದಲ್ಲಿನ ಆತ್ಮ ಒಂದೇ ಎಂದಿದ್ದೀರ. ಆದರೆ "ಗುತ್ತಾ" ಗ್ರಂಥದಲ್ಲಿ ಪರಮಾತ್ಮ ಜ್ಞಾನ ಪರಮಾತ್ಮನಿಗೆ ಹೊರತು ಆತ್ಮಕ್ಕೆ ಸಹ ತಿಳಿದಿಲ್ಲ. ಆದ್ದರಿಂದ ಎಲ್ಲ ಶರೀರಗಳಲ್ಲಿರುವ ಆತ್ಮ ದೇವರ ಜ್ಞಾನವನ್ನು ಬೋಧಿಸುವುದಿಲ್ಲ. ಒಂದು ಪರಮಾತ್ಮ ಅಂಶ ಹೊಂದಿದ ಆತ್ಮ ಮಾತ್ರ ದೇವರ ಜ್ಞಾನವನ್ನು ತಿಳಿಸುತ್ತದೆ ಎಂದಿದ್ದೀರ. ಆದ್ದರಿಂದ ಭಗವಂತನ ಆತ್ಮ ಮನುಷ್ಯನಲ್ಲಿರುವ ಆತ್ಮ ಒಂದೇನಾ?**

**ಉತ್ತರ :–** ದೇವರ ಜ್ಞಾನ ದೇವರಿಗೆ ಹೊರತು ಇತರರಿಗ್ಯಾರಿಗೂ ತಿಳಿದಿಲ್ಲ ಎಂದು ಖುರಾನ್ ಗ್ರಂಥದಲ್ಲಿ ಸೂರಾ3, ಆಯತ್ 7ರಲ್ಲಿ ಹೇಳಿದ್ದಾರೆ. ಆ ಮಾತು ಮೇಲೆ ನಾನು ಹೇಳಿದ ಮಾತು ಎರಡೂ ಒಂದೇಯೆಂದು ಹೇಳಬಹುದು. ಭಗವಂತನಾದವನು ಪಾಪವನ್ನು ಕ್ಷಮಿಸಿದರೇ ಭಗವಂತನ ಶರೀರದಲ್ಲಿರುವ ಆತ್ಮವೇ ಮನುಷ್ಯನ ಶರೀರದಲ್ಲಿರುವಾಗ ಮನುಷ್ಯ ಇತರರ ಪಾಪವನ್ನು ಏಕೆ ಕ್ಷಮಿಸಲಾರನು? ಎಂದು ಯಾರಾದರೂ ಕೇಳಿದಾಗ ಮೇಲೆ ನಾನು ಹೇಳಿದಂತೆ ಹೇಳುವುದೇ ಸರಿಯಾದ ಉತ್ತರವಾಗುತ್ತದೆ. ಒಬ್ಬ ಭಗವಂತನೇ ಜ್ಞಾನವನ್ನು ಹೇಳಿದಾಗ ಎಲ್ಲರಲ್ಲೂ ಒಂದೇ ಆತ್ಮ ಇದ್ದರೇ ಸಾಧಾರಣ ಮನುಷ್ಯ ಸಹ ಜ್ಞಾನವನ್ನು ಹೇಳಬಹುದಲ್ಲವೆ! ಎಂದು ಕೇಳಿದಾಗ ನಾನು **"ಗುತ್ತಾ"** ಗ್ರಂಥದಲ್ಲಿ ಹೇಳಿದ ಮಾತನ್ನೇ ಹೇಳಬೇಕು. ಮನುಷ್ಯನ ಶರೀರದಲ್ಲಿ ಭಗವಂತನ ಶರೀರದಲ್ಲಿ ಬೇರೆಬೇರೆ ಆತ್ಮಗಳು ಇಲ್ಲ. ಒಂದೇ ಆತ್ಮ ಎಲ್ಲರಲ್ಲಿ ನಿವಾಸಿಸುತ್ತಾ ತನ್ನ ಕೆಲಸವನ್ನು ತಾನು ಮಾಡುತ್ತಿದೆ. ಆದರೇ ಎಲ್ಲರಲ್ಲಿ ಒಂದೇ ಆತ್ಮ ಇದ್ದರೇ ಭಗವಂತನ ಶರೀರದಲ್ಲಿ ಮಾಡಿದ ಕರ್ಮ ಕ್ಷಮಾಪಣೆ ಮನುಷ್ಯನ ಶರೀರದಲ್ಲಿರುವ ಆತ್ಮ ಏಕೆ ಮಾಡಲಿಲ್ಲ? ಎಂದು ಕೇಳಿದರೇ ಆತ್ಮ ಕರ್ಮವನ್ನನುಸರಿಸಿ ಕೆಲಸ ಮಾಡುತ್ತದೆ. ಹಾಗೆಯೇ ದೇವರ ಆಜ್ಞೆಯನ್ನನುಸರಿಸಿ ಕೂಡಾ ಕೆಲಸ ಮಾಡುತ್ತದೆ. ಆತ್ಮ ತನಗಿಂತ ದೇವರು ದೊಡ್ಡವನೆಂಬ ಜ್ಞಾಪಕದಲ್ಲಿಯೇ ಇದೆ. ಸಾಮಾನ್ಯ ಮಾನವನ ಶರೀರದಲ್ಲಿ ಆತ್ಮ ಭಗವಂತನು ಹೇಳಿದಂತೆ ಜ್ಞಾನ ಹೇಳಬಲ್ಲದು, ಕರ್ಮ ಕ್ಷಮಾಪಣೆ ಮಾಡಬಲ್ಲದು. ಆದರೇ ಅದಕ್ಕೆ ಒಂದು ಪದ್ಧತಿ ಇದೆ. ಕರ್ಮವನ್ನು ಅನುಭವಿಸುವಂತೆ ಮಾಡುವ ಆತ್ಮ ತನ್ನ ಇಷ್ಟದ ಪ್ರಕಾರ ಕರ್ಮವನ್ನು ಅನುಭವಿಸುವಂತೆ ಮಾಡುವುದಿಲ್ಲ. ಒಂದು ಲೆಕ್ಕದ ಪ್ರಕಾರ ಕಾಲಚಕ್ರವೊಂದರ ಗಮನವನ್ನನುಸರಿಸಿ ಯಾವ ಸಮಯದಲ್ಲಿ ಯಾವ ಕರ್ಮ ಅನುಭವಿಸುವಂತೆ ಮಾಡಬೇಕೋ ಆ ಸಮಯದಲ್ಲಿ ಅದೇ ಕರ್ಮವನ್ನು ಅನುಭವಿಸುವಂತೆ ಮಾಡುತ್ತಾನೆ. ಕರ್ಮವನ್ನು ಅನುಭವಿಸುವಂತೆ ಮಾಡುವುದೇ ಕೆಲಸವಾಗಿದ್ದರೂ ಆ ಕೆಲಸವನ್ನು ಶಾಸ್ತ್ರಬದ್ಧವಾಗಿ ಕರ್ಮವನ್ನು, ಕಾಲವನ್ನು ಅನುಸರಿಸಿ ಮಾಡುವುದು ನಡೆಯುತ್ತಿದೆ. ಅದೇ ವಿಧವಾಗಿ ಆತ್ಮಕ್ಕೆ ತಿಳಿಯದ ಜ್ಞಾನವಾಗಲೀ,

ಆತ್ಮ ಮಾಡಲಾರದ ಕೆಲಸವಾಗಲೀ, ಆತ್ಮಕ್ಕೆ ಇಲ್ಲದ ಅಧಿಕಾರವಾಗಲೀ ಯಾವುದೂ ಇಲ್ಲ. ಎಲ್ಲಾ ಆತ್ಮ ಕೈಯ್ಯಲ್ಲಿ ಇದ್ದರೂ ಕರ್ಮಾಚರಣೆ ಕಾಲವನ್ನು ಅನುಸರಿಸಿಯೇ ಮಾಡಿದಂತೆ, ಉಳಿದ ಅಧಿಕಾರಗಳನ್ನಾಗಲೀ, ದೇವರ ಜ್ಞಾನವನ್ನು ಬೋಧಿಸುವುದರಲ್ಲಾಗಲೀ ದೇವರ ಸಂಕಲ್ಪವನ್ನು ಅನುಸರಿಸಿ ಮಾಡುತ್ತಿದೆ. ಎಲ್ಲಾ ತನ್ನ ಕೈಯ್ಯಲ್ಲಿದ್ದರೂ ಯಾವುದೂ ಸ್ವತಃವಾಗಿ ಮಾಡುವುದಿಲ್ಲ. ದೇವರ ಆಜ್ಞೆಯನ್ನನುಸರಿಸಿ ಆತ್ಮ ಕೆಲಸ ಮಾಡುತ್ತದೆ ಆದರೆ ಸ್ವತಃವಾಗಿ ಯಾವಾಗಾಗಲೀ, ಯಾವ ಸಂದರ್ಭದಲ್ಲಾಗಲೀ ಮಾಡಲಿಲ್ಲ, ಮಾಡುವುದಿಲ್ಲ. ಅಲ್ಲೇ ದೇವರ ಹಿರಿಮೆಯನ್ನು ಆತ್ಮ ತೋರಿಸುತ್ತಿದೆ. ಒಬ್ಬ ಮನುಷ್ಯ ಮರಣಿಸಿದರೇ ಅವನ ಕರ್ಮವನ್ನು ಅನುಸರಿಸಿ ಯಾವ ಜನ್ಮಕ್ಕೆ ಕಳುಹಿಸಬೇಕೋ ಆ ಜನ್ಮಕ್ಕೇ ಕಳುಹಿಸುತ್ತಿದೆ. ಆದರೇ ಆ ಅಧಿಕಾರವನ್ನು ದೇವರೇ ಕೊಟ್ಟಿದ್ದಾನೆ. ದೇವರ ಆಜ್ಞೆ ಮೇರೆಗೆ ಮನುಷ್ಯರನ್ನು ಜನ್ಮಗಳಿಗೆ ಕಳುಹಿಸುತ್ತಿದ್ದೇನೆಂದು ಹೇಳುತ್ತಿದೆ. ಈ ಅಧಿಕಾರಗಳೆಲ್ಲವೂ ಮೊದಲೇ ದೇವರ ಹತ್ತಿರದಿಂದ ಆತ್ಮ ಹೊಂದಿದ್ದಾನೆ. ಆ ವಿಷಯವನ್ನು ಇಂಜೀಲ್ ಗ್ರಂಥದಲ್ಲಿ ಯೋಹಾನು ಸುವಾರ್ತೆ 5ನೇ ಅಧ್ಯಾಯದಲ್ಲಿ 26ನೇ ವಚನವನ್ನು ನೋಡಿದರೇ ತಿಳಿಯಬಲ್ಲದು. **(ಯೋಹಾನ 5–26) "ತಂದೆ (ದೇವರು) ಹೇಗೆ ತನ್ನಷ್ಟಕ್ಕೆ ತಾನೇ ಜೀವವಿರುವ ವನಾಗಿ ಇದ್ದಾನೋ ಹಾಗೆಯೇ ಕುಮಾರನು (ಆತ್ಮ) ತನ್ನಷ್ಟಕ್ಕೆ ತಾನೇ ಜೀವ ಇರುವ ರಾಗಿರುವು ದಕ್ಕೆ ಕುಮಾರನಿಗೆ ಅಧಿಕಾರ ಅನುಗ್ರಹಿಸಿದನು"** ಈ ವಾಕ್ಯ ದೇವರು ಆತ್ಮಕ್ಕೆ ಉಂಟುಮಾಡಿದ ಅಧಿಕಾರವನ್ನು ಕುರಿತು ಹೇಳಿರುವುದು. ಸೃಷ್ಠಿ ಆದಿಯಲ್ಲಿಯೇ ಸರ್ವ ಅಧಿಕಾರಗಳು ದೇವರ ಹತ್ತಿರದಿಂದ ಹೊಂದಿದ ಆತ್ಮವನ್ನು ಯಾರ ಶರೀರದಿಂದ ಏನು ಮಾಡಬೇಕೋ ಅದೇ ಮಾಡುತ್ತಿದೆ. ಶರೀರದಲ್ಲಿ ಆತ್ಮವೇ ದೇವರಾಗಿದ್ದು ದೇವರ ಅಧಿಕಾರದಿಂದ ಎಲ್ಲ ಕಾರ್ಯಗಳನ್ನು ಶಾಸ್ತ್ರಪದ್ಧತಿಯಾಗಿ ಮಾಡುತ್ತಿದೆ. ಅಧಿಕಾರವಿದೆಯೆಂದು ವಿಧಿ ವಿಧಾನವನ್ನು ಅನುಸರಿಸದೆ ಏನೂ ಮಾಡುತ್ತಿಲ್ಲ. ಸರ್ವ ಪ್ರಪಂಚವೆಲ್ಲಾ ಎಲ್ಲ ಜೀವರಾಶಿ ಗಳಲ್ಲಿರುವ ಆತ್ಮ ಒಂದೇ. ಆದರೂ ಭಗವಂತನ ಶರೀರದಿಂದಲೇ ಜ್ಞಾನ ಹೇಳುತ್ತಿದೆ. ಮನುಷ್ಯನ ಶರೀರದಿಂದ ಕೇಳುತ್ತಿದೆ. ಆತ್ಮವನ್ನು ಕುರಿತು ತಿಳಿಯುವುದು

ಬಹಳ ಕಷ್ಟ. ಕಷ್ಟವಾದ ಆತ್ಮವನ್ನು ಕುರಿತು ತಿಳಿಯುವುದನ್ನೇ "ಆಧ್ಯಾತ್ಮಿಕ" ಎಂದು ಹೇಳುತ್ತಿದ್ದಾರೆ. ಸಂಪೂರ್ಣ ಆಧ್ಯಾತ್ಮಿಕ ತಿಳಿದವನು ಆತ್ಮವೇಯೆಂದು ತಿಳಿಯಬೇಕು. ಎಷ್ಟೋ ತಾಳ್ಮೆ, ಛಲ, ಶ್ರದ್ಧೆ ಇದ್ದರೇನೆ ಆತ್ಮವನ್ನು ತಿಳಿಯುವುದಕ್ಕೆ ಅವಕಾಶವಿರುತ್ತದೆ.

**2) ಪ್ರಶ್ನೆ :– ಮೊದಲು ಏನೂ ಅಲ್ಲದ ದೇವರು ಪ್ರಕೃತಿಯನ್ನು ಆತ್ಮವನ್ನು ತಯಾರು ಮಾಡಿದಾಗ ನಂತರ ಅವುಗಳಿಂದ ಸೃಷ್ಠಿ ತಯಾರಾಗಿದೆಯಾ? ಅಥವಾ ಮೊದಲು ದೇವರೇ ಒಟ್ಟಾರೆ ಎಲ್ಲಾ ಒಂದೇ ಸಲ ಸೃಷ್ಠಿಸಿದ್ದಾನಾ? ಹಾಗಿರುವಾಗ ಸೃಷ್ಠಿಕರ್ತಯೆಂದು ಆತ್ಮವನ್ನು ಕರೆಯಬೇಕಾ? ಪರಮಾತ್ಮನನ್ನು ಕರೆಯಬೇಕಾ?**

**ಉತ್ತರ :–** ಮೊದಲು ಸೃಷ್ಠಿ ಪೂರ್ವದಲ್ಲಿ ಕೆಲಸ ಮಾಡುವ ದೇವರು ಮೊದಲು ತನ್ನಿಂದ ಪ್ರಕೃತಿಯನ್ನು ತಯಾರು ಮಾಡಿದ್ದಾನೆ. ನಂತರ ಸ್ವಲ್ಪ ಅವಧಿಯಲ್ಲಿ ಜೀವಾತ್ಮ, ಆತ್ಮವನ್ನು ಒಂದೇ ಸಲ ಸೃಷ್ಠಿಸಿದ್ದಾನೆ. ಒಂದು ಲೆಕ್ಕಾಚಾರದ ಪ್ರಕಾರ ಜೀವಿಗಳನ್ನು ತಯಾರು ಮಾಡಿದವನು ದೇವರೇ ಆಗಿರುವುರಿಂದ ಸೃಷ್ಠಿಕರ್ತ ಯೆಂದು ದೇವರನ್ನು ಕರೆಯುತ್ತಿದ್ದೇವೆ. ಸೃಷ್ಠಿಯನ್ನು ತಯಾರು ಮಾಡಿದವನು ದೇವರು ಆದಾಗ, ಅಂದಿನಿಂದ ಸೃಷ್ಠಿ ಎಲ್ಲವನ್ನೂ ಆತ್ಮವೇ ನಡೆಸುತ್ತಿದೆ. ಸೃಷ್ಠಿಕರ್ತನಾದ ದೇವರು ಸೃಷ್ಠಿ ನಂತರ ಆತನು ಏನೂ ಮಾಡುತ್ತಿಲ್ಲ. ಮಾಡುವ ವನೆಲ್ಲಾ ಆತ್ಮವೇಯೆಂದು ತಿಳಿಯಬೇಕು.

**3) ಪ್ರಶ್ನೆ :– ಗೀತೆಯಲ್ಲಿ ಅಕ್ಷರ ಪರಬ್ರಹ್ಮಯೋಗದಲ್ಲಿ ಮೋಕ್ಷ ಹೊಂದುವ ವ್ಯಕ್ತಿ ಮರಣಿಸುವ ಕಾಲವನ್ನು ಕುರಿತು ಹೇಳುತ್ತಾ, ಅದಕ್ಕೆ ಶರೀರದ ಒಳಗಿರುವ ಕಾಲಚಕ್ರದಲ್ಲಿನ ಸೂರ್ಯಚಂದ್ರ ಗಮನಗಳಿಂದ ಉತ್ತರಾಯಣ ದಕ್ಷಿಣಾಯನ ಏರ್ಪಡುತ್ತದೆಂದು ಹೇಳಿದ್ದಾರಲ್ಲವೆ? ಆದರೆ ಹೊರಗೆ ಸೂರ್ಯರಶ್ಮಿ, ಆಕಾಶ ಮೇಘಾವೃತ ಉತ್ತರಾಯಣದಲ್ಲಿ ಮೋಕ್ಷ ಹೊಂದುವುದಕ್ಕೂ ಏನು ಸಂಬಂಧ?**

**ಉತ್ತರ :–** ಹೊರಗಿನ ಕಾಲಕ್ಕೂ ಒಳಗಿನ ಕಾಲಚಕ್ರಕ್ಕೂ ಸಂಬಂಧ ಇದೆ. ಆದ್ದರಿಂದ ಹೊರಗೆ ಇರುವುದನ್ನನುಸರಿಸಿ ಒಳಗೆ ಇದೆಯೆಂದು ತಿಳಿಯಬೇಕು.

ಸೂರ್ಯರಶ್ಮಿ ವಿಷಯಕ್ಕೆ ಬಂದರೇ ನಿನ್ನ ಮೆದುಳು ಯಾವಾಗ ಮಂದವಾಗಿ ಇರುತ್ತದೋ ಆಗ ಒಳಗೆ ನಿನ್ನ ಮೇಲೆ ಸೂರ್ಯರಶ್ಮಿ ಇಲ್ಲವೆಂದೂ, ಯಾವಾಗಾದರೇ ನೀನು ಚುರುಕಾಗಿ ಇದ್ದೀಯೋ ಆಗ ಒಳಗೆ ನಿನ್ನ ಮೇಲೆ ಸೂರ್ಯರಶ್ಮಿ ಚೆನ್ನಾಗಿ ಇದೆಯೆಂದು ತಿಳಿಯಬೇಕು.

## ವೀರನಾರಾಯಣ ರೆಡ್ಡಿಯವರ ಪ್ರಶ್ನೆಗಳು :–

**1) ಪ್ರಶ್ನೆ :– ವಿಶ್ವದಲ್ಲಿ ಬ್ಲಾಕ್‌ಹೋಲ್‌ನಲ್ಲಿ ಪ್ರಕೃತಿ ಇಲ್ಲ ಎಂದು ಕೇಳಿದ್ದೇವೆ. ರಮಣ ಮಹರ್ಷಿ ಒಂದು ಸಂದರ್ಭದಲ್ಲಿ ಮಾತನಾಡುತ್ತಾ ಎಲ್ಲಿ ಲಯ ಇರುತ್ತದೋ ಅದೇ ಉತ್ಪತ್ತಿ ಸ್ಥಾನ ಎಂದು ಹೇಳಿದ್ದಾನೆ. ಬ್ಲಾಕ್‌ಹೋಲ್ ಗ್ರಹಗಳನ್ನು ಲಯ ಮಾಡುತ್ತಿದೆ. ಆದ್ದರಿಂದ ಅದನ್ನು ಉತ್ಪತ್ತಿ ಸ್ಥಾನ (ಆರಿಜನ್) ಎಂದು ಹೇಳುವುದಕ್ಕೆ ಅವಕಾಶವಿದೆಯಾ?**

**ಉತ್ತರ :–** ರಮಣ ಮಹರ್ಷಿಯವರು ಮಾತನಾಡುವುದು ಬಹಳ ಅಪರೂಪ. ಒಂದು ವೇಳೆ ಮಾತನಾಡಿದ್ದಾನೆಂದುಕೊಳ್ಳೋಣ. ಅದು ಸರಿಯಾದ ಭಾವನೆಯನ್ನು ಕೊಡುವುದಾಗಿ ಇರುವುದಿಲ್ಲ. ಹಾಗಿರುವಾಗ ಆತನ ಮಾತುಗಳಲ್ಲಿ ಸತ್ಯ ಇಲ್ಲವೆಂದು ತಿಳಿಯುತ್ತಿದೆ. ಲಯದಲ್ಲಿ ಉತ್ಪತ್ತಿ ಇರುವುದಿಲ್ಲ. ಜೀರ್ಣಾಶಯದಲ್ಲಿ ಆಹಾರ ನಾಶವಾಗಿ ಹೋಗುತ್ತಿದೆ. ಅಲ್ಲೇ ಆಹಾರ ತಯಾರಾಗುತ್ತದೆಂದು ಹೇಳುವುದು ಹುಚ್ಚುತನ ಎನ್ನುತ್ತಾರೆ.

**2) ಪ್ರಶ್ನೆ :– ಜೀವಿಗಳಾದ ನಾವು ಭೌತಿಕ ಶರೀರದಿಂದ ಸೂಕ್ಷ್ಮ ಶರೀರವನ್ನು ಬೇರ್ಪಡಿಸಲಾರದೆ ಇದ್ದೇವೆ. ಮರಣದಲ್ಲಿ ಮಾತ್ರ ಸೂಕ್ಷ್ಮ ಶರೀರ ಸ್ಥೂಲಶರೀರದಿಂದ ಬಿಡುಗಡೆಯಾಗುತ್ತದೆ. ಸೂಕ್ಷ್ಮ ಶರೀರದಿಂದಿರುವ ಜೀವಿಗಳು ಸ್ಥೂಲ ಶರೀರದೊಳಗೆ ಪ್ರವೇಶಿಸಿ ಪುನಃ ಹೊರಗೆ ಬರಬಲ್ಲವು. ಪರಕಾಯ ಪ್ರವೇಶ ಕಲಿತ ಯೋಗಿಗಳು ತಮ್ಮ ಇಚ್ಛಾನುಸಾರ ಸ್ಥೂಲ ಶರೀರದಿಂದ ಹೊರಗೆ ಬರಬಲ್ಲರು, ಒಳಗೆ ಹೋಗಬಲ್ಲರು. ಭೌತಿಕ ಶರೀರದಾರಿಗಳಲ್ಲಿ ಸೂಕ್ಷ್ಮ ಶರೀರ ಬಿಡುಗಡೆಯಾಗದೆ ಬಂಧಿಸಲ್ಪಟ್ಟಿರುತ್ತದಾ?**

**ಉತ್ತರ :–** ಮನುಷ್ಯನಲ್ಲಾಗಲೀ, ವಿಗ್ರಹದಲ್ಲಾಗಲೀ ಸ್ಥೂಲ ಶರೀರದಲ್ಲಿ ಸೂಕ್ಷ್ಮ ಶರೀರ ಒಳಗೊಂಡಿರುತ್ತದೆ. ಆದರೇ ಅದು ಒಂದು ಸಲ ಹೊರಗೆ ಬಂದರೇ ಪುನಃ ಎರಡನೆ ಸಲ ಹೊರಗೆ ಬರುವುದಕ್ಕೆ ಸುಲಭವಾಗುತ್ತದೆ. ಪ್ರತಿಮೆಯಲ್ಲಿಂದ ಹೊರಗೆ ಬಂದ ಸೂಕ್ಷ್ಮ ಪುನಃ ಅದೇ ಪ್ರತಿಮೆಯನ್ನು ಸೇರಬಹುದು. ನಂತರ ಸುಲಭವಾಗಿ ಹೊರಗೆ ಬರಬಹುದು. ಹಾಗೆ ಎಷ್ಟು ಬಾರಿಯಾದರೂ ಒಳಗೆ ಹೊರಗೆ ಹೋಗಬಹುದು, ಬರಬಹುದು. ಆದರೇ ಮನುಷ್ಯನಲ್ಲಿ ಒಂದು ಸಲ ಹೊರಗೆ ಬಂದರೇ ಪುನಃ ಸೇರುವುದಕ್ಕೆ ಅವಕಾಶವಿಲ್ಲ. ಏಕೆಂದರೆ! ಸೂಕ್ಷ್ಮ ಶರೀರ ಪುನಃ ಸ್ಥೂಲ ಶರೀರವನ್ನು ಸೇರಬೇಕೆಂದರೇ ಬಿಟ್ಟಿರುವ ಶರೀರದಲ್ಲಿ ವಾಯುಗಳಿರಬೇಕು. ಏನೂ ಇಲ್ಲದ ಶರೀರ ಮೃತ ಶರೀರದ ಕೆಳಗೆ ಜಮಕಟ್ಟಲ್ಪಡುತ್ತದೆ. ಮೃತ ದೇಹವನ್ನು ಸೂಕ್ಷ್ಮ ಶರೀರ ಸೇರಲಾರದು. ಅದೇ ಪರಕಾಯ ಪ್ರವೇಶ ಕಲಿತವರಿಗೆ ಹೇಗೆ ಸಾಧ್ಯವಾಗುತ್ತಿದೆ? ಎಂದು ನೀವು ಕೇಳಬಹುದು. ಆ ವಿದ್ಯೆ ಸುಮಾರು ಹನ್ನೆರಡು ವರ್ಷಗಳು ಕಲಿಯಬೇಕಾಗಿರುತ್ತದೆ. ಅದರಲ್ಲಿ ಕಲಿಯುವುದು ತಾನು ಬಿಡುತ್ತಿರುವ ಶರೀರದಲ್ಲಿ ಉಪವಾಯುಗಳನ್ನು ಬಿಟ್ಟು ಹೊರಗೆ ಬರುವುದೇ. ನಾನು ಉಪವಾಯುಗಳನ್ನು ಬಿಟ್ಟು ಹೋಗುತ್ತಿದ್ದೇನೆಂದು ಸಂಕಲ್ಪ ಮಾಡುವುದೇ ಅದರಲ್ಲಿನ ಅಭ್ಯಾಸ. ಆ ವಿಧವಾಗಿ ಉಪವಾಯುಗಳನ್ನು ಬಿಟ್ಟು ಹೊರಗೆ ಒಂದು ಬಾರಿ ಹೋಗಿ ಪುನಃ ತನ್ನ ಶರೀರದಲ್ಲಿ ಬಂದು ಸೇರಬಹುದು. ಉಪವಾಯುಗಳು ಇರುವುದರಿಂದ ಆ ಶರೀರ ಕೆಟ್ಟುಹೋಗದಂತೆ ಇರುತ್ತದೆ. ಉಪವಾಯುಗಳು ಇಲ್ಲದ ಶರೀರದಲ್ಲಿ ಪರಕಾಯ ಪ್ರವೇಶ ಮಾಡುವವರೂ ಸಹ ಸೇರಲಾರರು. ಕೆಲವು ಕಥೆಗಳಲ್ಲಿ ಮರಣಿಸಿದ ಹುಲಿಯಲ್ಲಿ ಸೇರಿದಂತೆ, ಅಥವಾ ಮರಣಿಸಿದ ಇತರೆ ಪ್ರಾಣಿಗಳಲ್ಲಿ ಸೇರಿದಂತೆ, ಇನ್ನೂ ಮರಣಿಸಿದ ಮನುಷ್ಯನಲ್ಲಿ ಸೇರಿದಂತೆ ಬರೆದುಕೊಂಡಿದ್ದಾರೆ. ಅದೆಲ್ಲವೂ ಅಸತ್ಯ. ಬದುಕಿರುವ ಮನುಷ್ಯನಲ್ಲಿ ದೆವ್ವ ಸೇರಿದಂತೆ ಸೇರಬಹುದು ಆದರೆ, ಪೂರ್ತಿ ಮರಣಿಸಿದ ಶರೀರದೊಳಗೆ ಸೇರುವುದಕ್ಕೆ ಸಾಧ್ಯವಿಲ್ಲ. ಹಾಗೆ ಸಾಧ್ಯವಾದರೇ ಮರಣಿಸಿದವನು ತನ್ನ ದೇಹವನ್ನು ಪುನಃ ಸೇರಬಹುದು. ಪರಕಾಯ ಪ್ರವೇಶ ಒಂದು ವಿದ್ಯೆ. ಉಪವಾಯುಗಳನ್ನು

ಬಿಟ್ಟು ಹೊರಗೆ ಹೋಗಿ ಪುನಃ ಒಳಗೆ ಸೇರುವುದನ್ನೇ ಅಭ್ಯಾಸ ಮಾಡುತ್ತಾರೆ. ಅದು ಒಂದು ದಿನ ಅಥವಾ ಒಂದು ವರ್ಷದಿಂದ ಸಾಧ್ಯವಾಗುವುದಿಲ್ಲ. ನೇರವಾಗಿ 12 ವರ್ಷಗಳು ಅಭ್ಯಾಸ ಮಾಡಿದಾಗ ಸಾಧ್ಯವಾಗುತ್ತದೆ. ಅಷ್ಟು ಶ್ರಮಪಟ್ಟು ಆ ವಿದ್ಯೆಯನ್ನು ಕಲಿತರೂ ಒಂದು ದೆವ್ವ ಬೇರೆ ಮನುಷ್ಯನಲ್ಲಿ ಸೇರಿದಂತೆ ಸೇರುವುದು ಹೊರತು ಅದರಲ್ಲಿ ಏನೂ ಲಾಭವಿಲ್ಲ.

**3) ಪ್ರಶ್ನೆ :– ಜೀವಿಯು ಏಕಕಾಲದಲ್ಲಿ ಒಂದೇ ಶರೀರದಲ್ಲಿ ಇರುವನೆಂದು ಬ್ರಹ್ಮವಿದ್ಯಾ ಶಾಸ್ತ್ರದಿಂದ ತಿಳಿಸಲ್ಪಟ್ಟಿದೆ. "ಶ್ರೀವಲ್ಲಭ ಚರಿತಾಮೃತ" ದಲ್ಲಿ ಏಕ ಕಾಲದಲ್ಲಿ ಜೀವಿಯು ವಿಭಿನ್ನ ದೇಹಗಳನ್ನು ಧರಿಸಿ ತನ್ನ ಕರ್ಮವನ್ನು ಬೇಗನೇ ಅನುಭವಿಸುವುದಕ್ಕೆ ಅವಕಾಶ ಇದೆಯೆಂದು ತಿಳಿಸಿದೆ. ಇದು ಸಾಧ್ಯವಾಗುತ್ತದಾ?**

**ಉತ್ತರ :–** ಒಂದು ಕಾಲದಲ್ಲಿ ಒಬ್ಬ ಜೀವಿಯು ಒಂದು ಶರೀರದಲ್ಲಿ ಇರುವುದು ಸತ್ಯ ಆದರೆ ಅನೇಕ ಶರೀರಗಳಲ್ಲಿ ಇರುವುದು ಅಸಂಭವ. ಇಂತಹ ಮಾತುಗಳು ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಪೂರ್ತಿ ವಿರುದ್ಧ. ಇದನ್ನು ನಂಬಬಾರದು.

**4) ಪ್ರಶ್ನೆ :– ಕಬೀರು ದೊಡ್ಡ ಜ್ಞಾನಿ, ಇವರು ಮೂರು ಆತ್ಮಗಳ ಜ್ಞಾನವನ್ನು ಬೋಧಿಸಿದಂತೆ ತಿಳಿಯುತ್ತಿದೆ. ಗತ ಶತಾಬ್ದದಲ್ಲಿ ಸಫಾಲ್ ದೇವ್ ಮಹಾರಾಜ್ ಎನ್ನುವ ವ್ಯಕ್ತಿಯಿಂದ ಕಬೀರ ಜ್ಞಾನ ಪ್ರಚಾರ ಮಾಡಿಸುತ್ತಾ ಪರಬ್ರಹ್ಮ ಸಾಕ್ಷಿಯಾಗಿ ಇರುವಾಗ, ಅಕ್ಷರಬ್ರಹ್ಮ ಸೃಷ್ಠಿ ಸ್ಥಿತಿ ಲಯ ಮಾಡುತ್ತಿದ್ದಾನೆಂದು ತಿಳಿಸಿದ್ದಾನೆ. ಪರಬ್ರಹ್ಮ ವ್ಯಾಪಿಸಿದ ಈ ವಿಶ್ವದಲ್ಲಿ ಪ್ರಕೃತಿ ಮತ್ತು ಅಕ್ಷರ ಬ್ರಹ್ಮ 1/4 ಭಾಗ ವ್ಯಾಪಿಸಿರುವಂತೆ ತಿಳಿಸಿದ್ದಾನೆ. ಅಂದರೆ ಪರಬ್ರಹ್ಮ ಇರುವ 3/4 ಭಾಗಗಳಲ್ಲಿ ಪ್ರಕೃತಿ ಮತ್ತು ಅಕ್ಷರ ಬ್ರಹ್ಮ ಇಲ್ಲದಂತೆ ತಿಳಿಸಿದ್ದಾನೆ. ಈ ವಿಧವಾದ ಅಳತೆಗಳು ಸತ್ಯವಾದುವಾ?**

**ಉತ್ತರ :–** ಪರಬ್ರಹ್ಮ, ಅಕ್ಷರ ಬ್ರಹ್ಮ ಎನ್ನುವ ಮಾತುಗಳು ವಾಸ್ತವವೇ. ಆದರೇ ನಾಲ್ಕರಷ್ಟು ಪ್ರಕೃತಿ, ಅಕ್ಷರ ಬ್ರಹ್ಮ ಇದ್ದಾನೆನ್ನುವುದನ್ನು ನೋಡಿದರೇ ಪ್ರಕೃತಿಯಾಗಲೀ, ಅಕ್ಷರ ಬ್ರಹ್ಮವಾಗಲೀ ಪೂರ್ತಿತಿಳಿಯದಂತೆಯೇ ಎಂದು ಅನಿಸುತ್ತಿದೆ. ಆತನು ಹೇಳಿದ ಲೆಕ್ಕೆಗಳು ಪೂರ್ತಿ ತಪ್ಪು.

**5) ಪ್ರಶ್ನೆ :– "ಗಿಡಮೊದಲಾ? ಬೀಜಮೊದಲಾ?" ಎನ್ನುವ ಗ್ರಂಥದಿಂದ ಜನ್ಮಕ್ಕೆ ಕಾರಣ ಕರ್ಮಯೆಂದು ತಿಳಿಯುತ್ತಿದೆ. "ಯೋಗ ವಾಸಿಷ್ಟ" ಎನ್ನುವ ಗ್ರಂಥದಲ್ಲಿ ಕರ್ಮಕ್ಕೆ ಕಾರಣ ಅಜ್ಞಾನ ಎಂದು ತಿಳಿಸಲ್ಪಟ್ಟಿದೆ. ಜ್ಞಾನ ವಿಕಾಶಿಸಿದರೆ ಕರ್ಮ ನಾಶವಾಗುತ್ತದೆ. ಆದ್ದರಿಂದ ಕರ್ಮಕ್ಕೆ ಮೂಲ ಅಜ್ಞಾನವಾ?**

**ಉತ್ತರ :–** ಜನ್ಮಕ್ಕೆ ಕಾರಣ ಕರ್ಮಯೆಂದು ಹೇಳುವುದು ಶಾಸ್ತ್ರಬದ್ಧ. ಅದನ್ನು ಯಾರೂ ಖಂಡಿಸಲಾರರು. ಆದರೇ ಕರ್ಮಕ್ಕೆ ಕಾರಣ ಅಜ್ಞಾನ ಎನ್ನುವುದು ಸರಿಯಾದ ನಿರ್ವಚನೆ ಅಲ್ಲ. ಕರ್ಮಕ್ಕೆ ಕಾರಣ 'ಅಹಮ್' ಎಂದು ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಹೇಳುತ್ತಿದ್ದಾರೆ. ಅಹಮ್‌ನ್ನು ಅಡಗಿಸಿದರೇ ಕರ್ಮಯೋಗ ಆಗುತ್ತದೆಂದು ಸಹ ಹೇಳುತ್ತಿದ್ದಾರೆ. ಕರ್ಮಕ್ಕೆ ಕಾರಣ ಅಹಮ್ ಎಂದು ಹೇಳದೆ ಅಜ್ಞಾನ ಎಂದು ಹೇಳುವುದು ಪೂರ್ತಿ ತಪ್ಪು. ಅಜ್ಞಾನದಿಂದ ನೇರವಾಗಿ ಕರ್ಮ ಬರುವುದಿಲ್ಲ. ಅಜ್ಞಾನದಿಂದ ಅಹಮ್ ಕೆಲಸಮಾಡಿದಾಗ, ಅಹಮ್‌ನಿಂದ ಕರ್ಮ ಬರುತ್ತಿದೆ. ಯಾವ ವಿಷಯವಾದರೂ ಶಾಸ್ತ್ರಬದ್ಧ ಅಲ್ಲದನ್ನು ಬಿಟ್ಟು ಹಾಕಬೇಕು.

ಇಲ್ಲಿಂದ ಒಬ್ಬ ಮುಸ್ಲಿಮ್ ವ್ಯಕ್ತಿ ಕೇಳಿದ ಪ್ರಶ್ನೆಗಳು ಇವೆ. ಮೊದಲು 200 ಪ್ರಶ್ನೆಗಳನ್ನು ಒಬ್ಬನೇ ವ್ಯಕ್ತಿ ಹಿಂದೂ ಸಮಾಜದಲ್ಲಿನ ವ್ಯಕ್ತಿ, ಪ್ರತ್ಯೇಕಿಸಿ ಬ್ರಾಹಣನು ಕೇಳಿದ ಪ್ರಶ್ನೆಗಳು, ನಂತರ ಕ್ರೈಸ್ತ ಸಮಾಜದಿಂದ ಪ್ರತ್ಯೇಕಿಸಿ ಬೋಧಕನಾದ ಪಾಸ್ಟರ್‌ರವರು ಕೇಳಿದ ಪ್ರಶ್ನೆಗಳು ಬರೆಯುವುದರಿಂದ ಎರಡು ಸಮಾಜದವರಿಂದ ಬಂದಿರುವ ಪ್ರಶ್ನೆಗಳಿಗೆ ಉತ್ತರಗಳು ಕೊಟ್ಟಂತಾಗಿದೆ. ಈಗ ಮುಸ್ಲಿಮ್ ಸಮಾಜದಿಂದ ಬಂದಿರುವ ಪ್ರಶ್ನೆಗಳಿಗೆ ಉತ್ತರಗಳು ಬರೆಯುವು ದರಿಂದ ಮೂರು ಮತಗಳಿಂದ ಬರುವ ಸಂಶಯಗಳಿಗೆ ಉತ್ತರ ಹೇಳಿ ದಂತಾಗುತ್ತದೆ. ಚೆನ್ನೈಯಿಂದ ಷಫೀಯವರು ಕೇಳಿದ ಪ್ರಶ್ನೆಗಳನ್ನು ನೋಡೋಣ.

**1) ಪ್ರಶ್ನೆ :– ದೈವಗ್ರಂಥಗಳಾದ ಭಗವದ್ಗೀತೆ, ಇಂಜೀಲು, ಖುರಾನ್‌ನಲ್ಲಿನ ವಿಷಯಗಳು ಕರ್ಮಾತೀತವಾ? ಅಲ್ಲವಾ?**

**ಉತ್ತರ :–** ವಾಸ್ತವವಾಗಿ ದೇವರು ಹೇಳಿದ ವಿಷಯಗಳು ಕರ್ಮಾತೀತವಾದವು. ಆದರೇ ಕರ್ಮಾಧೀನದಲ್ಲಿನ ವಿಷಯಗಳು ಕೆಲವು ಮೂರು ಗ್ರಂಥಗಳಲ್ಲಿಯೂ ಬೆರೆತಿವೆ. ಇರುವ ಕರ್ಮವನ್ನು ಇಲ್ಲದಂತೆ ಮಾಡುವ ಜ್ಞಾನ ವಿಷಯಗಳು ಕರ್ಮಾತೀತವಾದವು. ಇಲ್ಲದ ಕರ್ಮವನ್ನು ತಂದು ಮನುಷ್ಯನಿಗೆ ಅಂಟಿಸುವ ಪ್ರಪಂಚ ವಿಷಯಗಳು ಕರ್ಮಾಧೀನವಾದವು. ದೈವಗ್ರಂಥಗಳಲ್ಲಿ ದೇವರು ಜ್ಞಾನ ವಿಷಯಗಳನ್ನು ಹೇಳಿದ್ದರೇ ಮನುಷ್ಯ ತನ್ನ ದೊಡ್ಡಸ್ತಿಕೆಯನ್ನು ತೋರಿಸುವುದಕ್ಕೆ ಪ್ರಪಂಚ ವಿಷಯಗಳನ್ನು ದೈವ ಗ್ರಂಥಗಳಲ್ಲಿ ಸೇರಿಸುವುದೇ ಅಲ್ಲದೆ ಅದರಲ್ಲಿ ಹೇಳಿದ ದೈವಿಕವಾದ ಜ್ಞಾನ ವಿಷಯಗಳಿಗೆ ಕೂಡಾ ಪ್ರಪಂಚ ಸಂಬಂಧ ಅರ್ಥಗಳನ್ನು ಅಂಟಗಟ್ಟುತ್ತಾ ಪ್ರಜೆಗಳಿಗೆ ದೈವ ಗ್ರಂಥಗಳಲ್ಲಿ ಇರುವ ಜ್ಞಾನವನ್ನು ತಿಳಿಯದಂತೇ ಮಾಡುತ್ತಿದ್ದಾರೆ. ಆ ವಿಷಯಗಳನ್ನು ನಾವು ಖಂಡಿಸಿ ದೈವ ಗ್ರಂಥದಲ್ಲಿ ದೇವರು ದೈವಜ್ಞಾನವನ್ನೇ ಹೇಳಿದ್ದಾನೆಂದು ಪ್ರಪಂಚ ವಿಷಯಗಳನ್ನು ಹೇಳಲಿಲ್ಲವೆಂದು ಹೇಳುತ್ತಿದ್ದೇವೆ.

**2) ಪ್ರಶ್ನೆ :– ಸ್ವಪ್ನವು ಸತ್ಯಾಸತ್ಯ ಮಿಳಿತವಾ?**

**ಉತ್ತರ :–** ಹೌದು. ಸ್ವಪ್ನದಲ್ಲಿ ಕೆಲವು ಸತ್ಯಗಳು, ಕೆಲವು ಅಸತ್ಯಗಳೆಂದು ತಿಳಿಯುತ್ತಿವೆ. ಆದರೂ ಇದು ಸತ್ಯವೆಂದಾಗಲೀ, ಇದು ಅಸತ್ಯವೆಂದಾಗಲೀ ಯಾರೂ ನಿರೂಪಿಸಲಾರರು. ಸ್ವಪ್ನಗಳೆಲ್ಲವೂ ಜ್ಞಾನ ಸಂಬಂಧವಾದವುಗಳಾಗಿಯೇ ಅರ್ಥ ಮಾಡಿಕೊಂಡಾಗ ಅವುಗಳಿಂದ ಜ್ಞಾನ ತಿಳಿಯುತ್ತದೆ.

**3) ಪ್ರಶ್ನೆ :– ಆತ್ಮ ಸ್ತ್ರೀ ಸಂಬಂಧವಾದುದಾ, ಪುರುಷ ಸಂಬಂಧವಾದುದಾ?**

**ಉತ್ತರ :–** ಆತ್ಮವನ್ನು ಕುರಿತು ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಹೇಳಿದಾಗ ಆತ್ಮವನ್ನು, ಜೀವಾತ್ಮವನ್ನು ಇಬ್ಬರನ್ನೂ ಪುರುಷರೆಂದು ಹೇಳಿದ್ದಾರೆ. ಒಂದು ಬಾರಿ ಆತ್ಮವನ್ನು ಪುರುಷನೆಂದು ಹೇಳುವುದರಿಂದ ಆತ್ಮ ಎಂದಿಗೂ ಪುರುಷನೇಯೆಂದು ಹೇಳಬಹುದು. ಆದರೇ ಮಾತುಗಳಲ್ಲಿ ಒಂದೊಂದು ಬಾರಿ ಸ್ತ್ರೀ ಲಿಂಗವಾಗಿ ಅದು, ಇದು ಎಂದು ಹೇಳಲ್ಪಡುತ್ತಿರುತ್ತದೆ.

ನಂತರ ಕೆಲವು ಸಂದರ್ಭಗಳಲ್ಲಿ ಆತನು, ಅವನು ಎಂದು ಪುರುಷ ಲಿಂಗವಾಗಿಯೇ ಹೇಳುತ್ತಿದ್ದೇವೆ. ಜೀವಾತ್ಮ, ಆತ್ಮ, ಇಬ್ಬರೂ ಪುರುಷರಾದಾಗ, ಪರಮಾತ್ಮ (ದೇವರು) ಪುರುಷೋತ್ತಮನಾಗಿ ಇದ್ದಾನೆ.

**4) ಪ್ರಶ್ನೆ :– ನಮ್ಮ ಗ್ರಂಥವಾದ ಖುರಾನ್‌ನಲ್ಲಿ ಜೀವಾತ್ಮ, ಆತ್ಮಯೆಂದು ಎಲ್ಲೂ ಹೇಳಲಿಲ್ಲ. ನೀವು ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಒಂದೇ ಜ್ಞಾನವಿದೆಯೆಂದು ಹೇಳಿದ್ದೀರಲ್ಲವೆ! ನಮ್ಮ ಗ್ರಂಥದಲ್ಲಿ ಆ ವಿಧವಾಗಿ ಎಲ್ಲೂ ಕಾಣಿಸಲಿಲ್ಲ ಅಲ್ಲವೆ! ಮುಸ್ಲಿಮ್ ಹಿರಿಯರು ಖುರಾನ್ ಗ್ರಂಥ ಪ್ರತ್ಯೇಕವಾದುದು ಅದರಲ್ಲಿ ಜ್ಞಾನ ಉಳಿದ ಗ್ರಂಥಗಳಲ್ಲಿನ ಜ್ಞಾನಕ್ಕಿಂತ ದೊಡ್ಡದೆಂದು ಹೇಳುತ್ತಿದ್ದಾರೆ. ಅದನ್ನು ಕುರಿತು ನೀವು ಏನು ಹೇಳುತ್ತೀರಾ?**

**ಉತ್ತರ :–** ಮೂರು ದೈವ ಗ್ರಂಥಗಳು ಯಾವುದೇ ಒಂದು ಮತಕ್ಕೆ ಸಂಬಂಧಿಸಿರುವವು ಅಲ್ಲ. ಮೂರು ಗ್ರಂಥಗಳಲ್ಲಿನ ಜ್ಞಾನ ಒಂದಾಗಿಯೇ ಒಂದೇ ಸಿದ್ಧಾಂತವನ್ನೇ ಬೋಧಿಸುತ್ತಿದೆ. ಸಮಸ್ತ ಮಾನವರಿಗೂ ಇದು ಹಿತೋಪದೇಶ ಎಂದು ಖುರಾನ್‌ನಲ್ಲಿ 81ನೇ ಸೂರಾದಲ್ಲಿ 27ನೇ ಆಯತ್‌ನಲ್ಲಿ ಹೇಳಿದ್ದಾರೆ ನೋಡಿರಿ. **(81–27) "ಇದು ಸಮಸ್ತ ಲೋಕವಾಸರಿಗೂ ಹಿತೋಪದೇಶ"**. ಈ ಮಾತನ್ನು ಹೇಳಿರುವುದರಿಂದ ನೀವು ಖುರಾನ್‌ನನ್ನು 'ನಮ್ಮ ಗ್ರಂಥ' ಎಂದು ಹೇಳಬಾರದು. ಖುರಾನ್ ಎಲ್ಲರ ಗ್ರಂಥ. ಅದರಲ್ಲಿ ಬರೆಯಲ್ಪಟ್ಟ ಭಾಷೆಯಿಂದ, ಅನುವಾದ ಭಾಷೆಯಿಂದ ಕೆಲವು ಪದಗಳು ಬೇರೆಯಾಗಿ ಕಾಣಿಸಿದರೂ ಮೂರು ಗ್ರಂಥಗಳಲ್ಲಿ ಹೇಳಲ್ಪಟ್ಟ ಜ್ಞಾನ ಒಂದೇಯೆಂದು ತಿಳಿಯುತ್ತಿದೆ. ನಿಮ್ಮ ಹಿರಿಯರು ಉಳಿದ ಗ್ರಂಥಗಳಿಗಿಂತ ಖುರಾನ್‌ನಲ್ಲಿ ಹೆಚ್ಚಿನ ಜ್ಞಾನವಿದೆಯೆಂದು ಹೇಗೆ ಹೇಳಿದ್ದೀರೋ ನಮಗೆ ತಿಳಿದಿಲ್ಲ. ಸ್ವತಃವಾಗಿ ಖುರಾನ್ ಗ್ರಂಥವೇ ಮೊದಲು ಬಂದಿರುವ ಗ್ರಂಥಗಳ ಜ್ಞಾನವೇ ತನ್ನಲ್ಲಿದೆಯೆಂದು ಹೇಳುತ್ತಾ ಮೊದಲು ಬಂದ ತೌರಾತ್, ಇಂಜೀಲ್ ಗ್ರಂಥಗಳನ್ನು ಧೃಢೀಕರಿಸುತ್ತಿದ್ದೇನೆಂದು ಹೇಳಿದೆ. ಈ ವಿಷಯವನ್ನು ಖುರಾನ್ ಗ್ರಂಥದಲ್ಲಿ **(5–48) "ನಾವು ನಿನ್ನ ಕಡೆಗೆ ಈ ಗ್ರಂಥವನ್ನು (ಖುರಾನ್‌ನನ್ನು)**

**ಸತ್ಯಸಮೇತವಾಗಿ ಅವತರಿಸುವಂತೆ ಮಾಡಿದ್ದೇವೆ. ಇದು ತಮಗಿಂತ ಮೊದಲು ಬಂದಿರುವ ಗ್ರಂಥಗಳನ್ನು ಸತ್ಯವೆಂದು ಧೃಢೀಕರಿಸುತ್ತದೆ. ನಿನ್ನ ಬಳಿಗೆ ಬಂದಿರುವ ಸತ್ಯವನ್ನು ಬಿಟ್ಟು ಅವರ ಮನೋಇಚ್ಛೆಗಳನ್ನು ಅನುಸರಿಸಬೇಡ."** ಈ ಆಯತ್‌ನ್ನು ನೋಡಿದ ನಂತರ ನಮ್ಮದು ದೊಡ್ಡ ಗ್ರಂಥ, ಇತರರದು ಅಲ್ಲ ಎಂದರೆ ಆತನು ಖುರಾನ್ ಗ್ರಂಥದಲ್ಲಿನ ಈ ವಾಕ್ಯಕ್ಕೆ ವಿರುದ್ಧವಾಗಿ ಮಾತನಾಡಿದಂತಾಗುತ್ತದೆ.

**5) ಪ್ರಶ್ನೆ :– ತೌರಾತ್ ಮೂಸಾ ಪ್ರವಕ್ತನಿಗೆ ಕೊಡಲಿಲ್ಲವೆಂದು, ಮೂಸಾಗೆ ಗ್ರಂಥವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ ಆದರೆ ಇಂತಹ ಗ್ರಂಥವೆಂದು ಹೇಳಲಿಲ್ಲ ಎಂದು ತೌರಾತ್ ಗ್ರಂಥವನ್ನೇ ಮೂಸಾಗೆ ಕೊಟ್ಟಿದ್ದಾನೆಂದು ನಿಮಗೆ ಹೇಗೆ ತಿಳಿದಿದೆ ಎಂದು ಕೆಲವರು ಕೇಳುತ್ತಿದ್ದಾರೆ. ಅದಕ್ಕೆ ನಾವು ಏನು ಹೇಳಬೇಕು?**

**ಉತ್ತರ :–** ಮೂಸಾಗೆ ದೇವರು ತೌರಾತ್ ಗ್ರಂಥವನ್ನು ಕೊಡದೇ ಹೋದರೇ ಅವರಿಗೆ ತಿಳಿದು ಯಾವ ಗ್ರಂಥ ಕೊಡಲ್ಪಟ್ಟಿದೆಯೋ ಹೇಳಿರೆಂದು ನೀವು ಕೇಳಿರಿ. ವಿಶ್ವದಲ್ಲಿ ನಾಲ್ಕು ಗ್ರಂಥಗಳ ಹೆಸರುಗಳು ಎಲ್ಲರಿಗೂ ತಿಳಿದಿದೆ. ಅವುಗಳೇ ಜಬುರ, ತೌರಾತ್, ಇಂಜೀಲ್, ಖುರಾನ್ ಎಂದು ಬಹಳ ಜನರು ಹೇಳಿದಾಗ ಕೇಳಿದ್ದೇವೆ. ಈ ನಾಲ್ಕು ಹೆಸರುಗಳು ಉಳಿದ ಮತದವರಿಗಿಂತ ಮುಸ್ಲಿಮ್‌ರಿಗೆ ಚೆನ್ನಾಗಿ ತಿಳಿದಿವೆ. ಏಕೆಂದರೆ! ಈ ನಾಲ್ಕು ಹೆಸರುಗಳು ಖುರಾನ್ ಗ್ರಂಥದಲ್ಲೇ ಇವೆ. ಆದರೆ ಎಲ್ಲರಿಗೂ ತಿಳಿಯದ ವಿಷಯವೇನೆಂದರೆ! ಈ ನಾಲ್ಕು ಹೆಸರುಗಳಲ್ಲಿ ಮೊದಲ ಹೆಸರಾದ ಜಬುರ ಎನ್ನುವುದು ಗ್ರಂಥವಲ್ಲ. ಉಳಿದ ತೌರಾತ್, ಇಂಜೀಲ್, ಖುರಾನ್ ಮೂರೂ ಗ್ರಂಥಗಳೇಯೆಂದು ಹೇಳಬಹುದು. ಮೂರು ಗ್ರಂಥಗಳಲ್ಲಿ ಮೊದಲನೆಯದಾದ ತೌರಾತ್ ಗ್ರಂಥ ಖುರಾನ್‌ನಲ್ಲಿ ಬಹಳ ಸಲ ಹೇಳಲ್ಪಟ್ಟಿದೆ. ತೌರಾತ್ ಎನ್ನುವ ಹೆಸರು ಮುಸ್ಲಿಮ್‌ರಿಗೆ ಖುರಾನ್ ಓದಿದವರೆಲ್ಲರಿಗೂ ತಿಳಿದಿದೆ. ಆದರೇ ಆ ಗ್ರಂಥದ ಹೆಸರು ತಿಳಿದಿದೆ ಆದರೆ ಅದನ್ನು ಪ್ರಪಂಚದಲ್ಲಿ ನೋಡಿದವನು ಒಬ್ಬನೇ ಒಬ್ಬ ವ್ಯಕ್ತಿ ಮೋಷೇ. ಆತನನ್ನೇ ಮೂಸಾಯೆಂದು ಖುರಾನ್‌ನಲ್ಲಿ ಹೇಳುತ್ತಿದ್ದೇವೆ. ಇಂಜೀಲ್ ಗ್ರಂಥದಲ್ಲಿ ಹೇಳಲ್ಪಟ್ಟ

ಮೋಷೇ ಪ್ರವಕ್ತನೇ ಖುರಾನ್ ಗ್ರಂಥದಲ್ಲಿ ಮೂಸಾಆಗಿ ಹೇಳಲ್ಪಡುತ್ತಿದ್ದಾನೆಂದು ಸಹ ಬಹಳ ಜನರಿಗೆ ತಿಳಿದಿಲ್ಲ. ಬೈಬಲ್ (ಇಂಜೀಲ್) ಗ್ರಂಥದಲ್ಲಿ ಹೇಳಲ್ಪಟ್ಟ ಮೋಷೇಗೆ ತೌರಾತ್ ಗ್ರಂಥ ಕೊಡಲಾಗಿದೆ. ತೌರಾತ್ ಗ್ರಂಥವನ್ನು ಮುಟ್ಟಿ ಕೊಂಡವನು, ನೋಡಿದವನು ಒಬ್ಬ ಮೋಷೇ ಮಾತ್ರವೇ. ಮೋಷೇ ಹೊರತು ಇತರೆ ಯಾವ ಮಾನವನು ತೌರಾತ್ ಎನ್ನುವ ಹೆಸರಿರುವ ಗ್ರಂಥವನ್ನು ನೋಡಲಿಲ್ಲ. ನಾಲ್ಕು ಗ್ರಂಥಗಳಲ್ಲಿ ಜಬುರ ಎನ್ನುವುದು ಗ್ರಂಥವೇ ಅಲ್ಲ ಅದು ಹೆಸರು ಮಾತ್ರ. ನಂತರ ತೌರಾತ್ ಎನ್ನುವುದು ಗ್ರಂಥವೇ ಆದರೂ ಅದನ್ನು ಮೋಷೇ ಪ್ರವಕ್ತ ಒಬ್ಬನು ನೋಡಿದ್ದಾನೆ. ಮೋಷೇ, ಮೂಸಾ ಇಬ್ಬರೂ ಒಬ್ಬರೇ ಆಗಿರುವುದರಿಂದ ಮೂಸಾ ಹೊರತು ಯಾರೂ ತೌರಾತ್ ಗ್ರಂಥವನ್ನು ನೋಡಲಿಲ್ಲ. ಇನ್ನು ಉಳಿದಿರುವುದು ಇಂಜೀಲ್, ಖುರಾನ್ ಗ್ರಂಥಗಳು ಈ ಎರಡನ್ನು ಎಲ್ಲರೂ ನೋಡಿದ್ದಾರೆ.

**6) ಪ್ರಶ್ನೆ :– ಸೂರಾ 2, ಆಯತ್ 187ರಲ್ಲಿ ಯಾವ ವಿಷಯವನ್ನು ಕುರಿತು ಹೇಳಿದ್ದಾರೆ? ಪ್ರಪಂಚ ವಿಷಯವಾ, ಪರಮಾತ್ಮ ವಿಷಯವಾ?**

**ಉತ್ತರ :–** ಸೂರಾ 2, 187ನೇ ಆಯತ್‌ನಲ್ಲಿ ಮೊದಲಿನಿಂದ ಕೊನೆಯವರೆಗು ಒಂದೇ ವಿಷಯವನ್ನು ಹೇಳಿದ್ದಾರೆ. ಅದು ದೇವರಿಗೆ ಸಂಬಂಧಿಸಿದ ವಿಷಯವಲ್ಲ. ಅದು ಕೇವಲ ಮನುಷ್ಯರಿಗೆ ಸಂಬಂಧಿಸಿದ ವಿಷಯವಾಗಿಯೇ ಇದೆ. ಪತಿ ಪತ್ನಿಯರು ಒಬ್ಬರಿಗೊಬ್ಬರು ಶಾರೀರಕವಾಗಿ ಸೇರುವ ವಿಷಯವಾಗಿ ಹೇಳಿದ್ದಾರೆ.

**7) ಪ್ರಶ್ನೆ :– ಸೂರಾ 2, 187ನೇ ವಾಕ್ಯದಲ್ಲಿ ಹೇಳಿರುವುದು ಪ್ರಪಂಚ ವಿಷಯವೇ ಯೆಂದು ಅದೂ ಪತಿಪತ್ನಿಯರ ಸೇರುವಿಕೆ ವಿಷಯವೆಂದು ಹೇಳುತ್ತಿದ್ದೀರಲ್ಲವೆ! ಇದು ಪ್ರಪಂಚ ಸಂಬಂಧ ವಿಷಯವೇ ಅಲ್ಲವೆ! ಈ ವಿಷಯದಿಂದ ದೇವರಿಗೆ ಏನು ಅವಶ್ಯ ಎಂದು ನಾನು ಇತರರನ್ನು ಕೇಳಿದ್ದೇನೆ. ದೇವರು ಕರ್ಮ ಪತ್ರದಲ್ಲಿ ಬರೆದ ಪ್ರಕಾರವೇ ಪ್ರತಿಯೊಂದು ನಡೆಯುತ್ತದೆಂದು ಅದೇ ಖುರಾನ್ ಗ್ರಂಥದಲ್ಲಿ ಬರೆದಿದ್ದಾರಲ್ಲವೆ! ಹಾಗಿರುವಾಗ ಕರ್ಮ ಪ್ರಕಾರವೇ ಪತಿಪತ್ನಿಯರ ಸಂಸಾರ, ಸೇರುವಿಕೆ ಇರುತ್ತದಲ್ಲವೆ! ಎಂದು ಕೇಳಿದ್ದೇನೆ ಅದಕ್ಕೆ ಅವರು ಪತಿಪತ್ನಿಯರ**

**ವಿಷಯವನ್ನು ಧರ್ಮಸಮ್ಮತ ಮಾಡುವುದಕ್ಕೆ ಅಕ್ರಮವಾಗಿ ನಡೆಯದಂತೆ ಇರುವುದಕ್ಕೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ರಾತ್ರಿ ಹೊತ್ತು ಮಾತ್ರವೇ ಆ ಕೆಲಸಕ್ಕೆ ಧರ್ಮ ಸಮ್ಮತವಾದುದೆಂದು, ಹಗಲು ಹೊತ್ತು ರಂಜಾನ್ ತಿಂಗಳಲ್ಲಿ ಉಪವಾಸ ಇರುವುದಕ್ಕೆ ರಾತ್ರಿ ಹೊತ್ತು ಮುಂಜಾನೆ 4 ಗಂಟೆಯಿಂದ ತಿಂದು, ಕುಡಿದು ಹಗಲೆಲ್ಲಾ ಉಪವಾಸವಿರಲು ಹೇಳಿದ್ದಾನೆಂದು ಹೇಳಿದ್ದಾರೆ. ಅವರು ಹೀಗೆ ಹೇಳಿದಾಗ ಉಪವಾಸವೂ ಸಹ ದೇವರಿಗೆ ಸಂಬಂಧಿಸಿದ ದೈವಜ್ಞಾನಕ್ಕೆ ಸಂಬಂಧಿಸಿದ ವಿಷಯವಲ್ಲ ಅಲ್ಲವೆ! ಎಂದು ಅನುಮಾನ ಬಂದಿದೆ. ಈ ಆಯತ್‌ನಲ್ಲಿ ಉಪವಾಸಕ್ಕೆ ಸಂಬಂಧಿಸಿದ ವಿಷಯವಿದೆಯಾ? ಎಂದು ಕೇಳುತ್ತಿದ್ದೇನೆ. ನೀವೇನು ಹೇಳುತ್ತೀರಾ?**

**ಉತ್ತರ :–** ಎರಡನೆ ಸೂರಾ 187 ನೇ ಆಯತ್‌ನಲ್ಲಿ ಮೊದಲಿನಿಂದ ಕೊನೆಯವರೆಗು ಓದಿ ನೋಡಿದ್ದೇವೆ. ಅಲ್ಲಾಹ್ ತನ್ನ ಆಯತ್‌ನಲ್ಲಿ ಏನು ಹೇಳಿದ್ದಾನೋ ಅದನ್ನು ಬಚ್ಚಿಟ್ಟು ತಮಗೆ ಇಷ್ಟವಾದ ವಿಷಯಗಳನ್ನು ಅದರಲ್ಲಿ ಸೇರಿಸಿ ಹೇಳುವವರಿಗೆ ಶಾಪ ತಪ್ಪುವುದಿಲ್ಲವೆಂದು ಖುರಾನ್ ಗ್ರಂಥದಲ್ಲಿ ದೇವರು ಎರಡನೆ ಸೂರಾ 159 ನೇ ಆಯತ್‌ನಲ್ಲಿ ಹೇಳಿದ್ದಾನೆ. **(2–159) "ನಾವು ಅವತರಿಸುವಂತೆ ಮಾಡಿದ ಸ್ಪಷ್ಟವಾದ ಬೋಧನೆಗಳನ್ನು, ಮಾರ್ಗದರ್ಶಕತ್ವಗಳನ್ನು ಪ್ರಜೆಗಳಿಗಾಗಿ ದಿವ್ಯ ಗ್ರಂಥದಲ್ಲಿ ಸ್ಪಷ್ಟಪಡಿಸಿದ ನಂತರ ಸಹ ಬಚ್ಚಿಡುತ್ತಾರೋ ಅವನನ್ನು ಅಲ್ಲಾಹ್ ತಪ್ಪದೆ ಶಪಿಸುತ್ತಾನೆ. ಮತ್ತು ಶಪಿಸುವವರು ಸಹ ಅವರನ್ನು ಶಪಿಸುತ್ತಾರೆ"** ಎಂದು ಬರೆದಿದೆ. ಈ ವಿಷಯ ತಿಳಿಯದೆ ಕೆಲವರು ದೇವರ ವಾಕ್ಯವನ್ನು ತಮ್ಮ ಇಷ್ಟ ಬಂದಹಾಗೆ ಬದಲಾಯಿಸಿ ದೇವರು ಹೇಳದ ವಿಷಯವನ್ನು ಸೇರಿಸಿ ಹೇಳುತ್ತಿದ್ದಾರೆ. ಅಷ್ಟು ಅವಶ್ಯ ಏನು ಬಂದಿದೆಯೋ? ಒಂದು ವೇಳೆ ಯಾರಾದರೂ ತಿಳಿದವರು ನೀವು ಹೇಳುವ ವಿವರವನ್ನು ದೇವರು ಹೇಳಲಿಲ್ಲ. ದೇವರು ಹೇಳಿದ ಭಾವವು ಬೇರೆಯಾಗಿದೆಯಲ್ಲವೆ! ಪ್ರತ್ಯಕ್ಷವಾಗಿ ಕಾಣಿಸುವಂತಿರುವ ಭಾವನೆಯನ್ನು ತೆಗೆದುಹಾಕಿ ಬೇರೆ ಭಾವನೆಯನ್ನು ಹೇಳುವುದರಿಂದ ದೇವರಿಗೆ ನಿಮ್ಮ ಮೇಲೆ ಕೋಪ ಬರಬಲ್ಲದು. ದೇವರ

ಕಡೆಯಿಂದ ನಿಮಗೆ ಶಾಪ ಬರಬಲ್ಲದು. ದೇವರ ಕಡೆಯಿಂದಲೇ ಅಲ್ಲದೆ ದೇವರ ಪಾಲನೆಯಲ್ಲಿರುವ ಗ್ರಹಗಳು, ಭೂತಗಳಿಂದಲೂ ಸಹ ಶಾಪ ಬರ ಬಲ್ಲದು. ಅವರಿಂದ ಕೆಟ್ಟದು ನಡೆಯಬಲ್ಲದು ಎಂದು ಹೇಳಿದರೆ ಹಾಗೆಯೆ ಆಗಲಿ ಎಂದು ಭಯವಿಲ್ಲದಂತೆ ಹೇಳುತ್ತಿದ್ದಾರೆ. ಅಂತಹವರಿಗೆ ದೇವರ ಶಿಕ್ಷೆ ತಪ್ಪುವುದಿಲ್ಲ.

**8) ಪ್ರಶ್ನೆ :– ಖುರಾನ್‌ನಲ್ಲಿನ ಜ್ಞಾನವನ್ನು ಯಾರು ಬೋಧಿಸಿದ್ದಾರೆ? ಹೇಗೆ ಬೋಧಿಸಿದ್ದಾರೆ? ಯಾರಿಗೆ ಬೋಧಿಸಿದ್ದಾರೆ? ಎಷ್ಟು ಸಮಯ ಬೋಧಿಸಿದ್ದಾರೆ?**

**ಉತ್ತರ :–** ಜಿಬ್ರಯೇಲ್ ಎನ್ನುವ ಆಕಾಶ ಗ್ರಹ ತೆರೆಮರೆಯಿಂದ ಬೋಧಿಸಿದ್ದಾನೆ. ಮುಹಮ್ಮದ್ ಪ್ರವಕ್ತರವರಿಗೆ ಬೋಧಿಸಿದ್ದಾನೆ. 23 ವರ್ಷಗಳು ಖುರಾನ್ ಜ್ಞಾನವನ್ನು ಬೋಧಿಸುವುದು ನಡೆದಿದೆ.

**9) ಪ್ರಶ್ನೆ :– ದ್ವಾಪರ ಯುಗದ ಕೊನೆಯಲ್ಲಿ ಕೃಷ್ಣನು ಭಗವದ್ಗೀತೆಯನ್ನು ಅರ್ಜುನನಿಗೆ ಹತ್ತು ನಿಮಿಷಗಳೊಳಗೆ ಬೋಧಿಸಿದ್ದಾನೆ. ಯೇಸು ಇಂಜೀಲ್ ಜ್ಞಾನವನ್ನು (ನಾಲ್ಕು ಸುವಾರ್ತೆಗಳ ಜ್ಞಾನವನ್ನು) ಮೂರು ವರ್ಷಗಳಲ್ಲಿ ಬೋಧಿಸಿದ್ದಾನೆ. ಖುರಾನ್ ಜ್ಞಾನ ವಿಷಯವನ್ನು ಜಿಬ್ರಯೇಲ್ 23 ವರ್ಷಗಳು ಏಕೆ ಬೋಧಿಸಿದ್ದಾನೆ? ಮೊದಲು ಬಂದಿರುವ ಗ್ರಂಥಗಳು ಭಗವದ್ಗೀತೆ ಕೆಲವು ನಿಮಿಷಗಳಲ್ಲಿಯೂ, ಬೈಬಲ್ ಮೂರು ವರ್ಷಗಳಲ್ಲಿಯೂ ಹೇಳಿದಾಗ, ಖುರಾನ್ ಜ್ಞಾನವನ್ನು ಹೇಳುವುದಕ್ಕೆ 23 ಸಂವತ್ಸರಗಳು ಏಕೆ ಹಿಡಿದಿದೆ?**

**ಉತ್ತರ :–** ಆಕಾಶದಿಂದ ಇಳಿದು ಬಂದ ಜಿಬ್ರಯೇಲ್ ಖುರಾನ್ ಜ್ಞಾನವನ್ನು ಹೇಳಿದ್ದಾನೆ ಎನ್ನುವುದು ವಾಸ್ತವ. ಕೆಳಗೇ ಪಕ್ಕದಲ್ಲಿಯೇ ಇರುತ್ತಿದ್ದ ಕೃಷ್ಣನು ಅರ್ಜುನನಿಗೆ ಎಷ್ಟು ಕಾಲವಾದರೂ ಭಗವದ್ಗೀತೆಯನ್ನು ಹೇಳಬಹುದು. ಆದರೆ ಹತ್ತು ನಿಮಿಷಗಳ ಒಳಗೇ ಪೂರ್ತಿ ಹೇಳಿದ್ದಾನೆ. ಒಂದು ಕಡೆ ನಿಲುಗಡೆ ಇಲ್ಲದ ಯೇಸು ಪರ್ಯಟಿಸುತ್ತಾ ಸಮಯ ಸಿಕ್ಕಿದಾಗೆಲ್ಲಾ ಸುವಾರ್ತೆಗಳ ಜ್ಞಾನವನ್ನು ಹೇಳಿದ್ದಾನೆ. ಹಾಗೆ ಮೂರು ವರ್ಷಗಳು ಹೇಳಿದ್ದಾನೆ. ಕೊನೆಯಲ್ಲಿ

ತನ್ನ ಶಿಷ್ಯರೊಂದಿಗೆ ಕೂಡಿ ಭೋಜನ ಮಾಡಿದಾಗ ಕೊನೆಯದಾಗಿ ಹೇಳಬೇಕಾದ ವಿಷಯಗಳೆಲ್ಲವೂ ಹೇಳಿದ್ದಾನೆ. ಇನ್ನು ಖುರಾನ್ ವಿಷಯಕ್ಕೆ ಬಂದರೆ ಎಷ್ಟೋ ದೂರದಿಂದ ಬರುವ ಜಿಬ್ರಯೇಲ್ ಒಂದು ಬಾರಿಯಾಗಿ ಜ್ಞಾನವನ್ನು ಹೇಳುವುದಕ್ಕೆ ಅವಕಾಶ ಸಿಗಲಿಲ್ಲ. ಮುಹಮ್ಮದ್ ಪ್ರವಕ್ತರವರು ಓದು ಬಾರದವನಾದ್ದರಿಂದ ಜ್ಞಾನವೆಲ್ಲವೂ ಒಂದೇ ಸಲ ಹೇಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಎರಡು ಅಥವಾ ಮೂರು ವಾಕ್ಯಗಳಿಗಿಂತ ಹೆಚ್ಚಾಗಿ ಹೇಳುತ್ತಿರಲಿಲ್ಲ. ಜಿಬ್ರಯೇಲ್ ಹೇಳಿದ ಜ್ಞಾನವನ್ನು ಪ್ರವಕ್ತರವರು ಕೇಳಿ ನಂತರ ತನ್ನ ಮನೆಗೆ ಬಂದು ತನ್ನ ಅನುಚರರಿಗೆ ಹೇಳಿದಾಗ ಅವರಲ್ಲಿ ಒಬ್ಬರು ಅಥವಾ ಇಬ್ಬರು ಓದು ಬಂದವರಿದ್ದರೆ ಅದನ್ನು ಬರೆದಿಡುತ್ತಿದ್ದರು. ಆ ಕಾಲದಲ್ಲಿ ಆ ದೇಶದಲ್ಲಿ ಎಲ್ಲಾ ಓದು ಬಾರದವರು ಹೆಚ್ಚಾಗಿರುತ್ತಿದ್ದರು. ಯಾವಾಗಾದರೂ ಒಂದು ಸಲ ಪ್ರವಕ್ತರವರು ತಂದ ಸಂದೇಶವನ್ನು ಬರೆದುಕೊಳ್ಳುವುದಕ್ಕೆ ಯಾರೂ ಇರುತ್ತಿರಲಿಲ್ಲ. ಆಗ ಅಲ್ಲಿರುವವರು ಕೇಳಿ ಜ್ಞಾಪಕ ಇಟ್ಟುಕೊಳ್ಳುತ್ತಿದ್ದರು. ಈ ವಿಧವಾಗಿ ಎರಡು, ಮೂರು ವಾಕ್ಯಗಳಿಗಿಂತ ಹೆಚ್ಚಾಗಿ ಹೇಳುವುದಕ್ಕೆ ಅವಕಾಶ ಇಲ್ಲದಿರುವುದರಿಂದ, ಆಕಾಶದಿಂದ ಬರುವ ಜಿಬ್ರಯೇಲ್ ತಿಂಗಳಿಗೊಂದು ಬಾರಿಯಾಗಲಿ ಎರಡು ಮೂರು ತಿಂಗಳಿಗೊಂದು ಬಾರಿಯಾದರೂ ಬರುವುದರಿಂದ 23 ವರ್ಷಗಳ ಖುರಾನ್ ಬೋಧನೆ ಮುಂದುವರೆಯಿತು.

**10) ಪ್ರಶ್ನೆ :– ಯೇಸು ಪ್ರಭುರವರು ತನ್ನ ಜ್ಞಾನದ ಕೊನೆಯ ಮಾತನ್ನು ಕೊನೆಯ ಭೋಜನ ರಾತ್ರಿ ಪೂರ್ತಿಯಾಗಿ ಹೇಳಿಕೊಳ್ಳುವುದು ಅದಕ್ಕಿಂತ ಕೆಲವು ದಿನಗಳ ಹಿಂದಿನಿಂದಲೂ ಹೇಳಿಕೊಳ್ಳುವುದು ನಡೆದಿದೆ. ಹಾಗೆ ಖುರಾನ್ ಜ್ಞಾನ ಮುಗಿದು ಹೋಗಿದೆಯೆಂದು ಜಿಬ್ರಯೇಲ್ ಪ್ರವಕ್ತರವರಿಗೆ ಹೇಳಿದ್ದಾನಾ?**

**ಉತ್ತರ :–** ಇಲ್ಲ ಖುರಾನ್ ಜ್ಞಾನ ಮುಗಿದುಹೋಗಿದೆಯೆಂದು ಎಲ್ಲೂ, ಎಂದಿಗೂ ಹೇಳಲಿಲ್ಲ. ಸಂಪೂರ್ಣವಾಗಿ ಹೇಳಿದ್ದೇನೆಂದು ಜಿಬ್ರಯೇಲ್ ಹೇಳಿದ್ದಾನೆಂದು ಕೆಲವರು ಮುಸ್ಲಿಮ್‌ರು ಹೇಳುತ್ತಿದ್ದರೂ ಅದರಲ್ಲಿ ವಾಸ್ತವವಿಲ್ಲ. ಮುಹಮ್ಮದ್ ಪ್ರವಕ್ತ ಮರಣಿಸುತ್ತಾನೆಂದು ಜಿಬ್ರಯೇಲ್‌ಗೆ ತಿಳಿದಿದ್ದರೂ ಆ ವಿಷಯವನ್ನು

ಪ್ರವಕ್ತರವರಿಗೆ ಜಿಬ್ರಯೇಲ್ ಹೇಳಿರುತ್ತಿದ್ದನು. ಪ್ರವಕ್ತಗೂ ಸಹ ತಾನು ಮರಣಿಸುತ್ತೇನೆಂದು ತಿಳಿದಿಲ್ಲ. ಭವಿಷ್ಯತ್ ಅಂಧಕಾರ ಪ್ರವಕ್ತರಿಗೆ ಜ್ಞಾನ ಹೇಳುವ ಜಿಬ್ರಯೇಲ್ ಆಕಾಶದಿಂದ ಬರುವುದಕ್ಕೆ ಸುಮಾರು ಮೂರು ತಿಂಗಳಿಗೆ ಮೇಲ್ಪಟ್ಟು ಹಿಡಿದಿದೆ. ಭೂಮಿ ಮೇಲಕ್ಕೆ ಬಂದ ನಂತರ ಜಿಬ್ರಯೇಲ್‌ಗೆ ಪ್ರವಕ್ತರವರು ಮರಣಿಸಿದ ವಿಷಯ ತಿಳಿದಿದೆ. ಪ್ರವಕ್ತರವರು ಮರಣಿಸದಿದ್ದರೆ ಇನ್ನೂ ಸ್ವಲ್ಪ ಜ್ಞಾನ ಜಿಬ್ರಯೇಲ್‌ನಿಂದ ತಿಳಿಯುತ್ತಿತ್ತು. ಪ್ರವಕ್ತ ಮರಣಿಸಿದ ವಿಷಯ ಜಿಬ್ರಯೇಲ್‌ಗೆ ತಿಳಿಯವುದೇ ಅಲ್ಲದೆ ತಾನು ಭೂಮಿ ಮೇಲೆ ಬಂದು ಜ್ಞಾನ ವಾಕ್ಯಗಳು ಹೇಳಿಹೋದ ನಂತರ 82 ದಿನಗಳಿಗೆ ಮರಣಿಸಿದ್ದಾನೆಂದು ತಿಳಿದಿದೆ. ಹಾಗೇ ಪ್ರವಕ್ತ ಮರಣಕ್ಕೆ ಕಾರಣವಾದ ರೋಗ ಯಾವುದು? ಎಂದು ಜಿಬ್ರಯೇಲ್ ತನ್ನ ಜ್ಞಾನದಿಂದ ತಿಳಿದಿದ್ದಾನೆ. ನಂತರ ಜಿಬ್ರಯೇಲ್ ಕೆಳಗೆ ಬರಲಿಲ್ಲ.

**11) ಪ್ರಶ್ನೆ :– ಪ್ರವಕ್ತರವರು ಮರಣಿಸಿದ ನಂತರ ಎಷ್ಟು ದಿನಗಳಿಗೆ ಜಿಬ್ರಯೇಲ್ ಭೂಮಿಮೇಲೆಗೆ ಬರುವುದು ನಡೆದಿದೆ.**

**ಉತ್ತರ :–** ಪ್ರವಕ್ತರವರು ಮರಣಿಸಿದ ನಂತರ ಜಿಬ್ರಯೇಲ್ ಯಾವಾಗ ಬಂದಿದ್ದಾನೆಂದು ಖಚಿತವಾಗಿ ಹೇಳಲಾರೆವು ಆದರೆ ಮೂರು ನಾಲ್ಕು ದಿನಗಳಿಗೇ ಬಂದಿರುತ್ತಾನೆಂದು ಒಂದು ಅಂದಾಜಾಗಿ ಹೇಳಬಹುದು. ನಮ್ಮ ಅಂದಾಜು ತಪ್ಪು ಸಹ ಆಗಬಹುದು. ಪ್ರವಕ್ತರವರು ಮರಣಿಸದೆ 82 ದಿನಗಳ ಹಿಂದೆ ಜ್ಞಾನವನ್ನು ಕೇಳಿದ್ದಾನೆಂದು ಚರಿತ್ರೆ ಇದೆ. ಜಿಬ್ರಯೇಲ್ ಮೂರು ತಿಂಗಳು ಮೀರಿ ಐದಾರು ದಿನಗಳಿಗಿಂತ ಹೆಚ್ಚಾಗಿ ಎಂದಿಗೂ ತಡ ಮಾಡಲಿಲ್ಲ. ಆದ್ದರಿಂದ ಪ್ರವಕ್ತ ಮರಣಿಸಿದ ಮೂರು ದಿನಗಳ ನಂತರ ಒಂದು ಅಥವಾ ಎರಡು ದಿನಗಳು ಮುಂದೆ ಹಿಂದೆ ಬಂದಿರುತ್ತಾನೆ ಎಂದು ಅಂದುಕೊಳ್ಳುತ್ತೇವೆ. ಇನ್ನೂ ಎರಡು ವರ್ಷಗಳು ಪ್ರವಕ್ತ ಬದುಕಿದ್ದರೇ ಚೆನ್ನಾಗಿರುತ್ತಿತ್ತೆಂದು ಜಿಬ್ರಯೇಲ್ ಇತರರೊಂದಿಗೆ ಹೇಳಿದಂತೆ ಇದೆ. ಜಿಬ್ರಯೇಲ್ ಇತರೆ ಗ್ರಹಗಳೊಂದಿಗೆ ಹೇಳಿರುವುದರಿಂದ ಆ ಗ್ರಹಗಳು ಬಂದು ಪ್ರವಕ್ತರವರ ಮರಣಕ್ಕೆ ಕಾರಣವಾದ ರೋಗವನ್ನು ದಂಡಿಸುವುದು ನಡೆದಿದೆ. ನೀವು ಮಾಡಿದ ಕೆಲಸಕ್ಕೆ ಒಬ್ಬ

ಮುಖ್ಯವಾದ ವ್ಯಕ್ತಿ ಮರಣಿಸುವುದು ನಡೆದಿದೆ. ಆತನು ಇನ್ನೂ ಎರಡು ವರ್ಷಗಳು ಬದುಕಿದ್ದರೇ ಚೆನ್ನಾಗಿರುತ್ತಿತ್ತು. ಆತನಿಂದ ಪ್ರಜೆಗಳಿಗೆ ದೈವಜ್ಞಾನ ತಿಳಿಯುತ್ತಿತ್ತೆಂದು ದಂಡಿಸುವುದು ನಡೆದಿದೆ. ಆ ವಿಷಯ ನಮಗೆ ತಿಳಿದಿಲ್ಲವೆಂದು ದೇವರ ಪಾಲನೆಯಲ್ಲಿ ವಿಧಿಗಳನ್ನು ನಿರ್ವಹಿಸುವವರಾಗಿರುವುದರಿಂದ ಆಯುಷ್ಷು ಮುಗಿದವರನ್ನು ಸಾಯಿಸಬೇಕಾಗಿ ಬಂದಿದೆಯೆಂದು ಅವರು ಹೇಳುವುದು ನಡೆದಿದೆ. ಕೊನೆಗೆ ಅದು ಅಲ್ಲಾಹ್ ನಿರ್ಣಯವೆಂದು ಎಲ್ಲರೂ ಅಂದು ಕೊಳ್ಳುವುದು ನಡೆದಿದೆ. ಇದನ್ನನುಸರಿಸಿ ಇನ್ನೂ ಕೆಲವು ಆಯತ್‌ಗಳು ಪ್ರವಕ್ತರವರು ಇದ್ದಿದ್ದರೆ ಬರುತ್ತಿದ್ದವು. ಆತನು ಹೋಗಿರುವುದರಿಂದ ಮನುಷ್ಯರು ಎರಡು ವರ್ಷಗಳ ಜ್ಞಾನವನ್ನು ಕಳೆದುಕೊಂಡಿದ್ದಾರೆ. ಎರಡು ವರ್ಷಗಳಲ್ಲಿ ಕನಿಷ್ಟ ಎಂಟರಿಂದ ಹತ್ತು ಬಾರಿಯಾದರೂ ಜಿಬ್ರಯೇಲ್ ಬಂದು ಜ್ಞಾನವನ್ನು ಹೇಳುತ್ತಿದ್ದನು. ಆ ಲೆಕ್ಕದ ಪ್ರಕಾರ ಸುಮಾರು 20 ರಿಂದ 25 ಆಯತ್‌ಗಳವರೆಗು ನಮಗೆ ಇನ್ನೂ ತಿಳಿದಿರುತ್ತಿದ್ದವು. ಅಲ್ಲಾಹ್ ಅಲ್ಲಿಗೆ ನಿಲ್ಲಿಸಿದ್ದಾನೆ ಆದ್ದರಿಂದ ಜಿಬ್ರಯೇಲ್ ಹೇಳಿದವರೆಗು ಮಾನವನು ಮೋಕ್ಷ ಹೊಂದುವ ಜ್ಞಾನ ಬಂದಿದೆಯೆಂದು ತಿಳಿಯಬಹುದು. ಮನುಷ್ಯ ದೇವರ ಹತ್ತಿರಕ್ಕೆ ಸೇರುವುದಕ್ಕೆ ಅಲ್ ಇಖ್ಲಾಸ್ ಎನ್ನುವ 112ನೇ ಸುರಾದಲ್ಲಿನ ನಾಲ್ಕು ಆಯತ್‌ಗಳು ಅರ್ಥ ಮಾಡಿಕೊಂಡರೆ ಸಾಕು. ಉಳಿದವುಗಳ ಅವಶ್ಯ ಇಲ್ಲದೆ ಹೋಗಬಹುದು.

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೆಯೇ ಒಂದು ವಿಷಯವನ್ನು ಖಂಡಿಸುವುದಕ್ಕೆ ಶಾಸ್ತ್ರ ಅಷ್ಟೇ ಅವಶ್ಯಕವಾಗುತ್ತದೆ.**

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**